ಭಾನುವಾರ, ಅಕ್ಟೋಬರ್ 5, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 275 | ಪುಟ 18

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಏಕದಿನ ತಂಡಕ್ಕೂ ಗಿಲ್ ನಾಯಕ

ಆಸ್ಟ್ರೇಲಿಯಾ ಎದುರು ನಡೆಯಲಿರುವ ಏಕದಿನ ಕ್ರಿಕೆಟ್ ಸರಣಿಯಲ್ಲಿ ಭಾರತ ತಂಡದ ಹೊಸ ನಾಯಕನಾಗಿ ಆಯ್ಕೆಯಾದ ಶುಭಮನ್ ಗಿಲ್. ಈವರೆಗೆ ನಾಯಕರಾಗಿದ್ದ ರೋಹಿತ್ ಶರ್ಮಾ ಅವರೂ ತಂಡದಲ್ಲಿ ಸ್ಥಾನ ಪಡೆದಿದ್ದಾರೆ

ಜಡೇಜ ಪಂದ್ಯಶ್ರೇಷ್ಠ

ಅಹಮದಾಬಾದಿನಲ್ಲಿ ಶನಿವಾರ ಮುಕ್ತಾಯವಾದ ವೆಸ್ಟ್ ಇಂಡೀಸ್ ಎದುರಿನ ಮೊದಲ ಟೆಸ್ಟ್‌ನಲ್ಲಿ ಪಂದ್ಯಶ್ರೇಷ್ಠ ಗೌರವ ಗಳಿಸಿದ ಭಾರತ ಕ್ರಿಕೆಟ್ ತಂಡದ ರವೀಂದ್ರ ಜಡೇಜ

'ಬಿಜೆಪಿ ಆಣತಿಯಂತೆ ಎಸ್‌ಐಆರ್' 9

ದೈತ್ಯ ಕಾಳಿಂಗನಿಗೆ ಅಕ್ಕಿ ಗಾತ್ರದ ಚಿಪ್ ! 7

ಸಾವಿಗೆ ಕೆಮ್ಮಿನ ಸಿರಪ್ ನಂಟು ತನಿಖೆ ಚುರುಕು

ನವದೆಹಲಿ/ಹೈದರಾಬಾದ್/ಚೆನ್ನೈ (ರಾಯಿಟರ್ಸ್/ಪಿಟಿಐ): ಮಧ್ಯಪ್ರದೇಶ ಹಾಗೂ ರಾಜಸ್ಥಾನದಲ್ಲಿ ಒಟ್ಟು 11 ಮಕ್ಕಳ ಸಾವಿಗೆ ಕಲುಷಿತ ಕೆಮ್ಮಿನ ಸಿರಪ್ ಕಾರಣವೇ ಎಂಬ ಬಗ್ಗೆ ತನಿಖೆ ನಡೆಸುತ್ತಿರುವುದಾಗಿ ಆರೋಗ್ಯ ಸಚಿವಾಲಯ ಶನಿವಾರ ಹೇಳಿದೆ.

ತಮಿಳುನಾಡಿನಲ್ಲಿ ತಯಾರಾದ ಕೆಮ್ಮಿನ ಸಿರಪ್ 'ಕೋಲ್ಡ್ರಿಫ್'ನ ಮಾದರಿಗಳಲ್ಲಿ 'ಡೈಇಥಿಲೀನ್ ಗ್ಲೈಕೋಲ್(ಡಿಇಜಿ) ಎಂಬ ದ್ರಾವಣದ ಪ್ರಮಾಣ ಅನುಮತಿಸಿದ ಮಿತಿಗಿಂತಲೂ ಅಧಿಕ ಮಟ್ಟದಲ್ಲಿ ಇತ್ತು ಎಂಬುದು ಪರೀಕ್ಷೆಯಿಂದ ದೃಢಪಟ್ಟಿದೆ. ಹೀಗಾಗಿ, ಮಕ್ಕಳ ಸಾವಿಗೂ, ಈ ಕೆಮ್ಮಿನ ಸಿರಪ್‌ಗೂ ನಂಟು ಇದೆಯೇ ಎಂಬುದನ್ನು ಪತ್ತೆ ಮಾಡಲು ತನಿಖೆ ನಡೆಸಲಾಗುತ್ತದೆ ಎಂದು ಸಚಿವಾಲಯ ತಿಳಿಸಿದೆ. ಕಾಂಚಿಪುರಂ ಜಿಲ್ಲೆಯ ಸುಂಗುವರಛತ್ರಂನಲ್ಲಿರುವ ಸ್ರೇಸನ್ ಫಾರ್ಮಾ ಕಂಪನಿಯ ಘಟಕದಲ್ಲಿ 'ಕೋಲ್ಡ್ರಿಫ್' ಅನ್ನು ತಯಾರಿಸಲಾಗುತ್ತಿದೆ. ಈ ಸಿರಪ್‌ಅನ್ನು ರಾಜಸ್ಥಾನ, ಮಧ್ಯಪ್ರದೇಶ ಹಾಗೂ ಪುದುಚೇರಿಗೆ ಪೂರೈಸಲಾಗುತ್ತಿದೆ.

7

ಚಿನಕುರುಳಿ ಪ್ರಕಾಶ್ ಶೆಟ್ಟಿ

ಉದ್ಯೋಗಕ್ಕೆ ನಿತ್ಯ ವಲಸೆ

ರಾಜ್ಯದಲ್ಲಿ ನಿರೀಕ್ಷೆಗೆ ತಕ್ಕಂತೆ ಆಗದ ಕೈಗಾರಿಕಾ ಪ್ರಗತಿ, ಬಾರದ ಉದ್ಯಮ

● ಗಣಪತಿ ಹೆಗಡೆ

ಒಳನೋಟ

ಕಾರವಾರ: 'ವಿಜಯಪುರ ಅಥವಾ ಕಲಬುರಗಿಯಲ್ಲಿ ದೊಡ್ಡ ಕಾರ್ಖಾನೆಗಳು ಇದ್ದಿದ್ದರೆ, ನಾನು ಬೆಂಗಳೂರಿಗೆ ಬಂದು ಎಲೆಕ್ಟ್ರಿಷಿಯನ್ ಆಗುವ ಪ್ರಮೇಯವೇ ಇರುತ್ತಿರಲಿಲ್ಲ. ನನ್ನ ಗೆಳೆಯರು ಇಲ್ಲಿನ ಹೋಟೆಲ್‌ಗಳಲ್ಲಿ ಕೆಲಸ ಮಾಡಬೇಕಿರಲಿಲ್ಲ. ಇಲ್ಲಿ ಎಷ್ಟು ದುಡಿದರೂ ಸಾಲದು. ನೆಮ್ಮದಿಯ ಬದುಕು ಕಟ್ಟಿಕೊಳ್ಳುವುದಿರಲಿ, ಊರಿನಲ್ಲಿರುವ ತಂದೆ–ತಾಯಿಗೆ ಹಣ ಕಳಿಸಲು ಆಗಲ್ಲ' ಎಂದು ಈಶಪ್ಪ ಹೇಳುವಾಗ, ಕಣ್ಣಂಚಿನಲ್ಲಿ ನೀರಿತ್ತು. ವಿಜಯಪುರ ಜಿಲ್ಲೆ ಇಂಡಿ ತಾಲ್ಲೂಕಿನ ಗ್ರಾಮವೊಂದರ ಈಶಪ್ಪಗೆ ಹೇಳಲಾಗದಷ್ಟು ಸಂಕಟ ಇತ್ತು.

ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನ ನರಸಿಂಹಮೂರ್ತಿ ಮತ್ತು ಸಲೀಮ್ ಅವರ ಪರಿಸ್ಥಿತಿ ಕೂಡ ಭಿನ್ನವಾಗಿಲ್ಲ. ಕೆಲಸಕ್ಕಾಗಿ ಅವರು ಆಂಧ್ರಪ್ರದೇಶದ ಹಿಂದೂಪುರ, ಅನಂತಪುರಕ್ಕೆ ಹೋಗಬೇಕು. ಅಲ್ಲಿನ ಸ್ಟೀಲ್, ಸಿಮೆಂಟ್ ಕಾರ್ಖಾನೆಯಲ್ಲಿ ಕೆಲಸ ಮಾಡಬೇಕು. 'ಬೆಂಗಳೂರಿಗಿಂತ ನಮಗೆ ಈ ಊರುಗಳೇ ಹತ್ತಿರ. ಓದು, ಬರಹ ಕಲಿತಿದ್ದು ಕಡಿಮೆ. ಊರಿನಲ್ಲಿ ಕೆಲಸಕ್ಕಾಗಿ ಅಲೆಯುವ ಬದಲು ಆಂಧ್ರಪ್ರದೇಶದ ಫ್ಯಾಕ್ಟರಿಗೆ ಹೋಗ್ತೀವಿ. ಬದುಕಿಗೆ ಇದು ಅಲ್ಲದೇ ಬೇರೆ ದಾರಿಯಿಲ್ಲ' ಎಂದು ಇಬ್ಬರೂ ಸಂಕಷ್ಟ ತೋಡಿಕೊಂಡರು.

> **ಸ್ಥಳೀಯವಾಗಿ ಉದ್ಯೋಗ ಸೃಷ್ಟಿಯಾಗದ ಕಾರಣದಿಂದ ಗೋವಾಕ್ಕೆ ನಿತ್ಯ ದುಡಿಮೆಗೆ ವಲಸೆ ಹೋಗುವ ಸ್ಥಿತಿ ಬಂದಿದೆ**
>
> **ಸಂತೋಷ ಗೋವೇಕರ**
> ಉದ್ಯೋಗಿ, ಉತ್ತರ ಕನ್ನಡ

ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿ ಗೋಟೆಗಾಳಿ ಗ್ರಾಮದ ಕಲ್ಪೇಶ್ ನಾಯ್ಕ ರಸಾಯನಶಾಸ್ತ್ರದಲ್ಲಿ ಎಂ.ಎಸ್ಸಿ ಪದವೀಧರ. ಜಿಲ್ಲೆಯಲ್ಲಿ ಕೆಲಸ ಸಿಗದಿದ್ದಕ್ಕೆ ಗೋವಾ ರಾಜ್ಯದ ವೆರ್ನಾ ಕೈಗಾರಿಕಾ ಪ್ರದೇಶದಲ್ಲಿನ ಔಷಧ ತಯಾರಿಕೆ ಕಂಪನಿಯಲ್ಲಿ ಉದ್ಯೋಗಿ ಆಗಿದ್ದಾರೆ.

ಗೋವಾದ ವೆರ್ನಾ ಕೈಗಾರಿಕೆ ಪ್ರದೇಶಕ್ಕೆ ಉದ್ಯೋಗದ ಸಲುವಾಗಿ ತೆರಳುವ ಯುವಕ, ಯುವತಿಯರು ಕಾರವಾರದ ಅಸ್ನೋಟಿ ರೈಲು ನಿಲ್ದಾಣದಲ್ಲಿ ನಸುಕಿನಲ್ಲಿ ಡೆಮು ರೈಲು ಏರುವ ನಿತ್ಯದ ನೋಟ ಪ್ರಜಾವಾಣಿ ಚಿತ್ರ

ಅವರಂತೆಯೇ ಮೂರು ಸಾವಿರಕ್ಕೂ ಹೆಚ್ಚು ಮಂದಿ ಉದ್ಯೋಗಕ್ಕಾಗಿ ಗೋವಾ ಮೊರೆ ಹೋಗಿದ್ದಾರೆ.

'ಕಲಿತ ವಿದ್ಯೆಗೆ ತಕ್ಕ ಶಿಕ್ಷಣ ಇಲ್ಲಿ ಸಿಗುತ್ತಿಲ್ಲ. ಕೈತುಂಬ ಅಲ್ಲದಿದ್ದರೂ, ಜೀವನ ನಿರ್ವಹಣೆಗೆ ಅನಿವಾರ್ಯ ವೇತನಕ್ಕಾಗಿ ನಸುಕಿನಲ್ಲೇ ಊರು ಬಿಟ್ಟು 80 ಕಿ.ಮೀ ದೂರದ ಗೋವಾಕ್ಕೆ ಹೋಗಬೇಕು. ಮರಳಿ ಮನೆ ಸೇರುವುದು ತಡರಾತ್ರಿ. ವಯಸ್ಸಾದ ತಂದೆ–ತಾಯಿಯ ಮುಖ, ಊರಿನ ಹಗಲಿನ ವಾತಾವರಣ ನೋಡುವುದು ವಾರಕ್ಕೆ ಒಮ್ಮೆ ಮಾತ್ರ' ಎಂಬ ನೋವು ಮಾಜಾಳಿ ಗ್ರಾಮದ ವಿರಾಜ್ ಶಿರೋಡ್ಕರ್ ಅವರದ್ದು. ಕಲ್ಪೇಶ್ ನಾಯ್ಕ ಅವರಿಗೂ ಇದು ಹೊರತುಪಡಿಸಿ, ಅನ್ಯಮಾರ್ಗವಿಲ್ಲ.

ಕೆಲಸಕ್ಕಾಗಿ ಗೋವಾಕ್ಕೆ ಹೋಗುವ ಹಾದಿ ಸುಲಭವಲ್ಲ. ವೆರ್ನಾಗೆ ಹೋಗಲು ನಸುಕಿನ 5.40ಕ್ಕೆ ಕಾರವಾರದ ಶಿರವಾಡದಿಂದ ಹೊರಡುವ ಡೆಮು ರೈಲು ಹತ್ತಬೇಕು. ಅಸ್ನೋಟಿ, ಶಿರವಾಡದ ರೈಲು ನಿಲ್ದಾಣದಲ್ಲಿ ರೈಲು ಏರಲು ನೂಕುನುಗ್ಗಲು ಆಗುತ್ತದೆ. ಅದೇ ರೈಲು ರಾತ್ರಿ 9 ಗಂಟೆಗೆ ಶಿರವಾಡಕ್ಕೆ ಮರಳುತ್ತದೆ. ಇದು ನಿತ್ಯದ ಸವಾಲು, ಸಂಕಟ.

4

ವೈಯಕ್ತಿಕ, ಅನಗತ್ಯ ಪ್ರಶ್ನೆಗಳಿರುವುದು ಇಂದೇ ಗೊತ್ತಾಗಿದ್ದು: ಡಿ.ಕೆ.ಶಿವಕುಮಾರ್

'ಸಮೀಕ್ಷೆಗೆ ಇಷ್ಟೊಂದು ಪ್ರಶ್ನೆಗಳೇಕೆ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯಲ್ಲಿ ಇಷ್ಟೊಂದು ಪ್ರಶ್ನೆಗಳನ್ನು ಏಕೆ ಕೇಳಲಾಗಿದೆ? ತುಂಬಾ ಹೆಚ್ಚಾದವು. ಅವುಗಳನ್ನು ಇನ್ನೂ ಸರಳೀಕರಿಸಬೇಕಿತ್ತು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಶನಿವಾರದಿಂದ(ಅ.4) ಆರಂಭವಾಗಿರುವ ಸಮೀಕ್ಷೆಗೆ ತಮ್ಮ ನಿವಾಸದಲ್ಲಿ ಅವರು ಚಾಲನೆ ನೀಡಿದರು. ಸಮೀಕ್ಷೆಗೆ ತಮ್ಮ ಕುಟುಂಬದ ಮಾಹಿತಿ ಒದಗಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಕೋಳಿ, ಚಿನ್ನ, ಮೇಕೆ–ಕುರಿಗಳೆಷ್ಟಿವೆ ಎಂಬ ಪ್ರಶ್ನೆಗಳಿವೆ. ನಾನೆಲ್ಲಿ ಕುರಿಗಳನ್ನು ಸಾಕಲಿ? ವೈಯಕ್ತಿಕ ಹಾಗೂ ಅನಗತ್ಯ ಪ್ರಶ್ನೆಗಳು ಹೆಚ್ಚಾಗಿವೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಇಷ್ಟೊಂದು ಪ್ರಶ್ನೆಗಳಿವೆ ಎಂಬುದು ನನಗೆ ಗೊತ್ತಿರಲಿಲ್ಲ. ಹಳ್ಳಿಯಿಂದ ಬಂದು ಬೆಂಗಳೂರಿನಲ್ಲಿ ನೆಲಸಿರುವ ನಾನು, ಇಂದು ಸಮೀಕ್ಷೆಗೆ ಮಾಹಿತಿಗಳನ್ನು ನೀಡಿದ ಸಂದರ್ಭದಲ್ಲಿ ಪ್ರಶ್ನೆಗಳು ಅರಿವಿಗೆ ಬಂದವು' ಎಂದರು.

5

ಪ್ರಶ್ನೆಗಳಿಗೆ ಡಿಕೆಶಿ 'ನಿರುತ್ತರ'

- ವಿದ್ಯಾಭ್ಯಾಸ ವಿವರಗಳು?: ಏನೂ ಹೇಳಲಿಲ್ಲ
- ಸರ್ಕಾರದಿಂದ ಪಡೆದ ಉದ್ಯೋಗ ಸೌಲಭ್ಯ?: ಏನೂ ಹೇಳಲಿಲ್ಲ
- ಪಶುಸಂಗೋಪನೆ ವಿವರ?: ಏನಿಲ್ಲ
- ಸರ್ಕಾರದಿಂದ ಶೈಕ್ಷಣಿಕ ಸೌಲಭ್ಯ ಪಡೆದಿದ್ದೀರಾ?: ಇಲ್ಲ,
- ಮೀಸಲಾತಿಯಿಂದ ಸೌಲಭ್ಯ ಪಡೆದುಕೊಂಡಿದ್ದೀರಾ?: ಇಲ್ಲ
- ಸಂವಿಧಾನದ 371 ಜೆ ಅಡಿ ಬರುತ್ತೀರಾ?: ಇಲ್ಲ
- ಹಾಲಿ ಕೆಲಸ ಮಾಡುತ್ತಿದ್ದೀರಾ?: ಸಾರ್ವಜನಿಕ ವಲಯ

ಶಾಂತಿ ಸೂತ್ರ: ಹಮಾಸ್ ಭಾಗಶಃ ಒಪ್ಪಿಗೆ

ಗಾಜಾಪಟ್ಟಿ: ಗಾಜಾದಲ್ಲಿ ಯುದ್ಧ ಶಮನಗೊಳಿಸಲು ಮತ್ತು ಉಳಿದ ಒತ್ತೆಯಾಳುಗಳ ಬಿಡುಗಡೆಗೆ ಸಂಬಂಧಿಸಿದಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಸ್ತಾಪಿಸಿರುವ ಶಾಂತಿ ಯೋಜನೆಯ ಕೆಲವು ಅಂಶಗಳನ್ನು ಒಪ್ಪಿಕೊಳ್ಳುತ್ತೇವೆ ಎಂದು ಹಮಾಸ್ ತಿಳಿಸಿದೆ.

8

ADVERTORIAL

ಮಂಡಿನೋವಿಗೆ ಸರ್ಜರಿ ಇಲ್ಲದೇ ಉಪಶಮನ

ಪುನರುತ್ಪಾದಕ ಚಿಕಿತ್ಸೆಗಳಿಂದ ಆತ್ಮವಿಶ್ವಾಸದ ಜೀವನದತ್ತ ಸಾಗಿ

✓ 48 ಗಂಟೆಗಳಲ್ಲಿ ನಿಮ್ಮ ಕೆಲಸಕ್ಕೆ ತೆರಳಬಹುದು ✓ ಆಸ್ಪತ್ರೆ ವಾಸವಿಲ್ಲ ✓ 30-60 ನಿಮಿಷದ ವಿಧಾನ

ಬೆಂಗಳೂರಿನ ನಿವಾಸಿಯಾದ ಕೃಷ್ಣಮೂರ್ತಿಯವರು ಹಲವು ವರ್ಷಗಳಿಂದ ಮಂಡಿನೋವಿನಿಂದ ಬಳಲುತ್ತಿದ್ದರು. ಕುಟುಂಬದ ಪ್ರವಾಸಗಳು, ಸಮಾರಂಭಗಳಿಗೆ ಹೋಗುವುದಾಗಲಿ, ದೈನಂದಿನ ಚಟುವಟಿಕೆಯಲ್ಲಿ ತೊಡಗುವುದಾಗಲಿ ಕಷ್ಟಕರವಾಗುತ್ತಿತ್ತು.

ನೋವನ್ನು ಕಡಿಮೆ ಮಾಡಲು ಪೇನ್ ಕಿಲ್ಲರ್ ಮಾತ್ರೆಗಳು ಸದಾ ನುಂಗುತ್ತಿರುವುದು ಈ ವ್ಯಕ್ತಿಯ ದಿನಚರಿಯ ಭಾಗವಾಗಿತ್ತು. ಆದರೆ, ಈ ಮಾತ್ರೆಗಳ ಪ್ರಭಾವ ಕೆಲವೇ ಗಂಟೆಗಳ ಕಾಲ ಮಾತ್ರ ಇರುತ್ತಿತ್ತು ಮತ್ತು ಕೀಲುಗಳ ಹಾನಿ ಒಳಗೊಳಗೇ ಮುಂದುವರಿಯುತ್ತಲೇ ಇತ್ತು.

ಮೆಟ್ಟಿಲು ಹತ್ತಲು ತೊಂದರೆಯೇ ?

ಸರಳ ಕೆಲಸವೂ ಕೆಲವೊಮ್ಮೆ ಕಷ್ಟವೇ ?

ಪೇನ್ ಕಿಲ್ಲರ್ಸ್ ಮೇಲೆ ಅತಿಯಾದ ಅವಲಂಬನೆಯೇ ?

ಅಲಿವಿಯೇಟ್ ಸರ್ಜರಿ ಇಲ್ಲದೇ 21,000+ ಜನರಿಗೆ ನೋವು ರಹಿತ ಜೀವನ ನೀಡಿದೆ

ವೈದ್ಯರ ಉಲ್ಲೇಖ

"ಪೇನ್ ಕಿಲ್ಲರ್ಸ್‌ಗಳ ಮೇಲೆ ಅತಿ ಅವಲಂಬನೆ ಹೇಗೆಂದರೆ, ಇಲಿ ಒಳಗೆ ಇರುವಾಗಲೇ ಅದರ ಬಿಲವನ್ನು ಮುಚ್ಚಿದಂತೆ. ಇದರಿಂದ ನೋವು ತಾತ್ಕಾಲಿಕವಾಗಿ ಮಾಯವಾದಂತೆ ಕಂಡುಬಂದರೂ, ಮಂಡಿಯ ಹಾನಿ ಹೆಚ್ಚಾಗುತ್ತಲೇ ಹೋಗುತ್ತದೆ. ನಿಜವಾದ ಚಿಕಿತ್ಸೆ ಎಂದರೆ ಇಲಿಯನ್ನು ಹೊರತೆಗೆದು, ಬಿಲವನ್ನು ಸರಿಯಾಗಿ ಮುಚ್ಚುವುದು.

ಅಲಿವಿಯೇಟ್ ನಲ್ಲಿ, ಮೊದಲು ಸಮಸ್ಯೆಯ ಮೂಲ ಕಾರಣವನ್ನು ಪತ್ತೆಹಚ್ಚಿ, ನಂತರ ಹೆಚ್ಚು ಸೂಕ್ತವಾದ ಚಿಕಿತ್ಸೆಯನ್ನು ನೀಡುವ ಮೂಲಕ ನೋವನ್ನು ಬುಡದಿಂದಲೇ ಉಪಶಮನಗೊಳಿಸುತ್ತೇವೆ."

ಅಲಿವಿಯೇಟ್ ಪೇನ್ ಕ್ಲಿನಿಕ್ ಬಗ್ಗೆ ಓದಿದ ನಂತರ, ಕೃಷ್ಣಮೂರ್ತಿಯವರು ನೋವು ತಜ್ಞರಾದ ಡಾ. ಸ್ವಾಗತೇಶ್ ಬಾಸ್ಟಿಯಾ ಅವರನ್ನು ಭೇಟಿಯಾದರು. ವೈದ್ಯರು ಸೂಚಿಸಿದಂತೆ, ಸ್ಟೆಮ್ ಸೆಲ್ ಥೆರಪಿ, ಪಿಆರ್‌ಪಿ ಮತ್ತು ಪ್ರೋಲೋಥೆರಪಿಯ ಸಂಯೋಜಿತ ಚಿಕಿತ್ಸೆಯನ್ನು ಪಡೆದರು. ಕೆಲವೇ ವಾರಗಳಲ್ಲಿ, ಅವರ ಮಂಡಿಯ ಬಿಗಿತ ಕಡಿಮೆಯಾಗಿ, ಚಲನಶೀಲತೆ ಮರಳಿತು ಮತ್ತು ಅವರು ಮತ್ತೆ ಆತ್ಮವಿಶ್ವಾಸದ ಜೀವನ ಕಂಡುಕೊಂಡರು.

ಕೃಷ್ಣಮೂರ್ತಿಯವರಂತೆಯೇ, 21,000+ ಕ್ಕೂ ಹೆಚ್ಚು ರೋಗಿಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡಿರುವ ಅಲಿವಿಯೇಟ್, ಸುಧಾರಿತ ನೋವು ನಿರ್ವಹಣೆಯಲ್ಲಿ ಒಂದು ವಿಶ್ವಾಸಾರ್ಹ ಹೆಸರಾಗಿದೆ.

ಇಲ್ಲಿ ಲಭ್ಯವಿರುವ ಕೆಲವೊಂದು ಚಿಕಿತ್ಸೆಗಳು:

ಸ್ಟೆಮ್ ಸೆಲ್ ಥೆರಪಿ: ನಿಮ್ಮ ಸ್ವಂತ ಜೀವಕೋಶಗಳನ್ನು ಬಳಸಿ ಹಾನಿಗೊಳಗಾದ ಕಾರ್ಟಿಲೆಜ್ ಪುನರುತ್ಪಾದಿಸಲಾಗುತ್ತದೆ.

ಪ್ಲೇಟ್‌ಲೆಟ್ ರಿಚ್ ಪ್ಲಾಸ್ಮಾ (ಪಿಆರ್‌ಪಿ): ಉರಿಯೂತವನ್ನು ಕಡಿಮೆ ಮಾಡುತ್ತದೆ ಮತ್ತು ಮಂಡಿಯ ಒಳಗಿರುವ ಗಾಯ ಬೇಗನೆ ಗುಣವಾಗಲು ಸಹಾಯ ಮಾಡುತ್ತದೆ.

ಪ್ರೋಲೋಥೆರಪಿ: ಗಾಯಗೊಳಗಾದ ಕಾರ್ಟಿಲೆಜ್‌ಗಳನ್ನು ಬಲಪಡಿಸುತ್ತದೆ ಮತ್ತು ಕೀಲುಗಳಿಗೆ ಸ್ಥಿರತೆಯನ್ನು ನೀಡುತ್ತದೆ.

ಶಸ್ತ್ರಚಿಕಿತ್ಸೆಯೇ ಏಕೈಕ ಆಯ್ಕೆಯಾಗುವವರೆಗೆ ಕಾಯಬೇಡಿ. ಆತ್ಮವಿಶ್ವಾಸದ ಜೀವನದತ್ತ ನಿಮ್ಮ ಮೊದಲ ಹೆಜ್ಜೆ ಇಡಲು, ಇಂದೇ ಕರೆ ಮಾಡಿ.

ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಪರಿಣಾಮಕಾರಿ ಚಿಕಿತ್ಸೆಗಳು ಲಭ್ಯವಿವೆ

ಅಲಿವಿಯೇಟ್ ನೋವು ನಿವಾರಣಾ ಕೇಂದ್ರಗಳು

ಬೆಂಗಳೂರಿನಲ್ಲಿ ಇವರ ಕ್ಲಿನಿಕ್ಸ್ ಇಲ್ಲಿವೆ

ಪೀಣ್ಯಾ ದಾಸರಹಳ್ಳಿ | ಸದಾಶಿವನಗರ | ಜಯನಗರ | ಇಂದಿರಾನಗರ | ವೈಟ್‌ಫೀಲ್ಡ್

81475 50855
080 23614888

ದಸರಾ ಹಬ್ಬದ ವಿಶೇಷ ಕೊಡುಗೆಗಾಗಿ ಸಂಪರ್ಕಿಸಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆ ಇದೆ.

ಕೆಂಪೇಗೌಡ ನಗರ ವಿನ್ಯಾಸ ಕಾಲೇಜು ಸ್ಥಾಪನೆಗೆ ₹100 ಕೋಟಿ ಅನುದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಡಪ್ರಭು ಕೆಂಪೇಗೌಡರ ಹೆಸರಿನಲ್ಲಿ ನಗರ ವಿನ್ಯಾಸ ಕಾಲೇಜು ಸ್ಥಾಪನೆಗೆ ₹100 ಕೋಟಿ ಅನುದಾನ ಮೀಸಲಿಡಲಾಗಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ನಾಡಪ್ರಭು ಕೆಂಪೇಗೌಡ ಪ್ರಾಧಿಕಾರ'ದ ಸಭೆಯನ್ನು ಶನಿವಾರ ನಡೆಸಿದ ಅವರು, ಯೋಜನೆಗಳ ಪ್ರಗತಿಯ ಮಾಹಿತಿ ಪಡೆದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಗರ ವಿನ್ಯಾಸ ಕಾಲೇಜಿನಲ್ಲಿ ಸುಮಾರು 300 ವಿದ್ಯಾರ್ಥಿಗಳ ಅಧ್ಯಯನಕ್ಕೆ ಅವಕಾಶ ನೀಡಲಾಗುವುದು. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ತಯಾರಿಸಿದ ಪಠ್ಯಕ್ರಮ ಅಳವಡಿಸಿಕೊಳ್ಳುವ ಕುರಿತು ಚರ್ಚೆ ನಡೆದಿದೆ. ನಗರ ವಿನ್ಯಾಸ ಅಧ್ಯಯನ ಮಾಡಿದವರಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಮತ್ತು ಪಾಲಿಕೆಗಳಲ್ಲಿ ಉದ್ಯೋಗ ನೀಡಲಾಗುವುದು. ಕಾಲೇಜು ನಿರ್ಮಾಣಕ್ಕಾಗಿ ನಗರಾಭಿವೃದ್ಧಿ ಇಲಾಖೆ, ಕೆಂಪೇಗೌಡ ಪ್ರಾಧಿಕಾರ ಮತ್ತು ಜಿಬಿಎಯಿಂದ ಅನುದಾನ ಮೀಸಲಿಡಲಾಗಿದೆ' ಎಂದರು.

ಸುಮನಹಳ್ಳಿಯ ಬಳಿ ಐದು ಎಕರೆ ಪ್ರದೇಶದಲ್ಲಿ ನಿರ್ಮಾಣ ಮಾಡುತ್ತಿರುವ ಕೆಂಪೇಗೌಡ ಭವನಕ್ಕೆ ವಾಸ್ತುಶಿಲ್ಪಿಗಳಿಂದ ಅತ್ಯುತ್ತಮ ವಿನ್ಯಾಸ ಆಹ್ವಾನಿಸಲಾಗಿದೆ. ಕೆಂಪೇಗೌಡರ ಎಲ್ಲಾ ಸ್ಮಾರಕಗಳನ್ನು ಪುನರುಜ್ಜೀವನಗೊಳಿಸಲು ₹103 ಕೋಟಿ ಅನುದಾನ ನೀಡಲಾಗಿದೆ. ಮಾಗಡಿ ಕೋಟೆಯ ಪುನರುಜ್ಜೀವನ ಕೆಲಸ ಶೇ 50ರಷ್ಟು ಮುಗಿದಿದೆ. ಆಂತರಿಕ ಸಮನ್ವಯತೆ ಸಾಧಿಸಲು ಸಮಿತಿ ರಚಿಸಲಾಗುವುದು. ಕೆಂಪೇಗೌಡರ ಸಮಾಧಿ ಸ್ಥಳದಲ್ಲಿ 10 ಎಕರೆ ಜಮೀನು ಸ್ವಾಧೀನ ಪಡಿಸಿಕೊಳ್ಳುತ್ತಿದ್ದು, ಶೇ 90 ಸ್ವಾಧೀನ ಕಾರ್ಯ ಪೂರ್ಣಗೊಂಡಿದೆ ಎಂದು ಮಾಹಿತಿ ನೀಡಿದರು.

ಅ.8ಕ್ಕೆ ಸಭೆ: ನಗರದಲ್ಲಿ ಎಲ್ಲೆಂದರಲ್ಲಿ ಕೇಬಲ್‌ಗಳನ್ನು ಎಳೆಯಲಾಗಿದೆ. ಬೆಸ್ಕಾಂಗೆ ಸೇರಿದ ಕಂಬಗಳಲ್ಲಿ ಟಿ.ವಿ ಕೇಬಲ್‌ಗಳು ನೇತಾಡುತ್ತಿವೆ. ಸಮಸ್ಯೆ ಬಗೆಹರಿಸಲು ಸಚಿವ ಕೆ.ಜೆ.ಜಾರ್ಜ್ ಅವರ ಜತೆ ಅ.8ರಂದು ಸಭೆ ನಡೆಸಲಾಗುವುದು. ನಾಲ್ಕು ಲಕ್ಷ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡುವುದರ ಬಗ್ಗೆ ಮುಖ್ಯಮಂತ್ರಿ ಸಭೆ ಕರೆದಿದ್ದಾರೆ. ಎ ಹಾಗೂ ಬಿ ಖಾತಾ ವಿಚಾರವಾಗಿಯೂ ಚರ್ಚಿಸಲಾಗುವುದು ಎಂದು ಹೇಳಿದರು.

'ವಚನ ದಸರಾ ಎಲ್ಲೆಡೆಯಾಗಲಿ'

ಅರ್ಥಪೂರ್ಣ ಕಾರ್ಯಕ್ರಮ: ಶಾಸಕ ಎಸ್.ಟಿ. ಸೋಮಶೇಖರ್ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಸರಾ ಸಂದರ್ಭದಲ್ಲಿ 11 ದಿನಗಳಲ್ಲಿಯೂ ಕನ್ನಡದ ಸ್ವಾತಂತ್ರ್ಯ ಧೀರರ ನೆನೆಯುವ ವಚನ ದಸರಾ ಅರ್ಥಪೂರ್ಣವಾಗಿದ್ದು, ಇದು ಯಶವಂತಪುರ ವಿಧಾನಸಭೆ ಕ್ಷೇತ್ರದ ಎಲ್ಲೆಡೆ ನಡೆಯಬೇಕು' ಎಂದು ಶಾಸಕ ಎಸ್.ಟಿ.ಸೋಮಶೇಖರ್ ಹೇಳಿದರು.

ಕಲ್ಯಾಣ ಬಡಾವಣೆಯಲ್ಲಿ ವಚನಜ್ಯೋತಿ ಬಳಗ ಆಯೋಜಿಸಿದ್ದ ವಚನ ದಸರೆಯ ಸಮಾರೋಪದಲ್ಲಿ ಅವರು ಮಾತನಾಡಿದರು.

'ಮಕ್ಕಳಲ್ಲಿ ವಚನ ಬಿತ್ತನೆ ಸಾರ್ಥಕವಾದ ಅದನ್ನು ಕಾಪಾಡಿಕೊಳ್ಳಬೇಕಾದ ಹೊಣೆಗಾರಿಕೆ ನಮ್ಮದಾಗಿದೆ' ಎಂದು ಹೇಳಿದರು.

ಬೇಲಿಮಠದ ಸ್ವಾಮೀಜಿ ಮಾತನಾಡಿ, 'ಕಲ್ಯಾಣದಲ್ಲಿ ವಿಪ್ಲವವಾದಾಗ ಅಕ್ಕನಾಗಮ್ಮ ಚನ್ನಬಸವಣ್ಣನವರ ನೇತೃತ್ವದಲ್ಲಿ ಮಡಿವಾಳ ಮಾಚಿದೇವ, ಡೋಹರ ಕಕ್ಕಯ್ಯ, ನುಲಿಯ ಚಂದಯ್ಯ, ಗಂಗಾಂಬಿಕೆ, ರುದ್ರಮುನಿದೇವರು ಸೇರಿಕೊಂಡು ಉಳವಿಯತ್ತ ನಡೆದರು. ಎಳೆಮೂಟೆಯ ಶಿಕ್ಷೆಯಲ್ಲಿ ಉಸಿರು ಉಳಿಸಿಕೊಂಡ ಹರಳಯ್ಯನವರನ್ನು ಕಾಯಕ ಶರಣರು ಕಾವೇರಿ ತೀರಕ್ಕೆ ಕರೆದುಕೊಂಡು ಬಂದರು. ಇಂದಿಗೂ ಚಾಮರಾಜನಗರ ಭಾಗದಲ್ಲಿ ಇರುವ ಹರವೆ ಗ್ರಾಮದಲ್ಲಿ ಹರಳಯ್ಯನವರ ಸಮಾಧಿ ಇದೆ' ಎಂದು ವಿವರಿಸಿದರು.

ಪದ್ಮಜ ಪ್ರಸನ್ನ, ಬಳಗದ ಪ್ರಧಾನ ಕಾರ್ಯದರ್ಶಿ ಪ್ರಭು ಇಸುವನಹಳ್ಳಿ, ಮುಖ್ಯ ಕಾರ್ಯನಿರ್ವಾಹಕ ರಾಜಾ ಗುರುಪ್ರಸಾದ್, ಗಾಯಕಿಯರಾದ ಮೀನಾಕ್ಷಿ ಮೇಟಿ, ಟಿ.ಎಂ. ಜಾನಕಿ, ಕಿರಣ್ ಬಳ್ಳಾರಿ, ವಚನ ಕಲಿಕಾ ತರಗತಿಯ ಸಂಚಾಲಕರಾದ ಮಧು ಶಿವಕುಮಾರ್, ದಿವಾಕರ್, ಪ್ರಾಧ್ಯಾಪಕ - ರಂಗವಿಮರ್ಶಕ ರುದ್ರೇಶ್ ಅದರಂಗಿ, ನಿವೃತ್ತ ಅಧಿಕಾರಿಗಳಾದ ಪ್ರಕಾಶ್ ಮಜಗಿ, ರಾಜು, ಬಡಾವಣೆಯ ಹಿರಿಯರಾದ ಚನ್ನಮಲ್ಲಯ್ಯ, ಚಂದ್ರಶೇಖರಯ್ಯ ಇದ್ದರು.

ಮುಖ್ಯಾಂಶಗಳು
- ಮಕ್ಕಳಲ್ಲಿ ವಚನ ಬಿತ್ತನೆ ಸಾರ್ಥಕ
- ನವೆಂಬರ್ 18ರಿಂದ 27ರವರೆಗೆ ಮಕ್ಕಳ ವಚನ ಮೇಳ

ವಚನ ದಸರಾ ಸಮಾರೋಪದಲ್ಲಿ ಬಸವಣ್ಣನವರಿಗೆ ಪುಷ್ಪಾರ್ಚನೆ ಸಲ್ಲಿಸಿದ ಎಸ್‌ಟಿ. ಸೋಮಶೇಖರ್, ಬೇಲಿಮಠದ ಸ್ವಾಮೀಜಿ, ಪಿನಾಕಪಾಣಿ

'ಮಕ್ಕಳ ವಚನ ಮೇಳ'

'ವಚನ ದಸರಾದಲ್ಲಿ ಪ್ರತಿದಿನವೂ ಒಬ್ಬೊಬ್ಬ ವಚನಕಾರ್ತಿಯರ ಪರಿಚಯ ಮಾಡಿಕೊಂಡು ಅವರ ವಚನಗಳ ವ್ಯಾಖ್ಯಾನ ನಡೆಸಲಾಗಿದ್ದು ಬೇರೆ ಬೇರೆ ತಂಡಗಳ ವಚನ ಗಾಯನ ನಡೆದಿದೆ' ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ತಿಳಿಸಿದರು.

ಮಕ್ಕಳಲ್ಲಿ ವಚನ ಸಂಸ್ಕೃತಿ ಬಿತ್ತಲು 'ಮಕ್ಕಳ ವಚನ ಮೇಳ'ವನ್ನು ಕಲಾ ಗ್ರಾಮದಲ್ಲಿ ನವೆಂಬರ್ 18ರಿಂದ 27ರವರೆಗೆ ನಡೆಸಲಾಗುವುದು ಎಂದರು.

ಸುದ್ದಿ 2 ನಿಮಿಷ

'ಸಿ' ವರ್ಗದ ದೇವಸ್ಥಾನಗಳ ಅಭಿವೃದ್ಧಿಗೆ 'ವಿಷನ್ ಗ್ರೂಪ್'

ಬೆಂಗಳೂರು: ಹಿಂದೂ ಧಾರ್ಮಿಕ ಹಾಗೂ ಧರ್ಮಾದಾಯ ದತ್ತಿಗಳ ಇಲಾಖೆಯಡಿ (ಮುಜರಾಯಿ) ಇರುವ 'ಸಿ' ವರ್ಗದ ದೇವಾಲಯಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗಾಗಿ ಸರ್ಕಾರವು 'ವಿಷನ್ ಗ್ರೂಪ್' ರಚಿಸಿದೆ.

ಕೆ.ಇ. ರಾಧಾಕೃಷ್ಣ, ಕೆ.ಸಿ. ರಾಮಮೂರ್ತಿ, ಶಕುಂತಲಾ ಶೆಟ್ಟಿ, ಮಹಾಂತೇಶ್ ಬಿರಾದಾರ್, ಶ್ರೀಪಾದ ಎಸ್.ಬಿ., ಶ್ರೀನಿವಾಸ ಪಿ.ಸಿ., ಯತಿರಾಜ ಸಂಪತ್ ಕುಮಾರನ್ ಎಸ್.ಎನ್. ಅವರನ್ನು 'ವಿಶನ್ ಗ್ರೂಪ್' ಸದಸ್ಯರನ್ನಾಗಿ ಮಾಡಿದೆ.



ರಾಜ್ಯದಲ್ಲಿ 34,563 ಮುಜರಾಯಿ ದೇವಸ್ಥಾನಗಳಿವೆ. ಅದರಲ್ಲಿ 'ಎ' ವರ್ಗದ 205, 'ಬಿ' ವರ್ಗದ 193 ದೇವಸ್ಥಾನಗಳಾಗಿದ್ದು, ಕಡಿಮೆ ಆದಾಯ ಇರುವ 34,165 ಪುರಾತನ ದೇವಸ್ಥಾನಗಳನ್ನು 'ಸಿ' ವರ್ಗ ಎಂದು ಗುರುತಿಸಲಾಗಿದೆ. ಇವುಗಳ ಅಭಿವೃದ್ಧಿಗೆ ಅಗತ್ಯ ಸಂದರ್ಭದಲ್ಲಿ ಸರ್ಕಾರದಿಂದ ಹಾಗೂ ಸಾಮಾನ್ಯ ಸಂಗ್ರಹಣಾ ನಿಧಿಯಿಂದ ಅನುದಾನ ನೀಡಲಾಗುತ್ತಿದೆ. ದೇವಾಲಯಗಳ ವಾಸ್ತವ ಸ್ಥಿತಿಯನ್ನು ಪರಿಶೀಲಿಸಿ, ಅವುಗಳ ಸಮಗ್ರ ಅಭಿವೃದ್ಧಿ ಕೈಗೊಳ್ಳಲು ರಾಜ್ಯ ಧಾರ್ಮಿಕ ಪರಿಷತ್ ನಿರ್ದೇಶನ ನೀಡಿತ್ತು. ಅದರಂತೆ 'ವಿಷನ್ ಗ್ರೂಪ್' ರಚಿಸುವುದಾಗಿ ಸರ್ಕಾರವು ಬಜೆಟ್‌ನಲ್ಲಿ ಘೋಷಣೆ ಮಾಡಿತ್ತು.

ಲಂಚ: ವಿಶೇಷಾಧಿಕಾರಿ ಬಂಧನ

ಬೆಂಗಳೂರು: ವಿದ್ಯುತ್ ಸಂಪರ್ಕಕ್ಕಾಗಿ ಎನ್‌ಒಸಿ ನೀಡಲು ₹50,000 ಲಂಚ ಪಡೆಯುತ್ತಿದ್ದ ವೇಳೆ ಇಂಧನ ಸಚಿವರ ವಿಶೇಷಾಧಿಕಾರಿ ಜ್ಯೋತಿ ಪ್ರಕಾಶ್ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಕೆಪಿಟಿಸಿಎಲ್ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿರುವ ಜ್ಯೋತಿ ಪ್ರಕಾಶ್ ಅವರು, ಇಂಧನ ಸಚಿವ ಕೆ.ಜೆ.ಜಾರ್ಜ್ ಅವರ ವಿಶೇಷಾಧಿಕಾರಿಯಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ.

'ನಗರದ ಬ್ಯಾಡರಹಳ್ಳಿ ನಿವಾಸಿ ಕೆ.ಎಂ.ಅನಂತರಾಜು ಅವರು ಬಡಾವಣೆ ನಿರ್ವಹಿಸುತ್ತಿದ್ದು, ನಿರ್ಮಾಣ ಕಾಮಗಾರಿಗೆ ವಿದ್ಯುತ್ ಸಂಪರ್ಕ ಪಡೆಯಲು ಅರ್ಜಿ ಸಲ್ಲಿಸಿದ್ದರು. ಈ ಸಂಬಂಧ ಎನ್‌ಒಸಿ ನೀಡಲು ಜ್ಯೋತಿ ಪ್ರಕಾಶ್ ಅವರು ₹ 1ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

'ಅನಂತರಾಜು ಅವರು ನೀಡಿದ್ದ ದೂರಿನ ಆಧಾರದಲ್ಲಿ ಕಾರ್ಯಾಚರಣೆ ರೂಪಿಸಲಾಗಿತ್ತು. ಅದರಂತೆ ಅನಂತರಾಜು ಅವರು ಶನಿವಾರ ಸಂಜೆ ಜ್ಯೋತಿ ಪ್ರಕಾಶ್ ಅವರಿಗೆ ₹50 ಸಾವಿರ ನೀಡಿದ್ದರು. ಈ ವೇಳೆ ದಾಳಿ ನಡೆಸಿ ಜ್ಯೋತಿ ಪ್ರಕಾಶ್ ಮತ್ತು ಅವರ ಚಾಲಕ ನವೀನ್ ಎಂಬುವವರನ್ನು ಬಂಧಿಸಲಾಯಿತು' ಎಂದು ಮಾಹಿತಿ ನೀಡಿದ್ದಾರೆ.

'ಲೋಕಾಯುಕ್ತ ಎಸ್‌ಪಿ ಶಿವಪ್ರಕಾಶ್ ದೇವರಾಜ್ ನೇತೃತ್ವದಲ್ಲಿ ಕಾರ್ಯಾಚರಣೆ ರೂಪಿಸಲಾಗಿತ್ತು. ಲಂಚದ ಹಣವನ್ನು ವಶಕ್ಕೆ ಪಡೆದಿದ್ದು, ತನಿಖೆ ಮುಂದುವರೆದಿದೆ' ಎಂದಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.: ಬೆಂಅಪ್ರಾ/ನಯೋಸ/CLU–392/2503/2025–26 ದಿನಾಂಕ: 04.10.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ** ವಲಯದಿಂದ **ವಾಣಿಜ್ಯ ಮತ್ತು ವಸತಿ** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ.ಜಯರಾಮ್ ಬಿನ್ ಲೇ ನಾರಾಯಣ್ ಸಿಂಗ್ ನಂ.135, ನೇಸರ ನಿಲಯ, ವೆಂಕಟೇಶ್ವರ ಡೆಂಟಲ್ ಕಾಲೇಜ್ ಹತ್ತಿರ, ಆನೇಕಲ್ ಮುಖ್ಯರಸ್ತೆ, ಬನ್ನೇರುಘಟ್ಟ ಗ್ರಾಮ ಮತ್ತು ಪಂಚಾಯಿತಿ, ಬೆಂಗಳೂರು–560083	ಆನೇಕಲ್	ಜಿಗಣಿ	ಬನ್ನೇರುಘಟ್ಟ	67/3 6/4ಎ 67/4ಬಿ	0–25 0–19 1–06	ವ್ಯವಸಾಯ ವಲಯ	ವಾಣಿಜ್ಯ
					ಒಟ್ಟು	2–10		
					67/4ಎ 68	1–20 1–19	ವ್ಯವಸಾಯ ವಲಯ	ವಸತಿ
					ಒಟ್ಟು	2–39		
					ಒಟ್ಟು ಸೇರಿ	5–09 (0ಎ–02ಗುಂ ಖರಾಬು ಹೊರತುಪಡಿಸಿ)		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವಾಣಿಜ್ಯ ಅಭಿವೃದ್ಧಿ ಮತ್ತು ವಸತಿ ಯೋಜನೆಗಳನ್ನು ಅಭಿವೃದ್ಧಿಪಡಿಸುವುದರಿಂದ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶವಿರುತ್ತದೆ ಹಾಗೂ ಯೋಗ್ಯ ಬೆಲೆಯಲ್ಲಿ ವಸತಿ ನಿವೇಶನ/ವಸತಿ ಘಟಕಗಳು/ಕಟ್ಟಡಗಳು ದೊರಕುತ್ತದೆ. ವಾಣಿಜ್ಯ / ವಸತಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಿನ್ಯಾಸದ ಕಾಮಗಾರಿಯು ಪೂರ್ಣಗೊಂಡ ನಂತರ ವಿವಿಧ ರೀತಿಯ ಉದ್ಯೋಗಗಳು ದೊರಕುತ್ತದೆ. ಈ ವಾಣಿಜ್ಯ/ವಸತಿ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಯೋಜನಾಬದ್ಧವಾದ ವಾಣಿಜ್ಯ/ವಸತಿ ವಿನ್ಯಾಸ ರಚನೆಯಿಂದ ನಾಗರೀಕ ಸೌಲಭ್ಯಗಳಾದ ಉತ್ತಮ ರಸ್ತೆಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ. ವಾಣಿಜ್ಯ/ವಸತಿ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆಯಾಗಿ ಅಭಿವೃದ್ಧಿಯಾಗುವುದರಿಂದ ಸರ್ಕಾರದ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಸಾಕಷ್ಟು ಆದಾಯ ಬರುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಾಣಿಜ್ಯ ಮತ್ತು ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562123
ದೂರವಾಣಿ ಸಂಖ್ಯೆ: 080–23718487
ಇ–ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ತಾ.ಶಾ/ಸಿ.ಆರ್/27/2025–26 ದಿನಾಂಕ: 04–10–2025

ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)

ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2021–22, 2022–23ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಉಳಿಕೆ ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆ ಮತ್ತು ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆ ಮತ್ತು ಏಜೆನ್ಸಿದಾರರಿಂದ ಕಾಮಗಾರಿ/ಸರಬರಾಜು ಟೆಂಡರ್ ನಿರ್ವಹಿಸಲು ಹಾಗೂ ಕುಡಿಯುವ ನೀರು ಘಟಕಗಳನ್ನು ವಾರ್ಷಿಕವಾರು ನಿರ್ವಹಣೆ ಮಾಡಲು ಹಾಗೂ ಇ–ಹರಾಜು ನಿರ್ವಹಿಸಲು ಮೊಹರಾದ ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (ಕೆ.ಪಿ.ಪಿ) ಮೂಲಕ ಆಹ್ವಾನಿಸಲಾಗಿದೆ.

ಇಂಡೆಂಟ್ ಸಂಖ್ಯೆ: INDENT50144, INDENT50145 & IND5461
1) ಮಾಹಿತಿಯನ್ನು ಪಡೆಯಲು ಕೊನೆಯ ದಿನಾಂಕ: 10.10.2025 ಸಂಜೆ 4.30 ಗಂಟೆಯವರೆಗೆ 2) ಕಾಮಗಾರಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 13.10.2025 ಸಂಜೆ 5.00ವರೆಗೆ. 3) ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 14.10.2025 ಸಂಜೆ 5.15 ಗಂಟೆಗೆ. 4) ಟೆಂಡರ್‌ನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 17.10.2025 ಬೆಳಿಗ್ಗೆ 11.00 ಗಂಟೆಗೆ.

ಇ–ಹರಾಜು ಇಂಡೆಂಟ್ ಸಂಖ್ಯೆ: AUCTION4548, AUCTION4549 & AUCTION4550
1) ಮಾಹಿತಿಯನ್ನು ಪಡೆಯಲು ಕೊನೆಯದಿನಾಂಕ: 17.10.2025 ಸಂಜೆ 4.30 ಗಂಟೆಯವರೆಗೆ 2) ಇ–ಹರಾಜುವಿನಲ್ಲಿ ಭಾಗವಹಿಸಲು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 21.10.2025 ಸಂಜೆ 5.00 ವರೆಗೆ. 3) ಇ–ಹರಾಜಿನಲ್ಲಿ ಲೈವ್ ಬಿಡ್ಡು ದಿನಾಂಕವನ್ನು ಕೆಪಿಪಿ ಪೋರ್ಟಲ್‌ನಲ್ಲಿರುವಂತೆ. 4) ಹೆಚ್ಚಿನ ಮಾಹಿತಿಗಾಗಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರ/3101/ಸ್ಕ್ಯಾನ್/2025–26

ಗ್ರಾ.ಪಂ ಅಧ್ಯಕ್ಷೆಯಾಗಿ ಹೇಮಲತಾ ಆಯ್ಕೆ

ಯಲಹಂಕ: ರಾಜಾನುಕುಂಟೆ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಹೇಮಲತಾ ಡಿ.ಬಿ. ವೇಣುಗೋಪಾಲ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸುಜಾತಮ್ಮ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಚುನಾವಣೆ ನಡೆಯಿತು. ಒಟ್ಟು 27 ಸದಸ್ಯ ಬಲ ಹೊಂದಿರುವ ಪಂಚಾಯಿತಿಯಲ್ಲಿ ಅಧ್ಯಕ್ಷರ ಸ್ಥಾನಕ್ಕಾಗಿ(ಸಾಮಾನ್ಯ ಮಹಿಳೆ)ಹೇಮಲತಾ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಎಸ್.ಜಿ.ನರಸಿಂಹಮೂರ್ತಿ, ಕೆ.ವೀರಣ್ಣ, ಭವಾನಿ ಶ್ರೀನಿವಾಸ್, ಅಂಬಿಕಾ ರಾಜೇಂದ್ರಕುಮಾರ್, ಚನ್ನಮ್ಮ, ಉಪಾಧ್ಯಕ್ಷೆ ಸೌಮ್ಯಾ ಗೋವಿಂದರಾಜು, ಸದಸ್ಯರಾದ ವೆಂಕಟೇಶ್, ಆರ್. ಡಿ.ರಾಜಣ್ಣ, ಎಂ.ಚಿಕ್ಕಣ್ಣ, ಸಂತೋಷ್ ಕುಮಾರ್.ಎನ್, ಶಿವಕುಮಾರ್.ವಿ, ಬಿಜೆಪಿ ಮುಖಂಡ ದಿಬ್ಬೂರು ಜಯಣ್ಣ, ಎಸ್.ಎನ್.ರಾಜಣ್ಣ ಇತರರು ಇದ್ದರು.

ಮುಂದುವರಿದ ತೆರಿಗೆ ತಾರತಮ್ಯ: ಪ್ರಿಯಾಂಕ್

ಬೆಂಗಳೂರು: ಕೇಂದ್ರ ಸರ್ಕಾರ ತೆರಿಗೆ ತಾರತಮ್ಯ ಮುಂದುವರಿಸಿದೆ. ಕೇಂದ್ರಕ್ಕೆ ಕನ್ನಡಿಗರ ದುಡಿಮೆ, ತೆರಿಗೆ ಬೇಕು. ವಾಪಸ್ ಕೊಡುವಾಗ ಕರ್ನಾಟಕ ಬೇಡವಾಗಿದೆ ಎಂದು ಪ್ರಿಯಾಂಕ್ ಖರ್ಗೆ ದೂರಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು,'ರಾಜ್ಯದ ಬಿಜೆಪಿ ಸಂಸದರು, ಪುಕ್ಕಟೆ ಭಾಷಣ ಮಾಡುವ ಕೇಂದ್ರ ಸಚಿವರು ಈ ಕುರಿತು ಪ್ರಧಾನಿ ಬಳಿ ಧ್ವನಿ ಎತ್ತಬೇಕು' ಎಂದು ಸಲಹೆ ನೀಡಿದರು.

'ಕರ್ನಾಟಕದ ಹೂಡಿಕೆದಾರರಿಗೆ ಆಂಧ್ರಕ್ಕೆ ಆಹ್ವಾನ ನೀಡಿರುವ ಅಲ್ಲಿನ ಸಚಿವ ನಾ.ರಾ.ಲೋಕೇಶ್ ಮೊದಲು ಅಮರಾವತಿ ನಿರ್ಮಾಣ ಕಾರ್ಯದತ್ತ ಚಿತ್ತಹರಿಸಲಿ. ಪ್ರಧಾನಿ ನರೇಂದ್ರ ಮೋದಿ ಅವರು ₹10 ಸಾವಿರ ಕೋಟಿ ಕೊಟ್ಟರೂ ಕೆಲಸ ಏಕೆ ಆಗಿಲ್ಲ' ಎಂದರು.

ಬೃಹತ್ ಮಾರಾಟ
Radisson BLU
ಹೋಟೆಲ್‌ನಲ್ಲಿ
ಶೇ.90% ವರೆಗೆ ರಿಯಾಯಿತಿ

ಕೇವಲ 12 ಗಂಟೆಗಳು 05 ಅಕ್ಟೋಬರ್ ಭಾನುವಾರ

ಬ್ರ್ಯಾಂಡೆಡ್ ಉಡುಪುಗಳು, ಪಾದರಕ್ಷೆಗಳು & ಗೃಹಾಲಂಕಾರ

ಸಾಕಷ್ಟು ಸ್ಟಾಕ್‌ನಿಂದಾಗಿ ಕಂಪನಿಯ ಗೋದಾಮು ತುಂಬಿ ತುಳುಕುತ್ತಿರುವುದರಿಂದ ಇಷ್ಟೊಂದು ಭಾರೀ ರಿಯಾಯಿತಿಯನ್ನು ನಿಮಗೆ ನೀಡುತ್ತಿದ್ದೇವೆ

ಹೋಟೆಲ್ ರ್‍ಯಾಡಿಸನ್ ಬ್ಲೂನಲ್ಲಿ ನಮ್ಮ ಎಲ್ಲಾ ಬ್ರ್ಯಾಂಡೆಡ್ ಉಡುಪುಗಳು, ಪಾದರಕ್ಷೆಗಳು ಮತ್ತು ಗೃಹಾಲಂಕಾರ ವಸ್ತುಗಳು ಸೇರಿದಂತೆ ಎಲ್ಲಾ ಸ್ಟಾಕ್ ಮೇಲೆ ಶೇ. 90 ವರೆಗೆ ರಿಯಾಯಿತಿ ಘೋಷಿಸುತ್ತಿದ್ದೇವೆ.

ಬೆಂಗಳೂರಿನ ಹೊರವರ್ತುಲ ರಸ್ತೆಯಲ್ಲಿರುವ ಹೋಟೆಲ್ ರ್‍ಯಾಡಿಸನ್ ಬ್ಲೂನಲ್ಲಿ
ಸುಮಾರು ರೂ. 2 ರಿಂದ 3 ಕೋಟಿ ಮೌಲ್ಯದ ಸ್ಟಾಕ್ ಅನ್ನು
ಕ್ಯಾಷ್ & ಕ್ಯಾರಿ ಮೂಲಕ ರೂ. 50 ಲಕ್ಷಕ್ಕಿಂತ ಕಡಿಮೆ ಮೊತ್ತಕ್ಕೆ ಮಾರಾಟ ಮಾಡಲಾಗುವುದು

ರೂ.8000/-, 10000/-15000/- ಮೌಲ್ಯದ ರಾಷ್ಟ್ರೀಯ, ಅಂತರಾಷ್ಟ್ರೀಯ ಬ್ರ್ಯಾಂಡ್‌ಗಳು ಕೇವಲ ರೂ.800/-, 1200/-, 1500/-.ಕ್ಕೆ ದೊರೆಯುತ್ತದೆ

ಪುರುಷರ ಉಡುಪು
ಈ ಮೆಗಾ ಮಾರಾಟದಲ್ಲಿ ₹2000 ರಿಂದ ₹20,000ವರೆಗಿನ ಮೌಲ್ಯದ ಜೀನ್ಸ್, ಶರ್ಟ್, ಟಿ–ಶರ್ಟ್, ಪ್ಯಾಂಟ್, ಲೋವರ್ ಶಾರ್ಟ್ಸ್, ಕುರ್ತಾ, ಪೈಜಾಮ, ಶೇರ್ವಾನಿ, ಕೋಟಿ, ಬ್ಲೇಜರ್‌ಗಳು ಕೆಳಕಂಡ ಮೊತ್ತಕ್ಕೆ ಲಭ್ಯ.
₹250 ರಿಂದ ₹750 & ₹1200 ರಿಂದ ₹3000

ಬಾಲಕಿಯರ & ಮಹಿಳೆಯರ ಉಡುಪು
ಈ ಮೆಗಾ ಮಾರಾಟದಲ್ಲಿ ₹1000 ರಿಂದ ₹7000ವರೆಗಿನ ಮೌಲ್ಯದ ಟಾಪ್, ಕುರ್ತಿ, ಪ್ಲಾಜೊ, ಜೀನ್ಸ್, ಶರ್ಟ್, ಟಿ ಶರ್ಟ್, ಪ್ಯಾಂಟ್, ಲೋವರ್, ಶಾರ್ಟ್ಸ್ & ಲೆಗ್ಗಿಂಗ್ಸ್, ಒನ್ ಪೀಸ್, ಪಾರ್ಟಿ ವೇರ್ ಸೂಟ್ ಕೆಳಕಂಡ ಮೊತ್ತಕ್ಕೆ ಲಭ್ಯ.
₹100 ರಿಂದ ₹299 & ₹400 ರಿಂದ ₹850

ಮಕ್ಕಳ ಉಡುಪು
ಈ ಮೆಗಾ ಮಾರಾಟದಲ್ಲಿ ₹1000 ರಿಂದ ₹5000ವರೆಗಿನ ಮೌಲ್ಯದ ಜೀನ್ಸ್, ಶರ್ಟ್, ಟಿ ಶರ್ಟ್, ಪ್ಯಾಂಟ್, ಲೋವರ್, ಫ್ರಾಕ್, ಶಾರ್ಟ್ಸ್ ಮತ್ತು ಇನ್ನೂ ಅನೇಕ ಉಡುಪುಗಳು ಕೆಳಕಂಡ ಮೊತ್ತಕ್ಕೆ ಲಭ್ಯ.
₹299 ರಿಂದ ₹499

ಬ್ರ್ಯಾಂಡೆಡ್ ಪಾದರಕ್ಷೆಗಳು
ಪುರುಷರು, ಮಹಿಳೆಯರು, ಮಕ್ಕಳಿಗಾಗಿ ಈ ಮೆಗಾ ಮಾರಾಟದಲ್ಲಿ ರೂ.1000 ರಿಂದ ರೂ.5000 ವರೆಗಿನ ಮೌಲ್ಯದ ಸ್ಪೋರ್ಟ್ಸ್ ಶೂ, ಲೆದರ್ ಶೂ ಟ್ರೆಕ್ಕಿಂಗ್ ಶೂ ಸ್ಯಾಂಡಲ್ಸ್, ಸ್ಲೀಪರ್, ಚಪ್ಪಲಿ ವಸ್ತುಗಳು ರೂ.350 ರಿಂದ ರೂ.1999ರ ವರೆಗೆ ಲಭ್ಯ.

ಗೃಹಾಲಂಕಾರ ಮತ್ತು ವಿಶೇಷ ಕೌಂಟರ್
ಈ ಮೆಗಾ ಮಾರಾಟದಲ್ಲಿ ರೂ.1000 ರಿಂದ ರೂ.7500 ವರೆಗಿನ ಮೌಲ್ಯದ ಲೇಡೀಸ್ ಪರ್ಸ್, ಲೇಡೀಸ್ ಡಿಸೈನರ್ ಬ್ಯಾಗ್‌ಗಳು ಟವೆಲ್‌ಗಳು, ಕರ್ಟೈನ್‌ಗಳು, ಕಂಫರ್ಟರ್, ಆಮದು ಮಾಡಿದ ಬೆಡ್ ಶೀಟ್, ವ್ಯಾಲೆಟ್, ಬೆಲ್ಟ್, ಸ್ಕೂಲ್ ಬ್ಯಾಗ್, ಆಫೀಸ್ ಬ್ಯಾಗ್, ಡೋರ್‌ಮ್ಯಾಟ್, ಗಾಗಲ್ಸ್, ಪರ್ಫ್ಯೂಮ್ ಮತ್ತು ಇನ್ನೂ ಹಲವು ವಸ್ತುಗಳ ಬೆಲೆ ರೂ.250 ರಿಂದ ಆರಂಭ

ಅತ್ಯಂತ ರಿಯಾಯಿತಿ ದರದಲ್ಲಿ ಫ್ಯಾನ್ಸಿ ಸೀರೆಗಳ ಬೃಹತ್ ಸಂಗ್ರಹ ಕೂಡ ಲಭ್ಯ.

ಸ್ಥಳ: ಹೋಟೆಲ್ Radisson BLU
90/4, ಹೊರವರ್ತುಲ ರಸ್ತೆ, ಮಾರತ್ತಹಳ್ಳಿ ಗ್ರಾಮ, ಬೆಂಗಳೂರು

ಪ್ರವೇಶ ಶುಲ್ಕವಿಲ್ಲ, ಪಾರ್ಕಿಂಗ್ ಶುಲ್ಕವಿಲ್ಲ | ಈ ದಿನ ಬೆಳಿಗ್ಗೆ 10 ರಿಂದ ರಾತ್ರಿ 10ರ ವರೆಗೆ ಮೆಗಾ ಮಾರಾಟ

*Terms & Condition Apply

ಟಿಪ್ಪಣಿ: 1 ಕಂಪನಿಗಳ ಒತ್ತಡದಿಂದಾಗಿ ನಾವು ಎಲ್ಲಾ ಉತ್ಪನ್ನಗಳ ಬ್ರ್ಯಾಂಡ್ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲು ಸಾಧ್ಯವಿಲ್ಲ. 2. ಯಾವುದೇ ಕಾರಣಕ್ಕೂ ಈ ಮಾರಾಟದಿಂದ ತಪ್ಪಿಸಿಕೊಳ್ಳದಂತೆ ಬೆಂಗಳೂರಿನ ಜನರಲ್ಲಿ ವಿನಂತಿಸಲಾಗಿದೆ. 3. ಈ ಮೆಗಾ ಮಾರಾಟದ ಬಳಿಕ ಅಗ್ಗದ ಬೆಲೆಗೆ ಖರೀದಿಸಲು ಇಂತಹ ಬಿಗ್ ಬ್ರ್ಯಾಂಡ್‌ಗಳು ಲಭ್ಯವಿರುವುದಿಲ್ಲ ಎಂದು ತಿಳಿಸಲು ಬಯಸುತ್ತೇವೆ. 4. ಸ್ಟಾಕ್ ಖಾಲಿಯಾಗುವ ಕೌಂಟರ್ ಅನ್ನು ತಕ್ಷಣವೇ ಮುಚ್ಚಲಾಗುವುದು. 5 ಸಭಾಂಗಣದಲ್ಲಿ ನಿಶ್ಯಬ್ದತೆ ಕಾಪಾಡಿ.

ಅಂಗಾಂಗ ಕಸಿ: ತಜ್ಞರ ಸಮಿತಿ ಪುನರ್ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೀವ ಸಾರ್ಥಕತೆ ಯೋಜನೆಯಡಿ ಅಂಗಾಂಗ ಮತ್ತು ಅಂಗಾಂಶ ಕಸಿಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯು ಅಂಗಾಂಗ ನಿರ್ಧಾರ ಸಮಿತಿಯನ್ನು ಪುನರ್ ರಚಿಸಿ ಆದೇಶ ಹೊರಡಿಸಿದೆ.

ಏಳು ಸಮಿತಿಗಳನ್ನು ಮುಂದಿನ ಮೂರು ವರ್ಷಗಳ ಅವಧಿಗೆ ರಚಿಸಲಾಗಿದ್ದು, ಈ ಸಮಿತಿಗಳು ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳ ವೈದ್ಯಕೀಯ ತಜ್ಞರನ್ನು ಒಳಗೊಂಡಿದೆ. ಮೂತ್ರಪಿಂಡ ಸಲಹಾ ಸಮಿತಿಯು ಡಾ.ಶ್ರೀಧರ್ ಸಿ.ಜಿ., ಡಾ.ಉಮೇಶ್ ಎಲ್., ಡಾ.ಕಿಶೋರ್ ಬಾಬು ಎಸ್., ಡಾ.ಅನಿಲ್ ಕುಮಾರ್ ಬಿ.ಟಿ., ಡಾ.ಸಂತೋಷ್ ಪೈ, ಡಾ.ಮಂಜುನಾಥ್ ಎಸ್.ಶೆಟ್ಟಿ, ಯಕೃತ್ತಿನ ಸಲಹಾ ಸಮಿತಿಯು ಡಾ. ಶುಶ್ರುತ ಸಿ.ಎಸ್., ಡಾ. ಜಯಂತ ರೆಡ್ಡಿ, ಡಾ.ರವಿಕಿರಣ ಎಸ್.ಕೆ., ಡಾ.ರೋಮೆಲ್ ಎಸ್. ಅವರನ್ನು ಒಳಗೊಂಡಿದೆ.

ಶ್ವಾಸಕೋಶದ ಸಲಹಾ ಸಮಿತಿಯು ಡಾ.ಬಾಷಾ ಜೆ. ಖಾನ್, ಡಾ.ಪ್ರಕಾಶ್ ಎಂ. ಲುಧಾನಿ, ಡಾ.ಸೈಯದ್ ಜುಲ್ಫಾಮೈನ್ ತೌಶೀದ್, ಹೃದಯ ಸಲಹಾ ಸಮಿತಿಯು ಡಾ. ಅದಿತಿ ಸಿಂಘ್ವಿ, ಡಾ.ಪ್ರಸನ್ನ ಸಿಂಹ ಮೋಹನ್ ರಾವ್, ಡಾ.ಶಶಿರಾಜ್, ಡಾ. ಅಶೋಕ್ ಕುಮಾರ್, ಮಿದುಳು ನಿಷ್ಕ್ರಿಯ ಸಮಿತಿಯು ಡಾ.ಚಿನ್ನದೊರೈ, ಡಾ.ಚಂದ್ರಶೇಖರ ಟಿ.ಆರ್., ಡಾ.ನಾಗೇಶ್ ಆರ್., ಡಾ. ಕಾರ್ತಿಕ್ ಲಕ್ಷ್ಮಿಕಾಂತ್, ಡಾ. ರಾಮಕೃಷ್ಣ ಎಂ.ಎಸ್., ಡಾ.ಗಗನ್ ಬ್ರಾರ್, ರೋಗನಿರೋಧಕ ಮತ್ತು ರೋಗ ವಿಜ್ಞಾನ ಸಮಿತಿಯು ಡಾ.ಅದಿತಿ ಸಿಂಘ್ವಿ, ಡಾ.ಅಂಕಿತ್ ಮಾಥುರ್, ಡಾ. ಮೊಹಮ್ಮದ್ ಫಹಾದ್ ಖಾನ್ ಹಾಗೂ ಸಾಂಕ್ರಾಮಿಕ ರೋಗ ಸಮಿತಿಯು ಡಾ. ನೇಹಾ ಮಿಶ್ರಾ, ಡಾ. ಸ್ವಾತಿ ರಾಜಗೋಪಾಲ್ ಮತ್ತು ಡಾ.ಸವಿತಾ ಸೆಬಾಸ್ಟಿಯನ್ ಅವರನ್ನು ಒಳಗೊಂಡಿದೆ.

ಈ ಸಮಿತಿಯ ಸದಸ್ಯರು ಅಂಗಾಂಗ ಕಸಿಗೆ ಸಂಬಂಧಿಸಿದಂತೆ ಸಾಮಾನ್ಯ ಮತ್ತು ತುರ್ತು ವಿಭಾಗಗಳಲ್ಲಿ ಫಲಾನುಭವಿಗಳನ್ನು ನೋಂದಾಯಿಸಬೇಕು. ದಾನಿಯ ಅಂಗಾಂಗಗಳ ಸೂಕ್ತತೆ ಮತ್ತು ಯೋಗ್ಯತೆಯ ಬಗ್ಗೆ ಸಲಹೆ ಒದಗಿಸಬೇಕು. ಅಂಗಾಂಗ ಹಂಚಿಕೆಗೆ ಸಂಬಂಧಿಸಿದ ಸಮಸ್ಯೆಗಳನ್ನೂ ನಿವಾರಣೆ ಮಾಡಬೇಕು. ಮಿದುಳು ನಿಷ್ಕ್ರಿಯ ಘೋಷಣೆ ಪ್ರಕ್ರಿಯೆಯಲ್ಲಿ ಸಲಹೆ ಮತ್ತು ಸಹಕಾರ ಒದಗಿಸಬೇಕು. ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ ಸದಸ್ಯ ಕಾರ್ಯದರ್ಶಿ ಅವರಿಗೆ ಸೂಕ್ತ ಶಿಫಾರಸುಗಳನ್ನು ನೀಡಬೇಕು ಎಂದು ಇಲಾಖೆ ತಿಳಿಸಿದೆ.

ನಿಧನ ವಾರ್ತೆ

ನಿವೃತ್ತ ಪ್ರಾಂಶುಪಾಲ ಪಿ.ಜಿ. ದ್ವಾರಕನಾಥ್

ಬೆಂಗಳೂರು: ರಾಜಾಜಿನಗರದ ಶಿಕ್ಷಣ ಸಂಸ್ಥೆ ವಿದ್ಯಾವರ್ಧಕ ಸಂಘದ (ಸರ್ದಾರ್ ಪಟೇಲ್ ಶಾಲೆ) ನಿವೃತ್ತ ಪ್ರಾಂಶುಪಾಲ ಪಿ.ಜಿ. ದ್ವಾರಕನಾಥ್ (85) ಶುಕ್ರವಾರ ನಿಧನರಾದರು.



ಇಟ್ಟಮಡು ನಿವಾಸಿಯಾಗಿರುವ ಅವರು ಶಿಕ್ಷಕರಾಗಿ, ಪ್ರಾಂಶುಪಾಲರಾಗಿ, ಕಾರ್ಯದರ್ಶಿಯಾಗಿ, ಗೌರವ ಅಧ್ಯಕ್ಷರಾಗಿ ವಿದ್ಯಾವರ್ಧಕ ಸಂಘದಲ್ಲಿ ಆರು ದಶಕ ಕೆಲಸ ಮಾಡಿದ್ದರು. ಉತ್ತಮ ಶಿಕ್ಷಕ ರಾಷ್ಟ್ರ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ ಸಹಿತ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಮೃತರ ಅಂತ್ಯಕ್ರಿಯೆ ಕೆಂಗೇರಿ ಉಪನಗರದ ರುದ್ರಭೂಮಿಯಲ್ಲಿ ಶನಿವಾರ ನಡೆಯಿತು ಎಂದು ಕುಟುಂಬದವರು ತಿಳಿಸಿದರು.



BANGALORE: Garuda Wheels - Hoskote: 9035040171 | Whitefield Yamaha - Whitefield: 9972864913 | Mahadevapura: 9148086668 | Motoworld - Bommanahalli: 8722879944 | Chandapura: 8722879900 | Bellandur: 8722879911 | Bangalore Wheels - Rajajinagar: 9740653587 | Vijayanagar: 9611920002 | Marathahalli: 9916610017 | Kengeri: 9916610022 | Perfect Riders - Lalbagh Road: 8497816000 | Jayanagar: 8497816000 | Pacer Yamaha - Hebbal: 6360237411 | Kalyan Nagar: 9902607629 | R.R. Nagar: 7624818307 | Vidyaranyapura: 9448443578 | Vinayak Motors - Domlur: 9591072222 | Koramangala: 9740014067 | Laxmi International - Bannerghatta Road: 8904154299 | Chandan Motors - Banashankari: 9606861911 Geetha Motors - Nelamangala: 7619628882 | Peenya: 8951954565 | Panache Enterprises - Indiranagar: 9844011961 | Marathahalli - 9844011961 Eye Automobile - K.R. Puram: 8088448844 | Srijaya Motors - Yelahanka: 080-40900699, 6366975164 | Miles - Kanakapura Road: 9035754656 Niruppallava Motors - Ramanagara: 8123340803 | Sree Geetha Motors - Sira Road, Tumkur: 6364885726 | SLR Motors - Kunigal Road, Tumkur: 907171901/03 | Sri RV Advent Ride - Kolar: 9071374827. Yamaha Bike Corner: Touch Yamaha - Varthur: 9986547353 | Nandi Bikes - Devanahalli: 9739030606, 9482090890 | Jenukallu Yamaha - Tiptur: 7892862641 | Sri RV Advent Ride - Mulbagal: 9071374830 | Moto World - Attibele: 8884452700 | Moto World - Dommasandra: 8884452899.



Intelligent Honda SENSING (ADAS) | LaneWatch Camera™ | 7-SPEED CVT (with Paddle Shifters) | Fun to Drive i-VTEC Engine | Standard 6 Airbags | FREE 7 YEAR$ UNLIMITED KM WARRANTY

Visit Nearest Honda Dealership
Call +91 73034 61122 | www.hondacarindia.com

UP TO 10 YEAR AND 1 20 000 KILOMETERS ANYTIME WARRANTY

Standard Warranty	3 Years/ Unlimited Kilometers
Industry-first Extended Warranty	7 Years/ Unlimited Kilometers
Industry-first Anytime Warranty	10 Years/ 1 20 000 Kilometers

GOVT. APPROVED CNG RETROFITMENT KIT AVAILABLE# ON SELECT MODELS | E20 Honda Environment Technology | AVAIL SCRAPPAGE BENEFITS | SEAT BELTS FOR ALL SAFETY FOR ALL | SCAN TO TALK TO OUR EXPERT

PRICE: ~Ex-showroom, New Delhi of base variant in Lakh & up to 2 decimal points only. Range of Amaze includes 2nd generation and above. *TOTAL BENEFITS: T&C Apply. Amount includes applicable cash, exchange, corporate, extended warranty or any other applicable offer/ benefits. Available for limited period on select model and in select cities. Stock without benefits is also available. $FREE 7 YEAR WARRANTY: Standard 3 Year Warranty + Extended coverage for 4th to 7th Year from the date of purchase. Applicable on select models only. Ω10 YEAR ANYTIME WARRANTY: Extendable up to the maximum age of 10 years or 120000 kilometers by renewing every year and is applicable from the date of purchase of car. Please refer owner's manual and Warranty Document for more details. #CNG: Govt. approved CNG retrofitment kit is provided by third party. CNG Kit warranty and any other related terms and conditions are applicable as specified by third party. Applicable on select models only. Black glass appearance on vehicle is due to lighting effect. Alpha-Bold Plus Grille is not a standard fitment and an optional genuine accessory. Actual vehicle color, features, and specifications may vary from those shown and might not be part of standard fitment. Please check the availability of grades, colors, features, and offers at authorized dealerships. Honda Cars India Limited reserves the right to change or withdraw any colour, grade, feature, offers/ scheme or benefits without any prior notice. Scrappage benefits applicable on select models subject to receipt of valid certificate of deposit issued by RVSF. Honda SENSING (ADAS) cannot substitute human acumen and vigilance while driving. Honda Cars India Limited urges drivers to follow traffic rules which are meant to keep them safe on roads. For more information, please visit our authorized dealership or www.hondacarindia.com. For corporate sales enquiry please write to corporatesales@hondacarindia.com.

AUTHORISED DEALERSHIPS BENGALURU: Brigade Honda – Yelahanka- 86575 88450, Magnum Honda - Kanakapura Road - 98455 24394, Mekhri Circle - 99000 29164, Tumkur – 99160 04127, Whitefield Honda - Whitefield Road - 86575 89175, Dakshin Honda - Hosur Road – 98804 21212, Lavelle Road – 98804 21212, BELAGAVI: Alpha Honda – 86575 88418, HASSAN: Inspire Honda – 84484 48770, HUBLI: Lakeview Honda – 86575 88923, MANGALORE: Artha Honda – 96069 65270, MYSORE: Inspire Honda – 84484 48660, UDUPI: Shama Honda – 98802 72211.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

WEEKEND CORNER ಕ್ಲಾಸಿಫೈಡ್ಸ್

JOB OPPORTUNITIES

Teachers/ Professors

JANATHA EDUCATION SOCIETY (R)
Dr.Rajkumar Road, 2nd Stage, Rajajinagar, Bengaluru-55
Phone: 080 - 23371952 /6366733434

Applications are Invited
VIVEKANANDA INSTITUTE OF MANAGEMENT

PRINCIPAL: MBA with PhD with 5-10 years' as Principal experience with good motivational skills, visionary leader with a creative flair. Knowledge of NAAA & NBA accreditation process.

PLACEMENT OFFICER: MBA in HR With 2-3 years Experience in the relevant field and excellent communication skill

Eligible candidates are informed to submit their BIODATA along with supporting documents with 2 passport size photos through registered post or in person to the Hon. Secretary, JES within 07 days from the date of this notification or email to jobs@jes-edu.in.

Sd\- Sri H.C. Balakrishna, President
Sd\- Sri Appareddy Harish, Hon. Secretary

WANTED: MATHS and Science TEACHER for SGJVM, Rajajinagar, Bangalore-560010. For details Contact: 6363681684

Security & Detectives

REQUIRED EX-MAN/ Experience Manager Marketing Manager Fd-Exe, Tally Clerk, Driver, R.T.Nagar Bangalore Ph:080-23437474 23437797 Mob:8892073262

REAL ESTATE SELLING

Sites

Jigani

KHB Sites in Surya City Near Jigani
STRRA & BMRDA APPROVED PLOTS
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) Call: 74115 54412

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BDA BSK 5th Stage Near PP Layout Uttarahalli Opposite Pattalamma Temple 30x40 E/F: 9448531837/ 9606922132

BANASHANKARI 6TH Stage,BDA 40x60, Site For Sale Near 100 Feet Road Cheque Payment: 9916817739

Bannerghatta Road

SALE: BDA SITE No.90, BTM 1st Stage, North Facing 40x60 Feet, Opp to: Subramanya Arcade 60Feet Road, Adjacent to JALA BHAVAN, Approx.,100 Mtr to Bannerghatta Main Road. Genuine Buyers Call: Muralidhar- 9741929567

4,800_&_2,400_SQFT RESIDENTIAL Plot Facing East and West for Sale in Arekere Shanthinikethan Layout. Call Owner 7483853190

Bidadi

BIDADI EEGALTON GOLFRESORT East Facing 50x55 SITE FOR SALE. Contact 9945079777

Kempegowda Layout

SITE FOR-SALE KEMPEGOWDA LAYOUT 7th Block'L' Sectorattached,DC Convertion(BDA NOC) 30x40, 6300/-slightly negotiable. Contact:6364931135

KEMPEGOWDA LAYOUT, 30x40 1st Block, 'K' Sector, Site No. 391, (Near Ring Road). Mobile: 9164644113

DIRECT OWNER Near Metro Station, Kempegowda Layout, Vishweshwaraiah Layout, 30x40, 40x60, 50x80 Commercial: 9620696913/ 9880781399

Magadi Road

BEL 2ND Stage Bharthnagar 30x40, East Facing, 11500/- Per Sft, Near Gandhi Park. Contact: 9845497047

Bangalore North

40X60 EAST FACING TELECOM-SOCIETY LAYOUT NISARGA RAJANUKUNTE YELAHANKA e-khatha BIAPPA APPROVED CLEAR-TITLES 3200/sqft CONTACT: 9448010599/8277629599

Nagarabhavi

"NAGARABHAVI NEAR Deepa Complex 40x60 East Vastu 40_feet Road, 30x40_West BDA Site. 9448432633"

VIJAYANAGAR, CHANDRA Layout, Nagarbhavi, Vishaveshwarya Layout BDA Clear Titles Sites, houses for Sale. Contact. 9900552285

Vijayanagar

SITE FOR SALE: 60X90 WEST FACING WOC ROAD RPC LAYOUT ONLY GENUINE BUYERS CONTACT: 6363250343

Vishweshwariah Layout

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

HEARTY CONGRATULATIONS !
to Architect
HARSHAVARDHANA H.N.
on receipt of Prestigious
NAADAPRABHU KEMPEGOWDA AWARD
for the year 2025
From the Honourable Government of Karnataka
on 27-06-2025.



YASHJYOTHI INTERIORS
New No.1195(Old No.8), 1st Main Road, MC Layout, Govindrajnagar, Vijaynagar, Bangalore-560040
PH: (+91) 9844081637 | email: yashjyothiinteriors@gmail.com

DS MAX®
PRM/KA/RERA/1251/310/PR/151223/006489
DS-MAX SISTA GRAND
LUXURIOUS 3 & 4-BHK APARTMENTS
BANASHANKARI
3-BHK HOMES STARTS @ JUST
₹ 1.34 Cr.*
BBMP APPROVED | 3 & 4-BHK | B+S+G+3 FLOORS

8880 003 003
www.dsmaxproperties.com

CREDAI KARNATAKA ಕ್ರೆಡೈ ಕರ್ನಾಟಕ
LOOKING TO INVEST IN BENGALURU?
ಬೆಂಗಳೂರಿನ ಪ್ರತಿಷ್ಠಿತ 44 ಡೆವಲಪರ್‌ಗಳು ತಮ್ಮ ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸುತ್ತಿದ್ದಾರೆ

CREDAI KARNATAKA Presents **REALTY EXPO 2025**

ಅಕ್ಟೋಬರ್
10TH ಶುಕ್ರವಾರ — ಮಧ್ಯಾಹ್ನ 3:30 ರಿಂದ ರಾತ್ರಿ 8:00 ಗಂಟೆವರೆಗೆ
11TH ಶನಿವಾರ — ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆವರೆಗೆ
12TH ಭಾನುವಾರ — ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆವರೆಗೆ

Displaying properties from:
ಬೆಂಗಳೂರು | ಮಂಗಳೂರು | ಮೈಸೂರು

KTPO, Whitefield
ಕುಂದಲಹಳ್ಳಿ / ನಲ್ಲೂರಹಳ್ಳಿ ಮೆಟ್ರೋ ಸ್ಟೇಷನ್ ಹತ್ತಿರ, ಬೆಂಗಳೂರು.
ENTRY FREE | AMPLE CAR PARKING
Scan to Register
Call us: +91 99645 93355 | +91 99645 92255
#YourDreamHome www.credaikarnataka.com #OoralliOnduMane

Become Director Partner
Invest in Property Flipping LLP Company
* Asset backed Legal Investment
* 100% Safe, Secured, Ethical Business with Iron clad Legal Documentation
*Unbelievable ROI - Wealth Maximisation
* Each Project 6-9 Months Maximum
* Min Investment Rs 25.00 Lakhs & Above
Jayashree Projects & Marketing Pvt Ltd
Call: 91139 47586 I 63603 83661
www.jpm-propertyflipping.com

CONSTRUCTION MATERIALS FOR SALE
Large quantity of used construction materials in good conditions. Such as Shuttering Plate, Jacks, Spans, Cuplock scafolding and Machinery such as Mixer Machine, DG Sets of different capacity Winch and Hoist, passenger hoist for sale.
Contact: 6360605636 / 8431164733

BDA SITE SALE VISHWESHWARAIAH LAYOUT 1ST BLOCK 30X40 EAST FACE 13000/- NEGOTIABLE DIRECT OWNER MEETING CONTACT: 8892901567

BDA 30X40 Site Sale Vishveshwaraiah Layout BDA Complex Near East Face 11500/- Negotiable Balaji: 8310003509

Jayanagar

SALE 40X60 West Excellent Residential Property Jayanagar 4th T Block, Buyers Please Call: Ramesh 9844104958

Kanakapura Road

DIRECT OWNER_ Near Vajarahalli Metro Station 46x80,North Facing Kanakapura Main Road Genuine Buyers Contact:9845451425

Out-Station

PENUKONDA NEAR KIA Car Factory Madakasira Highway 50X100 (4-SITES) Resi Converted, Gated Community, 400/-PerSqft: 8310681025

House

Jayanagar

SALE 80X100 Jayanagar 8th Block With 7 BHK Architect Designed Bungalow Excellent Location ct: 9844134068 8073859758

Kengeri

RESIDENCIAL BUILDING_SALE 30x50`BBMP E-katha 1_Lakh Rental`Income 2BHK:5units, 3BHK:1Unit Near_Hoysala circle Kengeri Upanagar. Brokers`Excuse. Call_9738016535

Kumaraswamy Layout

FOR SALE Newly Constructed house on Corner site 40x60 ft North East facing with Basement 6 car park G floor 1500 sft commercial FF+SF+TF residential 6 bedrooms, 2 living halls, lift, Dining, Kitchen. Library, pantry, balconies, etc, Fourth Floor Servant room and open terrace located at ISRO Layout, Bikashipura Main Road, Near DPS School South. Bangalore. Contact 9845035135 Email : njecco@gmail.com

Ulsoor

HALASURU LAKSHMIPURAM East-facing,Four Houses, 2-BHK1,1-BHK3 30x60(57)ft. 17000/-per-sqft. Contact: ABHILASHA CONSULTANT. 9480565758

Vishweswariah Layout

"4BHK DUPLEX House with`Lift Railway Layout and`3BHK House Vishveshwaraiah 1st Block for sale. 9845014134"

Banashankari

30X55,EAST 3BHK 5Years Old Duplex Banashankari 3rd_Stage,3rd Phase 1st Block Full Cheque Payment Brokers Excuse:9448508410

Agricultural Land

Intl Airport Road

FARM LAND For Sale Sidlaghatta .5km NH One Acres 20 feet Road 2crores 9886026803

Commerical

Jayanagar

SALE COMMERCIAL 50x75 Jayanagar 4th T Block on_80feet Road With_old_House Excellent Location Ct:_9844134068 8073859758

J P Nagar

COMMERCIAL BDA Site Sale JP.Nagar 8th Phase 2nd Block,40x60, North`Facing, 80ft Road`Near Lifestyle Apts.16500/- 9845600007

Koramangala

SALE: KORAMANGALA 5th Block COMMERCIAL 13,450 Sft. Rental Income 7Lacs. Sale: 15 Crores, Call: 98450-23695/ 98451-63280/ 98450-23696

Nandini Layout

INDUSTRIAL LAND with threefloors building each 1200sqft forsale in truck terminal Kanteerava Studiogate Road Contact 9483400249

Farm House/ Land/ Resorts

Out-Station

KOTAGIRI, NILGIRIS, Tamil Nadu: 60 Acres Patta Land with Teak Wood for Sale Contact: 9848392893, 9052200009

Flat

Jigani

LIMITED 1 BHK flats sale. Operational senior living project. Jigani, Bangalore. All amenities. 45L (negotiable). 9742258578/ 7892256362

Sarjapur

THE PRESTIGE CITY, Sarjapur. Premium 1, 2, 3 & 4 BHK Apartments now available for Resale. Well planned community, Top class amenities. Call Resale Team: 9240275500.

Residential/ Commercial

Devanahalli

NANDIHILLS ROAD 19602Sqft Converted eKhata 15Rooms Suitable-Airbnb ResortHotel Cafe WellnessRetreat ResidentialVillas 10Cr Ph 9900106706

Nagasandra

FOR SALE- Area- 13068.sft Residential Land for sale in Nagasandra Main Road towards Nelakadaranahalli. Call: 9071153337

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Basavanagudi

REQUIRED 30X40, 40x60, 30X50 Near HANUMANTHANAGAR BANASHANKARI 1st, 2nd Stage, NR.COLONY, BASAVANAGUDI. ANNAPOORNA ESTATE. 9343735054.

Multiple Locations

WANTED BDA_SITES Anjanapura- Arkavathi Banashankari 6th.Stage, Vishweswaraiah, Kempegowda. SAPTHAGIRI (Opp.BDA_Head Office, Kumara Park). 9036360366.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

RENTAL PROPERTIES

Accommodation Available

Commercial

BANASHANKARI 6TH_STAGE 80`Feet Road,11th`Block 50x80 Site Built-to-Suit. And 2nd`Block, 80`Feet Road,50x80 RENT for Vacant`Site. Call_9945724472

Industrial And Factory

AVAILABLE OF Industrial Shed of 75000`sqft at Soukya Road, Whitefield. Available Built-to-Suit Warehouse 160000 sqft`Vijipura Hoskote Contact: 9341234288/ 9663224353/ 9845417487.

Villas/Bunglows

FOR RENT Vasanth Nagar 5 BHK Bunglow. Near Mahaveer Jain Hospital. Vegetarians Only: 9844072344/ 9844830500

Accommodation Wanted

House

REQUIRE 3 BHK for Rent, 30k to 35k along Metro from Trinity to SV Metro. Only Owners, no brokers please. Contact No. 9449206787.

EDUCATIONAL

Admission

DIRECT PRIVATE 10th, 12th, BBA, MBA, BA-LLB, B.Com, BCA, AMIIE (B.Tech), TMIIE (Diploma) 9341273990

OTHERS

For Sale

HOUSEHOLD ARTICLES For Immediate Sale Going Cheap KSRTC Layout JP Nagar 2nd Phase Contact 9341273990

BUSINESS

Business to Business

Finance

URGENT LOAN AVAIL @ 3.5% PER ANNUM PERSONAL, BUSINESS, EDUCATION TAKE OVER ALL TYPES LOAN SHIVGANGA FINANCE. CALL/ WHATSAPP:: 8826494700

LOANS AVAILABLE Mortgage purchase construction Residential commercial project Corporate N.P, CIBIL Properties in Karnataka. Contact:- 7019460997.

PERSONAL

Change of Name

I, TANZIM Ahmed Zameer Ahmed, son of Zameer Ahmed, holder of Indian Passport No. S2407376, issued at Bangalore on 22/05/2018, permanent resident of 131, KHB Colony, Kuvempunagar, Mandya - 571401, Karnataka, India, and presently residing at 308, Golden Sands 9, 10B Street, Al Mankhool, Dubai, UAE, do hereby change my name from Tanzim Ahmed Zameer Ahmed to Tanzim Ahmed, with immediate effect.

I, BANUBEE late w/o B Noor Mohammed R/O 836 5th Block 19th Cross HMT Layout Vidyaranyapura Bengaluru 560097 have changed my name to B Banubee for all purpose for all future purposes.

DH Classifieds DECCAN HERALD
More value, more impact
REAL ESTATE
www.dhclassifieds.com
ಪ್ರಜಾವಾಣಿ
BOOK YOUR REAL ESTATE ADS IN DH ALL KARNATAKA + PRAJAVANI BENGALURU CITYON SATURDAY + SUNDAY
BOOK NOW
@ 2481/-* FOR 15 WORDS
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164

ಚಿಟಿಕೆ ಸುದ್ದಿ

ಅಪಘಾತ ಮೂವರು ಸಾವು

ತುಮಕೂರಿನ ಬೆಳಧರ ಬಳಿ ಅಪಘಾತದಲ್ಲಿ ನಜ್ಜುಗುಜ್ಜಾದ ಬಸ್

ತುಮಕೂರು: ತಾಲ್ಲೂಕಿನ ಬೆಳಧರ ಬಳಿ ಶನಿವಾರ ಸಂಜೆ ಖಾಸಗಿ ಬಸ್ ಮತ್ತು ಕಾರಿನ ಮಧ್ಯೆ ನಡೆದ ಅಪಘಾತದಲ್ಲಿ ಕಾರಿನಲ್ಲಿದ್ದ ಮೂವರು ಮೃತಪಟ್ಟಿದ್ದು, ಮತ್ತಿಬ್ಬರ ಸ್ಥಿತಿ ಗಂಭೀರವಾಗಿದೆ.

ಕೊರಟಗೆರೆ ತಾಲ್ಲೂಕಿನ ಕತ್ತಿನಾಗೇನಹಳ್ಳಿಯ ಶಿವಕುಮಾರ್ (28), ಗೋವಿಂದಪ್ಪ (60), ಬೈಚಾಪುರದ ಶಿವಶಂಕರ್ (28) ಮೃತರು. ಕತ್ತಿನಾಗೇನಹಳ್ಳಿಯ ಗೋಪಾಲ್ (28), ರೆಡ್ಡಿಹಳ್ಳಿಯ ಶಂಕರ್ (28) ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಎಲ್ಲರೂ ಧರ್ಮಸ್ಥಳಕ್ಕೆ ಹೊರಟಿದ್ದರು. ಮಾರ್ಗ ಮಧ್ಯೆ ಅಪಘಾತ ಸಂಭವಿಸಿದೆ.

ಚಿತ್ರದುರ್ಗ: ಅರಣ್ಯದಲ್ಲಿ ಅದಿರಿಗೆ ಶೋಧ

ಅದಿರಿನ ಅನ್ವೇಷಣೆಗೆ ಕೆಐಒಸಿಎಲ್‌ಗೆ ಅರಣ್ಯ ಇಲಾಖೆ ಅನುಮತಿ

● ಮಂಜುನಾಥ ಹೆಬ್ಬಾರ್

ನವದೆಹಲಿ: ಚಿತ್ರದುರ್ಗದ ಹೊಳಲ್ಕೆರೆ ತಾಲ್ಲೂಕಿನ ಮೀಸಲು ಅರಣ್ಯದಲ್ಲಿ ಮ್ಯಾಂಗನೀಸ್ ಹಾಗೂ ಕಬ್ಬಿಣದ ಅದಿರಿನ ಅನ್ವೇಷಣೆ ನಡೆಸಲು ಕುದುರೆಮುಖ ಕಬ್ಬಿಣದ ಅದಿರು ಕಂಪನಿಗೆ (ಕೆಐಒಸಿಎಲ್) ಕರ್ನಾಟಕ ಅರಣ್ಯ ಇಲಾಖೆ ಅನುಮತಿ ನೀಡಿದೆ.

ತಾಲ್ಲೂಕಿನ ನೀರ್ತಡಿ ಮೀಸಲು ಅರಣ್ಯದಲ್ಲಿ 64.7 ಹೆಕ್ಟೇರ್ ಪ್ರದೇಶದಲ್ಲಿ ಕಂಪನಿಯು ಒಂದು ವರ್ಷ ಅದಿರಿನ ಹುಡುಕಾಟ ನಡೆಸಲಿದೆ. ಈಗಾಗಲೇ ಗಣಿಗಾರಿಕೆ ನಡೆದಿರುವ (ಬ್ರೋಕನ್ ಲ್ಯಾಂಡ್) 37.59 ಹೆಕ್ಟೇರ್‌ನಲ್ಲಿ ಮತ್ತೆ ಗಣಿಗಾರಿಕೆ ನಡೆಸಲು ಸಾಧ್ಯವೇ ಎಂಬುದನ್ನು ಕಂಪನಿ ಪರಿಶೀಲನೆ ನಡೆಸಲಿದೆ. ಜತೆಗೆ, 27.16 ಹೆಕ್ಟೇರ್ ದಟ್ಟ ಅರಣ್ಯದಲ್ಲಿ ಪ್ರಕ್ರಿಯೆ ನಡೆಸಲಿದೆ. ಈ ಪ್ರಸ್ತಾವಕ್ಕೆ ಅರಣ್ಯ ಇಲಾಖೆಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪಿಸಿಸಿಎಫ್) ಒಪ್ಪಿಗೆ ನೀಡಿ ಕೇಂದ್ರ ಅರಣ್ಯ ಸಚಿವಾಲಯಕ್ಕೆ ಸಲ್ಲಿಸಿದ್ದಾರೆ. ಕೇಂದ್ರ ಅರಣ್ಯ ಸಚಿವಾಲಯದಿಂದ ಇನ್ನಷ್ಟೇ ಅನುಮೋದನೆ ಸಿಗಬೇಕಿದೆ.

ಅದಿರು ಅನ್ವೇಷಣೆಗೆ ಇಲ್ಲಿ ಕೆಐಒಸಿಎಲ್ ಏಜೆನ್ಸಿಯಾಗಿ ಕಾರ್ಯ-ನಿರ್ವಹಿಸುತ್ತದೆ. ನಿಗದಿತ ಸ್ಥಳದಲ್ಲಿ ಅದಿರಿನ ನಿಕ್ಷೇಪ ಇದೆಯೇ ಇಲ್ಲವೇ ಎಂಬುದನ್ನು ಏಜೆನ್ಸಿ ಪತ್ತೆ ಮಾಡಿ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ವರದಿ ಸಲ್ಲಿಸುತ್ತದೆ. ಒಂದು ವೇಳೆ ಅದಿರು ದಾಸ್ತಾನು ಇದ್ದರೆ ಗಣಿ ಇಲಾಖೆಯು ಬ್ಲಾಕ್ ರಚಿಸಿ, ಅದನ್ನು ಹರಾಜಿಗೆ ಇಡುತ್ತದೆ.

ಕಾಶಿಮೂರ್ತಿ ಶೆಟ್ಟಿ ಹಾಗೂ ಮಕ್ಕಳು ಹೊಂದಿರುವ ಗಣಿ ಅನುಮತಿ (ಸಂಖ್ಯೆ–1177) ಅಡಿಯಲ್ಲಿ ಅದಿರು ಅನ್ವೇಷಣೆ ಕಾರ್ಯ ನಡೆಸಲು ಕೆಐಒಸಿಎಲ್‌ನ ಉಪ ಮುಖ್ಯ ವ್ಯವಸ್ಥಾಪಕರು ಅರಣ್ಯ ಇಲಾಖೆಗೆ 2024ರ ಜೂನ್‌ನಲ್ಲಿ ಪ್ರಸ್ತಾವ ಸಲ್ಲಿಸಿದ್ದರು. ರಾಜ್ಯ ಸರ್ಕಾರದ ಯೋಜನಾ ಪರಿಶೀಲನಾ ಸಮಿತಿ ಇದಕ್ಕೆ ಒಪ್ಪಿಗೆ ನೀಡಿದ ಬಳಿಕ ಅರಣ್ಯ ಇಲಾಖೆಗೆ ಕಳುಹಿಸಲಾಗಿತ್ತು.

ಚಿತ್ರದುರ್ಗ ಡಿಸಿಎಫ್ ಅವರು ಯೋಜನಾ ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಿದ್ದರು. ‘ಈ ಅರಣ್ಯವು ಇಳಿಜಾರಿನ ಪ್ರದೇಶವಾಗಿದ್ದು, ಕಂಪನಿಯು ಈ ಪ್ರದೇಶದಲ್ಲಿ ಮಣ್ಣು ಹಾಗೂ ತೇವಾಂಶ ಸಂರಕ್ಷಣಾ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕಾಗ ಬಹುದು. ಆದಾಗ್ಯೂ, ಈ ಶೋಧ ಕಾರ್ಯಾಚರಣೆಯು ಅಂತಿಮವಾಗಿ ಗಣಿಗಾರಿಕೆ ಕಾರ್ಯಾಚರಣೆಗೆ ಕಾರಣ-ವಾಗುತ್ತದೆ. ಆದ್ದರಿಂದ ಈ ಶೋಧದ ಭಾಗವಾಗಿ ಎಸ್‌ಎಂಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದ ರಿಂದ ದೀರ್ಘಾವ-ಧಿಯಲ್ಲಿ ಉದ್ದೇಶ ಈಡೇರುವುದಿಲ್ಲ’ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಜತೆಗೆ, ಗಣಿ ಹುಡುಕಾಟ ನಡೆಸಲು ಶಿಫಾರಸು ಮಾಡಿದ್ದರು. ಇದಕ್ಕೆ ಬಳ್ಳಾರಿ ಸಿಸಿಎಫ್ ಸಹಮತ ವ್ಯಕ್ತಪಡಿಸಿದ್ದರು.

ಮುಖ್ಯಾಂಶಗಳು

- ಅದಿರಿನ ಹುಡುಕಾಟದ ಸಂದರ್ಭದಲ್ಲಿ 700–1000 ಮರಗಳ ಹನನ ಮಾಡಲಾಗುತ್ತದೆ
- ಅದಿರಿನ ಅನ್ವೇಷಣೆ ವೇಳೆ 24 ಕಂದಕಗಳನ್ನು ಹಾಗೂ 34 ಕೊಳವೆಬಾವಿಗಳನ್ನು ಕೊರೆಯಲಾಗುತ್ತದೆ
- ಸಾದರಹಳ್ಳಿ ಹಾಗೂ ಕೇಶವಪುರ ಅರಣ್ಯ ವ್ಯಾಪ್ತಿಯಲ್ಲಿ ಸಂಪರ್ಕ ರಸ್ತೆ ನಿರ್ಮಿಸಲಾಗುತ್ತದೆ
- ಈ ಅರಣ್ಯದಲ್ಲಿ ಕರಡಿ, ಚಿರತೆ, ನರಿ, ಕಾಡುಹಂದಿ, ಮುಳ್ಳು ಹಂದಿ ಮತ್ತಿತರ ಕಾಡುಪ್ರಾಣಿಗಳಿವೆ
- ಗಣಿ ಹುಡುಕಾಟಕ್ಕೆ ಪ್ರತಿಯಾಗಿ ಕಂಪನಿಯು 9.4 ಹೆಕ್ಟೇರ್‌ನ ನಿವ್ವಳ ಒಟ್ಟು ಮೌಲ್ಯ ಪಾವತಿಸಲು ಒಪ್ಪಿದೆ

ವಿಧಿಸಿರುವ ಷರತ್ತುಗಳು

- ಅರಣ್ಯ ಭೂಮಿಯ ಕಾನೂನಾತ್ಮಕ ಸ್ಥಿತಿಗತಿ ಬದಲಾಗುವಂತಿಲ್ಲ
- ಪ್ರಸ್ತಾವಿತ ಪ್ರದೇಶದ ಮತ್ತು ಸುತ್ತಮುತ್ತಲಿನ ಸಸ್ಯ, ಪ್ರಾಣಿಗಳಿಗೆ ಯಾವುದೇ ಹಾನಿ ಮಾಡುವಂತಿಲ್ಲ
- ಈ ಅರಣ್ಯ ಭೂಮಿಯನ್ನು ಉಪಗುತ್ತಿಗೆ ನೀಡುವಂತಿಲ್ಲ ಹಾಗೂ ಅಡಮಾನ ಇಡುವಂತಿಲ್ಲ
- ಅರಣ್ಯ ಪ್ರದೇಶದಲ್ಲಿ ವಾಣಿಜ್ಯ ಚಟುವಟಿಕೆ ನಡೆಸುವಂತಿಲ್ಲ
- ಕಾಡಿನಲ್ಲಿ ಕಲ್ಲುಗಳನ್ನು ಪುಡಿ ಮಾಡುವಂತಿಲ್ಲ ಹಾಗೂ ಒಡೆಯುವಂತಿಲ್ಲ

ಇಂಡಿಯನ್ ಅಕಾಡೆಮಿ ಪದವಿ ಕಾಲೇಜು ಸ್ವಾಯತ್ತ ವಿದ್ಯಾಸಂಸ್ಥೆಯ 8ನೇ ವರ್ಷದ ಪದವಿ ಪ್ರದಾನ ಕಾರ್ಯಕ್ರಮ ಶನಿವಾರ ನಡೆಯಿತು

ಇಂಡಿಯನ್ ಅಕಾಡೆಮಿ ಕಾಲೇಜು: ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಅಕಾಡೆಮಿ ಪದವಿ ಕಾಲೇಜು ಸ್ವಾಯತ್ತ ವಿದ್ಯಾ ಸಂಸ್ಥೆಯ 8ನೇ ವರ್ಷದ ಪದವಿ ಪ್ರದಾನ ಕಾರ್ಯಕ್ರಮ ಶನಿವಾರ ನಡೆಯಿತು.

ಇಂಡಿಯನ್ ಅಕಾಡೆಮಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್‌ನ ಅಂಗಸಂಸ್ಥೆಯಾದ ‘ದಿ ಸ್ಕೂಲ್ ಆಫ್ ರಾಯ’ದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ರಾಷ್ಟ್ರೀಯ ಭದ್ರತಾ ಸಲಹಾ ಮಂಡಳಿಯ ಸದಸ್ಯ ಜಿ. ಸತೀಶ್ ರೆಡ್ಡಿ ಮಾತನಾಡಿ, ‘ವಿದ್ಯಾರ್ಥಿಗಳು, ನೀವು ಯಾವ ಕುಟುಂಬದ ವಾತಾವರಣದಿಂದ ಬಂದಿದ್ದೀರಿ ಎನ್ನುವುದು ಮುಖ್ಯವಲ್ಲ. ಭವಿಷ್ಯದಲ್ಲಿ ಯಾವ ಸ್ಥಾನಕ್ಕೇರುತ್ತೀರಿ ಎನ್ನುವುದು ಮುಖ್ಯವಾಗಬೇಕು. ನಿಮ್ಮಲ್ಲಿರುವ ದೊಡ್ಡ ಕನಸುಗಳೇ ಭವಿಷ್ಯವನ್ನು ರೂಪಿಸಬಲ್ಲವು’ ಎಂದು ಹೇಳಿದರು.

‘ಯುವ ಸಮೂಹ ನವೋದ್ಯಮಗಳ ಕಡೆಗೆ ಹೆಚ್ಚು ಗಮನಹರಿಸಬೇಕು. ಆಗ ಸ್ವಾವಲಂಬನೆಗೆ, ದೇಶದ ಪ್ರಗತಿಗೆ ಕೊಡುಗೆ ನೀಡಲು ಸಾಧ್ಯ. ಜಗತ್ತಿನ ಪ್ರಸಿದ್ಧ ಕೌಶಲದಾರರಲ್ಲಿ ಶೇ 40ರಷ್ಟು ಮಂದಿ ಭಾರತೀಯರು’ ಎಂದು ತಿಳಿಸಿದರು.

ಬೆಂಗಳೂರು ಉತ್ತರ ವಿಶ್ವವಿ-ದ್ಯಾಲಯದ ಕುಲಪತಿ ನಿರಂಜನ ವಾನಳ್ಳಿ ಮಾತನಾಡಿ, ‘ಕಲಿಕೆಗೆ ಪದವಿ ಹಂತವೇ ಕೊನೆಯಲ್ಲ. ನಿರಂತರ ಓದುವುದು, ಕಲಿಯುವುದನ್ನು ರೂಢಿ-ಸಿಕೊಳ್ಳಬೇಕು. ಜೀವನದಲ್ಲಿ ತೃಪ್ತಿ ಎನಿಸಿದರೆ ಅದರ ನಂತರ ಏನನ್ನೂ ಸಾಧಿಸಲು ಆಗುವುದಿಲ್ಲ’ ಎಂದು ವಿಶ್ಲೇಷಿಸಿದರು.

320 ಪದವಿ ವಿದ್ಯಾರ್ಥಿಗಳು ಮತ್ತು 80 ಸ್ನಾತಕೋತ್ತರ ವಿದ್ಯಾರ್ಥಿಗಳು ಪದವಿ ಪ್ರಮಾಣ ಪತ್ರ ಪಡೆದರು. ಬಿಬಿಎ ವಿಭಾಗದಿಂದ ಸಲ್ಮಾ ಸುಲ್ತಾನಾ, ಸ್ನಾತಕೋತ್ತರ ವಿಭಾಗದಲ್ಲಿ ಎಂ.ಎಸ್ಸಿ. ಬಯೋಟೆಕ್ನಾಲಜಿ ವಿಭಾಗದಿಂದ ವಿನಿತಾ ಪ್ರಥಮ ರ‍್ಯಾಂಕ್ ಪಡೆದರು.

ಇಂಡಿಯನ್ ಅಕಾಡೆಮಿ ಸಮೂಹ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಸೋಮಶೇಖರ್, ಕಾರ್ಯದರ್ಶಿ ಭಾರತಿ, ಪದವಿ ಕಾಲೇಜಿನ ಪ್ರಾಂಶುಪಾಲ ಎಸ್. ಭಾರತಿ, ಉಪ ಪ್ರಾಂಶುಪಾಲ ಮೀನಾಚಿ ಸುಂದರಂ, ಪರೀಕ್ಷಾಂಗ ವಿಭಾಗದ ಮುಖ್ಯಸ್ಥ ಟಿ. ಶ್ರೀನಿವಾಸ ರಾವ್, ಸಂಶೋಧನ ವಿಭಾಗದ ನಿರ್ದೇಶಕ ದ್ವಾರಕನಾಥ್ ಉಪಸ್ಥಿತರಿದ್ದರು.

ಅಗ್ರಸ್ಥಾನದಲ್ಲಿ ರುಚಿರ್, ಅಯಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 9 ವರ್ಷ ವಯಸ್ಸಿನ ಅಯಾನ್ ಫುಟಾನೆ ಜೊತೆ ರುಚಿರ್ ನಡಿಕಟ್ಲ ಅವರು ಗೋಲ್ಡನ್ ಆರಾ ಕರ್ನಾಟಕ ರಾಜ್ಯ ಅಮೆಚೂರ್ ಚೆಸ್ ಚಾಂಪಿಯನ್‌ಷಿಪ್‌ನ ಎಂಟನೇ ಸುತ್ತಿನ ನಂತರ ತಲಾ 7.5 ಅಂಕಗಳನ್ನು ಕಲೆಹಾಕಿ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ನಗರದ ಪ್ರೆಸ್ಟೀಜ್ ಸೆಂಟರ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ನಲ್ಲಿ ನಡೆಯುತ್ತಿರುವ ಈ ಚಾಂಪಿಯನ್ ಷಿಪ್‌ನ ಮೂರನೇ ದಿನವಾದ ಶನಿವಾರ ಮೊದಲ ಬೋರ್ಡ್‌ನಲ್ಲಿ ಆಡಿದ ಎರಡನೇ ಶ್ರೇಯಾಂಕದ ಅಯಾನ್, ವೆಂಕಟನಾಗ ಕಾರ್ತಿಕ್ (6.5) ವಿರುದ್ಧ ಜಯ ಗಳಿಸಿದ. ಪಕ್ಕದ ಬೋರ್ಡ್‌ನಲ್ಲಿ ರುಚಿರ್, ಇನ್ನೊಬ್ಬ ಆಟಗಾರ ಇಶಾನ್ ಎ (6.5) ವಿರುದ್ಧ ಗೆಲುವು ಪಡೆದನು.

ಅಗ್ರ ಶ್ರೇಯಾಂಕದ ನಿರಂಜನ್ ವಾರಿಯರ್ ಮತ್ತು ಬೆಳಗಾವಿಯ ಶ್ರೀಕರ ದರ್ಭಾ ಅವರು ತಲಾ ಏಳು ಪಾಯಿಂಟ್ಸ್ ಗಳಿಸಿದ್ದು ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ. ಎಂಟನೇ ಸುತ್ತಿನಲ್ಲಿ ನಿರಂಜನ್, ಅಭಿನೀತ್ ಭಟ್ (6) ವಿರುದ್ಧ, ಶ್ರೀಕರ, ಬೆಂಗಳೂರಿನ 9 ವರ್ಷ ವಯಸ್ಸಿನ ಶ್ರೇಯಾನ್ಶ್ ದಾಸ್ (6) ವಿರುದ್ಧ ಜಯಗಳಿಸಿದರು. ಮೂರನೇ ಶ್ರೇಯಾಂಕದ ವಿವಾನ್ ಸಚದೇವ್ ಸೇರಿದಂತೆ ಹತ್ತು ಮಂದಿ ಆಟಗಾರರು ತಲಾ 6.5 ಪಾಯಿಂಟ್ಸ್ ಗಳಿಸಿದ್ದು ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ.

ಭ್ರಷ್ಟಾಚಾರ ಆರೋಪ: ನಿರ್ಲಕ್ಷ್ಯ ಸಲ್ಲ – ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭ್ರಷ್ಟಾಚಾರ ಆರೋಪದ ಮೇಲಿನ ದುರ್ನಡತೆ ಪ್ರಕರಣಗಳನ್ನು ನ್ಯಾಯಾಲಯಗಳು ಮತ್ತು ನ್ಯಾಯ ಮಂಡಳಿಗಳು ಹಗುರವಾಗಿ ಪರಿಗಣಿಸಬಾರದು’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಭ್ರಷ್ಟಾಚಾರದ ಆರೋಪದಡಿ ಗ್ರಾಮ ಲೆಕ್ಕಿಗರೊಬ್ಬರನ್ನು ಕಡ್ಡಾಯ ನಿವೃತ್ತಿಗೊಳಿಸಿ ಹೊರಡಿಸಿದ್ದ ಆದೇಶವನ್ನು ಕೆಎಟಿ (ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ) ರದ್ದು-ಗೊಳಿಸಿತ್ತು. ಇದನ್ನು ಪ್ರಶ್ನಿಸಿ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಮತ್ತು ನ್ಯಾಯಮೂರ್ತಿ ವಿಜಯ ಕುಮಾರ್ ಎ.ಪಾಟೀಲ್ ಅವರಿದ್ದ ವಿಭಾಗೀಯ ನ್ಯಾಯಪೀಠ (ಧಾರವಾಡ) ಕೆಎಟಿ ಆದೇಶವನ್ನು ವಜಾಗೊಳಿಸಿದೆ.

‘ಭ್ರಷ್ಟಾಚಾರವು ಪ್ರಜಾ-ಪ್ರಭುತ್ವದ ಮೂಲಭೂತ ತತ್ವಗಳಿಗೆ ಬೆದರಿಕೆ ಹಾಕುವುದಲ್ಲದೆ, ಕಾನೂನಿನ ನಿಯಮ ಮತ್ತು ಅದರ ರಕ್ಷಕರಾಗಿ ಕಾರ್ಯನಿರ್ವ-ಹಿಸುವ ಸಂಸ್ಥೆಗಳನ್ನು ದುರ್ಬಲಗೊಳಿ-ಸುವ ಅಪಾಯವಿದೆ. ಲಂಚದ ಆರೋಪ ಪ್ರಕರಣಗಳಲ್ಲಿ ನ್ಯಾಯಾಲಯಗಳು ಮೌನ ವಹಿಸಬಾರದು’ ಎಂದು ಎಚ್ಚರಿಸಿದೆ.

‘ಈ ಪ್ರಕರಣದಲ್ಲಿ ಕೆಎಟಿ ತಪ್ಪೆಸಗಿದೆ. ಕ್ರಿಮಿನಲ್ ಪ್ರಕರಣವೇ ಬೇರೆ ಮತ್ತು ಇಲಾಖಾ ತನಿಖೆಯೇ ಬೇರೆ. ಕೆಎಟಿ ಇಲಾಖಾ ತನಿಖೆಯಲ್ಲಿನ ಅಂಶಗಳನ್ನು ಪರಿಗಣಿಸುವಲ್ಲಿ ವಿಫಲವಾಗಿದೆ’ ಎಂದು ನ್ಯಾಯಪೀಠ ಹೇಳಿದೆ.

ಸರ್ಕಾರದ ಪರ ಜಿ.ಕೆ. ಹಿರೇಗೌಡರ್ ವಾದ ಮಂಡಿಸಿದ್ದರು.

ಪ್ರಕರಣವೇನು?: ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನ ಕೆಳವಡಿ ಗ್ರಾಮದಲ್ಲಿ ವಿ.ಶಿವನಗೌಡ ಗ್ರಾಮ ಲೆಕ್ಕಿಗನಾಗಿ 2011ರಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು.

‘ಕಂದಾಯ ದಾಖಲೆಗಳನ್ನು ಸರಿಪಡಿಸಲು ಶಿವನಗೌಡ ₹2,500 ಲಂಚ ಕೇಳಿದ್ದರು’ ಎಂದು ವಿಜಯಕುಮಾರ್ ಹನುಮಪ್ಪ ಲೋಕಾಯುಕ್ತಕ್ಕೆ ದೂರು ನೀಡಿದ್ದರು.

ಶಿವನಗೌಡ ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದರು. ಅವರ ವಿರುದ್ಧ ಇಲಾಖಾ ತನಿಖೆ ನಡೆಸಿದ್ದ ಜಿಲ್ಲಾಧಿಕಾರಿ ವರದಿ ಆಧರಿಸಿ, 2020ರ ಅಕ್ಟೋಬರ್ 21ರಂದು ಶಿವನಗೌಡ ಅವರನ್ನು ಸರ್ಕಾರ ಕಡ್ಡಾಯವಾಗಿ ನಿವೃತ್ತಿಗೊಳಿಸಿತ್ತು.

ಇದನ್ನು ಪ್ರಶ್ನಿಸಿ ಅವರು ಕೆಎಟಿ ಮೊರೆ ಹೋಗಿದ್ದರು. ಸರ್ಕಾರದ ಆದೇಶವನ್ನು ಕೆಎಟಿ ರದ್ದುಗೊಳಿಸಿತ್ತು.

ವಿದ್ಯುತ್ ಸ್ಪರ್ಶ: ಒಂಟಿ ಸಲಗ ಸಾವು

ಚನ್ನಪಟ್ಟಣ: ತಾಲ್ಲೂಕಿನ ಚಿಕ್ಕ ವಿಠಲೇನಹಳ್ಳಿ ಹಾಗೂ ಗೊಲ್ಲರದೊಡ್ಡಿ ಮಧ್ಯದ ಜಮೀನಿನಲ್ಲಿ ಶನಿವಾರ ಮುಂಜಾನೆ ಆಕಸ್ಮಿಕವಾಗಿ ವಿದ್ಯುತ್ ತಂತಿಯನ್ನು ಸ್ಪರ್ಶಿಸಿ ಸುಮಾರು 35 ವರ್ಷದ ಒಂಟಿ ಸಲಗವೊಂದು ಮೃತಪಟ್ಟಿದೆ. ತೋಟದಲ್ಲಿ ಹಾದು ಹೋಗಿದ್ದ 11 ಕೆವಿ ವಿದ್ಯುತ್ ತಂತಿ ಆನೆಯ ಸೊಂಡಿಲಿಗೆ ತಾಗಿದೆ ಎಂದು ಅರಣ್ಯ ಇಲಾಖೆ ತಿಳಿಸಿದೆ.

ಕಾರವಾರ ತಾಲ್ಲೂಕಿನ ಮಾಜಾಳಿಯಲ್ಲಿದ್ದ ರಾಘೋಜಿ ಸಿಮೆಂಟ್ ಉತ್ಪಾದನಾ ಕಂಪನಿ ಇದ್ದ ಜಾಗದಲ್ಲೀಗ ಗಿಡಗಂಟಿ ಬೆಳೆದು, ಕೈಗಾರಿಕೆ ಆವರಣ ಪಾಳು ಬಿದ್ದಿದೆ.

ಬಳ್ಳಾರಿ ಹೊರವಲಯದಲ್ಲಿ 'ಆರ್ಸೆಲರ್ ಮಿತ್ತಲ್' ಕಂಪನಿಯ ಉಕ್ಕು ಕಾರ್ಖಾನೆಗಾಗಿ 2014ರಲ್ಲಿ ವಶಕ್ಕೆ ಪಡೆದ 2643.25 ಎಕರೆ ಪ್ರದೇಶ ಪಾಳು ಬಿದ್ದಿದೆ.

ಉದ್ಯೋಗಕ್ಕೆ ನಿತ್ಯ ವಲಸೆ

ಒಂದನೇ ಪುಟದಿಂದ..

ವಿಜಯಪುರ, ಚಿಕ್ಕಬಳ್ಳಾಪುರ, ಉತ್ತರ ಕನ್ನಡ ಜಿಲ್ಲೆಯಷ್ಟೇ ಅಲ್ಲ, ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿನ ನೈಜ ಚಿತ್ರಣವಿದು. ಪ್ರತಿಷ್ಠಿತ, ಬೃಹತ್ ಉದ್ಯಮಗಳು ರಾಜ್ಯದಲ್ಲಿ ನೆಲೆಯೂರಲು ಆಸಕ್ತಿ ತೋರುತ್ತಿಲ್ಲ. ಆರಂಭದಲ್ಲಿ ಆಶಾಭಾವ ವ್ಯಕ್ತಪಡಿಸಿದರೂ ನಂತರದಲ್ಲಿ ಬಂಡವಾಳ ಹೂಡುತ್ತಿಲ್ಲ. ಹೊಸ ಉದ್ಯೋಗ ಸೃಷ್ಟಿಯಾಗುತ್ತಿಲ್ಲ. ನಿರುದ್ಯೋಗ ಸಮಸ್ಯೆ ಬಗೆಹರಿಯುತ್ತಿಲ್ಲ.

ಕಲ್ಯಾಣ ಕರ್ನಾಟಕದ ಪರಿಸ್ಥಿತಿಯಂತೂ ಇನ್ನೂ ಶೋಚನೀಯ. ಪಿಎಂ ಮಿತ್ರ ಮೆಗಾ ಟೆಕ್ಸ್‌ಟೈಲ್ ಪಾರ್ಕ್ ಮಂಜೂರಾಗಿ ಎರಡು ವರ್ಷಗಳು ಆಗಿವೆ. ರಸ್ತೆ, ವಿದ್ಯುತ್ ಸಂಪರ್ಕ ಮೂಲಸೌಲಭ್ಯದ ಟೆಂಡರ್ ಕರೆಯಲಾಗಿದೆ. ಕಲ್ಯಾಣ ಕರ್ನಾಟಕದ ಪ್ರಭಾವಿ ಸಚಿವರು ಇದ್ದರೂ ಜವಳಿ ಪಾರ್ಕ್‌ಗೆ ಕನಿಷ್ಠ ಪರಿಸರ ಅನುಮತಿ ಕೊಡಿಸಲೂ ಆಗುತ್ತಿಲ್ಲ.

'ಕಲ್ಯಾಣ'ಕ್ಕೆ ಬರುವ ಯೋಜನೆಗಳನ್ನು ಮುಂಬೈ, ದಕ್ಷಿಣ ಕರ್ನಾಟಕದವರು ಕಸಿದುಕೊಂಡು ಹೋಗುತ್ತಾರೆ. ಬಂಡವಾಳ ಹೂಡಿಕೆಗೆ ಬೇಕಾದ ಕನಿಷ್ಠ ಮೂಲಸೌಲಭ್ಯ ಒದಗಿಸಲು ಸಹ ಅವರಿಂದ ಆಗುತ್ತಿಲ್ಲ. ಲಭ್ಯ ಇರುವ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲಗಳು ಸದ್ಬಳಕೆಯಾಗದೆ, ಜನರ ಶ್ರಮವೆಲ್ಲಾ ಗುಳೆ ಹೋಗುತ್ತಿದೆ' ಎಂಬ ಬೇಸರ ಉದ್ಯಮಿಗಳದ್ದು.

ರಾಜ್ಯದ ಗಡಿಭಾಗವಾಗಿರುವ ಕಾರವಾರದಲ್ಲಿ ಉದ್ಯೋಗ ಸೃಷ್ಟಿಸಬಹುದಾದ ಒಂದೂ ಕೈಗಾರಿಕೆಗಳಿಲ್ಲ. ಸ್ಥಾಪನೆ ಆಗಿದ್ದ ಕೈಗಾರಿಕೆಗಳು ಕಚ್ಚಾವಸ್ತುಗಳ ಪೂರೈಕೆಗೆ ಸೂಕ್ತ ಸಾರಿಗೆ ಸಂಪರ್ಕವಿಲ್ಲದೆ ಬಾಗಿಲು ಮುಚ್ಚಿವೆ. ಕಚ್ಚಾ ವಸ್ತು ತರಿಸಿಕೊಳ್ಳಲು ಸಾರಿಗೆ ವ್ಯವಸ್ಥೆ ಇಲ್ಲದ ಕಾರಣಕ್ಕೆ ಮೂರು ದಶಕಗಳ ಹಿಂದೆ ರಾಘೋಜಿ ಸಿಮೆಂಟ್ ಇಂಡಸ್ಟ್ರಿ ಬಾಗಿಲು ಮುಚ್ಚಿತ್ತು. ಬಿಣಗಾದಲ್ಲಿ ಬಿರ್ಲಾ ಗ್ರಾಸಿಮ್ ಇಂಡಸ್ಟ್ರಿ ಇದ್ದರೂ ಉದ್ಯೋಗಾವಕಾಶ ಸೀಮಿತವಾಗಿದೆ.

ಉತ್ತರ ಕರ್ನಾಟಕ ಮತ್ತು ಕರಾವಳಿ ಬೆಸೆಯುವ ರಾಷ್ಟ್ರೀಯ ಹೆದ್ದಾರಿ ಇದ್ದರೂ ಮಳೆಗಾಲದಲ್ಲಿ ಭೂಕುಸಿತದ ಸಮಸ್ಯೆಯಿಂದ ಸಂಚಾರ ಸ್ಥಗಿತಗೊಳ್ಳುವ ಆತಂಕ ಇದ್ದೇ ಇದೆ. ಕೊಂಕಣ ರೈಲು ಹಾದುಹೋದರೂ ಸಂಪರ್ಕ ಕರಾವಳಿ ಭಾಗಕ್ಕೆ ಸೀಮಿತವಾಗಿದೆ. ಬಹುನಿರೀಕ್ಷಿತ ಹುಬ್ಬಳ್ಳಿ–ಅಂಕೋಲಾ ರೈಲು ಯೋಜನೆಗೆ ಪರಿಸರ ನಾಶದ ಕಾರಣ ನೀಡಿ ಪರಿಸರವಾದಿಗಳು ಹೋರಾಟ ನಡೆಸಿ, ಕೋರ್ಟ್ ಮೆಟ್ಟಿಲೇರಿದ್ದರಿಂದ ದಶಕಗಳಿಂದ ಯೋಜನೆ ನನೆಗುದಿಗೆ ಬಿದ್ದಿದೆ.

'ಈ ಹಿಂದೆ ಕಾಶ್ಮೀರ ಮೂಲದ ಲಿಬರ್ಟಿ ಆಯಿಲ್, ಟಾಟಾ ಸ್ಟೀಲ್ ಕಂಪನಿಯ ಘಟಕಗಳು ಕಾರ್ಯಾರಂಭಿಸಲು ಮಾಜಾಳಿ ಬಳಿ ಜಾಗ ಹುಡುಕಾಡಿದ್ದವು. ಪರಿಸರ ನಾಶದ ನೆಪವೊಡ್ಡಿ ನಡೆಸಿದ ಹೋರಾಟದ ಪರಿಣಾಮ ಆ ಕೈಗಾರಿಕೆಗಳು ಕಾಲ್ಕಿತ್ತವು' ಎಂದು ತೆರಿಗೆ ಸಲಹೆಗಾರ ಜಗದೀಶ ಬಿರ್ಕೋಡಿಕರ್ ತಿಳಿಸಿದರು.

'ಕಾರವಾರದಿಂದ ಕೇವಲ 45 ರಿಂದ 50 ಕಿ.ಮೀ ಅಂತರದಲ್ಲಿ ಗೋವಾ ರಾಜ್ಯದ ಮಡಗಾಂವನಿಂದ ಕೈಗಾರಿಕೆ ಪ್ರದೇಶಗಳಿವೆ. ಅಲ್ಲಿ ನೂರಾರು ಕಂಪನಿಗಳಿವೆ. ಗೋವಾ ರಾಜ್ಯದ ಕೈಗಾರಿಕಾ ಸ್ನೇಹಿ ನೀತಿ ಕೈಗಾರಿಕೆ ಸ್ಥಾಪನೆಗೆ ವರವಾಗುತ್ತಿದೆ. ಆದರೆ, ಅಂತಹ ಕೈಗಾರಿಕೆ ಪರ ನೀತಿ ಕರ್ನಾಟಕದಲ್ಲಿ ಇಲ್ಲದಿರುವುದೂ ಕೈಗಾರಿಕೋದ್ಯಮಿಗಳು ಹೂಡಿಕೆಗೆ ಹಿಂದೇಟು ಹಾಕಲು ಇನ್ನೊಂದು ಕಾರಣ' ಎಂದು ಬೇಸರದಿಂದ ಹೇಳಿದರು.

ಬೆಳಗಾವಿ ಜಿಲ್ಲೆಯಲ್ಲಿ ಮಾನವ ಶಕ್ತಿ, ಕಚ್ಚಾ ಸಾಮಗ್ರಿ, ವಿದ್ಯುತ್, ನೀರು ಹಾಗೂ ಸಾರಿಗೆ ವ್ಯವಸ್ಥೆ ಸಾಕಷ್ಟು ಸಮೃದ್ಧವಾಗಿದೆ. ಆದರೆ, ಅಗತ್ಯದಷ್ಟು ಭೂಮಿ ಇಲ್ಲದ ಕಾರಣ ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಹಿನ್ನಡೆಯಾಗಿದೆ. ಇದರಿಂದ ಮಹಾರಾಷ್ಟ್ರ ಹಾಗೂ ಗೋವಾದ ನಗರಗಳಿಗೆ ದುಡಿಯಲು ವಲಸೆ ಹೋಗುವುದೂ ಮುಂದುವರಿದಿದೆ. ಮಳೆಗಾಲದಲ್ಲಿ ಕೃಷಿ ಹಾಗೂ ಸಕ್ಕರೆ ಕಾರ್ಖಾನೆಗಳಲ್ಲಿ ಕೆಲಸಗಳು ಸಿಗುತ್ತವೆ. ಆದರೆ, ಬೇಸಿಗೆಯಲ್ಲಿ ವಲಸೆ ಹೋಗುವುದು ಅನಿವಾರ್ಯವಾಗಿದೆ. ಈಗಲೂ ಪ್ರತಿ ವರ್ಷ ಲಕ್ಷಕ್ಕೂ ಹೆಚ್ಚು ಜನ ಪುಣೆ, ಮುಂಬೈ, ಕೊಲ್ಹಾಪುರ, ಗೋವಾದ ನಗರಗಳಿಗೆ ದುಡಿಯಲು ಹೋಗುತ್ತಾರೆ.

ಬೆಳಗಾವಿ ಜಿಲ್ಲೆಯಲ್ಲಿ ಸದ್ಯ 1,000ಕ್ಕೂ ಅಧಿಕ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಇವೆ. ನಗರದಲ್ಲಿ ಉತ್ಪಾದನೆ ಆಗುವ ಹೈಡ್ರಾಲಿಕ್, ವಿವಿಧ ಆಟೊಮೊಬೈಲ್, ಬಾಹ್ಯಾಕಾಶ ಸಂಶೋಧನೆಯ ಬಿಡಿಭಾಗಗಳು, ವಾಯುಯಾನ ಉದ್ಯಮದ ಅಗತ್ಯತೆಗಳು, ರಕ್ಷಣಾ ಉತ್ಪನ್ನಗಳನ್ನು, ದ್ರಾಕ್ಷಿ ಹಣ್ಣು, ಬೆಲ್ಲ, ಸಕ್ಕರೆ ಮುಂತಾದ ಉತ್ಪನ್ನಗಳನ್ನು ವಿದೇಶಕ್ಕೆ ರಫ್ತು ಮಾಡಲಾಗುತ್ತದೆ. ಆದರೆ, ಇಲ್ಲಿ 'ಕೈಗಾರಿಕಾ ವಸಾಹತು' ಸ್ಥಾಪಿಸಬೇಕು ಎಂಬ ಬಹುದಿನಗಳ ಬೇಡಿಕೆ ಇನ್ನೂ ಈಡೇರಿಲ್ಲ.

2022ರಲ್ಲಿ ಮುರುಗೇಶ ನಿರಾಣಿ ಕೈಗಾರಿಕಾ ಸಚಿವರಾಗಿದ್ದಾಗ 50 ಸಾವಿರ ಎಕರೆ 'ಭೂ ಬ್ಯಾಂಕ್' ನಿರ್ಮಾಣ ಮಾಡುವ ಯೋಜನೆ ರೂಪಿಸಿದ್ದರು. ಸರ್ಕಾರ ಬದಲಾದ ಬಳಿಕ ಆ ಯೋಜನೆ ಮೂಲೆ ಸೇರಿದೆ. ಬೆಳಗಾವಿ ತಾಲ್ಲೂಕಿನ ಯಮನಾಪುರ ಬಳಿ 4,000 ಎಕರೆ ಸರ್ಕಾರಿ ಜಾಗವಿದೆ. ಅಲ್ಲಿ ಕೈಗಾರಿಕಾ ಹಬ್ ಮಾಡಲು ಅವಕಾಶವಿದೆ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದ್ದರು. ಈ ಬಗ್ಗೆ ಯಾವುದೇ ಬೆಳವಣಿಗೆಗಳು ಕೂಡ ಆಗಿಲ್ಲ.

'ಆ್ಯಪಲ್ ಫೋನ್ ತಯಾರಿಸುವ ಫಾಕ್ಸ್‌ಕಾನ್ ಕಂಪನಿಗೆ ಬಿಡಿಭಾಗಗಳನ್ನು ತಯಾರಿಸಿಕೊಡುವ ಎಸ್‌ಎಫ್‌ಎಸ್ ಕಂಪನಿಯು ಬೆಳಗಾವಿಯಲ್ಲಿ ₹250 ಕೋಟಿ ಬಂಡವಾಳ ಹೂಡಲು ಮುಂದೆ ಬಂದಿದೆ. ಇದಕ್ಕೆ 30 ಎಕರೆ ಭೂಮಿ ಕೇಳಿದ್ದು, ಒದಗಿಸಲಾಗುವುದು' ಎಂದು ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ಹೇಳಿದ್ದರು. ವರ್ಷ ಕಳೆದರೂ ಒಂದು ಇಂಚು ಜಾಗ ಕೂಡ ಗುರುತಿಸಲಾಗಿಲ್ಲ.

ಜಿಲ್ಲೆಯಲ್ಲಿ 26 ಸಕ್ಕರೆ ಕಾರ್ಖಾನೆಗಳಿವೆ. ಹೀಗಾಗಿ, ಕಬ್ಬು ಬೆಳೆಗಾರರಿಗೆ ಅವಕಾಶಗಳು ಹೆಚ್ಚು. ಅಥಣಿ, ರಾಯಬಾಗ, ಚಿಕ್ಕೋಡಿ, ನಿಪ್ಪಾಣಿ ಭಾಗದಲ್ಲಿ ಅಪಾರ ಪ್ರಮಾಣದಲ್ಲಿ ದ್ರಾಕ್ಷಿ ಬೆಳೆಯಲಾಗುತ್ತದೆ. ದ್ರಾಕ್ಷಿ ಸಂಸ್ಕರಣಾ ಘಟಕ, ಶೀಥಲೀಕರಣ ಘಟಕ ಸ್ಥಾಪಿಸಬೇಕು ಎಂಬ ಬೇಡಿಕೆ 50 ವರ್ಷಗಳಿಂದ ಇದೆ. ಶೇ 90ರಷ್ಟು ದ್ರಾಕ್ಷಿ ಒಣದ್ರಾಕ್ಷಿ ಉತ್ಪಾದನೆಗೆ ಅವಕಾಶವಿದೆ. ಆದರೂ ಸರ್ಕಾರ ಇದರತ್ತ ಗಮನ ಹರಿಸಿಲ್ಲ. ಇದರಿಂದ ಎಲ್ಲ ದ್ರಾಕ್ಷಿ ಮಹಾರಾಷ್ಟ್ರದ ಪಾಲಾಗುತ್ತಿದೆ.

ಮಹಾರಾಷ್ಟ್ರದ ಪುಣೆಯಲ್ಲಿ ಕೈಗಾರಿಕೆಗಳನ್ನು ತೆರೆದಿರುವ ರಾಜ್ಯದ 60 ಕೈಗಾರಿಕೋದ್ಯಮಿಗಳು, ತಮ್ಮ ತಾಯ್ನಾಡಾದ ಬೆಳಗಾವಿ ಜಿಲ್ಲೆಯಲ್ಲಿ ಉದ್ಯಮ ಸ್ಥಾಪನೆಗೆ ಆಸಕ್ತಿ ವಹಿಸಿದ್ದಾರೆ. ಖಾನಾಪುರ ತಾಲ್ಲೂಕಿನಲ್ಲಿ ಜಮೀನು ಒದಗಿಸುವಂತೆ ಕೋರಿದ್ದಾರೆ. ಆದರೆ, ಜಿಲ್ಲಾಡಳಿತ ಮಾತ್ರ ಇದಕ್ಕೆ ಕಿವಿಗೊಟ್ಟಿಲ್ಲ. ಬೆಳಗಾವಿ ಸಂಸದ ಜಗದೀಶ ಶೆಟ್ಟರ್ ಅವರೇ ಲೋಕಸಭೆಯ 'ವಾಣಿಜ್ಯ ಹಾಗೂ ಕೈಗಾರಿಕೆ ಸಂಸದೀಯ ಸಲಹಾ ಸಮಿತಿಯ ಸದಸ್ಯರಾಗಿದ್ದಾರೆ. ರೈಲ್ವೆ ಮಾರ್ಗ ನಿರ್ಮಾಣಕ್ಕೆ ವಹಿಸಿದಷ್ಟು ಆಸಕ್ತಿಯನ್ನು ಅವರು ಕೈಗಾರಿಕಾ ವಸಾಹತು ಸ್ಥಾಪನೆಗೆ ವಹಿಸುತ್ತಿಲ್ಲ' ಎಂಬುದು ಉದ್ಯಮಿಗಳ ದೂರು.

ಮಹಾರಾಷ್ಟ್ರ ಗಡಿಗೆ ಹೊಂದಿಕೊಂಡಿರುವ ವಿಜಯಪುರ ಜಿಲ್ಲೆಯ ಕೂಡಗಿಯಲ್ಲಿರುವ ರಾಷ್ಟ್ರೀಯ ಉಷ್ಣ ವಿದ್ಯುತ್ ಸ್ಥಾವರ (ಎನ್‌ಟಿಪಿಸಿ) ಮತ್ತು 10 ಸಕ್ಕರೆ ಕಾರ್ಖಾನೆಗಳನ್ನು ಹೊರತುಪಡಿಸಿದರೆ ಇನ್ನಾವುದೇ ಬೃಹತ್ ಕೈಗಾರಿಕೆಗಳು ಇಲ್ಲ. ಸಾಕಷ್ಟು ಪ್ರಮಾಣದಲ್ಲಿ ಭೂಮಿ, ನೀರು, ವಿದ್ಯುತ್, ರೈಲ್ವೆ, ಹೆದ್ದಾರಿಗಳಿವೆ. ಕೈಗಾರಿಕೆಗಳು ಬಂಡವಾಳ ಹೂಡಿಕೆಗೆ ಈವರೆಗೂ ಇತ್ತ ಮುಖ ಮಾಡದ ಕಾರಣ ಸಾವಿರಾರು ಜನರು ಉದ್ಯೋಗ ಅರಸಿ ನೆರೆಯ ಪುಣೆ, ಮುಂಬೈ, ಹೈದರಾಬಾದ್, ಬೆಂಗಳೂರು, ಮಂಗಳೂರು, ಪಣಜಿ ಸೇರಿ ವಿವಿಧ ನಗರ, ಪಟ್ಟಣಗಳಿಗೆ ವಲಸೆ ಹೋಗುತ್ತಿದ್ದಾರೆ.

ರಾಜಧಾನಿ ಬೆಂಗಳೂರಿಗೆ ಮತ್ತು ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಚಿಕ್ಕಬಳ್ಳಾಪುರ ಜಿಲ್ಲೆಯು ಸಮೀಪ ಇದೆ. ಆದರೆ, ಜಿಲ್ಲೆಯಲ್ಲಿ ಕೈಗಾರಿಕೆಗಳ ಅಭಿವೃದ್ಧಿ ದೊಡ್ಡ ಮಟ್ಟದಲ್ಲಿ ಆಗಿಲ್ಲ. ಗೌರಿಬಿದನೂರು ತಾಲ್ಲೂಕಿನ ಕುಡುಮಲಕುಂಟೆ ಕೈಗಾರಿಕಾ ಪ್ರದೇಶವೇ ಜಿಲ್ಲೆಯಲ್ಲಿ ಬೆಳೆಯುತ್ತಿರುವ ಪ್ರಮುಖ ಕೈಗಾರಿಕಾ ಪ್ರದೇಶವಾಗಿದೆ. ಈ ಕೈಗಾರಿಕಾ ಪ್ರದೇಶದಲ್ಲಿಯೂ ಮೂಲ ಸೌಕರ್ಯಗಳ ಕೊರತೆ ಎದ್ದು ಕಾಣುತ್ತಿದೆ.

ಚಿಂತಾಮಣಿ ತಾಲ್ಲೂಕಿನ ಮಸ್ತೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಇಂದಿಗೂ ನಿರೀಕ್ಷಿತ ಕೈಗಾರಿಕಾ ಚಟುವಟಿಕೆಗಳು ಆರಂಭವಾಗಿಲ್ಲ. ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ಹೋಬಳಿಯಲ್ಲಿ ಕೈಗಾರಿಕೆಗಾಗಿ 2,800 ಎಕರೆ ವಶಕ್ಕೆ ಪಡೆಯಲು ಕೈಗಾರಿಕಾ ಅಭಿವೃದ್ಧಿ ಮಂಡಳಿ ಅಧಿಸೂಚನೆ ಹೊರಡಿಸಿದೆ. ಆದರೆ, ಇದಕ್ಕೆ ರೈತರ ವಿರೋಧವಿದೆ.

ಮಂಗಳೂರಿನ ಬ್ಲೂಬೆರಿ ಹಿಲ್ಸ್‌ನಲ್ಲಿ ಕಿಯೋನಿಕ್ಸ್‌ನ 3.5 ಎಕರೆ ಜಾಗವನ್ನು ಐಟಿ ಪಾರ್ಕ್ ನಿರ್ಮಾಣಕ್ಕೆ ಮೀಸಲಿಡಲಾಗಿದೆ. ಹಲವಾರು ವರ್ಷಗಳ ಹಿಂದೆ ಜಾಗ ನಿಗದಿ ಮಾಡಿದ್ದರೂ, ಯೋಜನೆ ನನೆಗುದಿಗೆ ಬಿದ್ದಿದೆ ಎಂದು ಐಟಿ ಉದ್ಯೋಗಿಯೊಬ್ಬರು ಹೇಳುತ್ತಾರೆ.

'ಬುದ್ಧಿವಂತರ ಜಿಲ್ಲೆ ಎಂದು ಕರೆಸಿಕೊಳ್ಳುವ ದಕ್ಷಿಣ ಕನ್ನಡ ಜಿಲ್ಲೆಯು ದೂರದರ್ಶಿತ್ವದ ಯೋಜನೆಗಳ ಕೊರತೆಯಿಂದ ಸೊರಗಿದೆ. 1980ರ ನಂತರ ಈ ಜಿಲ್ಲೆಯಲ್ಲಿ ಉದ್ಯೋಗ ಸೃಷ್ಟಿಸುವ ಯೋಜನೆಗಳು ಅಷ್ಟಾಗಿ ಹುಟ್ಟಿಕೊಂಡಿಲ್ಲ. ಪರಿಸರ ರಕ್ಷಣೆ ಆಗಬೇಕು ಜೊತೆಗೆ ದೊಡ್ಡ ಉದ್ಯಮಗಳು ಜಿಲ್ಲೆಗೆ ಬರಬೇಕು. ಅಂತಹ ಯೋಜನೆಗಳನ್ನು ಜಿಲ್ಲೆಯ ಜನಪ್ರತಿನಿಧಿಗಳು ರೂಪಿಸಬೇಕಾಗಿತ್ತು. 1990ರ ನಂತರದ ವರ್ಷಗಳಲ್ಲಿ ಘಟಿಸಿದ ಕೋಮು ಸಂಘರ್ಷಗಳು ಜಿಲ್ಲೆಯ ಅಭಿವೃದ್ಧಿಯ ಮೇಲೆ ಕರಿನೆರಳು ಬೀರಿವೆ' ಎನ್ನುತ್ತಾರೆ ಸಿಪಿಎಂನ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ವಸಂತ ಆಚಾರಿ.

'ದಕ್ಷಿಣ ಕನ್ನಡ ಮತ್ತು ಉಡುಪಿ ಸೇರಿ 250 ಐಟಿ ಕಂಪನಿಗಳು ಇವೆ, 200ಕ್ಕೂ ಹೆಚ್ಚು ಸ್ಟಾರ್ಟ್ ಅಪ್‌ಗಳು ಇವೆ. ಪರಿಸರ ಸೂಕ್ಷ್ಮ ಪ್ರದೇಶ, ಪಶ್ಚಿಮ ಘಟ್ಟ ಇರುವ ಕಾರಣ ಇಲ್ಲಿ ದೊಡ್ಡ ಉದ್ಯಮಕ್ಕೆ ಅಗತ್ಯವಾದ ಭೂಮಿ ಸಿಗುವುದು ಸವಾಲಾಗಿದೆ. ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೊ ಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್), ಗೇಲ್ ಕಂಪನಿ, ಪೆಟ್ರೊ ಕೆಮಿಕಲ್ ಉದ್ಯಮಗಳು ಪ್ರಸ್ತುತ ಇವೆ. ಸೇವಾ ಕ್ಷೇತ್ರ, ಉತ್ಪಾದಕ ವಲಯದಲ್ಲಿ ಪ್ರಗತಿ ಇದ್ದು, ಮುಂದಿನ 5–10 ವರ್ಷಗಳಲ್ಲಿ ಜಿಲ್ಲೆಯ ಚಿತ್ರಣ ಬದಲಾಗುವ ಭರವಸೆ ಇದೆ' ಎನ್ನುತ್ತಾರೆ ಕೆಸಿಸಿಐ ಅಧ್ಯಕ್ಷ ಪಿ.ಬಿ.ಅಹಮ್ಮದ್ ಮುದಸ್ಸರ್.

'ಕಲ್ಯಾಣ ಕರ್ನಾಟಕದಲ್ಲಿ ಕೈಗಾರಿಕಾ ಕ್ರಾಂತಿಯಾಗಲು ಪ್ರತ್ಯೇಕ ಕೈಗಾರಿಕಾ ನೀತಿ ಜಾರಿ ಮಾಡಿ, ಸ್ಥಿರ ಬಂಡವಾಳ ಹೂಡಿಕೆ ಸಬ್ಸಿಡಿ ಹಾಗೂ ಹೂಡಿಕೆ ಉತ್ತೇಜನ ಯೋಜನೆಗಳನ್ನು ರೂಪಿಸಬೇಕು. ಬೆಂಗಳೂರಿನಿಂದ ಹೊರ ಬಂದು ಕಲ್ಯಾಣದತ್ತ ದೃಷ್ಟಿ ಹಾಯಿಸಬೇಕು. ನೀರು, ವಿಶಾಲವಾದ ಭೂಪ್ರದೇಶವಿದೆ. ಏರೋಸ್ಪೇಸ್, ಸೆಮಿಕಂಡೆಕ್ಟರ್ ಚಿಪ್ ತಯಾರಿಕಾ ಘಟಕಗಳನ್ನು ಸ್ಥಾಪಿಸಬೇಕು' ಎನ್ನುತ್ತಾರೆ ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಶರಣು ಪಪ್ಪಾ.

ಕಲಬುರಗಿ ಏಳೆಂಟು ಸಿಮೆಂಟ್ ಕಾರ್ಖಾನೆಗಳಿದ್ದರೂ ಸ್ಥಳೀಯರಿಗೆ ಉದ್ಯೋಗ ಅವಕಾಶಗಳಿಲ್ಲ. ಸಿಮೆಂಟ್ ಕಾರ್ಖಾನೆಗೆ ಪೂರೈಕೆಯಾಗುವ ಸುಣ್ಣದ ಕಲ್ಲು ಗಣಿಗಾರಿಕೆಯು ನಿಜಾಮನ ಕಾಲದಲ್ಲಿದೆ. ಗಣಿಗಾರಿಕೆ ಮಾಡುವವರಿಗೆ ಸರಿಯಾಗಿ ಬ್ಯಾಂಕ್ ಸಾಲ ಸಿಗುವುದಿಲ್ಲ. ವ್ಯವಸ್ಥಿತವಾದ ಸಂಘಟನೆಯೂ ಇಲ್ಲವಾಗಿದೆ. ಒಂದು ಜಿಲ್ಲೆ ಉತ್ಪನ್ನದಡಿ ಸುಣ್ಣದ ಕಲ್ಲು ಆಯ್ಕೆಯಾಗಿದ್ದರೂ ಕ್ವಾರಿ ಮಾಲೀಕರಿಗೆ ನಯಾಪೈಸೆ ಪ್ರಯೋಜನವಾಗಿಲ್ಲ ಎಂಬುದು ಸ್ಥಳೀಯರ ಬೇಸರ.

ರಾಯಚೂರು ಜಿಲ್ಲೆಯ ವಿಷಯದಲ್ಲೂ ಸರ್ಕಾರ ಗಂಭೀರವಾಗಿಲ್ಲ. ಬಂಡವಾಳ ಹೂಡಿಕೆ ಅವಕಾಶಗಳಿದ್ದರೂ ಸರ್ಕಾರಗಳು ಅದಕ್ಕೆ ದಾರಿ ಮಾಡಿಕೊಡುತ್ತಿಲ್ಲ. ಜನ ಸಾಮಾನ್ಯರು, ಕಾರ್ಮಿಕರು ನಿರುದ್ಯೋಗ ಸಮಸ್ಯೆ ಎದುರಿಸುತ್ತಿದ್ದಾರೆ. 2022ರಲ್ಲಿ ಕೇಂದ್ರ ಸರ್ಕಾರ ದೇಶದಾದ್ಯಂತ ಒಟ್ಟು 7 ಮೆಗಾ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪನೆ ಮಾಡಲು ತೀರ್ಮಾನಿಸಿದೆ. ಕರ್ನಾಟಕದಲ್ಲಿ ಮಾತ್ರ ಸ್ಥಳ ಆಯ್ಕೆ ಮಾಡುವಲ್ಲೇ ಎಡವಿದೆ.

ರಾಯಚೂರು ಜಿಲ್ಲೆಯಲ್ಲಿ ಮೆಗಾ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪನೆ ಪೂರಕ ವಾತಾವರಣ ಇದೆ. ಮೂಲಸೌಕರ್ಯ ಒದಗಿಸಿದರೂ ಸಾಕು ಜವಳಿ ಉದ್ಯಮ ಕೋಟ್ಯಂತರ ರೂಪಾಯಿ ವಹಿವಾಟು ಮಾಡಲು ಸಾಧ್ಯವಾಗಲಿದೆ. ಕೇಂದ್ರ ಸರ್ಕಾರ ಕಲಬುರ್ಗಿಯಲ್ಲಿ ಮೆಗಾ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪನೆಗೆ ಮಂಜೂರಾತಿ ನೀಡಿದೆ. ಅಲ್ಲಿ ಸಿಮೆಂಟ್ ಕಾರ್ಖಾನೆಗಳು ಇರುವುದರಿಂದ ಜಿನ್ನಿಂಗ್ ಫ್ಯಾಕ್ಟರಿ ಮೇಲೆ ದುಷ್ಪರಿಣಾಮ ಉಂಟಾಗಲಿದೆ. ರಾಯಚೂರು ನಗರದಲ್ಲಿ 65 ಜಿನ್ನಿಂಗ್ ಪ್ರೆಸಿಂಗ್ ಮಿಲ್‌ಗಳು ಇವೆ. ಜಿಲ್ಲೆಯಲ್ಲಿ ಒಟ್ಟು 118 ಫ್ಯಾಕ್ಟರಿಗಳಿರುವುದರಿಂದ 10 ಲಕ್ಷ ವರೆಗೆ ಹತ್ತಿ ಬೇಲ್‌ಗಳನ್ನು ತಯಾರಿಸಲಾಗುತ್ತಿದೆ. ವರ್ಷದಲ್ಲಿ ಒಟ್ಟು 14 ಲಕ್ಷ ಬೇಲ್‌ಗಳನ್ನು ಸಿದ್ಧಪಡಿಸಲಾಗುತ್ತದೆ.

'ಜಿಲ್ಲೆಯಲ್ಲಿ ಮೆಗಾ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪನೆ ಮಾಡಿದರೆ ಸಾಗಣೆ ವೆಚ್ಚ ಕಡಿಮೆಯಾಗಲಿದೆ. ರೈತರ ಹತ್ತಿಗೂ ಉತ್ತಮ ಬೆಲೆ ಕೊಡಬಹುದು. ಜಿಲ್ಲೆಯಲ್ಲಿ ಪರಿಸರ ಮಾಲಿನ್ಯವಿಲ್ಲ. ಉತ್ಕೃಷ್ಟವಾದ ಬೇಲ್‌ಗಳನ್ನು ತಯಾರಿಸಬಹುದು. ಅಲ್ಲದೇ 15 ಸಾವಿರ ಜನರಿಗೆ ಉದ್ಯೋಗಾವಕಾಶ ಕಲ್ಪಿಸಲು ಅನುಕೂಲವಾಗಲಿದೆ' ಎಂದು ರಾಯಚೂರು ಕಾಟನ್ ಮಿಲ್ಲರ್ಸ್ ಅಸೋಸಿಯೇಶನ್ ಅಧ್ಯಕ್ಷ ವಿ.ಲಕ್ಷ್ಮೀರೆಡ್ಡಿ ಹೇಳುತ್ತಾರೆ.

ಒಟ್ಟಾರೆ ವಿವಿಧ ಜಿಲ್ಲೆಗಳಲ್ಲಿ ಕೈಗಾರಿಕ ಪ್ರಗತಿ ಆಶಾದಾಯಕವಾಗಿಲ್ಲ. ಒಂದು ವೇಳೆ ಸ್ಥಾಪನೆಯ ಸಿದ್ಧತೆ ನಡೆದರೂ ನೂರೆಂಟು ತೊಡಕುಗಳಿವೆ. ಅನಿವಾರ್ಯವಾಗಿ ಕೆಲಸ ಹುಡುಕಿಕೊಂಡು, ಅವರು ಪರವೂರುಗಳಿಗೆ ಹೋಗುವಂತಹ ಪರಿಸ್ಥಿತಿ ಇದೆ.

ಪರಿಕಲ್ಪನೆ: ಜಿ.ಡಿ.ಯತೀಶ್ ಕುಮಾರ್
ಪೂರಕ ಮಾಹಿತಿ: ವಿವಿಧ ಬ್ಯೂರೊಗಳಿಂದ

> **ಉತ್ತರ ಕನ್ನಡದಂತಹ ಗಡಿ ಜಿಲ್ಲೆಯಲ್ಲಿ ಪರಿಸರಕ್ಕೆ ಪೂರಕ ಪ್ರವಾಸೋದ್ಯಮ ಅಭಿವೃದ್ಧಿ ಜೊತೆಗೆ ಪರಿಸರ ಹಾನಿ ಮಾಡದ ಕೈಗಾರಿಕೆ ಸ್ಥಾಪನೆ ಆಗಬೇಕಿದೆ.**
> **ಯಮುನಾ ಗಾಂವ್ಕರ,** ಕಾರ್ಮಿಕ ಪರ ಹೋರಾಟಗಾರ್ತಿ

> **ಆಹಾರ ಸಂಸ್ಕರಣೆ ವಲಯದಲ್ಲಿ ಕಬ್ಬನ್ನು ಆಧರಿಸಿ ಎಥೆನಾಲ್, ಚಾಕೊಲೇಟ್ ಮತ್ತು ತಂಪು ಪಾನೀಯ ತಯಾರಿಕೆ ಘಟಕಗಳಿಗೆ ಹೆಚ್ಚು ಅವಕಾಶವಿದೆ. 20ಕ್ಕೂ ಹೆಚ್ಚು ಕಂಪನಿಗಳು ಬಂಡವಾಳ ಹೂಡಿಕೆಗೆ ಆಸಕ್ತಿ ತೋರಿವೆ.**
> **ಎಂ.ಬಿ.ಪಾಟೀಲ,** ಸಚಿವ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಇಲಾಖೆ

> **ಉತ್ತರಕನ್ನಡ ಜಿಲ್ಲೆಯ ಮೂಲದವರು ವಾಪಸ್ ಊರಿಗೆ ಬಂದು ಉದ್ಯಮ ಆರಂಭಿಸುವಂತೆ ಪ್ರೇರೇಪಿಸಿ ಹಲವು ಸಂಘಟನೆಗಳು ಸೇರಿ ಸರಣಿ ಕಾರ್ಯಕ್ರಮ ನಡೆಸಲಾಗಿದೆ**
> **ಪಿ.ಬಿ.ಅಹಮ್ಮದ್ ಮುದಸ್ಸರ್,** ಅಧ್ಯಕ್ಷ, ಕೆನರಾ ಚೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿ (ಕೆಸಿಸಿಐ)

ಮರೀಚಿಕೆಯಾದ ಬೃಹತ್ ಕೈಗಾರಿಕೆ

ರಾಜ್ಯದ ಗಡಿಭಾಗದ ಜಿಲ್ಲೆಗಳಲ್ಲಿ ಬೃಹತ್ ಕೈಗಾರಿಕೆ ಸ್ಥಾಪಿಸಲು ಅಂತರರಾಷ್ಟ್ರೀಯ, ರಾಷ್ಟ್ರೀಯ ಕಂಪನಿಗಳನ್ನು ಕರೆತರುವ ಪ್ರಯತ್ನ ಇಂದಿಗೂ ನನೆಗುದಿಗೆ ಬಿದ್ದಿದೆ. ಉತ್ತರ ಕನ್ನಡವೂ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಉಕ್ಕು ಕೈಗಾರಿಕೆಗಳ ಸ್ಥಾಪನೆಗೆ ಕಂಪನಿಗಳು ಆರಂಭಿಕ ಆಸಕ್ತಿ ತೋರಿಸಿದ್ದವು. ಆದರೆ, ಸರ್ಕಾರದ ನೀತಿಯ ಕಾರಣದಿಂದ ಹಿಂದೆ ಸರಿದವು ಎಂಬ ಆರೋಪಗಳಿವೆ.

'ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ಬಳಿ ಉಕ್ಕು ಘಟಕ ಆರಂಭಕ್ಕೆ ಟಾಟಾ ಸ್ಟೀಲ್, ಜೊಯಿಡಾದಲ್ಲಿ ಕಲ್ಯಾಣಿ ಸ್ಟೀಲ್ ಮುಂದೆ ಬಂದಿದ್ದವು. ಕಾರವಾರದ ಮಾಜಾಳಿಯಲ್ಲಿ ತೈಲ ಘಟಕ ಆರಂಭಿಸಲು ಲಿಬರ್ಟಿ ಆಯಿಲ್ ಕಂಪನಿ ಮುಂದಾಗಿತ್ತು. ಪರಿಸರ ನಾಶದ ಕಾರಣ ನೀಡಿ ವಿರೋಧ ಹೆಚ್ಚಿದ್ದರಿಂದ ಕೈಗಾರಿಕೆ ಸ್ಥಾಪನೆ ಮರೀಚಿಕೆಯಾಯಿತು' ಎಂದು ಹಿರಿಯ ತೆರಿಗೆ ಸಲಹೆಗಾರ ಜಗದೀಶ ಬಿರ್ಕೋಡಿಕರ್ ಹೇಳುತ್ತಾರೆ. 'ಬಳ್ಳಾರಿ ಜಿಲ್ಲೆಯ ಕುಡತಿನಿ ಬಳಿ ತಾವು ಸಚಿವರಾಗಿದ್ದ ಅವಧಿಯಲ್ಲಿ ಆರ್ಸೆಲರ್ ಕಂಪನಿಗೆ ಉಕ್ಕಿನ ಕಾರ್ಖಾನೆ ಆರಂಭಿಸಲು 5 ಸಾವಿರ ಎಕರೆ ಭೂಸ್ವಾಧೀನ ಮಾಡಿಕೊಡಲಾಗಿತ್ತು. ಆದರೆ, ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್‌ನ ಕೈಗಾರಿಕೆ ವಿರೋಧಿ ನೀತಿಯಿಂದ ಕಂಪನಿ ಮುಂದಡಿ ಇಡಲಿಲ್ಲ' ಎಂದು ಶಾಸಕ ಜನಾರ್ಧನ ರೆಡ್ಡಿ ಈಚೆಗಷ್ಟೆ ಆರೋಪಿಸಿದ್ದರು.

'ಬಂಡವಾಳ ಹೂಡಿಕೆದಾರರ ಸಮಾವೇಶ ಆಯೋಜನೆ ಮೂಲಕ ಕೈಗಾರಿಕೆಗಳನ್ನು ರಾಜ್ಯಕ್ಕೆ ಸೆಳೆಯಲು ಹಲವು ವರ್ಷದಿಂದ ಪ್ರಯತ್ನ ನಡೆಯುತ್ತಿದೆ. ಅಲ್ಲದೇ, ಕೈಗಾರಿಕೆ ಸ್ನೇಹಿ ವಾತಾವರಣ ರೂಪಿಸಿ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಕಾರ್ಖಾನೆ ಆರಂಭಕ್ಕೆ ಪ್ರಯತ್ನ ನಡೆಯಿತು. ಪೈಪೋಟಿ ಹೆಚ್ಚಿದ್ದು ಅನ್ಯರಾಜ್ಯಗಳು ಕೈಗಾರಿಕೆಗಳನ್ನು ತಮ್ಮತ್ತ ಸೆಳೆಯಲು ಕೈಗಾರಿಕೆ ನೀತಿ ಸಡಿಲಗೊಳಿಸಿದ್ದರಿಂದ ಹಲವು ಕಂಪನಿಗಳು ವಲಸೆ ಹೋದವು' ಎನ್ನುತ್ತಾರೆ ಸುದೀರ್ಘ ಅವಧಿಗೆ ಬೃಹತ್ ಕೈಗಾರಿಕೆ ಸಚಿವರಾಗಿದ್ದ, ಹಳಿಯಾಳ ಶಾಸಕ ಆರ್.ವಿ.ದೇಶಪಾಂಡೆ.

ಇಲ್ಲಿ ಕಚೇರಿ, ಹೊರ ರಾಜ್ಯದಲ್ಲಿ ಕೈಗಾರಿಕೆ!

ಕರ್ನಾಟಕದಲ್ಲಿ ಕಚೇರಿ ಮಾಡಿ, ಹೊರರಾಜ್ಯಗಳಲ್ಲಿ ಉತ್ಪಾದನಾ ಘಟಕ ಹೊಂದಿರುವ ಕಂಪನಿಗಳು ಸಾಕಷ್ಟಿವೆ. ಕರ್ನಾಟಕಕ್ಕಿಂತ ನೆರೆಯ ರಾಜ್ಯಗಳಲ್ಲಿ ಕೈಗಾರಿಕೆ ಸ್ನೇಹಿ ವಾತಾವರಣ ಇರುವುದು ಇಂತಹ ನಿರ್ಧಾರದ ಅನಿವಾರ್ಯತೆ ಸೃಷ್ಟಿಸಿದೆ ಎಂಬುದು ಉದ್ಯಮಿಗಳ ವಾದ.

ವಿದ್ಯುತ್ ಚಾಲಿತ ಸ್ಕೂಟರ್ ತಯಾರಿಕಾ ಕಂಪನಿ, 'ಏಥರ್ ಎನರ್ಜಿ' ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿದೆ. ಇಲ್ಲಿಯೇ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರ, ಮಧ್ಯಮ ಮಟ್ಟದ ತಯಾರಿಕಾ ಘಟಕ ಹೊಂದಿರುವ ಕಂಪನಿಯು ಈಚೆಗೆ ಮಹಾರಾಷ್ಟ್ರದಲ್ಲಿ ಬೃಹತ್ ತಯಾರಿಕಾ ಘಟಕವನ್ನು ಸ್ಥಾಪಿಸಿದೆ. ಮಹಾರಾಷ್ಟ್ರ ಸರ್ಕಾರವು ಕಡಿಮೆ ದರದಲ್ಲಿ ಭೂಮಿ ಒದಗಿಸಿದೆ ಮತ್ತು ಹೆಚ್ಚಿನ ಮಟ್ಟದ ತೆರಿಗೆ ವಿನಾಯತಿ ನೀಡಿದೆ. 'ಓಲಾ' ಕಂಪನಿ ಕೂಡ ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿದ್ದರೂ ತಮಿಳುನಾಡಿನ ಹೊಸೂರಿಗೆ ಹೊಂದಿಕೊಂಡಂತೆ ವಿದ್ಯುತ್ ಚಾಲಿತ ಸ್ಕೂಟರ್ ತಯಾರಿಕಾ ಘಟಕ 'ಗಿಗಾ ಫ್ಯಾಕ್ಟರಿ'ಯನ್ನು ಆರಂಭಿಸಿದೆ. ಘಟಕದ ವಿಸ್ತರಣೆ ಕಾರ್ಯವೂ ನಡೆದಿದೆ.

'ಕೈಗಾರಿಕಾ ಭೂಮಿಯ ಬೆಲೆ ಕರ್ನಾಟಕಕ್ಕಿಂತ ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರದಲ್ಲಿ ಕಡಿಮೆ ಇದೆ. ಆ ರಾಜ್ಯಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು ಅತ್ಯಂತ ತ್ವರಿತವಾಗಿ ನಡೆಸಿ, ಉದ್ಯಮಿಗಳಿಗೆ ಹಸ್ತಾಂತರಿಸಲಾಗುತ್ತದೆ. ಕೈಗಾರಿಕಾ ನಿವೇಶನ ಹಸ್ತಾಂತರಕ್ಕೂ ಮುನ್ನವೇ ಬಹುತೇಕ ಮೂಲಸೌಕರ್ಯಗಳನ್ನು ಒದಗಿಸಿರುತ್ತಾರೆ. ಇವೆಲ್ಲದರ ಪರಿಣಾಮವಾಗಿ ಉದ್ಯಮಗಳು ಕರ್ನಾಟಕಕ್ಕಿಂತ, ಈ ರಾಜ್ಯಗಳನ್ನೇ ಹೂಡಿಕೆಗೆ ಆಯ್ಕೆ ಮಾಡಿಕೊಳ್ಳುತ್ತಿವೆ' ಎನ್ನುತ್ತಾರೆ ಎಫ್‌ಕೆಸಿಸಿಐ ಹಿಂದಿನ ಅಧ್ಯಕ್ಷರೊಬ್ಬರು.

'ಬಿಡದಿ ಘಟಕದಲ್ಲಿ ಬೇರೆ–ಬೇರೆ ಕಾರಣಗಳಿಗೆ ವರ್ಷವೊಂದರಲ್ಲಿ ಹಲವು ದಿನ ಕೆಲಸ ನಡೆಯುವುದೇ ಇಲ್ಲ. ಇಂತಹ ಬೆಳವಣಿಗೆಯನ್ನು ವಿದೇಶಿ ಹೂಡಿಕೆದಾರರು ಗಮನಿಸುತ್ತಿರುತ್ತಾರೆ. ಈ ಕಾರಣದಿಂದಲೇ ಹೊಸ ತಯಾರಿಕಾ ಘಟಕಗಳು ಕರ್ನಾಟಕಕ್ಕೆ ಬಂದಿಲ್ಲ' ಎನ್ನುತ್ತಾರೆ.

'ಕೆಲ ವರ್ಷಗಳ ಹಿಂದೆ ಕರ್ನಾಟಕದಲ್ಲಿ ಹೀರೊ ಮೋಟೊಕಾರ್ಪ್ ದ್ವಿಚಕ್ರ ತಯಾರಿಕಾ ಘಟಕ ಆರಂಭಿಸುವ ಸಂಬಂಧ ಮಾತುಕತೆಯೂ ನಡೆದಿತ್ತು. ಕಂಪನಿ ಕೇಳಿದಷ್ಟು ವಿನಾಯತಿಯನ್ನು ಕರ್ನಾಟಕ ಸರ್ಕಾರ ನೀಡಲಿಲ್ಲ. ಈ ವಿಚಾರದಲ್ಲಿ ಕಂಪನಿ ಮತ್ತು ಸರ್ಕಾರ ವರ್ಷ ಕಾಲ ಜಗ್ಗಾಡಿದವು. ಇದೇ ಅವಕಾಶ ಬಳಸಿಕೊಂಡು ತೆಲಂಗಾಣ ಮತ್ತು ಆಂಧ್ರ ಪ್ರದೇಶ ಸರ್ಕಾರ ವಿಪರೀತ ಎನಿಸುವಷ್ಟು ರಿಯಾಯತಿ ಘೋಷಿಸಿದವು. ಕಡೆಗೆ ಹೀರೋ ಮೋಟೊಕಾರ್ಪ್ ತಯಾರಿಕಾ ಘಟಕ ಆಂಧ್ರ ಪ್ರದೇಶದ ಪಾಲಾಯಿತು' ಎಂದು ವಿವರಿಸಿದರು.

'ಸವಾಲುಗಳ ಕಾರಣದಿಂದ ಹಿಂದೇಟು'

'ಹೊಸ ಉದ್ಯಮ ಸ್ಥಾಪಿಸಬೇಕಾದರೆ ವಿವಿಧ ಇಲಾಖೆಗಳ ಅನುಮತಿ ಬೇಕು. ಈ ಇಲಾಖೆಗಳಿಗೆ ಅಲೆದಾಡಿ ಅನುಮತಿ ಪಡೆಯಲು 1 ವರ್ಷ ಬೇಕು. ಹೀಗಾದರೆ, ಉದ್ಯಮಗಳು ರಾಜ್ಯದಲ್ಲಿ ಸ್ಥಾಪಿಸುವುದು ಯಾವಾಗ ಮತ್ತು ಹೇಗೆ? ಉದ್ಯಮ ಸ್ಥಾಪನೆಗೆ ಹಣಕಾಸಿನ ನೆರವು ಸಿಗುವುದಿಲ್ಲ. ಕೃಷಿ ಭೂಮಿಯನ್ನು ಕೈಗಾರಿಕಾ ಉದ್ದೇಶಕ್ಕೆ ಬಳಸಲು ಪರಿವರ್ತಿಸುವಂತೆ ಮನವಿ ಸಲ್ಲಿಸಿ, ಶುಲ್ಕ ಕಟ್ಟಿದರೂ ಪ್ರಯೋಜನ ಆಗುತ್ತಿಲ್ಲ. ಮೂಲಸೌಲಭ್ಯದ ಕೊರತೆ ಇದೆ' ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಅಧ್ಯಕ್ಷ ಎಂ.ಜಿ. ಬಾಲಕೃಷ್ಣ ತಿಳಿಸಿದರು.

'ಸಾಫ್ಟ್‌ವೇರ್ ಕ್ಷೇತ್ರಕ್ಕೆ ಸರ್ಕಾರ ನೀಡುತ್ತಿರುವ ಸೌಲಭ್ಯಗಳಿಂದ ಪ್ರಸ್ತುತ ಜಿಎಸ್‌ಟಿ ಸಂಗ್ರಹದಲ್ಲಿ ರಾಜ್ಯವು ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ. ಮೊದಲ ಸ್ಥಾನದಲ್ಲಿರುವ ರಾಜ್ಯದ ಜಿಎಸ್‌ಟಿ ಸಂಗ್ರಹಕ್ಕೆ ಹೋಲಿಸಿದರೆ ನಮ್ಮದು ಕಡಿಮೆ. ಸರ್ಕಾರವು ರಾಜ್ಯದ ಇತರ ಕೈಗಾರಿಕೆಗಳಿಗೂ ಸೌಲಭ್ಯ ಕಲ್ಪಿಸಿದರೆ ಮೊದಲ ಸ್ಥಾನಕ್ಕೆ ತಲುಪಲಿದೆ. ರಾಜ್ಯದಲ್ಲಿ ಕಾರ್ಮಿಕರಿಗೆ ಕನಿಷ್ಠ ವೇತನ ₹15,800 ಇದೆ. ಇದನ್ನು ಅಂದಾಜು ₹26 ಸಾವಿರಕ್ಕೆ ಹೆಚ್ಚಿಸಬೇಕು ಎನ್ನುತ್ತಿದ್ದಾರೆ' ಎಂದು ಅವರು ವಿವರಿಸಿದರು.

'ಪಕ್ಕದ ಆಂಧ್ರಪ್ರದೇಶ, ತೆಲಂಗಾಣ ಮತ್ತು ತಮಿಳುನಾಡಿನಲ್ಲಿ ಕನಿಷ್ಠ ವೇತನ ರಾಜ್ಯಕ್ಕಿಂತಲೂ ಕಡಿಮೆ ಇದೆ. ಈ ರೀತಿ ವೇತನ ಹೆಚ್ಚಳದಿಂದ ತಯಾರಿಕಾ ವೆಚ್ಚವು ಹೆಚ್ಚಳವಾಗುತ್ತದೆ. ಇದು ಅಂತಿಮವಾಗಿ ವಸ್ತುಗಳ ಬೆಲೆ ಏರಿಕೆಗೆ ಕಾರಣವಾಗುತ್ತದೆ. ಇಂದು ಜಾಗತಿಕ ಮಾರುಕಟ್ಟೆಯಲ್ಲಿ ತೀವ್ರ ಸ್ಪರ್ಧೆ ಇದೆ. ಬೇರೆ ರಾಜ್ಯಗಳು ಕಡಿಮೆ ದರಕ್ಕೆ ಸರಕು ನೀಡುತ್ತಿರುವಾಗ, ನಮ್ಮದು ಹೆಚ್ಚಿದ್ದರೆ ಖರೀದಿಗೆ ಜನ ಹಿಂಜರಿಯುತ್ತಾರೆ' ಎನ್ನುತ್ತಾರೆ ಅವರು.

'ಉದ್ಯಮ ಸ್ಥಾಪನೆಗೆ ರಾಜ್ಯದಲ್ಲಿ ಸವಾಲುಗಳಿರುವುರಿಂದ ಬೆಂಗಳೂರಿಗೆ ಸನಿಹದಲ್ಲೇ ಇರುವ ಆಂಧ್ರಪ್ರದೇಶದ ಪೆನುಕೊಂಡ ಮತ್ತು ಹಿಂದೂಪುರ, ತಮಿಳುನಾಡಿನ ಹೊಸೂರು ಉದ್ಯಮಗಳನ್ನು ಆಕರ್ಷಿಸುತ್ತಿವೆ. ಅಲ್ಲಿನ ಸರ್ಕಾರಗಳು ಉದ್ಯಮಕ್ಕೆ ಪೂರಕವಾದ ಸವಲತ್ತು ಕಲ್ಪಿಸುತ್ತಿದೆ' ಎಂದರು.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 5-10-2000

● ನೋಟಿಸ್ ಇಲ್ಲದೆ ಸಹಕಾರ ಸಂಸ್ಥೆಗಳ ರದ್ದತಿಗೆ ನಿರ್ಧಾರ

ಬೆಂಗಳೂರು, ಅ.4 – ಸಹಕಾರ ಸಂಸ್ಥೆಗಳ ಆಡಳಿತ ಮಂಡಲಿಗಳನ್ನು ಯಾವುದೇ ನೋಟಿಸ್ ನೀಡದೆ ರದ್ದುಪಡಿಸಲು ಸರ್ಕಾರಕ್ಕೆ ಅಧಿಕಾರ ನೀಡಲು ಕರ್ನಾಟಕ ಸಹಕಾರ ಕಾಯ್ದೆ 30ನೇ ವಿಧಿಗೆ ತಿದ್ದುಪಡಿ ತರಲು ರಾಜ್ಯ ಸಚಿವ ಸಂಪುಟ ಇಂದು ನಿರ್ಧರಿಸಿದೆ.

ಸಹಕಾರ ಸಂಘಗಳ ರಿಜಿಸ್ಟ್ರಾರ್ ವರದಿಯ ಆಧಾರದ ಮೇಲೆ ಸರ್ಕಾರ ಆಡಳಿತ ಮಂಡಲಿಗಳನ್ನು ರದ್ದುಪಡಿಸಬಹುದಾಗಿದೆ ಎಂದು ವಾರ್ತಾ ಸಚಿವ ಪ್ರೊ.ಬಿ.ಕೆ.ಚಂದ್ರಶೇಖರ್ ಸಂಪುಟ ಸಭೆಯ ನಂತರ ಸಂಜೆ ವರದಿಗಾರರಿಗೆ ತಿಳಿಸಿದರು.

75 ವರ್ಷಗಳ ಹಿಂದೆ

ಗುರುವಾರ, 5-10-1950

● ನೈಜ ಸಮಸ್ಯೆಗಳ ಕಡೆ ಜಡರಹಿತ ಮನ ಹರಿಸಿ

ಲಕ್ನೋ, ಅ.4: ಕಾಂಗ್ರೆಸ್ ಸಂಸ್ಥೆಯನ್ನು ಪ್ರಬಲಗೊಳಿಸುವ ಅತ್ಯಗತ್ಯತೆ ಇಂದಿರುವಷ್ಟು ಹಿಂದೆಂದೂ ಇರಲಿಲ್ಲ ಎಂಬುದಾಗಿ ಪ್ರಧಾನಿ ಪಂಡಿತ್ ಜವಾಹರ ಲಾಲ್ ನೆಹರೂರವರು ಉತ್ತರ ಪ್ರದೇಶದ ಶಾಸನ ಸಭೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಉದ್ದೇಶಿಸಿ ಹೇಳಿದರು.

ಕಾಂಗ್ರೆಸ್ ಜನರ ಪ್ರೀತಿ ಕಳೆದುಕೊಂಡು ದೇಶಕ್ಕೆ ಸೂಕ್ತ ದಾರಿ ತೋರಿಸಲು ಅಶಕ್ತವಾದರೆ ಅತ್ಯಂತ ಅಪಾಯಕಾರಿ ಪರಿಸ್ಥಿತಿ ಬಂದೊದಗಬಹುದು ಎಂದು ನೆಹರೂ ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

05 ಅಕ್ಟೋಬರ್ 2025 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ತ್ರಯೋದಶಿ ಗಂ. 15-04 ನಕ್ಷತ್ರ: ಶತಭಿಷ ಗಂ. 8-01, ಯೋಗ: ಗಂಡ ಗಂ. 16-34 ಕರಣ: ತೈತಿಲ ಗಂ. 15-04 ಕನ್ಯಾ ಮಾಸದ 18 ನೇ ದಿನ. ಮಳೆ ನಕ್ಷತ್ರ : ಹಸ್ತಾ 3 ನೇ ಪಾದ. ರಾಹುಕಾಲ : ಸಾಯಂಕಾಲ 04-30ರಿಂದ 06-00 ಸೂರ್ಯೋದಯ : 06-24 ಸೂರ್ಯಾಸ್ತ : 06-14 ಮುಸ್ಲಿಂ ದಿನಾಂಕ : 12 ರಬಿಯುಸ್ಸಾನಿ ಅದೃಷ್ಟ ಸಂಖ್ಯೆ : 11, 12

ಮೇಷ: ಕುಟುಂಬದ ಬಗ್ಗೆ ಯಕ್ಷಪ್ರಶ್ನೆಯೇ ಆಗಿ ಉಳಿದಿದ್ದ ಪ್ರಶ್ನೆಗಳಿಗೆ ಉತ್ತರ ದೊರೆಯುತ್ತದೆ. ಧಾರ್ಮಿಕ ಕ್ಷೇತ್ರಗಳ ಭೇಟಿ, ದೇವರ ದರ್ಶನ ಸಾಧ್ಯವಾಗುತ್ತದೆ. ವಿದ್ಯಾಭ್ಯಾಸದ ಸಮಯದಲ್ಲಿ ಏಕಾಗ್ರತೆ ಮುಖ್ಯವಾಗುತ್ತದೆ.

ವೃಷಭ: ಜನರಿಂದ ಪ್ರಯೋಜನ ಪಡೆದುಕೊಳ್ಳುವ ಸಲುವಾಗಿ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ಮರ ಹತ್ತಿ ಕೆಲಸ ಮಾಡುವವರು, ಎತ್ತರದಲ್ಲಿ ಕೆಲಸ ನಿರ್ವಹಿಸುವವರು ಇಂದು ಹೆಚ್ಚಿನ ಜಾಗ್ರತೆ ವಹಿಸಿ.

ಮಿಥುನ: ಕೆಲಸಕ್ಕಾಗಿ ಕುಟುಂಬದವರನ್ನು ಬಿಟ್ಟು ವಿದೇಶಕ್ಕೆ ಅಥವಾ ಪರಸ್ಥಳಕ್ಕೆ ಹೋಗುವುದು ಅನಿವಾರ್ಯವಾಗಲಿದೆ. ಆಹಾರ ಪಥ್ಯದ ವಿಚಾರದಲ್ಲಿ ಮನಸ್ಸನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದು ಕಷ್ಟಕರವೆನಿಸಲಿದೆ.

ಕರ್ಕಾಟಕ: ನಿಯಮಿತವಾದ ಯೋಗಾಸನ ಹಾಗೂ ಪ್ರಾಣಾಯಾಮದ ಅಭ್ಯಾಸದಿಂದಾಗಿ ಈ ದಿನ ಲವಲವಿಕೆಯಿಂದಿರುವಿರಿ. ನಿರ್ಜಲೀಕರಣದಿಂದ ನಿಮ್ಮ ಚರ್ಮವು ಸುಕ್ಕುಗಟ್ಟಿದಂತಾಗಬಹುದು, ಎಚ್ಚರವಹಿಸಿರಿ.

ಸಿಂಹ: ಕೊಟ್ಟ ಮಾತಿನಂತೆ ನಡೆದುಕೊಳ್ಳಲಾಗದಿರುವುದು ನಿಮ್ಮ ಮನಸ್ಸಿಗೆ ನೋವುಂಟುಮಾಡಬಹುದು. ಸುಸ್ಥಿರವಾಗಿರುವ ನಿಮ್ಮ ಆಸ್ತಿಯ ಮೇಲೆ ಇತರರ ಕಣ್ಣು ಬೀಳದಂತೆ ಎಚ್ಚರವಹಿಸುವುದು ಅಗತ್ಯ.

ಕನ್ಯಾ: ಮಕ್ಕಳ ಸಹಕಾರದಿಂದ ಕೆಲಸಗಳು ಅಚ್ಚುಕಟ್ಟಾಗಿ ಮುಗಿಯುವುದು. ತಂದೆ-ತಾಯಿಯ ಆತ್ಮೀಯತೆಯ ಕೆಲ ಬುದ್ಧಿ ಮಾತುಗಳನ್ನು ತಪ್ಪಾಗಿ ಅರ್ಥೈಸಿಕೊಳ್ಳುವುದು ಸರಿಯಲ್ಲ. ಹಿರಿಯರನ್ನು ಗೌರವಿಸಿ.

ತುಲಾ: ನಿಮ್ಮ ಆದರ್ಶಗಳನ್ನೆ ದರ್ಪಣದಂತೆ ಅನುಸರಿಸುತ್ತಿರುವ ಸಂತತಿಯನ್ನು ಕಂಡು ಹೆಮ್ಮೆ ಎನಿಸುತ್ತದೆ. ಬಟ್ಟೆ ಅಂಗಡಿಯವರಿಗೆ ಇಂದು ಲಾಭದಾಯಕ ದಿನವಾಗಲಿದೆ. ನಿಮ್ಮ ಪರಿಶ್ರಮಕ್ಕೆ ತಕ್ಕ ಫಲ ದೊರಕಿ ಸಂತಸ ಹೊಂದುವಿರಿ.

ವೃಶ್ಚಿಕ: ಸಂಬಂಧಿಕರ ಅಥವಾ ಅಕ್ಕಪಕ್ಕದವರ ಕೆಲವು ಮಾತುಗಳು ನಿಮ್ಮ ದಾಂಪತ್ಯದಲ್ಲಿ ಬಿರುಕನ್ನು ಮೂಡಿಸಲಿದೆ. ಲೇವಾದೇವಿ ವ್ಯವಹಾರದವರಿಗೆ ಸಾಲ ವಸೂಲಿ ಕಾರ್ಯಕ್ರಮಕ್ಕೆ ಹಲವಾರು ಅಡ್ಡಿ ಆತಂಕಗಳು ಎದುರಾಗುತ್ತವೆ.

ಧನು: ವಿದ್ಯಾರ್ಥಿಗಳು ನಿಮ್ಮ ಹಟ ಹಾಗು ಸೋಂಬೇರಿತನವನ್ನು ಬಿಟ್ಟು ಅಧ್ಯಯನವನ್ನು ಮಾಡಿದರೆ ಶ್ರೇಯಸ್ಸು ಸಾಧ್ಯ. ಅಪರಿಚಿತರಿಂದ ಅನಿರೀಕ್ಷಿತ ಉಡುಗೊರೆ ದೊರೆಯುವ ಸಂಭವವಿದೆ.

ಮಕರ: ನಿಮ್ಮ ಸಂತೋಷವನ್ನು ಹೆಚ್ಚಿಸಲು ನಿಮ್ಮ ಸೋದರ ಸಂಬಂಧಿಗಳು ವಿಶೇಷ ಪ್ರಯತ್ನ ಮಾಡುವರು. ನಿಮಗೆ ಎಷ್ಟೇ ಒತ್ತಡವಿದ್ದರು ಸಹ ಮುಖದಲ್ಲಿನ ನಗುವು ಮಾಸದೇ ಇರಲಿ. ವಿಷ ಅನಿಲದ ಭೀತಿ ಇರಬಹುದು.

ಕುಂಭ: ಕುಟುಂಬದ ಹಿರಿಯರ ಮುಖದರ್ಶನ ಮತ್ತು ಆಶೀರ್ವಾದದಿಂದ ನಿಮ್ಮ ಮನಸ್ಸು ಪ್ರಫುಲ್ಲವಾಗುತ್ತದೆ. ನಿಮ್ಮ ಅತಿಯಾದ ನಿರ್ಲಕ್ಷ್ಯತನದ ಬುದ್ಧಿಯು ನಿಮ್ಮ ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರುವ ಸಾಧ್ಯತೆ ಇದೆ.

ಮೀನ: ನಿರಂತರವಾಗಿ ನಿಮ್ಮ ಬದುಕಿನಲ್ಲಿ ಆಗುತ್ತಿರುವ ಎಡವಟ್ಟುಗಳು ಸಂಗಾತಿಯ ಮಾತುಗಳನ್ನು ನೆನಪಿಸುತ್ತದೆ. ಸ್ವತ್ತುಗಳ ವಿಚಾರದಲ್ಲಿ ಬಂಧುಗಳು ನೆರವಿಗೆ ಬರಲಿದ್ದು, ತಂದೆಯ ಮಾತಿನಂತೆಯೇ ನಡೆಯಲು ತೀರ್ಮಾನಿಸಿ.

ಪದಬಂಧ 6184

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇತರರನ್ನು ಅವಲಂಬಿಸದೇ ಇರುವುದು (5)
3.ವ್ಯಾಕರಣದಲ್ಲಿ ಗಂಡು ಜಾತಿಯನ್ನು ಸೂಚಿಸುವ ಶಬ್ದ (3)
5.ತೆಳುವಾಗಿ ಬಡಿದ ಲೋಹದ ಹಾಳೆ (3)
7.ಜಳಕ ಎಂದಿದ್ದಕ್ಕೇ ಈ ರೋಮಾಂಚನ! (3)
9.ಸುಮ್ಮನೆ ನೋಡಿದಾಗ ಗೃಹ ಕಾಣುತ್ತಿದೆಯಲ್ಲ! (2)
10. ಕಬ್ಬಿಣದ ಭಾರೀ ಪೆಟ್ಟಿಗೆ (3)
11.ಈಕೆ ಮಾವನ ಹೆಂಡತಿ (2)
13.ಜಗಳಕ್ಕೊಂದು ಪರ್ಯಾಯ ಪದ (3)
15.ಸರಕ್ಕನೆ ಹೋಗಿ ತಂದಿರುವ ಸಾಮಾನು (3)
17.ಹಳೆಯ ಸಾಮಾನುಗಳನ್ನು ಮಾರುವ ಸ್ಥಳ (3)
18.ತೆನಾಲಿರಾಮನಿಗಿದ್ದ ಬಿರುದು (5)

ಮೇಲಿಂದ ಕೆಳಕ್ಕೆ

1.ಆದರದಿಂದ ಬರಮಾಡಿಕೊಳ್ಳುವುದು (3)
2.ಒನಪು ತೋರಿದಾಗ ಬಂದಿರುವ ಸ್ಮರಣೆ (3)
3.ಮಸ್ತಕದ ಹತ್ತಿರವಿರುವ ಹೊತ್ತಗೆ (3)
4. ಧ್ವನಿಯ ನಡುಕ (3)
6.ಗಟ್ಟಿಯಾದ ಕೂಗು (3)
8.ಕಳವಳದಿಂದ ತಿಂದಿರುವ ತುತ್ತು ಉಲ್ಟಾ ಆಗಿದೆ (3)
10.ಕುಲದ ಕೊನೆಗಿರುವ ಸಮೂಹ (3)
11.ಮಧುರವಾದ ತುಟಿ (3)
12.ಗುಡಿಸಲ ಹತ್ತಿರವಿದ್ದಾಗ ಕೇಳಿಸಿದ ಮೇಘಧ್ವನಿ (3)
13.ಕರಿಯಲ್ಲಿರುವ ಸುಗಂಧ ದ್ರವ್ಯ (3)
14.ಮಣ್ಣಿನ ಬಾನಿ (3)
16.ಕೂಸಿನ ತಲೆಗೆ ಕಟ್ಟುವ ಟೊಪ್ಪಿಗೆ (3)

1				2	■	3		4
	■	■	■		■		■	
5	6		■	7	8		■	
■		■	■	■		■	■	■
9		■	10			■	11	
■	■	■		■	■	■		■
12	■	13		14	■	15		16
	■		■		■	■	■	
17			■	18				

6183ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕೋಲಾರ 3.ಹಗಲು 6.ಸಮರ 7.ಮಾವುತ 8.ಕೆಸರು 11.ಅರಾಜಕತೆ 14.ಪರಿಧಿ 17.ಸಂಭವ 18.ಮಾತುಲ 19.ನಸುಕು 20.ಗರಗ

ಮೇಲಿಂದ ಕೆಳಕ್ಕೆ: 1.ಕೋಶಾಧ್ಯಕ್ಷ 2.ರಸನ 3.ಹರಕೆ 4.ಉಮಾರು 5.ಮಂತಣ 9.ಸವಕಲು 10.ತರಾತುರಿ 12.ಚದುರಂಗ 13.ವ್ಯಾಸಂಗ 14.ಪವನ 15.ಧಿಮಾಕು 16.ಓಲಗ

ಸುಡೊಕು 6568

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4		1		8				
	7		1		6			
3		5		2			8	
	8	7					1	
		4	7	6	3	8		9
5	9						7	
		2		7		1		5
1			2		5		9	
	5			4		2		8

6567 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಆನ್‌ಲೈನ್ ಸಮೀಕ್ಷೆ: ಹೀಗಿದೆ ಹಾದಿ...

ಸಮೀಕ್ಷಕರಿಗೆ ಕಾಯದೆ ನಾಗರಿಕರೆ ವಿವರ ದಾಖಲಿಸಲು ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆಗಾಗಿ ಸಮೀಕ್ಷಕರು ಮನೆಗೆ ಯಾವಾಗ ಬರುತ್ತಾರೆ ಎಂದು ಕಾಯಬೇಕಿಲ್ಲ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು, ಸಾರ್ವಜನಿಕರು ಸ್ವತಃ ತಾವೇ ಸಮೀಕ್ಷೆಯ ವಿವರಗಳನ್ನು ಆನ್‌ಲೈನ್ ಪೋರ್ಟಲ್ ಮೂಲಕ ದಾಖಲಿಸಲು ಅವಕಾಶ ಮಾಡಿಕೊಟ್ಟಿದೆ.

https://kscbcselfdeclaration.karnataka.gov.in/ ಪೋರ್ಟಲ್‌ನಲ್ಲಿ ರಾಜ್ಯದ ನಿವಾಸಿಗಳು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ತಮ್ಮ ವಿವರಗಳನ್ನು ದಾಖಲಿಸಬಹುದಾಗಿದೆ. ಸ್ಮಾರ್ಟ್‌ಫೋನ್ ಬ್ರೌಸರ್, ಡೆಸ್ಕ್‌ಟಾಪ್ ಅಥವಾ ಲ್ಯಾಪ್‌ಟಾಪ್ ಬ್ರೌಸರ್‌ನಲ್ಲಿ ಈ ಪೋರ್ಟಲ್ ಕಾರ್ಯನಿರ್ವಹಿಸಲಿದೆ.

ಪೋರ್ಟಲ್‌ಗೆ ಭೇಟಿ ನೀಡಿದ ತಕ್ಷಣ ಸಮೀಕ್ಷಕರೆ ಅಥವಾ ನಾಗರಿಕರೆ ಎಂದು ಕೇಳಲಾಗುತ್ತದೆ. ಸಾರ್ವಜನಿಕರು 'ನಾಗರಿಕ' ಎಂಬುದನ್ನು ಆಯ್ಕೆ ಮಾಡಿ, ಮೊಬೈಲ್ ಸಂಖ್ಯೆ ನೀಡಬೇಕು. ಆನಂತರ ಮೊಬೈಲ್ ಸಂಖ್ಯೆಗೆ ಬರುವ ಒಟಿಪಿ (ಒನ್ ಟೈಂ ಪಾಸ್‌ವರ್ಡ್) ನಮೂದಿಸಿ, ಪೋರ್ಟಲ್‌ಗೆ ಲಾಗಿನ್ ಆಗಬಹುದು. ಅಲ್ಲಿಂದ ಸಮೀಕ್ಷೆ ಆರಂಭವಾಗಲಿದೆ.

ನಾಗರಿಕರು ತಮ್ಮ ಮನೆಗೆ ನೀಡಿರುವ ಯುಎಚ್‌ಐಡಿ ಸಂಖ್ಯೆಯನ್ನು ನಮೂದಿಸಬೇಕು. ಸಮೀಕ್ಷೆಯ ಮೊದಲ ಹಂತದಲ್ಲಿ ಎಸ್ಕಾಂಗಳ ಮೀಟರ್ ರೀಡರ್‌ಗಳು ಒಂದು ಚೀಟಿ ಅಂಟಿಸಿರುತ್ತಾರೆ. ಅದರಲ್ಲಿ ಯುಎಚ್‌ಐಡಿ ಸಂಖ್ಯೆ ಇರುತ್ತದೆ. ಒಂದೊಮ್ಮೆ ಮೀಟರ್ ರೀಡರ್‌ಗಳು ಸಮೀಕ್ಷೆಯ ಸ್ಟಿಕ್ಕರ್ ಅಂಟಿಸದೇ ಇದ್ದರೆ, ಚಿಂತಿಸುವ ಅಗತ್ಯವಿಲ್ಲ. ಮನೆಯ ವಿದ್ಯುತ್ ಮೀಟರ್‌ನ ಖಾತೆ ಸಂಖ್ಯೆ (ಆರ್.ಆರ್. ಸಂಖ್ಯೆ ಅಲ್ಲ) ನಮೂದಿಸಿ, ಸಮೀಕ್ಷೆ ಮುಂದುವರೆಸಬಹುದು. ಮೊದಲ ಹಂತದಲ್ಲಿ ಸಮೀಕ್ಷೆಯಿಂದ ಬಿಟ್ಟುಹೋದ ಮನೆಗಳಲ್ಲಿ ವಾಸಿಸುತ್ತಿರುವವರೂ ತಮ್ಮ ವಿವರ ದಾಖಲಿಸಲು ಇದರಿಂದ ಸಾಧ್ಯವಾಗಲಿದೆ.

ಆನಂತರ, ನಾಗರಿಕರು ತಮ್ಮ ಆಧಾರ್ ಸಂಖ್ಯೆ ಅಥವಾ ಪಡಿತರ ಚೀಟಿಯ ಸಂಖ್ಯೆ ನಮೂದಿಸಬೇಕು. ಅವುಗಳೊಟ್ಟಿಗೆ ಇರುವ ಕುಟುಂಬದ ಸದಸ್ಯರ ವಿವರಗಳನ್ನು ದಾಖಲಿಸಬೇಕು. ಪಡಿತರ ಚೀಟಿಯಲ್ಲಿ ಕುಟುಂಬದ ಸದಸ್ಯರ ಹೆಸರು ಇಲ್ಲದೇ ಇದ್ದರೆ, ಅವರ ಆಧಾರ್ ಸಂಖ್ಯೆ ನಮೂದಿಸಿ ಅವರ ಹೆಸರನ್ನೂ ಸೇರಿಸಬಹುದು.

ಈ ಹಂತದಲ್ಲಿ ಕುಟುಂಬದ ಮುಖ್ಯಸ್ಥನ ಇ–ಕೆವೈಸಿ ದೃಢೀಕರಣ ಮಾಡಬೇಕು. ಇದಕ್ಕಾಗಿ ಆಧಾರ್ ಜತೆಗೆ ಜೋಡಣೆಯಾಗಿರುವ ಮೊಬೈಲ್ ಸಂಖ್ಯೆ ನಮೂದಿಸಿದರೆ, ಒಟಿಪಿ ಬರಲಿದೆ. ಒಟಿಪಿ ನಮೂದಿಸಿದ ನಂತರ ಇ–ಕೆವೈಸಿ ದೃಢೀಕರಣ ಮುಗಿಯಲಿದೆ.

ಹೀಗೆ ಹೆಸರುಗಳನ್ನು ಸೇರಿಸಿದ ನಂತರ ಧರ್ಮ, ಜಾತಿ, ಉಪಜಾತಿ, ಶೈಕ್ಷಣಿಕ, ಔದ್ಯೋಗಿಕ, ಆದಾಯ, ಚರಾಸ್ತಿ ಮತ್ತು ಸ್ಥಿರಾಸ್ತಿಗಳ ವಿವರ ದಾಖಲಿಸಬೇಕು. ಎಲ್ಲವೂ ಪೂರ್ಣಗೊಂಡ ನಂತರ, ಮಾಹಿತಿ ಸರಿಯಾಗಿದೆಯೇ ಎಂದು ಖಚಿತಪಡಿಸಿಕೊಳ್ಳಬೇಕು. ಮಾಹಿತಿ ಖಚಿತಪಡಿಸಿಕೊಂಡ ನಂತರ 'ಸಲ್ಲಿಸಿ' ಆಯ್ಕೆ ಮಾಡಿಕೊಂಡರೆ ವಿವರ ದಾಖಲೆ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ.

ಕೊನೆಯ ಹಂತದಲ್ಲಿ ನಾಗರಿಕರು ಸ್ವಯಂ ಘೋಷಣಾ ಪತ್ರ ಅಪ್‌ಲೋಡ್ ಮಾಡಬೇಕು. ಒಂದು ಬಿಳಿ ಹಾಳೆಯಲ್ಲಿ, 'ನಾನು ಈ ಸಮೀಕ್ಷೆಯಲ್ಲಿ ಸ್ವಯಂಪ್ರೇರಣೆಯಿಂದ ಭಾಗಿ ಆಗಿದ್ದೇನೆ ಮತ್ತು ನೀಡಿರುವ ಎಲ್ಲ ಮಾಹಿತಿ ನಿಜ ಮತ್ತು ಸರಿಯಾಗಿದೆ' ಎಂದು ಬರೆದು ಸಹಿ ಮಾಡಬೇಕು. ಅದನ್ನು ಫೋಟೊ ತೆಗೆದು, ಅಪ್‌ಲೋಡ್ ಮಾಡಬೇಕು. ಈ ಎಲ್ಲ ಪ್ರಕ್ರಿಯೆಯ ನಂತರ 'ಸಮೀಕ್ಷೆ ಪೂರ್ಣಗೊಂಡಿದೆ' ಎಂಬ ಸಂದೇಶ ಬಿತ್ತರವಾಗಲಿದೆ. ಜತೆಗೆ ಸಮೀಕ್ಷಾ ಅರ್ಜಿಯ ಸಂಖ್ಯೆಯೂ ಗೋಚರವಾಗಲಿದೆ.

ಸಾಮಾಜಿಕ– ಶೈಕ್ಷಣಿಕ ಸಮೀಕ್ಷೆಗೆ ನಾಗರಿಕರ ಲಾಗಿನ್

ಏನೆಲ್ಲಾ ತಯಾರಿ...

- ಮನೆಯ ವಿದ್ಯುತ್ ಮೀಟರ್‌ನ ಖಾತೆ ಸಂಖ್ಯೆ. ಪಡಿತರ ಚೀಟಿಯ ಸಂಖ್ಯೆ
- ಆಧಾರ್ ಸಂಖ್ಯೆ ಮತ್ತು ಅದಕ್ಕೆ ಜೋಡಣೆ ಮಾಡಿರುವ ಮೊಬೈಲ್ ಸಂಖ್ಯೆ. ಮೊಬೈಲ್ ಸಂಖ್ಯೆಯು ಚಾಲ್ತಿಯಲ್ಲಿರಬೇಕು
- ಕುಟುಂಬದ ಸದಸ್ಯರ ಶೈಕ್ಷಣಿಕ ಮತ್ತು ಆರ್ಥಿಕ ವಿವರ
- ಆಧಾರ್ ಇ–ಕೆವೈಸಿ ದೃಢೀಕರಣ ಸಾಧ್ಯವಾಗದೇ ಇದ್ದರೆ, CEG Face KYC ಅಪ್ಲಿಕೇಷನ್‌ನ ಮೂಲಕ ಫೇಸ್ ಕೆವೈಸಿ ದೃಢೀಕರಣ ಮಾಡಬೇಕಾಗುತ್ತದೆ. ಸಮೀಕ್ಷೆ ಆರಂಭಿಸುವುದಕ್ಕೆ ಮುನ್ನವೇ ಈ ಅಪ್ಲಿಕೇಷನ್ ಅನ್ನು ಡೌನ್‌ಲೋಡ್ ಮಾಡಿ, ಇನ್‌ಸ್ಟಾಲ್ ಮಾಡಿಕೊಳ್ಳುವುದು ಸೂಕ್ತ
- ಸ್ವಯಂಘೋಷಣಾ ಪತ್ರ ಬರೆಯಲು ಒಂದು ಬಿಳಿ ಹಾಳೆ ಮತ್ತು ಪೆನ್
- ಮೊಬೈಲ್ ನೆಟ್‌ವರ್ಕ್ ಲಭ್ಯವಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು

ತಾಂತ್ರಿಕ ತೊಂದರೆ

ಆನ್‌ಲೈನ್‌ನಲ್ಲಿ ಸಮೀಕ್ಷೆಗೆ ವಿವರ ದಾಖಲಿಸಲು ಮುಂದಾದ ನಾಗರಿಕರು ತಾಂತ್ರಿಕ ಸಮಸ್ಯೆ ಎದುರಿಸಿದ ಬಗ್ಗೆ ವರದಿಯಾಗಿದೆ. ಹಲವು ಬಾರಿ ಪ್ರಯತ್ನಿಸಿದರೂ ಪೋರ್ಟಲ್ ತೆರೆದುಕೊಳ್ಳುತ್ತಿಲ್ಲ ಎಂದು ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದಾರೆ. ಇನ್ನು ಕೆಲವರು ಆಧಾರ್ ಇ–ಕೆವೈಸಿ ದೃಢೀಕರಣ ಕೊಟ್ಟರೆ, ತೆಗೆದುಕೊಳ್ಳುತ್ತಿಲ್ಲ. ಬದಲಿಗೆ ಹಿಂದಿನ ವಿಂಡೋಗೆ ಬಂದು ನಿಲ್ಲುತ್ತಿದೆ ಎಂದು ದೂರಿದ್ದಾರೆ.

'ಸಮೀಕ್ಷೆಗೆ ಇಷ್ಟೊಂದು ಪ್ರಶ್ನೆಗಳೇಕೆ?'

ಒಂದನೇ ಪುಟದಿಂದ...

'ಇದು ತುಂಬಾ ಹೆಚ್ಚಾಯಿತು. ಹಳ್ಳಿಗಳ ಕಡೆ, ಕುರಿ–ಮೇಕೆ ಎಂದು ಕೇಳಿದರೆ ಪರವಾಗಿಲ್ಲ. ಆದರೆ, ನಗರಗಳಲ್ಲಿ, ಬೆಂಗಳೂರಿನಲ್ಲಿ ಸಮೀಕ್ಷೆ ಎಂಬುದು ತುಂಬಾ ಸೂಕ್ಷ್ಮ. ಇಷ್ಟೊಂದು ಪ್ರಶ್ನೆ ಕೇಳಿದರೆ ಜನರಿಗೆ ತಾಳ್ಮೆ ಇರುವುದಿಲ್ಲ' ಎಂದರು.

'ಜಿಬಿಎ ವ್ಯಾಪ್ತಿಯಲ್ಲಿ ಶನಿವಾರದಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಆರಂಭವಾಗಿದೆ. ನನ್ನ ಮನೆಯಲ್ಲೂ ಸಮೀಕ್ಷೆ ನಡೆಸಿದ್ದಾರೆ. ನಾನು ಎಲ್ಲಾ ಮಾಹಿತಿ ನೀಡಿದ್ದೇನೆ. ಸಾರ್ವಜನಿಕರು ಕೂಡ ತಾಳ್ಮೆಯಿಂದ ಮಾಹಿತಿ ಒದಗಿಸಬೇಕು. ಈ ಸಮೀಕ್ಷೆಗೆ ಎಲ್ಲಾ ಜಾತಿ ಸಮುದಾಯದವರು ಸಹಕಾರ ನೀಡಬೇಕು ಎಂದು ಮನವಿ ಮಾಡುತ್ತೇನೆ' ಎಂದರು.

'ಎಲ್ಲ ಸಮಾಜದ ಮುಂದಿನ ಪೀಳಿಗೆಗೆ ನ್ಯಾಯ ಒದಗಿಸಲು ಹಿಂದುಳಿದ ವರ್ಗಗಳ ಆಯೋಗದಿಂದ ನಡೆಸಲಾಗುತ್ತಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ಅಗತ್ಯ' ಎಂದರು.

'ಸಮೀಕ್ಷೆಯಲ್ಲಿ ಮಾಹಿತಿ ನೀಡಿದರೆ ಮತಾಂತರಕ್ಕೆ ಕಾರಣವಾಗಲಿದೆ ಎಂಬ ಬಿಜೆಪಿ ಹೇಳಿಕೆಗೆ 'ದೊಡ್ಡವರ ಬಗ್ಗೆ ನಾವೇನು ಮಾತಾಡೋದು' ಎಂದರು.

'ಉದ್ಭವಿಸುವುದಿಲ್ಲ' ಎಂದು ಹೇಳಲು ಸಲಹೆ

'ಎಲ್ಲ ಪ್ರಶ್ನೆಗಳಿಗೆ ಉತ್ತರ ನೀಡಲು ಬಲವಂತ ಮಾಡುವಂತಿಲ್ಲ ಎಂದು ನ್ಯಾಯಾಲಯ ಹೇಳಿದೆ. ಸಮೀಕ್ಷಕರು ಹಲವು ಪ್ರಶ್ನೆಗಳನ್ನು ಕೇಳುತ್ತಾರೆ. ಉತ್ತರ ನೀಡುವುದು ಜನರಿಗೆ ಬಿಟ್ಟ ವಿಚಾರ. ಅಂತಹ ಪ್ರಶ್ನೆಗಳಿಗೆ ಉದ್ಭವಿಸುವುದಿಲ್ಲ ಎನ್ನಬಹುದು' ಎಂದು ಶಿವಕುಮಾರ್ ಹೇಳಿದರು. ಕೆಲವು ವೈಯಕ್ತಿಕ ಮಾಹಿತಿ ಪ್ರಶ್ನೆಗಳಿವೆ ಎಂದು ಸುದ್ದಿಗಾರರು ಕೇಳಿದಾಗ, 'ಬೆಂಗಳೂರು ನಗರದಲ್ಲಿ ಸಮೀಕ್ಷೆ ಮಾಡುವಾಗ ಸೂಕ್ಷ್ಮತೆಯಿಂದ ಮಾಡಬೇಕು ಎಂದು ಸಮೀಕ್ಷಕರಿಗೆ ಹೇಳಿದ್ದೇನೆ' ಎಂದು ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದರು. 'ಸಮೀಕ್ಷೆಯಲ್ಲಿ ಎಲ್ಲರೂ ಭಾಗವಹಿಸಬೇಕು. ತಿಳಿವಳಿಕೆ ನೀಡಬೇಕಾದದ್ದು ನಮ್ಮ ಕರ್ತವ್ಯ. ನಾವದನ್ನು ಮಾಡುತ್ತೇವೆ. ಸರ್ವರ್ ಸಮಸ್ಯೆ ಸೇರಿದಂತೆ ಎಲ್ಲ ಸಮಸ್ಯೆಗಳನ್ನು ಅಧಿಕಾರಿಗಳು ಬಗೆಹರಿಸುತ್ತಾರೆ' ಎಂದರು.

ಸರ್ಬಿ: ಅತಿ ಕಡಿಮೆ ಜನಸಂಖ್ಯೆಯ ಜಾತಿ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ರಾಜ್ಯದಲ್ಲಿಯೇ ಅತ್ಯಂತ ಕಡಿಮೆ ಸಂಖ್ಯೆಯ ಜನರನ್ನು ಹೊಂದಿರುವ ರಾಜಸ್ಥಾನ ಮೂಲದ ಜಾತಿಯೊಂದು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವೇಳೆ ಪತ್ತೆಯಾಗಿದೆ. ಮೂಲದ ಪ್ರಕಾರ ರಾಜ್ಯದ ಬೇರೆ ಯಾವ ಜಿಲ್ಲೆಗಳಲ್ಲೂ ಈ ಜಾತಿಯ ಜನರು ಇಲ್ಲ ಎಂದು ಗೊತ್ತಾಗಿದೆ.

ಜಿಲ್ಲೆಯ ಮಂಚೇನಹಳ್ಳಿ ತಾಲ್ಲೂಕು ಕೇಂದ್ರದಲ್ಲಿ 'ಸರ್ಬಿ' ಜಾತಿಗೆ ಸೇರಿದ ಎರಡು ಕುಟುಂಬ ಸಮೀಕ್ಷೆಯಲ್ಲಿ ಕಂಡುಬಂದಿವೆ. ಈ ಎರಡು ಕುಟುಂಬಗಳಲ್ಲಿ ಒಟ್ಟು ಏಳು ಸದಸ್ಯರು ಇದ್ದಾರೆ.

ಜಿಲ್ಲೆಯಲ್ಲಿ ಅತ್ಯಂತ ಕಡಿಮೆ ಸಂಖ್ಯೆಯ ಜನರನ್ನು ಹೊಂದಿರುವ ಜಾತಿಯೂ ಇದಾಗಿದೆ. ಹಿಂದುಳಿದ ವರ್ಗಗಳ ಆಯೋಗವು ಹೊರಡಿಸಿರುವ ಸಮೀಕ್ಷೆಯ ಜಾತಿಗಳ ಪಟ್ಟಿಯಲ್ಲಿ 'ಸರ್ಬಿ' ಜಾತಿಯ ಹೆಸರು ಇಲ್ಲ.

ಈ ಜಾತಿ ಕೋಡ್ ಸಹ ಇಲ್ಲ. ಈ ಬಗ್ಗೆ ಮಾಹಿತಿ ನೀಡುವಂತೆ ಮತ್ತು ಯಾವ ಪಟ್ಟಿಯಲ್ಲಿ 'ಸರ್ಬಿ' ಜಾತಿ ನಮೂದಿಸಬೇಕು ಎಂದು ಜಿಲ್ಲಾಡಳಿತ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಆಯೋಗಕ್ಕೆ ಪತ್ರ ಬರೆದಿತ್ತು. ಆಯೋಗವು 'ಸರ್ಬಿ' ಜಾತಿಯನ್ನು ಇತರ ಕಾಲಂನಲ್ಲಿ ನಮೂದಿಸುವಂತೆ ತಿಳಿಸಿದೆ.

'ಸರ್ಬಿ ಜಾತಿ ರಾಜಸ್ಥಾನ ಮೂಲದ್ದು ಎನ್ನಲಾಗುತ್ತಿದೆ. ರಾಜ್ಯದ ಬೇರೆ ಯಾವ ಜಿಲ್ಲೆಗಳಲ್ಲಿ ಈ ಜಾತಿಯ ಜನರು ಇಲ್ಲ. ಸಮೀಕ್ಷೆ ಜಾತಿಯ ಪಟ್ಟಿಯಲ್ಲಿ ಇದರ ಹೆಸರು ಇರಲಿಲ್ಲ. ಈ ಬಗ್ಗೆ ಸರ್ಕಾರದ ಗಮನಕ್ಕೆ ತಂದೆವು. ಇತರೆ ಕಾಲಂನಲ್ಲಿ ನಮೂದಿಸಲು ತಿಳಿಸಿದ್ದಾರೆ' ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಮುನಿರತ್ನಮ್ಮ 'ಪ್ರಜಾವಾಣಿ'ಗೆ ತಿಳಿಸಿದರು. .

ಚಟಕ್ ಸುದ್ದಿ

ಕೈಗಾರಿಕೆಗಳಿಗೆ ನದಿ ನೀರು ಪೂರೈಕೆ: ಎಂ.ಬಿ.ಪಾಟೀಲ

ಬೆಂಗಳೂರು: 'ಕೈಗಾರಿಕಾ ಪ್ರದೇಶಗಳಿಗೆ ನದಿಗಳಿಂದ ನೀರು ಪೂರೈಸುವ ಕಾಮಗಾರಿ ಶೀಘ್ರ ಆರಂಭಿಸಲಾಗುವುದು. ಈ ಕೆಲಸವನ್ನು ಒಂದೂವರೆ ವರ್ಷದಲ್ಲಿ ಪೂರೈಸಬೇಕು' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಸೂಚಿಸಿದರು.

ಖನಿಜ ಭವನದಲ್ಲಿ ಶನಿವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಹುಬ್ಬಳ್ಳಿಯಲ್ಲಿರುವ ಸರ್ಕಾರಿ ಸ್ವಾಮ್ಯದ ಎನ್‌ಜಿಇಎಫ್ ಕಾರ್ಖಾನೆಯಿಂದ ರಾಜ್ಯದ ವಿದ್ಯುತ್ ನಿಗಮಗಳು ಖರೀದಿಸಿರುವ ವಿದ್ಯುತ್ ಪರಿವರ್ತಕಗಳ ಬಾಕಿ ₹8 ಕೋಟಿಯನ್ನು ತಕ್ಷಣವೇ ಪಾವತಿಸಬೇಕು. ಬೆಸ್ಕಾಂ, ಹೆಸ್ಕಾಂ, ಮೆಸ್ಕಾಂ, ಜೆಸ್ಕಾಂಗಳು ತಲಾ ₹2 ಕೋಟಿ ಬಾಕಿ ಉಳಿಸಿಕೊಂಡಿವೆ. ಕಾರ್ಖಾನೆ ಪುನಶ್ಚೇತನಕ್ಕೆ ಸರ್ಕಾರ ನಿರ್ಧರಿಸಿದ್ದು, ಬಾಕಿ ವಸೂಲಾತಿ ಸಮಸ್ಯೆಯಾಗಿದೆ ಎಂದರು.

ಬಿ.ಇಡಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಎರಡು ವರ್ಷಗಳ ಬಿ.ಇಡಿ ಕೋರ್ಸ್‌ನ 2025–26ನೇ ಸಾಲಿನ ಸರ್ಕಾರಿ ಕೋಟಾದ ಸೀಟುಗಳ ಪ್ರವೇಶಕ್ಕೆ ಶಾಲಾ ಶಿಕ್ಷಣ ಇಲಾಖೆಯ ಕೇಂದ್ರೀಕೃತ ದಾಖಲಾತಿ ಘಟಕ ಅರ್ಜಿ ಆಹ್ವಾನಿಸಿದೆ.

ವಿದ್ಯಾರ್ಥಿಗಳು ಅ.4ರಿಂದ ನ.3ರವರೆಗೆ ಇಲಾಖಾ ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ https://schooleducation.karnataka.gov.in ಸಂಪರ್ಕಿಸಬಹುದು ಎಂದು ಘಟಕದ ಜಂಟಿ ನಿರ್ದೇಶಕರು ಹೇಳಿದ್ದಾರೆ.

'ಗ್ರಾಮದನಿ'ಗೆ ಚಾಲನೆ

ಬೆಂಗಳೂರು: ಇಲಾಖೆಯ ಕಾರ್ಯಕ್ರಮ, ಯೋಜನೆ ಹಾಗೂ ಸರ್ಕಾರಿ ಮಾಹಿತಿಯನ್ನು ಸರಳವಾಗಿ ಜನರಿಗೆ ತಿಳಿಸುವ 'ಗ್ರಾಮದನಿ' ಪಾಡ್‌ಕಾಸ್ಟ್‌ಗೆ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಶನಿವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಪ್ರಿಯಾಂಕ್, ಆಡಳಿತವನ್ನು ಜನಸ್ನೇಹಿಯಾಗಿಸುವ ಪ್ರಯತ್ನದ ಭಾಗವಾಗಿ ಸರ್ಕಾರಿ ಪದಗಳನ್ನು ಸರಳವಾಗಿ ಜನರಿಗೆ ಅರ್ಥ ಮಾಡಿಸಲು ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ 'ಗ್ರಾಮದನಿ' ಸಿದ್ಧಪಡಿಸಿದೆ ಎಂದರು.

ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಶುಲ್ಕದ ನಿಯಮಗಳು ಸೇರಿದಂತೆ ಹಲವು ಉಪಯುಕ್ತ ಮಾಹಿತಿಗಳನ್ನು ಪ್ರಸಾರ ಮಾಡಲಾಗುತ್ತದೆ ಎಂದರು.

ಕಲ್ಲು ತೂರಾಟ: 11 ಜನ ವಶಕ್ಕೆ

ಬೆಳಗಾವಿ: ಇಲ್ಲಿ ಶುಕ್ರವಾರ ರಾತ್ರಿ ಮೆಹಬೂಬ್ ಸುಬಾನಿ ಉರುಸ್ ವೇಳೆ ಕಲ್ಲು ತೂರಾಟ ನಡೆದಿದ್ದು, ಪೊಲೀಸರು ಶನಿವಾರ 11 ಜನರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು.

ಪ್ರತಿ ವರ್ಷ ಉರುಸ್ ಶನಿವಾರ ಕೂಟ, ಜಾಲ್ಗಾರ ಗಲ್ಲಿ ಮೂಲಕ ಸಾಗಿ ದರ್ಗಾಕ್ಕೆ ಹೋಗುತ್ತಿತ್ತು. ಈ ವರ್ಷ ಅನುಮತಿ ಇಲ್ಲದೇ ಖಡಕ್ ಗಲ್ಲಿಗೆ ಮೆರವಣಿಗೆ ಬಂದಿದ್ದು, ಗಲಾಟೆಗೆ ಕಾರಣವಾಗಿದೆ.

ಮೆರವಣಿಗೆ ವೇಳೆ ಮುಸ್ಲಿಂ ಯುವಕರು 'ಐ ಲವ್ ಮುಹಮ್ಮದ್' ಎಂಬ ಘೋಷಣೆ ಕೂಗಿದರು. ಮೆರವಣಿಗೆ ಏಕೆ ಖಡಕ್ ಗಲ್ಲಿಗೆ ಬಂದಿದೆ ಎಂದು ಹಿಂದೂ ಯುವಕರು ಪ್ರಶ್ನೆ ಮಾಡಿದರು. ಆಗ ಕತ್ತಲಿನಿಂದ ಕಲ್ಲುಗಳು ತೂರಿಬಂದವು ಎಂದು ಹೇಳಲಾಗಿದೆ. ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನೆ

'ಮತಾಂತರಕ್ಕೆ ಪ್ರೋತ್ಸಾಹ ಹೇಗೆ?'

ಪ್ರಜಾವಾಣಿ ವಾರ್ತೆ

ಬೆಂಗಳೂರು/ ಬೆಳಗಾವಿ: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಿಂದ ಮತಾಂತರಕ್ಕೆ ಹೇಗೆ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂಬುದನ್ನು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಸ್ಪಷ್ಟಪಡಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದರು.

'ರಾಜ್ಯ ಸರ್ಕಾರದ ಜಾತಿಗಣತಿಯು ಹಿಂದೂಗಳನ್ನು ಮತಾಂತರಕ್ಕೆ ಪ್ರೋತ್ಸಾಹಿಸುತ್ತದೆ' ಎಂದು ಪ್ರಲ್ಹಾದ ಜೋಶಿ ಅವರು ಟೀಕಿಸಿದ್ದರು. ಇದಕ್ಕೆ, ಬೆಳಗಾವಿ ವಿಮಾನ ನಿಲ್ದಾಣದಲ್ಲಿ ಶನಿವಾರ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಜೋಶಿ ಅವರನ್ನು ಪ್ರಶ್ನಿಸಿದರು.

'ಜನರ ಸಾಮಾಜಿಕ ಮತ್ತು ಆರ್ಥಿಕ ವಿವರಗಳನ್ನು ಕಲೆ ಹಾಕುವುದರಿಂದ ಮತಾಂತರಕ್ಕೆ ಹೇಗೆ ಪ್ರೋತ್ಸಾಹ ನೀಡಿದಂತಾಗುತ್ತದೆ? ಜಾತಿಗಳನ್ನು ಹೇಗೆ ಒಡೆದಂತಾಗುತ್ತದೆ' ಎಂದೂ ಅವರು ಪ್ರಶ್ನಿಸಿದರು.

'ಕೇಂದ್ರ ಸರ್ಕಾರವು ಮುಂದಿನ ವರ್ಷ ಜಾತಿ ಗಣತಿ ನಡೆಸಲಿದೆ. ಆ ಮೂಲಕ ಕೇಂದ್ರ ಸರ್ಕಾರವು ಜನರನ್ನು ಮತಾಂತರಕ್ಕೆ ಪ್ರೋತ್ಸಾಹಿಸಲಿದೆಯೇ ಅಥವಾ ಜಾತಿಗಳನ್ನು ಒಡೆಯಲು ಯತ್ನಿಸಲಿದೆಯೇ ಎಂಬುದನ್ನು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಸ್ಪಷ್ಟಪಡಿಸಬೇಕು' ಎಂದು ಸಿದ್ದರಾಮಯ್ಯ ಒತ್ತಾಯಿಸಿದರು.

'ರಾಜ್ಯ ಸರ್ಕಾರದ ಸಮೀಕ್ಷೆಯು ಜಾತಿ ಗಣತಿ ಅಲ್ಲ. ಕೇಂದ್ರ ಸರ್ಕಾರ ನಡೆಸಲು ಹೊರಟಿರುವುದು ಜಾತಿ ಗಣತಿ. ಎರಡಕ್ಕೂ ಬಹಳ ವ್ಯತ್ಯಾಸವಿದೆ. ಬಿಜೆಪಿಯವರು ಈ ವ್ಯತ್ಯಾಸವನ್ನು ಅರಿತುಕೊಳ್ಳಲಿ' ಎಂದ ಅವರು, 'ನೀವೂ ಸಹ ಅವರು ಹೇಳಿದ್ದೆಲ್ಲವನ್ನೂ ಇಲ್ಲಿ ಪ್ರಶ್ನಿಸಬೇಡಿ. ನಿಮ್ಮದೇ ಪ್ರಶ್ನೆಗಳಿದ್ದರೆ ಕೇಳಿ' ಎಂದು ಸುದ್ದಿಗಾರರಿಗೆ ಕಿವಿಮಾತು ಹೇಳಿದರು.

'ಬಿಜೆಪಿಯವರಿಗೆ ಸಮೀಕ್ಷೆ ಬೇಕಾಗಿಲ್ಲ': 'ಬಿಜೆಪಿ ಹಾಗೂ ಆರ್‌ಎಸ್‌ಎಸ್ ಹಿಂದುಳಿದ ವರ್ಗಗಳು, ದಲಿತರು ಮತ್ತು ಅಲ್ಪಸಂಖ್ಯಾತರ ಪರವಾಗಿ ಯಾವತ್ತಿಗೂ ನಿಂತಿರಲಿಲ್ಲ. ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆಯಿಂದ ಈ ವರ್ಗಗಳಿಗೆ ಅನುಕೂಲವಾಗಲಿದೆ. ಬಿಜೆಪಿಯವರಿಗೆ ಇದು ಬೇಕಾಗಿಲ್ಲ. ಹೀಗಾಗಿಯೇ ಸಮೀಕ್ಷೆಯನ್ನು ವಿರೋಧಿಸುತ್ತಿದ್ದಾರೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಸಮೀಕ್ಷೆ ಕುರಿತಾಗಿ ಪ್ರಲ್ಹಾದ ಜೋಶಿ ಅವರ ಆರೋಪಕ್ಕೆ ಪ್ರತಿಕ್ರಿಯಿಸಿರುವ ಅವರು, 'ಆರ್‌ಎಸ್‌ಎಸ್ ತನ್ನ ನೂರು ವರ್ಷಗಳ ಇತಿಹಾಸದಲ್ಲಿ ಎಂದಿಗೂ ದಮನಿತರ ಪರವಾಗಿ ನಿಂತಿರಲಿಲ್ಲ. ಈಗ ಬಿಜೆಪಿ ಕಾರ್ಯಕರ್ತರು, ಮನೆ–ಮನೆಗೆ ಹೋಗಿ ಸಮೀಕ್ಷೆಗೆ ವಿವರ ನೀಡಬೇಡಿ ಎಂದು ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ' ಎಂದರು.

'ಬಿಜೆಪಿ ನಾಯಕರ ಘರ್ ವಾಪಸಿ ಯಾವಾಗ'

'ಹಿಂದೂ ಧರ್ಮದಿಂದ ಬೇರೆ ಧರ್ಮಕ್ಕೆ ಮತಾಂತರವಾಗಿರುವ ಬಿಜೆಪಿ ನಾಯಕರ 'ಘರ್ ವಾಪಸಿ' ಯಾವಾಗ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದ್ದಾರೆ.

ಪ್ರಲ್ಹಾದ ಜೋಶಿ ಅವರ ಹೇಳಿಕೆಗೆ ಪ್ರತಿಕ್ರಿಯೆಯಾಗಿ ಪ್ರಿಯಾಂಕ್ ಅವರು, 'ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷರ ಕುಟುಂಬ ಮತಾಂತರ' ಎಂಬ ತಲೆ ಬರಹ ಮತ್ತು ಛಲವಾದಿ ನಾರಾಯಣಸ್ವಾಮಿ ಅವರ ಚಿತ್ರ ಇರುವ ಪೋಸ್ಟರ್ ಅನ್ನು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯು ಮತಾಂತರಕ್ಕೆ ಪ್ರೋತ್ಸಾಹಿಸುತ್ತದೆ ಎಂದಿರುವ ಪ್ರಲ್ಹಾದ ಜೋಶಿ ಅವರೇ, ನಿಮ್ಮ ಪಕ್ಷದ ನಾಯಕರು ಕುಟುಂಬ ಸಮೇತ ಹಿಂದೂ ಧರ್ಮದಿಂದ ಮತಾಂತರವಾಗಿದ್ದಾರೆ ಎಂದು ನಿಮ್ಮದೇ ಪಕ್ಷದವರು ತಿಳಿಸಿದ್ದರು. ಅವರ ಮತಾಂತರಕ್ಕೆ ಪ್ರೇರಣೆಯಾದ ಸಂಗತಿ ಯಾವುದು' ಎಂದು ಪ್ರಶ್ನಿಸಿದ್ದಾರೆ.

'ನಿಮ್ಮ ಪಕ್ಷದವರಿಗಾಗಿ 'ಘರ್ ವಾಪಸಿ' ಕಾರ್ಯಕ್ರಮ ಹಮ್ಮಿಕೊಳ್ಳುವರೇ? ಜೋಶಿ ಯವರೇ, ಸಮೀಕ್ಷೆಯಿಂದ ಮತಾಂತರವಾಗಲು ಸಾಧ್ಯವೇ? ನಿಮ್ಮ ಪ್ರಕಾರ ಹಿಂದೂ ಧರ್ಮ ಅಷ್ಟು ದುರ್ಬಲವೇ' ಎಂದಿದ್ದಾರೆ.

ಪ್ರತಿಭಟನಕಾರರಿಗೆ ತಡೆ...

ಪ್ರಜಾವಾಣಿ ಚಿತ್ರ: ರಂಜು ಪಿ.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನ ಮುಂಭಾಗದ ಶೇಷಾದ್ರಿ ರಸ್ತೆಯಲ್ಲಿ ಅಳವಡಿಸಿರುವ ಕಬ್ಬಿಣದ ತಡೆಗೋಡೆಯನ್ನು ಎತ್ತರಿಸುವ ಕಾಮಗಾರಿ ಭರದಿಂದ ಸಾಗುತ್ತಿದ್ದು, ಪ್ರತಿಭಟನಕಾರರು ರಸ್ತೆಗೆ ನುಗ್ಗದಂತೆ ನಗರ ಪೊಲೀಸರು ಕ್ರಮಕ್ಕೆ ಮುಂದಾಗಿದ್ದಾರೆ. ಇತ್ತೀಚೆಗೆ ನಡೆದ ಒಳ ಮೀಸಲಾತಿಗೆ ಸಂಬಂಧಿಸಿದ ಪ್ರತಿಭಟನೆ ವೇಳೆ ಪ್ರತಿಭಟನಕಾರರು ಬ್ಯಾರಿಕೇಡ್ ಹಾರಿ ಮತ್ತೊಂದು ರಸ್ತೆಗೆ ನುಗ್ಗಿದ ಪರಿಣಾಮ, ಮೂರು ಗಂಟೆ ರಸ್ತೆ ಸಂಚಾರ ಬಂದ್ ಆಗಿತ್ತು

ಸಮೀಕ್ಷೆಯಲ್ಲಿ ನಿರ್ಲಕ್ಷ್ಯ: ಮೂವರು ಶಿಕ್ಷಕಿಯರ ಅಮಾನತು

ಪ್ರಜಾವಾಣಿ ವಾರ್ತೆ

ಉಡುಪಿ: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯಕ್ಕೆ ನಿಯೋಜನೆ ಕುರಿತ ಆದೇಶ ಸ್ವೀಕರಿಸದೆ ನಿರ್ಲಕ್ಷಿಸಿದ್ದ ಮೂವರು ಶಿಕ್ಷಕಿಯರನ್ನು ಅಮಾನತು ಮಾಡಲಾಗಿದೆ. ಒಳಕಾಡು ಸರ್ಕಾರಿ ಪ್ರೌಢಶಾಲೆ ಸಹಶಿಕ್ಷಕಿಯರಾದ ಸುರೇಖ, ರತ್ನಾ, ಉದ್ಯಾವರ ಸರ್ಕಾರಿ ಪಿಯು ಕಾಲೇಜಿನ ಪ್ರೌಢಶಾಲಾ ಸಹಶಿಕ್ಷಕಿ ಪ್ರಭಾ ಬಿ. ಅಮಾನತುಗೊಂಡಿರುವವರು.

'ಹಲವು ಬಾರಿ ಸಂಪರ್ಕಿಸಿದರೂ ಆದೇಶ ಪ್ರತಿ ಸ್ವೀಕರಿಸಿಲ್ಲ. ನೋಟಿಸ್‌ಗೂ ಸಮಜಾಯಿಷಿ ನೀಡದ ಕಾರಣ ಅಮಾನತು ಮಾಡಲಾಗಿದೆ' ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಮಲೆ ಮಹದೇಶ್ವರ ಹುಲಿ ಯೋಜನೆ ವರದಿ ಸಲ್ಲಿಸಿ: ಈಶ್ವರ ಖಂಡ್ರೆ ಸೂಚನೆ

ಹುಲಿ ಹತ್ಯೆ ಶಂಕಿತರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಲೆ ಮಹದೇಶ್ವರ ವನ್ಯಜೀವಿ ಧಾಮದಲ್ಲಿ ಹುಲಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ತನಿಖೆ ಚುರುಕುಗೊಳಿಸಿ ಶಂಕಿತರನ್ನು ವಶಕ್ಕೆ ಪಡೆಯಲಾಗಿದ್ದು, ವಿಚಾರಣೆ ಬಳಿಕ ನಿಖರ ಕಾರಣ ತಿಳಿಯಲಿದೆ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ರಾಜ್ಯದ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಮೈಸೂರು ವಿಭಾಗದ ಅರಣ್ಯಾಧಿಕಾರಿಗಳೊಂದಿಗೆ ಶನಿವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿದ ಸಚಿವರು, 'ಮೂರು ತಿಂಗಳ ಹಿಂದಿನ ಐದು ಹುಲಿ, ಈಗಿನ ಪ್ರಕರಣದಲ್ಲೂ ಆರೋಪಿಗಳಿಗೆ ಶೀಘ್ರದಲ್ಲಿ ಶಿಕ್ಷೆಯಾಗಲು ಕ್ರಮ ಕೈಗೊಳ್ಳಬೇಕು' ಎಂದು ಸೂಚಿಸಿದರು.

'ಮಲೆ ಮಹದೇಶ್ವರ ವನ್ಯಜೀವಿಧಾಮದಲ್ಲಿ ಮತ್ತೊಂದು ಹುಲಿ ಹತ್ಯೆ ಆಗಿರುವ ಹಿನ್ನೆಲೆಯಲ್ಲಿ ಹುಲಿ ಸಂರಕ್ಷಿತ ಪ್ರದೇಶ ಘೋಷಣೆ ಪ್ರಕ್ರಿಯೆ ಚುರುಕುಗೊಳಿಸಬೇಕು. ವನ್ಯಜೀವಿ ಮಂಡಳಿ ಇದಕ್ಕೆ ಅನುಮೋದನೆ ನೀಡಿರುವುದರಿಂದ ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಅಂತಿಮ ವರದಿ ಸಲ್ಲಿಸಿ' ಎಂದು ಸೂಚಿಸಿದರು.

'ಅರಣ್ಯ ಪ್ರದೇಶದೊಳಗೆ ಇರುವ ಹಾಡಿಗಳ ಜಾನುವಾರು, ಜನಸಂಖ್ಯೆ ಬಗ್ಗೆ ಸಂಪೂರ್ಣ ದತ್ತಾಂಶ ಕಲೆಹಾಕಬೇಕು. ಹಾಡಿಯ ಜಾನುವಾರು ವನ್ಯಜೀವಿಯಿಂದ ಮೃತಪಟ್ಟರೆ ಬೇಗನೇ ಪರಿಹಾರ ನೀಡಲು ಕ್ರಮ ವಹಿಸಬೇಕು' ಎಂದು ಸೂಚಿಸಿದರು.

'ಅರಣ್ಯವಾಸಿಗಳು ಮತ್ತು ಕಾಡಿನಂಚಿನ ಜನರಲ್ಲಿ ಜಾಗೃತಿ ಮೂಡಿಸಬೇಕು. ಈ ಭಾಗದಲ್ಲಿ ಗಸ್ತು ಹೆಚ್ಚಿಸಬೇಕು. ಸಿಬ್ಬಂದಿ ಗಸ್ತು ಕುರಿತಂತೆ ಜಿಪಿಎಸ್ ಸಹಿತ ಫೋಟೊ ತೆಗೆಯಲು ಸೂಚಿಸಿ, ಅದನ್ನು ಹಿರಿಯ ಅಧಿಕಾರಿಗಳು ಆಗಾಗ್ಗೆ ಪರಾಮರ್ಶಿಸಬೇಕು. ಎಂಸ್ಟ್ರೈಪ್ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು' ಎಂದು ತಿಳಿಸಿದರು.

ಅರಣ್ಯ ಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕರಾದ ಪಿ.ಸಿ. ರೇ, ಆನೆ ಯೋಜನೆ ನಿರ್ದೇಶಕ ಮನೋಜ್ ರಾಜನ್, ಹುಲಿ ಯೋಜನೆ ನಿರ್ದೇಶಕ ಪಿ.ರಮೇಶ್‌ಕುಮಾರ್ ಹಾಜರಿದ್ದರು.

'ಜೋತು ಬಿದ್ದ ವಿದ್ಯುತ್ ತಂತಿ ತೆಗೆಯಿಸಿ'

ಚನ್ನಪಟ್ಟಣದ ಗೊಲ್ಲರದೊಡ್ಡಿಯ ಬಳಿ ತೆಂಗಿನಮರದ ಹೊಂಬಾಳೆ ತಿನ್ನಲು ಯತ್ನಿಸಿದ ಆನೆಯೊಂದು ವಿದ್ಯುತ್ ಕಂಬದ ತಂತಿ ಸ್ಪರ್ಶದಿಂದ ಮೃತಪಟ್ಟಿರುವ ಕುರಿತೂ ಸಭೆಯಲ್ಲಿ ಪರಾಮರ್ಶಿಸಲಾಯಿತು.

'ಈ ವರ್ಷದಲ್ಲಿ 7 ಆನೆಗಳು ವಿದ್ಯುತ್ ಸ್ಪರ್ಶದಿಂದ ಸಾವಿಗೀಡಾಗಿವೆ. ರೈತರಿಗೆ, ತೋಟದ ಮಾಲೀಕರು ಬೇಲಿಯ ತಂತಿಗೆ ಅಕ್ರಮ ವಿದ್ಯುತ್ ಹರಿಸುವ ತಪಾಸಣೆ ನಡೆಲಾಗುತ್ತಿದೆ' ಎಂದೂ ಸಭೆಗೆ ಅಧಿಕಾರಿಗಳು ತಿಳಿಸಿದರು.

'ಆನೆಗಳು ವಿದ್ಯುತ್ ಸ್ಪರ್ಶದಿಂದ ಸಾವಿಗೀಡಾಗದಂತೆ ಹಾಗೂ ಅರಣ್ಯ ಪ್ರದೇಶ, ಅರಣ್ಯದಂಚಿನಲ್ಲಿ ಜೋತು ಬಿದ್ದಿರುವ ವಿದ್ಯುತ್ ತಂತಿಯ ದುರಸ್ತಿ ಮಾಡುವಂತೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ಪತ್ರ ಬರೆಯಿರಿ' ಎಂದು ಸಚಿವರು ಸೂಚಿಸಿದರು.

> ಹೊರಗುತ್ತಿಗೆಯ ಮುಂಚೂಣಿ ಸಿಬ್ಬಂದಿಗೆ ಸಕಾಲದಲ್ಲಿ ವೇತನ ಪಾವತಿ ಆಗಬೇಕು. ಕಳ್ಳಬೇಟೆ ನಿಗ್ರಹ ಶಿಬಿರ ಸಿಬ್ಬಂದಿಗೆ ಬೂಟು, ಆಹಾರ ಧಾನ್ಯದಂತಹ ಮೂಲಸೌಕರ್ಯ ಒದಗಿಸಿ
>
> **ಈಶ್ವರ ಖಂಡ್ರೆ,** ಅರಣ್ಯ ಸಚಿವ

ಪುಣ್ಯಸ್ಮರಣೆ-ಸವಿನೆನಪು

ಡಾ|| ಹೊನ್ನಪ್ಪ. ವಿ. ಬಂಡಿ
ವ್ಯವಸ್ಥಾಪಕ ನಿರ್ದೇಶಕರು, ಮೆ|| ಬಂಡಿ ಇನ್‌ಫ್ರಾ ಪ್ರಾಜೆಕ್ಟ್ಸ್
01.11.1961 - 05.10.2024
MAN WITH A GOLDEN HEART
ನೀವು ನಮ್ಮನ್ನಗಲಿದರೂ, ನಮ್ಮ ಮನಸುಗಳಲ್ಲಿ ನೀವು ಸದಾ ಚಿರಸ್ಥಾಯಿಯಾಗಿರುವಿರಿ.
ನಮ್ಮ ಬದುಕಿನ ಪ್ರತಿದಿನವೂ ಪ್ರತಿ ಕ್ಷಣವೂ ನಿಮ್ಮನ್ನು ಹೆಮ್ಮೆಯಿಂದ ಸ್ಮರಿಸುವೆವು.
1ನೇ ವರ್ಷದ ಪುಣ್ಯಸ್ಮರಣೆಯನ್ನು ದಿನಾಂಕ: 05.10.2025ರ ಬೆಳಿಗ್ಗೆ 11.00 ಗಂಟೆಗೆ ನಮ್ಮ ಸ್ವಗೃಹ, ಫ್ಲಾಟ್ ನಂ. ಸಿ-1703, ಮಂತ್ರಿ ಗ್ರೀನ್ಸ್ ಅಪಾರ್ಟ್‌ಮೆಂಟ್ಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003. ಇಲ್ಲಿ ನಡೆಸಲಾಗುವುದು.
ಸದಾ ನಿಮ್ಮ ಸವಿನೆನಪಿನಲ್ಲಿರುವ- ಬಂಡಿ ಕುಟುಂಬದವರು

ಸವಿನೆನಪು

ಶ್ರೀ. ಎಮ್. ಶ್ರೀನಿವಾಸ
13ನೇ ವರ್ಷದ ಚಿರಸ್ಮರಣೆ
ನಿಧನ: 05.10.2012
ನೀವು ನಮ್ಮ ಹೃದಯವನ್ನು ಪ್ರೀತಿ, ಸ್ಫೂರ್ತಿ ಮತ್ತು ಉತ್ತೇಜನದಿಂದ ಸ್ಪರ್ಶಿಸಿದ ಪ್ರತೀ ಬಾರಿಯೂ ನೀವು ಅಮರರಾದಿರಿ. ನೀವು ನಮ್ಮ ನೆನಪುಗಳಲ್ಲಿ, ನಂಬಿಕೆಗಳಲ್ಲಿ ಮತ್ತು ನಮ್ಮ ಕಾರ್ಯಗಳಲ್ಲಿ ಜೀವಂತವಾಗಿದ್ದೀರಿ.
ಕೆ. ನಿರ್ಮಲ ಮತ್ತು ಕುಟುಂಬ ವರ್ಗ

ಆರು ಡೀಮ್ಡ್ ವಿ.ವಿ: ರಾಜ್ಯ ಕೋಟಾ ಶೂನ್ಯ

ರಾಜ್ಯಕ್ಕೆ 188 ಸೀಟು ಬಿಟ್ಟುಕೊಟ್ಟ ಉಳಿದ ವಿ.ವಿ.ಗಳು • ಮೀಸಲಾತಿಯೂ ಇಲ್ಲ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ರಾಜ್ಯದಲ್ಲಿನ 12 ಡೀಮ್ಡ್ ವಿಶ್ವವಿದ್ಯಾಲಯಗಳು 2,412 ವೈದ್ಯಕೀಯ ಸೀಟುಗಳನ್ನು ಹೊಂದಿದ್ದರೂ ರಾಜ್ಯ ಕೋಟಾಕ್ಕೆ ಬಿಟ್ಟು ಕೊಟ್ಟ ಸೀಟು 188 ಮಾತ್ರ. ಉಳಿದ ಸೀಟುಗಳ ಪ್ರವೇಶಕ್ಕೆ ಮೀಸಲಾತಿಯೂ ಇಲ್ಲ.

ರಾಜ್ಯದಲ್ಲೇ ಸ್ಥಾಪನೆಯಾಗಿ, ರಾಜ್ಯ ಸರ್ಕಾರದಿಂದ ನಿರಾಕ್ಷೇಪಣಾ ಪತ್ರ ಪಡೆಯುವ ಡೀಮ್ಡ್ ವಿಶ್ವವಿದ್ಯಾಲಯಗಳು ರಾಜ್ಯದ ವಿದ್ಯಾರ್ಥಿಗಳಿಗೆ ಸೀಟು ನೀಡದೆ ಅನ್ಯಾಯ ಮಾಡುತ್ತಿವೆ ಎಂಬ ಆರೋಪ ಪೋಷಕರದ್ದಾಗಿದೆ.

ಈ ವಿಶ್ವವಿದ್ಯಾಲಯಗಳು ಮೀಸಲಾತಿ ಸೌಲಭ್ಯ ಕಲ್ಪಿಸದೆ ಪರಿಶಿಷ್ಟ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳನ್ನೂ ಹೊರಗಿಟ್ಟಿವೆ. ಇತರ ಖಾಸಗಿ ಕಾಲೇಜುಗಳಂತೆ ರಾಜ್ಯ ಕೋಟಾದ ನಿಗದಿತ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಬಿಟ್ಟು ಕೊಡಬೇಕು. ರಾಜ್ಯ ಕೋಟಾದ ವಿದ್ಯಾರ್ಥಿಗಳಿಗೆ ನೀಡುವಂತೆ ಮೀಸಲಾತಿ ಸೌಲಭ್ಯ ಕಲ್ಪಿಸಬೇಕು. ಅದಕ್ಕೆ ಅಗತ್ಯವಾದ ನಿಯಮ ರೂಪಿಸಬೇಕು ಎಂದು ಸರ್ಕಾರದ ಮೇಲೆ ಒತ್ತಡ ಹಾಕಲು ವಿದ್ಯಾರ್ಥಿಗಳು, ಪೋಷಕರು ಅಭಿಯಾನ ಆರಂಭಿಸಿದ್ದಾರೆ.

ಡೀಮ್ಡ್ ಕಾಲೇಜುಗಳನ್ನು ಹೊರತು ಪಡಿಸಿ ರಾಜ್ಯದಲ್ಲಿ 24 ಸರ್ಕಾರಿ ಕಾಲೇಜುಗಳು ಸೇರಿ ಒಟ್ಟು 58 ಕಾಲೇಜುಗಳಿಂದ 9,663 ವೈದ್ಯಕೀಯ ಸೀಟುಗಳು 2025–26ನೇ ಸಾಲಿಗೆ ರಾಜ್ಯದ ಕೋಟಾದಲ್ಲಿ ಲಭ್ಯವಾಗಿದ್ದವು. 12 ಡೀಮ್ಡ್ ವಿಶ್ವವಿದ್ಯಾಲಯಗಳು ನಿರಾಕ್ಷೇಪಣಾ ಪತ್ರ ಸೇರಿದಂತೆ ಕೆಲ ಸೌಲಭ್ಯಗಳನ್ನು ರಾಜ್ಯ ಸರ್ಕಾರದಿಂದ ಪಡೆಯುವಾಗ ಒಂದಷ್ಟು ಸೀಟುಗಳನ್ನು (188) ರಾಜ್ಯದ ವಿದ್ಯಾರ್ಥಿಗಳಿಗೆ ಬಿಟ್ಟುಕೊಟ್ಟಿವೆ. ಆದರೆ, ಇನ್ನು ಆರು ವಿಶ್ವವಿದ್ಯಾಲಯಗಳು ಒಂದೂ ಸೀಟು ಬಿಟ್ಟುಕೊಟ್ಟಿಲ್ಲ. ಅವುಗಳಲ್ಲಿ ಕೆಲವು ರಾಜಕಾರಣಿಗಳ ಒಡೆತನಕ್ಕೆ ಸೇರಿವೆ.

‘ರಾಜ್ಯ ಸರ್ಕಾರದಿಂದ ಮೂಲ ಸೌಲಭ್ಯ, ನಿರಾಕ್ಷೇಪಣಾ ಪತ್ರ ಪಡೆಯುವ ಡೀಮ್ಡ್ ವಿಶ್ವವಿದ್ಯಾಲಯಗಳು ಐದು ವರ್ಷಗಳ ಕೋರ್ಸ್‌ನ ಒಂದು ವೈದ್ಯಕೀಯ ಸೀಟಿಗೆ ₹1 ಕೋಟಿಗೂ ಅಧಿಕ ಶುಲ್ಕ ಪಡೆಯುತ್ತವೆ. ಆರು ವಿಶ್ವವಿದ್ಯಾಲಯಗಳು ತಲಾ 250 ಸೀಟು, ನಾಲ್ಕು ವಿಶ್ವವಿದ್ಯಾಲಯಗಳು ತಲಾ 200 ಸೀಟು, ಉಳಿದ ಎರಡು ತಲಾ 150 ಸೀಟುಗಳಿಗೆ ಅನುಮತಿ ಪಡೆದಿವೆ. ಅಂದರೆ ಒಂದು ಬ್ಯಾಚ್ ವಿದ್ಯಾರ್ಥಿಗಳಿಂದ ಐದು ವರ್ಷಗಳಲ್ಲಿ ₹150 ಕೋಟಿಯಿಂದ ₹250 ಕೋಟಿಗೂ ಅಧಿಕ ಶುಲ್ಕವನ್ನು ಅಧಿಕೃತವಾಗಿ ಸಂಗ್ರಹಿಸುತ್ತವೆ. ಆದರೆ, ರಾಜ್ಯ ಕೋಟಾಕ್ಕೆ ಸೀಟು ಕೊಟ್ಟಿಲ್ಲ. ಮೀಸಲಾತಿ ಸೌಲಭ್ಯವನ್ನೂ ನೀಡುವುದಿಲ್ಲ. ಇಂತಹ ನಡೆಯಿಂದ ರಾಜ್ಯಕ್ಕೆ ಹಾಗೂ ರಾಜ್ಯದ ವಿದ್ಯಾರ್ಥಿಗಳಿಗೆ ಭಾರಿ ಅನ್ಯಾಯವಾಗುತ್ತಿದೆ’ ಎಂದು ದೂರುತ್ತಾರೆ ವಿದ್ಯಾರ್ಥಿ ಎಚ್.ಆರ್.ಹರಿಶಂಕರ್.

ಎನ್‌ಆರ್‌ಐ ಕೋಟಾಕ್ಕೆ ಆಕ್ಷೇಪ

ರಾಜ್ಯದ ಸರ್ಕಾರಿ ಕಾಲೇಜುಗಳಿಗೆ 2025–26ನೇ ಸಾಲಿಗೆ ಲಭ್ಯವಾಗಿದ್ದ 400 ಹೆಚ್ಚುವರಿ ವೈದ್ಯಕೀಯ ಸೀಟುಗಳಲ್ಲಿ ಶೇ 15ರಷ್ಟನ್ನು ಅನಿವಾಸಿ ಭಾರತೀಯ ಕೋಟಾಕ್ಕೆ (ಎನ್‌ಆರ್‌ಐ) ಮೀಸಲಿಟ್ಟಿರುವ ಸರ್ಕಾರದ ನಿರ್ಧಾರವನ್ನು ಕರ್ನಾಟಕ ದಲಿತ ವೆಲ್‌ಫೇರ್ ಟ್ರಸ್ಟ್ ಖಂಡಿಸಿದೆ.

ಎನ್‌ಎಂಸಿ ಬೆಳಗಾವಿ, ಚಿಕ್ಕಬಳ್ಳಾಪುರ, ಕಲಬುರಗಿ, ಹಾಸನ, ಮೈಸೂರು, ರಾಯಚೂರು, ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರಗಳ ಸೀಟುಗಳನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗ ಹೆಚ್ಚಳ ಮಾಡಿದೆ. ಸೀಟುಗಳನ್ನು ಮೀಸಲಾತಿಗೆ ಅನುಗುಣವಾಗಿ ಹಂಚಿಕೆ ಮಾಡಬೇಕಾದ ಸರ್ಕಾರವೇ ಅಧಿಕ ಶುಲ್ಕಕ್ಕೆ ಮಾರಾಟ ಮಾಡುತ್ತಿರುವುದು ಸಾಮಾಜಿಕ ನ್ಯಾಯಕ್ಕೆ ವಿರುದ್ಧ. ಪಂಜಾಬ್ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿರುವ ತೀರ್ಪು ಎಲ್ಲ ರಾಜ್ಯಗಳಿಗೂ ಅನ್ವಯ. ಹಾಗಾಗಿ, ಎನ್‌ಆರ್‌ಐ ಕೋಟಾ ರದ್ದು ಮಾಡಬೇಕು ಎಂದು ಟ್ರಸ್ಟ್ ಕಾರ್ಯದರ್ಶಿ ಕುಂದಾನಿ ಒತ್ತಾಯಿಸಿದ್ದಾರೆ.

ವೈದ್ಯಕೀಯ ಸಂಸ್ಥೆಗಳು	ರಾಜ್ಯ ಕೋಟಾ (ಶೇಕಡವಾರು)
ಸರ್ಕಾರಿ	85
ಖಾಸಗಿ ವಿಶ್ವವಿದ್ಯಾಲಯ	40
ಖಾಸಗಿ ಕಾಲೇಜು	40
ಭಾಷಾ ಅಲ್ಪಸಂಖ್ಯಾತ	25
ಧಾರ್ಮಿಕ ಅಲ್ಪಸಂಖ್ಯಾತ	25
ಡೀಮ್ಡ್ ವಿಶ್ವವಿದ್ಯಾಲಯ	00

ಸುದ್ದಿ 2 ನಿಮಿಷ

‘ಬಸವ ಸಂಸ್ಕೃತಿ ಯಾತ್ರೆ ಸಿ.ಎಂ ಅಂತರ ಕಾಯ್ದುಕೊಳ್ಳಲಿ’

ಬಾಗಲಕೋಟೆ: ‘ಲಿಂಗಾಯತವಾದಿಗಳು ಬೆಂಗಳೂರಿನಲ್ಲಿ ಏರ್ಪಡಿಸಿರುವ ಬಸವ ಸಂಸ್ಕೃತಿ ಯಾತ್ರೆಯ ಸಮಾರೋಪವು ಕಾಂಗ್ರೆಸ್ ಪಕ್ಷದ ಅವನತಿಗೆ ನಾಂದಿ ಹಾಡಲಿದೆ. ಸಿ.ಎಂ ಸಿದ್ದರಾಮಯ್ಯ ಇದರಲ್ಲಿ ಪಾಲ್ಗೊಳ್ಳಬಾರದು’ ಎಂದು ಶಿರಹಟ್ಟಿಯ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು.

‘ಸಿದ್ದರಾಮಯ್ಯ ಅವರು ಸಮಾಜವನ್ನು ವಿಘಟನೆ ಮಾಡಲು ಹೊರಟಿರುವ ಗುಂಪಿನಿಂದ ಅಂತರ ಕಾಯ್ದುಕೊಳ್ಳಬೇಕು. ಹಿಂದೆ ಅನೇಕ ಸ್ವಾಮೀಜಿಗಳು, ನಾಯಕರು ಪ್ರತ್ಯೇಕ ಲಿಂಗಾಯತ ಧರ್ಮ ಸ್ಥಾಪನೆ ಕುರಿತು ಹಿನ್ನಡೆ ಅನುಭವಿಸಿದ್ದಾರೆ. ಈಗ ಮತ್ತೆ ವ್ಯರ್ಥಪ್ರಯತ್ನ ನಡೆದಿದೆ. ಪ್ರತ್ಯೇಕ ಧರ್ಮ ಎನ್ನುತ್ತಿರುವುದು ಅಖಂಡ ವೀರಶೈವ ಲಿಂಗಾಯತ ಸಮಾಜಕ್ಕೆ ಮಾಡುವ ದ್ರೋಹ’ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಭಾನುವಾರದ ಸಮಾರೋಪದಲ್ಲಿ ಮುಖ್ಯಮಂತ್ರಿ ಅವರನ್ನು ಸನ್ಮಾನಿಸುತ್ತೇವೆ ಎಂದು ಸಂಘಟಕರು ಪ್ರಚಾರ ಮಾಡಿದ್ದಾರೆ. ಸಮಾಜಕ್ಕೆ ಬೇಡವಾದ ಸ್ವಾಮೀಜಿಗಳ ಬೇಡಿಕೆ ಮನ್ನಿಸುವುದು ಸಿದ್ದರಾಮಯ್ಯ ಅವರ ವ್ಯಕ್ತಿತ್ವ, ಪಕ್ಷಕ್ಕೆ ಧಕ್ಕೆ ತರಲಿದೆ. ಹಿಂದೆ ಉಂಡಿರುವ ಕಹಿಯನ್ನು ಮುಂದೆ ಅನುಭವಿಸಬೇಡಿ’ ಎಂದಿದ್ದಾರೆ.

ದಸರಾ ಜಂಬೂಸವಾರಿ ಸ್ತಬ್ಧಚಿತ್ರಗಳಿಗೆ ಬಹುಮಾನ

ಮೈಸೂರು: ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಂಡ ಸ್ತಬ್ಧಚಿತ್ರಗಳಿಗೆ ಬಹುಮಾನ ಪ್ರಕಟವಾಗಿದೆ. ಈ ಬಾರಿ ವಿಭಾಗವಾರು ಬಹುಮಾನ ನೀಡಲಾಗಿದೆ. ಫಲಿತಾಂಶ ಇಂತಿದೆ.

ಬೆಂಗಳೂರು ವಿಭಾಗ: ರಾಜ ವೀರಮದಕರಿ ನಾಯಕ (ಚಿತ್ರದುರ್ಗ)–1, ಬ್ರ್ಯಾಂಡ್ ಬೆಂಗಳೂರಿನತ್ತ ದಿಟ್ಟ ಹೆಜ್ಜೆ (ಬೆಂಗಳೂರು ನಗರ)–2, ನವ್ಯ ಮತ್ತು ಪ್ರಾಚೀನ ಶಿಲ್ಪಕಲಾ ಸಂಕೀರ್ಣ (ತುಮಕೂರು)–3.

ಕಲಬುರಗಿ ವಿಭಾಗ: ಬೀದರ್ ಕೋಟೆ (ಬೀದರ್)–1, ಕಿನ್ನಾಳ ಕಲೆ (ಕೊಪ್ಪಳ)–2, ವಿಶಿಷ್ಟ ವಿಜಯನಗರ (ವಿಜಯನಗರ)–3; ಬೆಳಗಾವಿ ವಿಭಾಗ: ಮಾಯಕ್ಕದೇವಿ (ಬೆಳಗಾವಿ)–3.

ಮೈಸೂರು ವಿಭಾಗ: ಪ್ರಕೃತಿ ಸೌಹಾರ್ದತೆಯೊಂದಿಗೆ ಪ್ರಗತಿಯತ್ತ ಸಾಗೋಣ (ಚಾಮರಾಜನಗರ)–1, ದೈವಾರಾಧನೆ, ಸಾಂಪ್ರದಾಯಿಕ ಕ್ರೀಡೆ (ದಕ್ಷಿಣ ಕನ್ನಡ)–2, ಜ್ಞಾನಿ ವಿಜ್ಞಾನಿಗಳ ನಾಡು (ಚಿಕ್ಕಮಗಳೂರು)–3.

ಕೇಂದ್ರ, ರಾಜ್ಯ, ವಿವಿಧ ನಿಗಮಗಳ ವಿಭಾಗಗಳು: ವಿಜಯ ರನ್‌ವೇ (ಎಚ್‌ಎಎಲ್)–1, ಡ್ರಗ್ಸ್ ಮುಕ್ತ ಕ್ಯಾಂಪಸ್ ಅಭಿಯಾನ (ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿ.ವಿ)–2, ಸುಂದರ, ಸ್ವಚ್ಛ ಪರಿಸರ (ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ)–3, ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಬೆಟ್ಟ (ಪ್ರವಾಸೋದ್ಯಮ ಇಲಾಖೆ), ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ– ಎರಡಕ್ಕೂ ಸಮಾಧಾನಕರ ಬಹುಮಾನ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶಿವಗಣರಾಧಣೆ



ಪ್ರೊ. ಎ ಸಿ ರಾಜಶೇಖರ್
ನಿವೃತ್ತ ಪ್ರಾಂಶುಪಾಲರು, ರೇಣುಕಾಚಾರ್ಯ ಲಾ ಕಾಲೇಜ್, ಅಡ್ವೋಕೇಟ್ ಹೈಕೋರ್ಟ್
ದಿ: 28.09.2025 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ
ಇವರ ಶಿವಗಣರಾಧನೆಯನ್ನು ದಿ.08.10.2025ರಂದು ಬೆಳ್ಳಿಗ್ಗೆ 10 ಗಂಟೆಗೆ ನಮ್ಮ ಸ್ವಗೃಹದಲ್ಲಿ ನೆರವೇರಿಸಲಾಗುವುದು ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಪತ್ನಿ ಅಂಬುಜಾಕ್ಷಿ, ಮಕ್ಕಳು ಮತ್ತು ಕುಟುಂಬವರ್ಗದವರು

REST IN PEACE

HEMALATHA V SHETTY
W/O. M VENUGOPAL SHETTY
03-04-1951 - 04-10-2025
Mortal remains is kept at their residence.
Funeral will be held tomorrow
5th October 2025 morning 11.00am at
Sri Harishchandra Ghat
Scan below QR for House Location
608, 10b Cross, 2nd Stage, WOC, Mahalakshmi Puram, Bangalore 560086

ಯಾವ ಜಿಲ್ಲೆಗಳಲ್ಲಿ ಇಲ್ಲವೋ ಅಲ್ಲಿ ಸ್ಥಾಪನೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

‘ವೈದ್ಯ ಕಾಲೇಜು, ಹೈಟೆಕ್ ಆಸ್ಪತ್ರೆ ನಿರ್ಮಾಣ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಸರ್ಕಾರಿ ವೈದ್ಯಕೀಯ ಕಾಲೇಜು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಆರಂಭಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಹೇಳಿದರು.

ಇಲ್ಲಿನ ಜಿಲ್ಲಾಸ್ಪತ್ರೆ ಆವರಣದಲ್ಲಿ ₹120 ಕೋಟಿ ವೆಚ್ಚದಲ್ಲಿ ನಿರ್ಮಿಸಿದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಲೋಕಾರ್ಪಣೆ, ಗೃಹವೈದ್ಯರ ವಸತಿ ನಿಲಯ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

‘ರಾಜ್ಯದಲ್ಲಿ ಈಗಾಗಲೇ 22 ವೈದ್ಯಕೀಯ ಕಾಲೇಜುಗಳಿವೆ. ಯಾವ ಜಿಲ್ಲೆಗಳಲ್ಲಿ ಇಲ್ಲವೋ ಆ ಜಿಲ್ಲೆಗಳಲ್ಲೂ ಸ್ಥಾಪಿಸಲು ಕ್ರಮವಹಿಸಲಾಗುವುದು’ ಎಂದು ಹೇಳಿದರು.

ಸ್ಮಾರ್ಟ್ ಸಿಟಿ ಯೋಜನೆ ಅಡಿ ನಿರ್ಮಿಸಿದ ಬಸ್ ನಿಲ್ದಾಣ ಉದ್ಘಾಟಿಸಿದ ಸಿ.ಎಂ, ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯದ ಪಿ.ಎಂ ಉಷಾ (ಮೇರು) ಕಟ್ಟಡ ಕಾಮಗಾರಿ ಮತ್ತು ವಿ.ವಿ ರಸ್ತೆ ನಿರ್ಮಾಣ ಕಾಮಗಾರಿಗೆ ಇದೇ ವೇಳೆ ಚಾಲನೆ ನೀಡಿದರು.

ಇದಕ್ಕೂ ಮುನ್ನ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿ, ‘ನೈಸರ್ಗಿಕ ವಿಕೋಪ ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಬಿಜೆಪಿಯವರಿಗೆ ಕಾಮಾಲೆ ರೋಗ ಅಂಟಿಕೊಂಡಿದ್ದು, ಗ್ಯಾರಂಟಿ ಯೋಜನೆಗಳು ಕಣ್ಣು ಕುಕ್ಕುತ್ತಿವೆ. ಪ್ರಧಾನಿ ಮೋದಿ ಅವರೂ ಗ್ಯಾರಂಟಿಗಳ ಅನುಷ್ಠಾನ ಸಾಧ್ಯವಿಲ್ಲ ಎಂದಿದ್ದರು. ಹರಿಯಾಣ, ದೆಹಲಿ, ಮಹಾರಾಷ್ಟ್ರ ಸೇರಿ ಬಿಜೆಪಿ ಆಡಳಿತ ಇರುವೆಡೆ ಈ ಉಪಾಯ ಅನುಕರಣೆ ಮಾಡುತ್ತಿದ್ದಾರೆ’ ಎಂದು ಲೇವಡಿ ಮಾಡಿದರು.

‘ಮುಖ್ಯಮಂತ್ರಿ ಸ್ಥಾನವನ್ನು ಉಳಿಸಿಕೊಳ್ಳಲು ಪಕ್ಷದ ಹೈಕಮಾಂಡ್‌ಗೆ ಸಡ್ಡು ಹೊಡೆದಿದ್ದಾರೆ’ ಎಂಬ ಸಿ.ಟಿ. ರವಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿ, ‘ನಮ್ಮ ಪಕ್ಷದ ಆಂತರಿಕ ವಿಚಾರಗಳ ಬಗ್ಗೆ ತಲೆ ಕೆಡಿಸಿಕೊಳ್ಳಲು ಸಿ.ಟಿ. ರವಿ ಯಾರು’ ಎಂದು ಅವರು ಪ್ರಶ್ನಿಸಿದರು.

ಬೆಳಗಾವಿಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಆರಂಭಿಸಲಾದ ಅತ್ಯಾಧುನಿಕ ಸಿಟಿ ಸ್ಕ್ಯಾನ್ ಉಪಕರಣವನ್ನು ಸಚಿವ ಶರಣಪ್ರಕಾಶ ಪಾಟೀಲ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತೋರಿಸಿದರು. ಸಚಿವೆ ಲಕ್ಷ್ಮೀ ಹೆಬ್ಬಾಳಕರ ಕೂಡ ಜತೆಯಾದರು

‘1,000 ವೈದ್ಯಕೀಯ ಸೀಟು ಹೆಚ್ಚಳ’

‘ರಾಜ್ಯದಲ್ಲಿ 13 ಸಾವಿರ ವೈದ್ಯಕೀಯ ಸೀಟುಗಳಿದ್ದವು. ಈ ವರ್ಷದಿಂದ 1,000 ಸೀಟು ಹೆಚ್ಚಲಿದೆ’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಹೇಳಿದರು.

’ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ತೆರೆದು ಹೆಚ್ಚಿನ ಸಂಖ್ಯೆಯಲ್ಲಿ ಬಡವರ ಮಕ್ಕಳಿಗೆ ಅವಕಾಶ ಕೊಡಲು ಉದ್ದೇಶಿಸಲಾಗಿದೆ’ ಎಂದು ಹೇಳಿದರು.

‘₹50 ಕೋಟಿ ವೆಚ್ಚದಲ್ಲಿ ಕ್ಯಾನ್ಸರ್ ಆಸ್ಪತ್ರೆ, ₹50 ಲಕ್ಷದಲ್ಲಿ ಟ್ರಾಮಾ ಸೆಂಟರ್‌ಗಳನ್ನು ಪ್ರತಿ ಜಿಲ್ಲೆಯಲ್ಲೂ ನಿರ್ಮಿಸ ಲಾಗುವುದು’ ಎಂದರು.

> **ಅತಿವೃಷ್ಟಿಯಿಂದಾಗಿ ಈ ಬಾರಿ ರಾಜ್ಯದಲ್ಲಿ 10 ಲಕ್ಷ ಹೆಕ್ಟೇರ್‌ನಷ್ಟು ಬೆಳೆ ಹಾನಿಯಾಗಿದೆ. ಸಮೀಕ್ಷೆ ಮುಗಿದ ತಕ್ಷಣ ಪರಿಹಾರ ಒದಗಿಸಲಾಗುವುದು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

‘ಡಿಕೆಶಿ ಭವಿಷ್ಯದಲ್ಲಿ ಸಿ.ಎಂ ಆಗ್ತಾರೆ’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಲೆಂದು ಬಯಸುತ್ತೇನೆ. ಅದು ಭವಿಷ್ಯದಲ್ಲಿ ಈಡೇರಲಿದೆ’ ಎಂದು ವಸತಿ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ಹೇಳಿದರು.

ಇಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ನಮ್ಮದು ಹೈಕಮಾಂಡ್ ಪಕ್ಷ. ಏನೇ ತೀರ್ಮಾನವಿದ್ದರೂ ಕೈಗೊಳ್ಳುವುದು ಅದಕ್ಕೆ ಬಿಟ್ಟಿದ್ದು’ ಎಂದು ಹೇಳಿದರು.

> **ಸಿ.ಎಂ ಬದಲಾವಣೆ ಪ್ರಶ್ನೆ ಆಗಾಗ್ಗೆ ಏಳುತ್ತಲೇ ಇರುತ್ತದೆ. ಆದರೆ, ಸಿದ್ದರಾಮಯ್ಯ ಅವರೇ ಸಿ.ಎಂ ಆಗಿ ಮುಂದುವರಿಯುತ್ತಾರೆ**
> **ಡಾ. ಯತೀಂದ್ರ ಸಿದ್ದರಾಮಯ್ಯ,** ವಿಧಾನ ಪರಿಷತ್ ಸದಸ್ಯ

> **ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಇದ್ದಾರೆ. ಹೈಕಮಾಂಡ್ ಬಿಟ್ಟು ಉಳಿದವರು ಏನೇ ಮಾತನಾಡಿದರೂ ಪ್ರಯೋಜನವೂ ಇಲ್ಲ; ಅದಕ್ಕೆ ಅರ್ಥವೂ ಇಲ್ಲ**
> **ಎಚ್.ಸಿ.ಮಹದೇವಪ್ಪ,** ಸಚಿವ

‘ನವೆಂಬರ್‌ಗೆ ಯಾವ ರಾಜಕೀಯ ಕ್ರಾಂತಿಯೂ ಆಗುವುದಿಲ್ಲ. ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಐದು ವರ್ಷ ಪೂರ್ಣಗೊಳಿಸುತ್ತಾರೆ. ಅವರೇ ಇದನ್ನು ಸ್ಪಷ್ಟಪಡಿಸಿದ್ದಾರೆ. ಡಿಕೆಶಿಯವರೂ ಇಂಥಾದ್ದೇ ಮಾತನ್ನಾಡಿದ್ದಾರೆ. ಹೀಗಿರುವಾಗ ಗೊಂದಲ ಏಕೆ’ ಎಂದೂ ಪ್ರಶ್ನಿಸಿದರು.

ಪ್ರತ್ಯೇಕ ಅವಘಡ: 13 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶನಿವಾರ ನಡೆದ ಪ್ರತ್ಯೇಕ ಅವಘಡಗಳಲ್ಲಿ ರಾಜ್ಯದ 13 ಮಂದಿ ಮೃತಪಟ್ಟಿದ್ದಾರೆ. ಈ ಪೈಕಿ ಏಳು ಮಂದಿ ಸಮುದ್ರ ಪಾಲಾಗಿದ್ದರೆ, ಇಬ್ಬರು ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

7 ಮಂದಿ ಜಲಸಮಾಧಿ

ಖಾನಾಪುರ (ಬೆಳಗಾವಿ ಜಿಲ್ಲೆ): ಮಹಾರಾಷ್ಟ್ರದ ಸಿಂಧುದುರ್ಗ ಜಿಲ್ಲೆಯ ಸೀರೋಡಾ ವೇಳಾಗರ ಸಮುದ್ರ ತೀರದಲ್ಲಿ ಶುಕ್ರವಾರ ರಾಜ್ಯದ ಏಳು ಮಂದಿ ಜಲ ಸಮಾಧಿ ಆಗಿದ್ದಾರೆ. ಕಾಣೆಯಾಗಿದ್ದವರ ಪೈಕಿ ನಾಲ್ವರು ಸುರಕ್ಷಿತವಾಗಿ ಮರಳಿದ್ದಾರೆ.

ಖಾನಾಪುರ ತಾಲ್ಲೂಕಿನ ಲೋಂಡಾದ ಇರ್ಫಾನ್ ಇಸಾಕ್ ಕಿತ್ತೂರ (35), ಅವರ ಪತ್ನಿ ಫರಿನಾ ಇರ್ಫಾನ್ ಕಿತ್ತೂರ್ (31), ಪುತ್ರ ಇಬಾದ್ ಇರ್ಫಾನ್ ಕಿತ್ತೂರ್ (12), ಇರ್ಫಾನ್ ಅವರ ತಮ್ಮನ ಮಗ ಇಕ್ವಾನ್ ಇಮ್ರಾನ್ ಕಿತ್ತೂರ್ (15), ಧಾರವಾಡ ಜಿಲ್ಲೆಯ ಅಳ್ನಾವರದ ನಮೀರಾ ಅಕ್ತರ್ (16) ಮೃತರು. ಮಹಾರಾಷ್ಟ್ರದ ಕುಡಾಳ ಪಟ್ಟಣದ ಫರಾನ್ ಮನಿಯಾರ (25), ಝಕೀರ ಮನಿಯಾರ (13) ಮೃತರು ಎಂದು ತಿಳಿದು ಬಂದಿದೆ.

ಕಾಣೆಯಾಗಿದ್ದ ಇಮ್ರಾನ್ ಇಸಾಕ್ ಕಿತ್ತೂರ್, ಜಬಿನ್ ಇಮ್ರಾನ್ ಕಿತ್ತೂರ್, ಇಜಾನ್ ಇಮ್ರಾನ್ ಕಿತ್ತೂರ್, ಇಸ್ರಾ ಇಮ್ರಾನ್ ಕಿತ್ತೂರ, ಶನಿವಾರ ನಸುಕಿನಲ್ಲಿ ಸಮುದ್ರ ತೀರದಲ್ಲಿ ನಿತ್ರಾಣ ಸ್ಥಿತಿಯಲ್ಲಿ ಪತ್ತೆಯಾದರು. ಅವರಿಗೆ ಸಿಂಧುದುರ್ಗ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಲೋಂಡಾ ಗ್ರಾಮದ ಒಂದೇ ಕುಟುಂಬದ ಎಂಟು ಜನ ಶುಕ್ರವಾರ ಸಂಜೆ ಸಮುದ್ರ ತೀರದಲ್ಲಿ ಆಟವಾಡುವಾಗ ದೊಡ್ಡ ಅಲೆಗಳು ಅಪ್ಪಳಿಸಿದ್ದವು ಎಂದು ಮಹಾರಾಷ್ಟ್ರದ ಪೊಲೀಸರು ತಿಳಿಸಿದ್ದಾರೆ.

ಹೃದಯಾಘಾತ: ಅಣ್ಣ- ತಮ್ಮ ಸಾವು

ಗೋಕಾಕ (ಬೆಳಗಾವಿ): ತಾಲ್ಲೂಕಿನ ಕಪರಟ್ಟಿ ಗ್ರಾಮದಲ್ಲಿ ಶನಿವಾರ ಹೃದಯಾಘಾತದಿಂದ ತಮ್ಮ ಮೃತಪಟ್ಟ ಸುದ್ದಿ ಕೇಳಿ ಅಣ್ಣ ಕೂಡ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

‘ಕಪರಟ್ಟಿಯ ಸತೀಶ ಬಾಗನ್ನವರ (16) ನಸುಕಿನ 4ಕ್ಕೆ ಹೃದಯಾಘಾತವಾಗಿ ಕೊನೆಯುಸಿರೆಳೆದ. ಸುದ್ದಿ ತಿಳಿದು ಅಣ್ಣ ಬಸವರಾಜ (24) ಅವರಿಗೂ ಹೃದಯಾಘಾತದಿಂದ ಮೃತಪಟ್ಟರು’ ಎಂದು ಕುಟುಂಬದವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸಾವಿನ ಸುದ್ದಿ ಕೇಳಿ ಬಸವರಾಜ ಅವರ ಪತ್ನಿ, ಗರ್ಭಿಣಿ ಪವಿತ್ರಾ (20) ಕೂಡಾ ಕುಸಿದುಬಿದ್ದಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಸತೀಶ 10ನೇ ತರಗತಿ ವಿದ್ಯಾರ್ಥಿ ಯಾಗಿದ್ದು, ಬಸವರಾಜ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಿಕೊಂಡಿದ್ದರು.

ಹಾಸನದ ಇಬ್ಬರ ಸಾವು

ಉಡುಪಿ: ಮಲ್ಪೆ ಬೀಚ್‌ಗೆ ಪ್ರವಾಸಕ್ಕೆ ಬಂದು ನೀರುಪಾಲಾಗಿದ್ದ ಯುವಕನ ಮೃತದೇಹ ಶನಿವಾರ ಪತ್ತೆಯಾಗಿದ್ದು, ಅಸ್ವಸ್ಥಗೊಂಡಿದ್ದ ಇನ್ನೊಬ್ಬ ಯುವಕ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಹಾಸನದ ಮಿಥುನ್ (20) ಮೃತದೇಹ ಪತ್ತೆಯಾಗಿದ್ದು, ಆಸ್ಪತ್ರೆಗೆ ದಾಖಲಾಗಿದ್ದ ಶಶಾಂಕ್ (22) ಕೂಡ ಮೃತಪಟ್ಟಿದ್ದಾರೆ. ಏಳು ಮಂದಿ ಯುವಕರ ತಂಡ ಶುಕ್ರವಾರ ಸಮುದ್ರದ ಅಲೆಗಳ ಸೆಳೆತಕ್ಕೆ ಸಿಲುಕಿತ್ತು. ಆರು ಮಂದಿಯನ್ನು ಲೈಫ್ ಗಾರ್ಡ್‌ಗಳು ರಕ್ಷಿಸಿದ್ದರು. ಶಶಾಂಕ್ ತೀವ್ರ ಅಸ್ವಸ್ಥಗೊಂಡಿದ್ದರು.

ಸ್ಫೋಟ: ಮತ್ತಿಬ್ಬರು ಸಾವು

ಹೊಸಪೇಟೆ (ವಿಜಯನಗರ): ತಾಲ್ಲೂಕಿನ ಗಾದಿಗನೂರಿ ನಲ್ಲಿ ಅಡುಗೆ ಅನಿಲ ಸೋರಿ ಸಂಭವಿಸಿದ್ದ ಸ್ಫೋಟದಲ್ಲಿ ಗಾಯಗೊಂಡಿದ್ದವರಲ್ಲಿ ಮತ್ತಿಬ್ಬರು ಮೃತಪಟ್ಟಿದ್ದಾರೆ. ಇದರೊಂದಿಗೆ ಘಟನೆಯಲ್ಲಿ ಮೃತಪಟ್ಟವರ ಸಂಖ್ಯೆ ನಾಲ್ಕಕ್ಕೆ ಏರಿದೆ.

ಶುಕ್ರವಾರ ಬೆಳಿಗ್ಗೆ ಮೃತಪಟ್ಟಿದ್ದ ವಕೀಲ ಹಾಲಪ್ಪ ಅವರ ಪತ್ನಿ ಕವಿತಾ (30), ಸಂಬಂಧಿ ಮೈಲಾರಪ್ಪ (45) ಶನಿವಾರ ಮೃತಪಟ್ಟವರು. ಅಂತ್ಯಕ್ರಿಯೆ ಗಾದಿಗನೂರಿನಲ್ಲಿ ನಡೆಯಿತು.

ಅವಘಡದಲ್ಲಿ ಒಟ್ಟು 11 ಮಂದಿ ಗಾಯಗೊಂಡಿದ್ದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಇನ್ನಿಬ್ಬರು ಗುಣಮುಖರಾಗಿ, ಮನೆಗೆ ಮರಳಿದ್ದಾರೆ.

‘ಜೋಳದ ದಂಟಿನಿಂದ ಬೆಲ್ಲ ತಯಾರಿಕೆ; 8ರಂದು ಚಾಲನೆ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಜೋಳದ ದಂಟು ಬಳಸಿ ಬೆಲ್ಲ ತಯಾರಿಸುವ ಪ್ರಕ್ರಿಯೆಗೆ ಅ.8ರಂದು ಚಾಲನೆ ನೀಡಲಾಗುವುದು’ ಎಂದು ಬಾಗಲಕೋಟೆ ಜಿಲ್ಲೆಯ ರಬಕವಿ-ಬನಹಟ್ಟಿ ತಾಲ್ಲೂಕಿನ ಸಂಗಾನಟ್ಟಿ ಗ್ರಾಮದ ರೈತ ಮಹಾಲಿಂಗಪ್ಪ ಇಟ್ನಾಳ ಹೇಳಿದರು.

‘ಕೃಷಿ ಇಲಾಖೆ, ಕೃಷಿ ವಿಜ್ಞಾನ ಕೇಂದ್ರಗಳು ಈ ಬಗ್ಗೆ ನಡೆಸಿದ ಪ್ರಯೋಗ ಯಶಸ್ವಿಯಾಗಿದೆ. ಜೋಳದ ದಂಟುಗಳ ನುರಿಸಿ, ಪ್ರಯೋಗಾಲಯಕ್ಕೆ ರಸವನ್ನು ಕಳುಹಿಸಲಾಗಿತ್ತು. ಆ ವರದಿ ಆಧರಿಸಿ ಬೆಲ್ಲ ತಯಾರಿಸಲು ಮುಂದಾಗಿದ್ದೇವೆ. ಹತ್ತು ಎಕರೆಯಲ್ಲಿ ಬೆಳೆದ ಜೋಳದ ದಂಟನ್ನು ಇದಕ್ಕೆ ಬಳಸಲಾಗುವುದು’ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಟನ್ ಕಬ್ಬಿನಿಂದ 110 ಕೆ.ಜಿ. ಬೆಲ್ಲ ತಯಾರಿಸಿದರೆ, ಟನ್ ಜೋಳದ ದಂಟಿನಿಂದ 60 ಕೆ.ಜಿ ಬೆಲ್ಲ ತಯಾರಿಸಬಹುದು. ಕಬ್ಬಿನ ಸಿಹಿಗಿಂತ ಜೋಳದ ದಂಟಿನಲ್ಲಿ ಶೇ 30 ರಷ್ಟು ಸಿಹಿ ಅಂಶ ಕಡಿಮೆ ಇರುತ್ತದೆ. ಹೈಬ್ರಿಡ್ ಜೋಳದಲ್ಲಿ ಸಿಹಿ ರಸ ಜಾಸ್ತಿ ಇರುತ್ತದೆ. ಬೆಲ್ಲ ತಯಾರಿಸುವುದರಿಂದ ಹೆಚ್ಚಿನ ಆದಾಯ ಬರುತ್ತದೆ’ ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಬೆಂಗಳೂರು ಮನೆಕೆಲಸಕ್ಕೆ ಒಬ್ಬಳೇ ಮಹಿಳೆ ಇರುವವರು ಶಾಶ್ವತವಾಗಿ ಮನೆಯಲ್ಲಿ ಉಳಿದು ಕೊಳ್ಳುವಂತವರು ವಯಸ್ಸು 45ರ ಒಳಗೆ, ಊಟ, ವಸತಿ, ಜಿಗಣಿ. 9901931555

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ 15,000.ರಿಂದ 20,000. ಸಂಪಾದಿಸಿ,'ಕೊರಿಯರ್ ಸೌಲಭ್ಯವಿದೆ. 8884777503, 8884777502.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Nandini Layout

INDUSTRIAL LAND with threefloors building each 1200sqft forsale in truck terminal Kanteerava Studiogate Road Contact 9483400249

ವೈವಾಹಿಕ

Grooms Wanted

Muslim

SUNNI GIRL, 32yrs, 5.5', unmarried, Wkg in MNC Bangalore. Looking for IT engineer working in BLR. Mail: munird255@gmail.com

ಪ್ರವಾಸ

Travel Agencies

09/10/25 ಮಧ್ಯಪ್ರದೇಶ, ಗುಜರಾತ್ ಓಂಕಾರೇಶ್ವರ, ಮಹಾಕಾಳೇಶ್ವರ, ನಾಗೇಶ್ವರ, ಸೋಮನಾಥ ನಾಲ್ಕು ಜ್ಯೋತಿರ್ಲಿಂಗ: 15/10/25 ಮಧ್ಯಪ್ರದೇಶ ಎರಡು ಜ್ಯೋತಿರ್ಲಿಂಗ ಓಂಕಾರೇಶ್ವರ, ಮಹಾಕಾಳೇಶ್ವರ: 27/10/25 ನೇಪಾಳ, ಕಾಶಿ: 19/11/25 ರಾಜಸ್ಥಾನ. ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ: 8496044942

Travel

★ಶ್ರೀಶ್ರೇಯಸ್ ಟೂರ್ಸ್★ 04.10.2025 10ದಿನಗಳು ಅಖಂಡ ಆಂಧ್ರತೆಲಂಗಾಣ ರಾಜ್ಯ ಪ್ರವಾಸ.03.10.2025 12ದಿನಗಳು ಅಖಂಡ ಮಹಾರಾಷ್ಟ್ರ (ಮುಂಬಯಿ ಅಷ್ಟವಿನಾಯಕ,ಶಿರಡಿ ಜ್ಯೋತಿರ್ಲಿಂಗ).23.10.2025 6ದಿನಗಳು ಒರಿಸ್ಸಾ,ಕಲ್ಕತ್ತಾ ಪ್ರವಾಸ.25.10.2025 10 ದಿನಗಳು ಅಖಂಡ ರಾಜಸ್ಥಾನ ಪ್ರವಾಸ.25.10.2025 21.11.2025 12/15/21ದಿನಗಳು ಈಶಾನ್ಯ ರಾಜ್ಯಗಳ (ಸೆವೆನ್ ಸಿಸ್ಟರ್) ಅಸ್ಸಾಂ,ಅರುಣಾಚಲ ಮೇಘಾಲಯ,ಮಣಿಪುರ,ತ್ರಿಪುರ ನಾಗಾಲ್ಯಾಂಡ್,ಮಿಝೋರಾಂ. 25.09.2025 10,24.10.2025 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಪೂಂಚಲಿಂಗ್. 8073824856 9206979202, 9035598467

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

‘ಎಂ.ರಮೇಶ ಪ್ರಶಸ್ತಿ’ಗೆ ಶ್ರೀಧರ ಹೆಗ್ಗೋಡು ಆಯ್ಕೆ

ಪ್ರಜಾವಾಣಿ ವಾರ್ತೆ

ಶ್ರೀಧರ ಹೆಗ್ಗೋಡು

ಶಿರಸಿ: ಬಹುಮುಖ ಪ್ರತಿಭೆ ಎಂ.ರಮೇಶ ಅವರ ಹೆಸರಿನಲ್ಲಿ ನೀಡುವ ‘ಎಂ.ರಮೇಶ ಪ್ರಶಸ್ತಿ’ಗೆ ರಂಗಭೂಮಿಯಲ್ಲಿ ಕ್ರಿಯಾತ್ಮಕವಾಗಿ ತೊಡಗಿಕೊಂಡಿರುವ ಶ್ರೀಧರ ಹೆಗ್ಗೋಡು ಆಯ್ಕೆಯಾಗಿದ್ದಾರೆ. ಪ್ರಶಸ್ತಿ ₹25 ಸಾವಿರ ನಗದು, ಪ್ರಶಸ್ತಿ ಪತ್ರ ಒಳಗೊಂಡಿದೆ.

ಅ.7ರಂದು ಮಧ್ಯಾಹ್ನ 4ಕ್ಕೆ ಶಿರಸಿಯ ನಯನ ಸಭಾಂಗಣದಲ್ಲಿ ರಂಗ ನಿರ್ದೇಶಕ ಹುಲುಗಪ್ಪ ಕಟ್ಟಿಮನಿ ಪ್ರಶಸ್ತಿ ಪ್ರದಾನ ಮಾಡುವರು. ರಂಗ ಚಿಂತಕ ಕಿರಣ ಭಟ್ ಅಧ್ಯಕ್ಷತೆ ವಹಿಸುವರು ಎಂದು ಪ್ರಶಸ್ತಿ ಸಮಿತಿಯ ಸ್ಥಾಪಕಿ ವಿಜಯನಳಿನಿ ರಮೇಶ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಕಾರ್ಯಕಾರಿಣಿ ಸಭೆ

ಪ್ರಜಾವಾಣಿ ವಾರ್ತೆ

ಜಮಖಂಡಿ (ಬಾಗಲಕೋಟೆ ಜಿಲ್ಲೆ): ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಕಾರ್ಯಕಾರಿಣಿ ಸಭೆ ಶನಿವಾರ ಇಲ್ಲಿನ ಹೋಟೆಲ್‌ವೊಂದರಲ್ಲಿ ಶನಿವಾರ ಜರುಗಿತು.

ಸಂಜೆ 4 ಗಂಟೆಗೆ ಆರಂಭವಾದ ಸಭೆ, ಎರಡು ತಾಸು ನಡೆಯಿತು. ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ರಾಜ್ಯ ಸಮಿತಿ ಸದಸ್ಯರು ಹಾಗೂ 18ಕ್ಕೂ ಹೆಚ್ಚು ಜಿಲ್ಲಾ ಘಟಕಗಳ ಅಧ್ಯಕ್ಷರು ಪಾಲ್ಗೊಂಡಿದ್ದರು. ಸಭೆಯಲ್ಲಿ ಕೈಗೊಂಡ ನಿರ್ಣಯಗಳ ಕುರಿತು ಮಹೇಶ ಜೋಶಿ ಮಾಧ್ಯಮದವರಿಗೆ ನೀಡಲು ನಿರಾಕರಿಸಿದರು.

ಪ್ರಿಯಕರನ ಭೇಟಿಗೆ ತೆರಳುತ್ತಿದ್ದ ಮಗಳ ಕೊಲೆ: ತಾಯಿ ಬಂಧನ

ಪ್ರಜಾವಾಣಿ ವಾರ್ತೆ

ಉಡುಪಿ: ಪ್ರಿಯಕರನ ಭೇಟಿಗೆ ಹೋಗುತ್ತಿದ್ದಾಳೆ ಎಂದು ಸಿಟ್ಟಾದ ತಾಯಿ ಮಗಳನ್ನೇ ಕತ್ತು ಹಿಸುಕಿ ಕೊಲೆ ಮಾಡಿದ್ದಾಳೆ ಎನ್ನಲಾದ ಘಟನೆ ಕಾರ್ಕಳ ತಾಲ್ಲೂಕಿನ ಹಿರ್ಗಾನ ಗ್ರಾಮದ ಕಾನಂಗಿಯಲ್ಲಿ ನಡೆದಿದೆ.

ಶಿಫಾನಾಜ್ ಕೊಲೆಯಾದ ಯುವತಿ. ಈಕೆಯ ತಾಯಿ ಗುಲ್ಜಾರ್ ಬಾನು (45)ರನ್ನು ಪೊಲೀಸರು ಬಂಧಿಸಿದ್ದು, ನ್ಯಾಯಾಲಯವು ಆಕೆಗೆ ನ್ಯಾಯಾಂಗ ಬಂಧನ ವಿಧಿಸಿದೆ.

‘ಮರ್ಯಾದೆ ತೆಗೆಯುತ್ತೀಯಾ ಎಂದು ಸೆ.20ರಂದು ಶಿಫಾನಾಜ್‌ಳ ಕುತ್ತಿಗೆ ಒತ್ತಿ ಹಿಡಿದು ಕೊಲೆ ಮಾಡಿದ್ದಾಳೆ’ ಎಂದು ಶಿಫಾನಾಜ್ ತಂದೆ ಶೇಖ್ ಮುಸ್ತಫಾ ಅವರು ಕಾರ್ಕಳ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಶಿಫಾನಾಜ್ ಆತ್ಮಹತ್ಯೆ ಮಾಡಿಕೊಂಡಿದ್ದಳು ಎಂದು ಈ ಹಿಂದೆ ತಾಯಿ ಗುಲ್ಜಾರ್ ಬಾನು ಹೇಳಿದ್ದಳು ಎಂದು ಪೊಲೀಸರು ತಿಳಿಸಿದ್ದಾರೆ.

20 ಸಾವಿರ ಆಕ್ಷೇಪಣೆ ಅರ್ಜಿ ಸಲ್ಲಿಕೆ

ಶಿರಸಿ: ಅರಣ್ಯ ಹಕ್ಕು ಕಾಯ್ದೆಯಡಿ ಸಲ್ಲಿಸಿದ್ದ ಅರ್ಜಿಗಳನ್ನು ಪುನರ್ ಪರಿಶೀಲಿಸದೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಕೇಂದ್ರ ಸರ್ಕಾರಕ್ಕೆ ಅಂತಿಮ ವರದಿ ಸಲ್ಲಿಸಿದ್ದನ್ನು ಖಂಡಿಸಿ, ಶಿರಸಿಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಹೆಸರು ಉಲ್ಲೇಖಿಸಿ 20 ಸಾವಿರಕ್ಕೂ ಹೆಚ್ಚು ಆಕ್ಷೇಪಣಾ ಅರ್ಜಿಗಳು ಸಲ್ಲಿಕೆಯಾಗಿವೆ.

ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ಅಧ್ಯಕ್ಷ ರವೀಂದ್ರ ನಾಯ್ಕ ನೇತೃತ್ವದಲ್ಲಿ ಶನಿವಾರ ಇಲ್ಲಿ ಅಭಿಯಾನದಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ಬಂದಿದ್ದ ಅರಣ್ಯವಾಸಿಗಳು ಆಕ್ಷೇಪಣಾ ಮೇಲ್ಮನವಿಗೆ ಸಹಿ ಹಾಕಿದರು. ಪ್ರಮುಖ ಬೀದಿಯಲ್ಲಿ ಮೆರವಣಿಗೆ ನಡೆಸಿ, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ವಿಜಯನಗರ ಜಿಲ್ಲೆಯ ಪಕ್ಷಿಧಾಮ • ವಿವಿಧೆಡೆಯಿಂದ ಬಂದ ಬಾನಾಡಿಗಳ ಕಲರವ

ಅಂಕಸಮುದ್ರ: ವಲಸೆ ಹಕ್ಕಿಗಳ ಪಾರುಪತ್ಯ

• ಸಿ.ಶಿವಾನಂದ

ಹಗರಿಬೊಮ್ಮನಹಳ್ಳಿ (ವಿಜಯನಗರ): ಇಲ್ಲಿನ ಅಂಕಸಮುದ್ರ ಪಕ್ಷಿಧಾಮದಲ್ಲಿ ಈ ಬಾರಿ ನಿಗದಿತ ಅವಧಿಗಿಂತಲೂ ಮೊದಲೇ ವಿದೇಶಿ ಹಕ್ಕಿಗಳ ಕಲರವ ಅನುರಣಿಸುತ್ತಿದೆ. ಜಾಲಿಮರಗಳ ಮೇಲೆ ದೇಶಿ ಹಕ್ಕಿಗಳ ಗೂಡು ಕಟ್ಟಿದ್ದು, ಪಾರುಪತ್ಯ ನಡೆಸಿವೆ.

ಬಹುಸಂಖ್ಯೆಯ ಇಂಡಿಯನ್ ಕಾರ್ಮೊರೆಂಟ್ (ನೀರು ಕಾಗೆ), ಲಿಟಲ್ ಕಾರ್ಮೊರೆಂಟ್ (ಸಣ್ಣ ನೀರು ಕಾಗೆ), ಬ್ಲ್ಯಾಕ್ ಹೆಡೆಡ್ ಐಬಿಸ್ (ಕರಿತಲೆ ಕೆಂಬರಲು), ಗ್ಲೋಸಿ ಐಬಿಸ್(ಮಿಂಚು ಕೆಂಬರಲು), ವರಟೆ ಬಾತು (ಸ್ಪಾಟ್ ಬಿಲ್ ಡಕ್) ಸಂತಾನೋತ್ಪತ್ತಿ ಕಾರ್ಯದಲ್ಲಿ ನಿರತವಾಗಿವೆ. ಇವುಗಳ ಸಂಖ್ಯೆ ಸಾವಿರ ದಾಟಿದೆ. ಪಕ್ಷಿಧಾಮದ ಮರಗಳಲ್ಲಿ ಮರಿಗಳಿಗೆ ಬಾಯಿತುತ್ತು ನೀಡುವ ದೃಶ್ಯ, ಗೂಡುಗಳಿಂದ ಹೊರಬಂದ ಚಿಣ್ಣರ ಚಿನ್ನಾಟದ ಚಿಲಿಪಿಲಿ ಸಂಗೀತದ ನಿನಾದವಂತೂ ಪಕ್ಷಿ ಪ್ರೇಮಿಗಳನ್ನು ಧ್ಯಾನಸ್ಥರನ್ನಾಗಿ ಮಾಡುತ್ತಿವೆ.

ಯುರೋಪ್ ಮೂಲದ ಹಕ್ಕಿಗಳಾದ ಬಿಳಿ ಹುಬ್ಬಿನ ಬಾತು (ಗಾರ್ಗನಿ), ಜೌಗು ಸೆಳೆವ (ಮಾರ್ಷ್ ಹ್ಯಾರಿಯರ್), ಬಿಳಿಕತ್ತಿನ ಉಲಿಯಕ್ಕಿ (ಲೆಸರ್ ವೈಟ್‌ಥ್ರೋಟ್), ಇಡುನಾ ರಾಮ (ಸೈಕ್ಸ್ ನ ವಾರ್ಬ್ಲರ್), ಬೂದು ಉಲಿಯಕ್ಕಿ (ಬ್ಲಿಥ್ಸ್ ರೀಡ್ ವಾರ್ಬ್ಲರ್), ಹಳದಿ ಸಿಪಿಲೆ (ಯೆಲ್ಲೊ ವಾಗ್‌ಟೆಲ್) ಹಕ್ಕಿಗಳೂ ಇಲ್ಲಿಗೆ ಈಗಾಗಲೇ ಬಂದಿವೆ.

ಯುರೋಪ್‌ನಿಂದ ಹಕ್ಕಿಗಳು ಈ ಬಾರಿ ತಿಂಗಳ ಮುಂಚೆಯೇ ಬಂದಿವೆ. ಒಂದು ವಾರದಿಂದ ಈ ವಿದೇಶಿ ಬಾನಾಡಿ ಅತಿಥಿಗಳಿಗೆ ಸ್ಥಳೀಯ ಹಕ್ಕಿಗಳು ಆತಿಥ್ಯ ನೀಡಿವೆ. ಮುಂದಿನ ಏಪ್ರಿಲ್‌ವರೆಗೆ ಅವು ಇಲ್ಲಿಯೇ ನೆಲೆಯೂರಲಿವೆ.

ಶಿಳ್ಳೆಬಾತು ಆಕರ್ಷಣೆ: ಪಕ್ಷಿಧಾಮಕ್ಕೆ ಮೊದಲ ಬಾರಿಗೆ ಉತ್ತರ ಭಾರತದಿಂದ ವಲಸೆ ಬಂದಿರುವ ಅಪರೂಪದ ದೊಡ್ಡ ಗಾತ್ರದ ಶಿಳ್ಳೆಬಾತು (ಫುಲ್ವೆಸ್ ವಿಸಿಲಿಂಗ್ ಡಕ್) ತನ್ನ ಸಂಖ್ಯೆಯನ್ನು 20ಕ್ಕೆ ಏರಿಸಿಕೊಂಡಿದೆ. ಈ ಪಕ್ಷಿ ಸದಾ ಸಂಗಾತಿಯೊಂದಿಗೆ ಇರುತ್ತದೆ.

ತುಂಗಭದ್ರಾ ಹಿನ್ನೀರಿನ ಏತ ನೀರಾವರಿ ಮೂಲಕ ನೀರು ಹರಿದ ಪರಿಣಾಮ ಅಂಕಸಮುದ್ರ ಪಕ್ಷಿಧಾಮದ ಒಡಲು ಸಂಪೂರ್ಣ ಭರ್ತಿ ಆಗಿದೆ. ಪಕ್ಷಿಗಳ ಕಲರವ ಹೆಚ್ಚಾಗಿದೆ. ರಾಜ್ಯದ ವಿವಿಧೆಡೆಯಿಂದ ಬರುವ ಪ್ರವಾಸಿಗರು, ವಿದೇಶಿಯರ ಸಂಖ್ಯೆಯೂ ಹೆಚ್ಚಾಗಿದೆ.

> **ಪ್ರವಾಸಿಗರ ಅನುಕೂಲಕ್ಕಾಗಿ ಪಕ್ಷಿಧಾಮಕ್ಕೆ ರಸ್ತೆ ಅಭಿವೃದ್ಧಿಪಡಿಸಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ**
> **ಉಮೇಶ್ ನಾಯ್ಕ,** ವಲಯ ಅರಣ್ಯಾಧಿಕಾರಿ, ಹೂವಿನಹಡಗಲಿ

> **ಪಕ್ಷಿಗಳನ್ನು ವೀಕ್ಷಿಸಲು ಕಳೆದ ವರ್ಷದಿಂದ ಬೆಂಗಳೂರಿನಿಂದ ಕುಟುಂಬ ಸಮೇತ ಬರುತ್ತಿದ್ದೇನೆ. ಇಲ್ಲಿನ ಹಕ್ಕಿಗಳ ಸೌಂದರ್ಯ ಅದ್ಭುತ**
> **ಬದ್ರೀಶ್,** ಪಕ್ಷಿ ವೀಕ್ಷಕ, ಬೆಂಗಳೂರು





ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಅಂಕಸಮುದ್ರ ಪಕ್ಷಿಧಾಮದಲ್ಲಿ ಕಂಡುಬಂದ ಬಿಳಿ ಹುಬ್ಬಿನ ಬಾತು (ಗಾರ್ಗನಿ) (ಎಡಚಿತ್ರ). ಮರಿಗೆ ತುತ್ತು ನೀಡುತ್ತಿರುವ ಕರಿತಲೆ ಕೆಂಬರಲು (ಮಧ್ಯ). ಚಿಕ್ಕ ಶಿಳ್ಳೆಬಾತು (ಲೆಸರ್ ವಿಸಿಲಿಂಗ್ ಡಕ್) ಮರಿಗಳು

ದೈತ್ಯ ಕಾಳಿಂಗನಿಗೆ ಅಕ್ಕಿ ಗಾತ್ರದ ಚಿಪ್!

ಪರಿಸರ ಆಸಕ್ತರ ಆಕ್ರೋಶಕ್ಕೆ ಗುರಿಯಾದ ಅಧ್ಯಯನ

• ಎಸ್.ರವಿಪ್ರಕಾಶ್

ಬೆಂಗಳೂರು: ಶಿವಮೊಗ್ಗ ಜಿಲ್ಲೆಯ ಆಗುಂಬೆ ಸುತ್ತಮುತ್ತಲಿನ ಪ್ರದೇಶದಲ್ಲಿ ಕಾಳಿಂಗ ಸರ್ಪಗಳಿಗೆ ಬಾಸ್ಮತಿ ಅಕ್ಕಿ ಕಾಳಿನ ಗಾತ್ರದ ಪುಟಾಣಿ ಚಿಪ್ ಅಳವಡಿಸಿ ಅಧ್ಯಯನ ನಡೆಸಲಾಗುತ್ತಿದ್ದು, ಇದು ಪರಿಸರಾಸಕ್ತರ ಆಕ್ರೋಶಕ್ಕೆ ಕಾರಣವಾಗಿದೆ.

ಪಿಟ್ ಟ್ಯಾಗ್ (ಪ್ಯಾಸಿವ್ ಇಂಟಿಗ್ರೇಟೆಡ್ ಟ್ರಾನ್ಸ್‌ಪಾಂಡರ್) ಎಂದೇ ಕರೆಯಲಾಗುವ ಮೈಕ್ರೊ ಚಿಪ್ ಅನ್ನು ಸುಮಾರು 180ಕ್ಕೂ ಹೆಚ್ಚು ಕಾಳಿಂಗ ಸರ್ಪಗಳ ದೇಹದೊಳಗೆ ಹುದುಗಿಸಿ, ಕಾಡುಗಳಿಗೆ ಬಿಟ್ಟು ಅವುಗಳ ಅಧ್ಯಯನ ನಡೆಸಲಾಗಿದೆ. ಆಧಾರ್ ಕಾರ್ಡ್ ಮಾದರಿಯಲ್ಲೇ ಪ್ರತಿಯೊಂದು ಸರ್ಪದ ಚಿಪ್ 15 ಅಂಕಿಗಳ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಹೊಂದಿದೆ. ಸ್ಕ್ಯಾನರ್ ಹಿಡಿದು ಹಾವುಗಳಿದ್ದಲ್ಲಿಗೆ ಚಿಪ್ ಸ್ಕ್ಯಾನ್ ಮಾಡಿದಾಗ ಆ ಹಾವಿನ ಸಂಪೂರ್ಣ ಮಾಹಿತಿ ಸಿಕ್ಕಿಬಿಡುತ್ತದೆ.

ಹಾವುಗಳ ಕುರಿತಾಗಿಯೇ ಇರುವ 'Hamadryad' ಜರ್ನಲ್‌ನಲ್ಲಿ ಕಾಳಿಂಗ ಫೌಂಡೇಷನ್‌ನ ಪಿ.ಗೌರಿಶಂಕರ್, ಎಸ್.ಆರ್.ಗಣೇಶ್ ಮತ್ತು ಇತರರು ಸೇರಿ ಪ್ರಕಟಿಸಿರುವ ಅಧ್ಯಯನ ವರದಿಯಲ್ಲಿ ಈ ಅಂಶಗಳನ್ನು ಉಲ್ಲೇಖಿಸಿದ್ದಾರೆ. ಈ ಅಧ್ಯಯನ 2008 ರಿಂದ 2021ರ ಅವಧಿಯಲ್ಲಿ ನಡೆದಿದ್ದು, ಈಗಲೂ ಕಾಳಿಂಗಗಳ ದೇಹಗಳಲ್ಲಿ ಚಿಪ್‌ಗಳು ಹುದುಗಿವೆ, ಅಧ್ಯಯನ ಮುಂದುವರಿದಿದೆ ಎಂದು ಹೇಳಲಾಗಿದೆ.

ಆಗುಂಬೆ ರೈನ್‌ಫಾರೆಸ್ಟ್ ರೀಸರ್ಚ್ ಸ್ಟೇಷನ್ (ಎಆರ್‌ಆರ್‌ಎಸ್) ಸಿಬ್ಬಂದಿ ಈ ಪುಟಾಣಿ ಚಿಪ್‌ಗಳನ್ನು ಅವುಗಳ ಚರ್ಮ ಮತ್ತು ಮಾಂಸಖಂಡಗಳ ಮಧ್ಯೆ ಸಿರಿಂಜ್ ಮೂಲಕ ಚುಚ್ಚಿ ಹುದುಗಿಸಿಟ್ಟಿದ್ದಾರೆ. ಸ್ಕ್ಯಾನರ್ ಮೂಲಕ ಹಾವುಗಳನ್ನು ಸ್ಕ್ಯಾನ್ ಮಾಡಿದಾಗ ಅವುಗಳ ವಿಶಿಷ್ಟ ಗುರುತಿನ ಸಂಖ್ಯೆ ಕಾಣಿಸಿಕೊಳ್ಳುತ್ತದೆ. ಆ ಮೂಲಕ ನಿರ್ದಿಷ್ಟವಾಗಿ ಹಾವು ಯಾವುದು, ಅದರ ವೈಶಿಷ್ಟ್ಯ, ಲಕ್ಷಣಗಳು ಏನು ಎಂಬುದು ಅಧ್ಯಯನಕಾರರಿಗೆ ಗೊತ್ತಾಗುತ್ತದೆ. ಅತ್ಯಂತ ನಿಗೂಢ ಜೀವಿಯ ಜೀವನವನ್ನು ಅರಿತುಕೊಳ್ಳಲು ಇದು ಹೊಸವಿಧಾನ ಎಂದು ಅಧ್ಯಯನದಲ್ಲಿ ಹೇಳಿಕೊಳ್ಳಲಾಗಿದೆ.

ಅಲ್ಲದೇ, ಸರ್ಪಗಳ ಸಂಚಾರ ಮತ್ತು ಅವುಗಳ ಚಟುವಟಿಕೆಗಳ ಮೇಲೆ ನಿಗಾ ಇಡಲು ಟ್ರಾನ್ಸ್‌ಮಿಟರ್‌ಗಳನ್ನು ಅಳವಡಿಸಿ ಕಾಡಿಗೆ ಬಿಡಲಾಗುತ್ತಿತ್ತು. ಮೂವರು ತಜ್ಞರು ಮೂರು ವರ್ಷಗಳ ಕಾಲ ನಿರಂತರವಾಗಿ ಹಾವಿನ ಜಾಡನ್ನು ಹಿಡಿದು ಅವುಗಳ ವಾಸಸ್ಥ, ಆಹಾರ ಸೇವನೆ, ಮಿಲನ ಮತ್ತು ಇತರ ವರ್ತನೆಗಳ ಮಾಹಿತಿ ದಾಖಲಿಸಿದ್ದಾರೆ. ಎರಡು ಹಂತಗಳಲ್ಲಿ (2008–2011 ಮತ್ತು 2018–2021) ಐದು ಗಂಡು ಮತ್ತು ಎರಡು ಹೆಣ್ಣು ಹಾವುಗಳ ಮೇಲೆ ನಿಗಾ ಇಡಲಾಗಿತ್ತು ಎಂದು ಅಧ್ಯಯನ ವರದಿ ಹೇಳಿದೆ.

ಹೆಣ್ಣನ್ನು ಒಲಿಸಿಕೊಳ್ಳಲು ತನ್ನ ಆವಾಸ ಸ್ಥಾನವನ್ನು ಬಿಟ್ಟು 10 ಕಿ.ಮೀಗೂ ಹೆಚ್ಚು ದೂರ ಕ್ರಮಿಸಿ ಗಂಡು ಕಾಳಿಂಗ ಬರುವುದು ಅಧ್ಯಯನದಲ್ಲಿ ಗೊತ್ತಾಗಿದೆ. ಸ್ಕ್ಯಾನರ್ ಬಳಸಿ ಗಂಡು ಹಾವಿನ ಚಿಪ್ ಸ್ಕ್ಯಾನ್ ಮಾಡಿದಾಗ ಈ ಅಂಶ ಬಯಲಾಗಿದೆ. ಹೆಣ್ಣನ್ನು ಒಲಿಸಿಕೊಳ್ಳಲು ಗಂಡು ಕಾಳಿಂಗಗಳ ಮಧ್ಯೆ ತಿಕ್ಕಾಟವೇ ನಡೆಯುತ್ತದೆ ಎಂದೂ ಅಧ್ಯಯನ ಉಲ್ಲೇಖಿಸಿದೆ.

'ಕಾಳಿಂಗ–ಮಾನವ ಸಂಘರ್ಷ' ಸುಳ್ಳು ಸಂಕಥನ

'ಕಾಳಿಂಗ ಸರ್ಪಗಳ ಅಧ್ಯಯನದ ಹೆಸರಿನಲ್ಲಿ ಸರ್ಪಗಳ ಶೋಷಣೆ ನಡೆಯುತ್ತಿದೆ. ಇದರ ಅಧ್ಯಯನಕ್ಕೆ ಅನುಮತಿ ಮತ್ತು ದೇಶ–ವಿದೇಶಗಳಿಂದ ಅನುದಾನ ಪಡೆಯಲು ಕಾಳಿಂಗ–ಮಾನವ ಸಂಘರ್ಷದ ಸುಳ್ಳು ಸಂಕಥನವನ್ನು ಸೃಷ್ಟಿಸಲಾಗಿದೆ' ಎಂದು ಪರಿಸರ ಕಾರ್ಯಕರ್ತ ನಾಗರಾಜ ಕೂವೆ ದೂರಿದ್ದಾರೆ.

'ಮಲೆನಾಡಿನ ಜನ ಕಾಳಿಂಗಗಳನ್ನು ಕೊಲ್ಲುತ್ತಾರೆ. ಕಾಳಿಂಗ ಗೂಡಿಗೆ ಬೆಂಕಿ ಹಾಕುತ್ತಾರೆ, ಮೊಟ್ಟೆಗಳನ್ನು ನಾಶ ಮಾಡುತ್ತಾರೆ. ಇಲ್ಲಿ ಮಾನವ–ಕಾಳಿಂಗ ಸರ್ಪ ಸಂಘರ್ಷವಿದೆ, ಕಾಳಿಂಗಗಳ ಸಂತತಿ ಕುಸಿದಿದೆ, ಇದರಿಂದ ವಿಶೇಷ ಮುತುವರ್ಜಿ ವಹಿಸಿ ಕಾಳಿಂಗ ಸರ್ಪ ಸಂರಕ್ಷಣೆ ಮಾಡಬೇಕಿದೆ. ನಾವು ಜನರಲ್ಲಿ ಇವುಗಳ ಬಗೆಗೆ ಜಾಗೃತಿ ಮೂಡಿಸುತ್ತಿದ್ದೇವೆ. ಹಾಗಾಗಿ ಈಗ ಪರಿಸ್ಥಿತಿ ಬದಲಾಗುತ್ತಿದೆ ಎಂದು ಬಿಂಬಿಸುತ್ತಿದ್ದಾರೆ. ವಾಸ್ತವದಲ್ಲಿ ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಸರ್ಪಗಳ ಬಗ್ಗೆ ಜನರಲ್ಲಿ ವಿಶಿಷ್ಟ ಭಾವನೆ, ಭಕ್ತಿ ಇದೆ. ಜನ ಸರ್ಪಗಳನ್ನು ಕೊಲ್ಲುವುದಿಲ್ಲ ಮತ್ತು ಅವುಗಳಿಗೆ ತೊಂದರೆ ಮಾಡುವುದಿಲ್ಲ' ಎಂದು ಅವರು ಹೇಳಿದ್ದಾರೆ.

'ಮಾನವ– ಕಾಳಿಂಗ ಸಂಘರ್ಷದ ವ್ಯಾಖ್ಯಾನ ಮತ್ತು ಉಪಜೀವನದ ಹೆಸರಿನಲ್ಲಿ ಮಲೆನಾಡಿನ ಎಲ್ಲ ಜಿಲ್ಲೆಗಳಲ್ಲಿ ತಮ್ಮ ಕಾರ್ಯಚಟುವಟಿಕೆ ವಿಸ್ತರಿಸಲು ಮುಂದಾಗಿದ್ದಾರೆ. ಆ ಮೂಲಕ ಕಾಳಿಂಗ ಸರ್ಪ ಸಂರಕ್ಷಣೆಗೆ ಹಣ ನೀಡುವ ಉದ್ದೇಶವನ್ನೂ ಹೊಂದಿದ್ದಾರೆ. ನಿರುಪದ್ರವಿ ಸರ್ಪಗಳನ್ನು ಅವುಗಳ ಪಾಡಿಗೆ ಇರಲು ಬಿಡಬೇಕು. ಮಲೆನಾಡಿನ ಜನರಿಂದ ಅವುಗಳಿಗೆ ಯಾವುದೇ ಅಪಾಯವಿಲ್ಲ. ಆದರೆ, ಅಧ್ಯಯನ ಚಟುವಟಿಕೆ ಮತ್ತು ಅದರ ಹೆಸರಲ್ಲಿ ಹಣ ಮಾಡುವುದರಿಂದ ಮುಂದಾಗಬಹುದಾದ ಸಂಸ್ಥೆಗಳಿಗೆ ಕಡಿವಾಣ ಹಾಕಬೇಕು' ಎಂದು ಒತ್ತಾಯಿಸಿದ್ದಾರೆ.

ಕಾಳಿಂಗಗಳ ದೇಹದೊಳಗೆ, ಚಿಪ್ ಹುದುಗಿಸಿ ಹಿಂಸೆ ಕೊಟ್ಟು, ಅವುಗಳ ಅಧ್ಯಯನದ ಹೆಸರಿನಲ್ಲಿ ಅವುಗಳ ಜೀವನ ವ್ಯವಸ್ಥೆಯಲ್ಲಿ ಹಸ್ತಕ್ಷೇಪ ಮಾಡುವುದು ಅಕ್ಷಮ್ಯ. ಇದನ್ನು ತಡೆಯಲು ಸರ್ಕಾರ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ನಾಗರಾಜ ಕೂವೆ ಆಗ್ರಹಿಸಿದ್ದಾರೆ.

ಆಂಬುಲೆನ್ಸ್ ಚಾಲಕರ ವಿಚಾರಣೆ

ಪ್ರಜಾವಾಣಿ ವಾರ್ತೆ

ಧರ್ಮಸ್ಥಳ ಪ್ರಕರಣ

ಮಂಗಳೂರು: ಧರ್ಮಸ್ಥಳದಲ್ಲಿ ಬೆಳವಣಿಗೆ ಕುರಿತು ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ ಅಧಿಕಾರಿಗಳು, ಗ್ರಾಮದಲ್ಲಿ ಅಸಹಜವಾಗಿ ಸಾವಿಗೀಡಾಗಿದ್ದವರ ಮೃತದೇಹಗಳನ್ನು ಸಾಗಿಸಲು ನೆರವಾಗಿದ್ದರು ಎನ್ನಲಾದ ಇಬ್ಬರು ಆಂಬುಲೆನ್ಸ್ ಚಾಲಕರನ್ನು ಶನಿವಾರ ವಿಚಾರಣೆಗೆ ಒಳಪಡಿಸಿದರು.

ಬೆಳ್ತಂಗಡಿಯ ಜಲೀಲ್ ಹಾಗೂ ಹಮೀದ್ ಎಸ್ಐಟಿಯಿಂದ ವಿಚಾರಣೆಗೆ ಒಳಗಾದ ಆಂಬುಲೆನ್ಸ್ ಚಾಲಕರು.

ಎಸ್ಐಟಿ ಕಚೇರಿಯಿಂದ ಬಂದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಜಲೀಲ್, 'ನಾನು ಬೆಳ್ತಂಗಡಿಯಲ್ಲಿ 21 ವರ್ಷಗಳಿಂದ ಆಂಬುಲೆನ್ಸ್ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಕೆಲಸಕ್ಕೆ ಸಂಬಂಧಿಸಿದ ಅಧಿಕಾರಿಗಳು ಮಾಹಿತಿ ಕೇಳಿದರು' ಎಂದರು.

'ಅಸಹಜ ಸಾವುಗಳಿಗೆ ಸಂಬಂಧಿಸಿದಂತೆ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಸಾಗಿಸಲು ಪೊಲೀಸರು ನನಗೆ ಕರೆ ಮಾಡುತ್ತಿದ್ದರು. ಆತ್ಮಹತ್ಯೆ, ನೇತ್ರಾವತಿ ನದಿಯಲ್ಲಿ ಮುಳುಗಿ ಮೃತಪಟ್ಟವರು, ರಸ್ತೆಯಪಘಾತದಲ್ಲಿ ಸತ್ತವರ ಹಾಗೂ ಗುರುತು ಪತ್ತೆಯಾಗದ ಮೃತದೇಹಗಳನ್ನು ನಾನು ಸಾಗಿಸಿದ್ದೆ' ಎಂದು ತಿಳಿಸಿದರು.

'ಪ್ರತಿಬಾರಿ ಈಗಲೂ ಪ್ರತಿಯಿಲ್ಲದೇ. ಇನ್ನು ಮುಂದೆಯೂ ನೋಟಿಸ್ ನೀಡಿದಾಗ ವಿಚಾರಣೆಗೆ ಹಾಜರಾಗಬೇಕಾಗುತ್ತದೆ ಎಂದು ಎಸ್ಐಟಿ ಅಧಿಕಾರಿಗಳು ತಿಳಿಸಿದ್ದಾರೆ' ಎಂದು ಅವರು ಹೇಳಿದರು.

ಜಾಮೀನು ಅರ್ಜಿ ವಿಚಾರಣೆ ಮುಂದೂಡಿಕೆ: ಮನೆಯಲ್ಲಿ ಶಸ್ತ್ರಾಸ್ತ್ರ ಪತ್ತೆಯಾದ ಪ್ರಕರಣದಲ್ಲಿ ಮಹೇಶ್ ಶೆಟ್ಟಿ ತಿಮರೋಡಿ ಅವರಿಗೆ ನಿರೀಕ್ಷಣಾ ಜಾಮೀನು ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿ ಇಲ್ಲಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರು ಎರಡೂ ಕಡೆಯವರ ವಾದವನ್ನು ಆಲಿಸಿದ್ದಾರೆ.

ಈ ಅರ್ಜಿ ಕುರಿತು ಇದೇ 9ರಂದು ಆದೇಶ ಪ್ರಕಟವಾಗುವ ಸಾಧ್ಯತೆ ಇದೆ ಎಂದು ತಿಮರೋಡಿ ಪರ ವಾದಿಸಿದ ವಕೀಲ ದಿನೇಶ್ ಹೆಗ್ಡೆ ಉಳೆಪಾಡಿ ತಿಳಿಸಿದ್ದಾರೆ.

ಮಹೇಶ್ ಶೆಟ್ಟಿ ತಿಮರೋಡಿ ವಿರುದ್ಧ ದಾಖಲಾಗಿದ್ದ 13 ಪ್ರಕರಣಗಳ ಕುರಿತು ಈಗಾಗಲೇ ಇತ್ಯರ್ಥವಾಗಿದೆ. ಒಂದು ಪ್ರಕರಣದಲ್ಲಿ ಮಾತ್ರ ಅವರಿಗೆ ದಂಡ ವಿಧಿಸಲಾಗಿದೆ. 11 ಪ್ರಕರಣಗಳು ಇನ್ನೂ ಇತ್ಯರ್ಥವಾಗಬೇಕಿವೆ. ಎರಡು ಪ್ರಕರಣಗಳಲ್ಲಿ ಬಿ ವರದಿ ಸಲ್ಲಿಸಲಾಗಿದೆ ಎಂದು ಮಾಹಿತಿ ನೀಡಿದರು.

'ಧರ್ಮಸ್ಥಳ ಪ್ರಕರಣದ ಸಾಕ್ಷಿ ದೂರುದಾರ ತಿಮರೋಡಿ ಮನೆಯಲ್ಲಿ ಆಶ್ರಯ ಪಡೆದಿದ್ದ ಕುರಿತು ಎಸ್ಐಟಿ ಅಧಿಕಾರಿಗಳ ಮುಂದೆ ಹೇಳಿಕೆ ನೀಡಿದ್ದ. ಎಸ್ಐಟಿ ಅಧಿಕಾರಿಗಳು ಶೋಧನಾ ವಾರಂಟ್ ಪಡೆದು ತಿಮರೋಡಿ ಮನೆಯಲ್ಲಿ ಶೋಧ ನಡೆಸಿದ್ದಾಗ 2 ತಲವಾರು 1 ಬಂದೂಕು ಸೇರಿ 44 ಸ್ವತ್ತುಗಳನ್ನು ವಶಕ್ಕೆ ಪಡೆದಿದ್ದರು. ಈ ಸಂಬಂಧ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿಎಫ್ಐಆರ್‌ದಾಖಲಾಗಿತ್ತು.

'ರಾಜ್ಯದ ಜನರು ಆತಂಕ ಪಡಬೇಕಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೇರೆ ರಾಜ್ಯಗಳಲ್ಲಿ ಮಕ್ಕಳ ಸಾವಿಗೆ ಕಾರಣವಾಗಿರುವ ಸಿರಪ್‌ನ ಬಗ್ಗೆ ನಿಗಾ ವಹಿಸುವಂತೆ ನಮ್ಮ ರಾಜ್ಯದ ಔಷಧ ನಿಯಂತ್ರಣ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ನಮ್ಮ ರಾಜ್ಯಕ್ಕೆ ಆ ಸಿರಪ್‌ನ ಪೂರೈಕೆ ಇಲ್ಲ. ಹೀಗಾಗಿ ಪೋಷಕರು ಆತಂಕ ಪಡಬೇಕಾಗಿಲ್ಲ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ದಿನೇಶ್ ಗುಂಡೂರಾವ್

ನಗರದಲ್ಲಿ ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯದ ಸರ್ಕಾರಿ ಆಸ್ಪತ್ರೆಗಳಿಗೆ ಈ ಸಿರಪ್‌ನ ಪೂರೈಕೆ ಇಲ್ಲ. ಆದರೆ ಖಾಸಗಿಯವರು ತರಿಸಿಕೊಳ್ಳುತ್ತಿದ್ದಾರೆಯೇ ಎಂಬುದರ ಬಗ್ಗೆ ಪರಿಶೀಲನೆ ನಡೆಸಿ ಎಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ' ಎಂದರು.

'ಬೇರೆಲ್ಲಾ ರಾಜ್ಯಗಳಿಗಿಂತ ಕರ್ನಾಟಕದಲ್ಲಿ ಔಷಧಗಳ ಪರೀಕ್ಷೆ ಹೆಚ್ಚಾಗಿ ನಡೆಯುತ್ತದೆ. ಈ ವಿಚಾರದಲ್ಲಿ ಕರ್ನಾಟಕದ ಮಾದರಿಯನ್ನು ಅನುಸರಿಸಿ ಎಂದು ಕೇಂದ್ರವು ಇತರ ರಾಜ್ಯಗಳಿಗೆ ಸಲಹೆ ನೀಡಿದೆ' ಎಂದರು.

'ಎಲ್ಲ ರಾಜ್ಯಗಳಲ್ಲಿ ನಡೆಯುವ ಗುಣಮಟ್ಟ ಪರೀಕ್ಷೆಯಲ್ಲಿ ವಿಫಲವಾಗುವ ಔಷಧಗಳನ್ನು ಕೇಂದ್ರದ ಜಾಲತಾಣದಲ್ಲಿ ಪ್ರಕಟಿಸಲಾಗುತ್ತಿದೆ. ಆದರೆ, ಅಂತಹ ಪ್ರಕಟಣೆಗಳನ್ನು ತಕ್ಷಣವೇ ಎಲ್ಲ ರಾಜ್ಯಗಳ ಗಮನಕ್ಕೆ ತರುವ ವ್ಯವಸ್ಥೆಯಾಗಬೇಕು' ಎಂದು ಒತ್ತಾಯಿಸಿದರು.

'ಬಿಡುಗಡೆಗೆ ಮುನ್ನವೇ ಪರೀಕ್ಷೆ ನಡೆಸಬೇಕಿತ್ತು'

ಮೈಸೂರು: 'ಕೆಲವು ರಾಜ್ಯಗಳಲ್ಲಿ ಕೆಮ್ಮಿನ ಸಿರಪ್ ಕುಡಿದು ಮಕ್ಕಳ ಸಾವು ಪ್ರಕರಣ ಆತಂಕಕಾರಿಯಾದುರು. ಮಾರುಕಟ್ಟೆಗೆ ಔಷಧ ಬಿಡುಗಡೆಗೆ ಮುನ್ನವೇ ಪರೀಕ್ಷೆ ನಡೆಸಬೇಕಿತ್ತು. ಈಗ ಅದನ್ನು ಬಳಸಬೇಡಿ ಎಂದು ಕೇಂದ್ರ ಸರ್ಕಾರ ಹೇಳಿರುವುದು ಸರಿಯಾದ ಕ್ರಮವಲ್ಲ' ಎಂದು ಸಚಿವ ಎಚ್‌.ಸಿ.ಮಹದೇವಪ್ಪ ಹೇಳಿದ್ದಾರೆ.

ಮಹದೇವಪ್ಪ

ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ದೇಶದ ವಿವಿಧೆಡೆ 11 ಮಕ್ಕಳು ಸಾವಿಗೀಡಾಗಿರುವುದು ವಿಷಾದಕರ. ಕೇಂದ್ರ ಈ ಅನಾಹುತ ಸಂಭವಿಸುವ ಮುನ್ನವೇ ಕ್ರಮ ತೆಗೆದುಕೊಳ್ಳಬೇಕಿತ್ತು' ಎಂದರು.

ಸಾವಿಗೆ ಕೆಮ್ಮಿನ ಸಿರಪ್ ನಂಟು: ತನಿಖೆ ಚುರುಕು

ಒಂದನೇ ಪುಟದಿಂದ...

ಮಧ್ಯಪ್ರದೇಶದ ಛಿಂದ್ವಾರ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ 9 ಮಕ್ಕಳು ಹಾಗೂ ರಾಜಸ್ಥಾನದಲ್ಲಿ ಇಬ್ಬರು ಮಕ್ಕಳು ಮೃತಪಟ್ಟಿದ್ದು, ಈ ಸಾವುಗಳಿಗೆ ಕೆಮ್ಮಿನ ಸಿರಪ್ ಸೇವನೆಯೇ ಕಾರಣ ಎಂಬ ಶಂಕೆಯೂ ವ್ಯಕ್ತವಾಗಿತ್ತು. ಇದರ ಬೆನ್ನಲ್ಲೇ, ಸಚಿವಾಲಯ ತನಿಖೆಗೆ ಮುಂದಾಗಿದೆ.

'ಡಿಇಜಿ' ವಿಷಕಾರಿ ದ್ರಾವಣವಾಗಿದ್ದು, ಅದನ್ನು ವಿವಿಧ ಕೈಗಾರಿಕೆಗಳಲ್ಲಿ ಬಳಸಲಾಗುತ್ತದೆ. ಅನೇಕ ದೇಶಗಳಲ್ಲಿ ಸಂಭವಿಸಿದ ಸಾವುಗಳಿಗೆ ಈ ದ್ರಾವಣ ಕಾರಣ ಎಂದು ಹೇಳಲಾಗುತ್ತಿದೆ. ಅನುಮತಿಸಿದ ಮಿತಿಗಿಂತಲೂ ಅಧಿಕ ಪ್ರಮಾಣದಲ್ಲಿ 'ಡಿಇಜಿ' ಹಾಗೂ ಇಥಿಲೀನ್ ಗ್ಲೈಕೋಲ್(ಇಜಿ) ಬಳಕೆ ಮೂತ್ರಪಿಂಡಕ್ಕೆ ಹಾನಿ ತರುತ್ತದೆ.

ಪರಿಶೀಲನೆ: ಆರು ರಾಜ್ಯಗಳಲ್ಲಿರುವ 19 ಔಷಧ ತಯಾರಿಕೆ ಘಟಕಗಳಲ್ಲಿ ಉತ್ಪಾದನೆಯಾಗುತ್ತಿರುವ ಕೆಮ್ಮಿನ ಸಿರಪ್ ಹಾಗೂ ಆ್ಯಂಟಿಬಯೊಟಿಕ್ ಸೇರಿ ಇತರ ಔಷಧಿಗಳು ಎಷ್ಟರ ಮಟ್ಟಿಗೆ ಸುರಕ್ಷಿತ ಎಂಬುದನ್ನು ಪರಿಶೀಲಿಸುವ ಕಾರ್ಯಕ್ಕೆ ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆಯು (ಸಿಡಿಎಸ್‌ಸಿಒ) ಚಾಲನೆ ನೀಡಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಎನ್‌ಐವಿ, ಐಸಿಎಂಆರ್, ರಾಷ್ಟ್ರೀಯ ಪರಿಸರ ಎಂಜಿನಿಯರಿಂಗ್ ಸಂಶೋಧನಾ ಸಂಸ್ಥೆ, ಸಿಡಿಎಸ್‌ಸಿಒ ಹಾಗೂ ನಾಗ್ಪುರದ ಎಐಐಎಂಎಸ್‌ನ ತಜ್ಞರ ತಂಡವು, ಮಕ್ಕಳ ಸಾವಿಗೆ ಕಾರಣ ಎನ್ನಲಾದ ಕೆಮ್ಮಿನ ಸಿರಪ್‌ನ ಮಾದರಿಗಳ ವಿಶ್ಲೇಷಣೆ ಕೈಗೊಂಡಿದೆ.

ಪ್ರಮುಖ ಅಂಶಗಳು

- 'ಕೋಲ್ಡ್ರಿಫ್' ಉತ್ಪಾದನೆ ಸ್ಥಗಿತಗೊಳಿಸುವಂತೆ ಸ್ರೇಸನ್ ಫಾರ್ಮಾ ಕಂಪನಿಗೆ ತಮಿಳುನಾಡು ಸರ್ಕಾರ ಸೂಚನೆ
- ಸದ್ಯ, ಛಿಂದ್ವಾರ ಹಾಗೂ ನಾಗ್ಪುರದಲ್ಲಿ ದಾಖಲಾಗಿರುವ ಮಕ್ಕಳು ಸೇರಿ ಪಟ್ಟು 13 ಮಕ್ಕಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಮಧ್ಯಪ್ರದೇಶದ ಜಬಲ್ಪುರದಲ್ಲಿ ಕಟಾರಿಯಾ ಫಾರ್ಮಾಸ್ಯೂಟಿಕಲ್ಸ್ ಮೇಲೆ ಡ್ರಗ್ಸ್ ಮತ್ತು ಫಾರ್ಮಾಸ್ಯೂಟಿಕಲ್ಸ್ ಇಲಾಖೆ ಅಧಿಕಾರಿಗಳು ನಡೆಸಿದ ದಾಳಿ ವೇಳೆ ವಶಪಡಿಸಿಕೊಂಡ ಕೆಮ್ಮಿನ ಸಿರಪ್ 'ಕೋಲ್ಡ್ರಿಫ್' ಬಾಟಲಿಗಳನ್ನು ಅಧಿಕಾರಿಯೊಬ್ಬರು ಶನಿವಾರ ಪರಿಶೀಲಿಸಿದರು —ಪಿಟಿಐ ಚಿತ್ರ

ರಾಜಸ್ಥಾನದ ಜೈಪುರ ಕೇಸನ್ಸ್ ಫಾರ್ಮಾ ಕಾರ್ಖಾನೆ ಹೊರಗೆ ಎಎಪಿ ಕಾರ್ಯಕರ್ತರು ಶನಿವಾರ ಪ್ರತಿಭಟಿಸಿದರು —ಪಿಟಿಐ ಚಿತ್ರ

> ಛಿಂದ್ವಾರದಲ್ಲಿ 'ಕೋಲ್ಡ್ರಿಫ್' ಸಿರಪ್ ಸೇವಿಸಿ ಮಕ್ಕಳು ಮೃತಪಟ್ಟಿರುವುದು ಹೃದಯ ವಿದ್ರಾವಕ. ಮಧ್ಯಪ್ರದೇಶದಲ್ಲಿ ಈ ಸಿರಪ್ ಮಾರಾಟವನ್ನು ಸಂಪೂರ್ಣ ನಿಷೇಧಿಸಲಾಗಿದೆ. ಈ ಸಿರಪ್ ತಯಾರಿಸಿರುವ ಕಂಪನಿಯ ಇತರ ಉತ್ಪನ್ನಗಳ ಮಾರಾಟವನ್ನು ಕೂಡ ನಿಷೇಧಿಸಲಾಗುತ್ತದೆ
>
> **ಮೋಹನ್ ಯಾದವ್,** ಮಧ್ಯಪ್ರದೇಶ ಮುಖ್ಯಮಂತ್ರಿ

> ಕೆಮ್ಮಿನ ಸಿರಪ್ ಕೋಲ್ಡ್ರಿಫ್ ಕಲಬೆರಕೆಯಾಗಿರುವುದು ಮಾದರಿಗಳ ಪರೀಕ್ಷೆಯಿಂದ ತಿಳಿದುಬಂದಿದ್ದು, ಈ ಬಗ್ಗೆ ವಿವರಣೆ ಕೇಳಲಾಗಿದೆ. ಕಂಪನಿಯು ತೃಪ್ತಿಕರ ವಿವರಣೆ ನೀಡುವವರೆಗೆ ಈ ಸಿರಪ್ ಉತ್ಪಾದನೆ ಸ್ಥಗಿತಗೊಳಿಸುವಂತೆ ಸೂಚಿಸಲಾಗಿದೆ
>
> **ತಮಿಳುನಾಡು ಆಹಾರ ಸುರಕ್ಷತೆ ಮತ್ತು ಔಷಧ ನಿರ್ವಹಣೆ ಇಲಾಖೆ**

> ಶಂಕಿತ ಮೂತ್ರಪಿಂಡ ಸಮಸ್ಯೆಯಿಂದಾಗಿ ಮಧ್ಯಪ್ರದೇಶದ ಛಿಂದ್ವಾರ ಜಿಲ್ಲೆಯಲ್ಲಿ 9 ಮಕ್ಕಳು ಮೃತಪಟ್ಟವೆ. ಬ್ರೇಕ್ ಆಯಿಲ್ ದ್ರಾವಣ ಮಿಶ್ರಿತ ಕೆಮ್ಮಿನ ಸಿರಪ್ ಕೊಟ್ಟದ್ದೇ ಮಕ್ಕಳ ಸಾವಿಗೆ ಕಾರಣ
>
> **ಕಮಲ್ ನಾಥ್,** ಕಾಂಗ್ರೆಸ್‌ನ ಹಿರಿಯ ನಾಯಕ

> ಕೆಮ್ಮು, ನೆಗಡಿ ನಿವಾರಣೆಗಾಗಿ ಬಳಸುವ ಡೆಕ್ಸ್ಟ್ರೊಮಿಥೋರ್ಫನ್ ಔಷಧವನ್ನು ನಾಲ್ಕು ವರ್ಷ ಒಳಗಿನ ಮಕ್ಕಳಿಗೆ ನೀಡದಂತೆ ಕೇಂದ್ರ ಸರ್ಕಾರ 2021ರಲ್ಲಿಯೇ ಸಲಹೆ ನೀಡಿದೆ
>
> **ಗಾಯತ್ರಿ ರಾಥೋರ್,** ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ, ರಾಜಸ್ಥಾನ

> ಕೇರಳದಲ್ಲಿ ಕೆಮ್ಮಿನ ಸಿರಪ್ 'ಕೋಲ್ಡ್ರಿಫ್' ಮಾರಾಟ ನಿಷೇಧಿಸಿ ಆದೇಶಿಸಲಾಗಿದೆ. ಕಲುಷಿತಗೊಂಡಿದೆ ಎನ್ನಲಾದ ಬ್ಯಾಚ್‌ನ ಈ ಸಿರಪ್‌ಅನ್ನು ರಾಜ್ಯದಲ್ಲಿ ಮಾರಾಟ ಮಾಡಲಾಗುತ್ತಿರಲಿಲ್ಲ. ಆದಾಗ್ಯೂ, ಸುರಕ್ಷತಾ ಕ್ರಮವಾಗಿ ಮಾರಾಟ ನಿಷೇಧಿಸಿ ಆದೇಶಿಸಲಾಗಿದೆ
>
> **ವೀಣಾ ಜಾರ್ಜ್,** ಆರೋಗ್ಯ ಸಚಿವೆ, ಕೇರಳ

ರಾಜಸ್ಥಾನ: ಔಷಧ ನಿಯಂತ್ರಕ ಅಮಾನತು

ಜೈಪುರ: ಕೆಮ್ಮಿನ ಸಿರಪ್ ಸೇವನೆಯಿಂದಾಗಿ ರಾಜ್ಯದಲ್ಲಿ ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ ಎನ್ನಲಾದ ಘಟನೆಗೆ ಸಂಬಂಧಿಸಿ, ರಾಜ್ಯದ ಔಷಧ ನಿಯಂತ್ರಕ ರಾಜಾರಾಮ್ ಶರ್ಮಾ ಅವರನ್ನು ಅಮಾನತು ಮಾಡಿ ರಾಜಸ್ಥಾನ ಸರ್ಕಾರ ಶನಿವಾರ ಆದೇಶಿಸಿದೆ.

ಅಲ್ಲದೇ, ಜೈಪುರ ಮೂಲದ ಕೇಸನ್ಸ್ ಫಾರ್ಮಾ ಕಂಪನಿ ಉತ್ಪಾದಿಸುವ 19 ಔಷಧಗಳು ಹಾಗೂ ಡೆಕ್ಸ್ಟ್ರೊಮಿಥೋರ್ಫನ್ ಹೊಂದಿರುವ ಇತರ ಎಲ್ಲ ಕೆಮ್ಮಿನ ಸಿರಪ್‌ಗಳ ಮಾರಾಟವನ್ನು ಸಹ ಸ್ಥಗಿತಗೊಳಿಸಿ ಆದೇಶಿಸಲಾಗಿದೆ.

ರಾಜಾರಾಮ್ ಶರ್ಮಾ, ಔಷಧಗಳ ಗುಣಮಟ್ಟ ಪತ್ತೆ ಪ್ರಕ್ರಿಯೆ ಮೇಲೆ ಪ್ರಭಾವ ಬೀರಿದ್ದರು ಎಂಬ ಆರೋಪ ಎದುರಿಸುತ್ತಿದ್ದಾರೆ. ಈ ಕಾರಣಕ್ಕಾಗಿ ಅವರನ್ನು ಅಮಾನತು ಮಾಡಲಾಗಿದೆ ಎಂದು ವೈದ್ಯಕೀಯ ಮತ್ತು ಆರೋಗ್ಯ ಇಲಾಖೆ ಹೇಳಿದೆ.

ಈ ಬೆಳವಣಿಗೆಗಳ ಬೆನ್ನಲ್ಲೇ, ಸಮಗ್ರ ತನಿಖೆಗೆ ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ ಆದೇಶಿಸಿದ್ದಾರೆ.

'ತಮಿಳುನಾಡಿನ ಸಿರಪ್ ಕಲುಷಿತ'

ಮಧ್ಯಪ್ರದೇಶ ಸರ್ಕಾರದ ಮನವಿ ಮೇರೆಗೆ ತಮಿಳುನಾಡು ಆಹಾರ ಸುರಕ್ಷತೆ ಮತ್ತು ಔಷಧ ನಿರ್ವಹಣೆ ಇಲಾಖೆಯು, ಕೆಮ್ಮಿನ ಸಿರಪ್ 'ಕೋಲ್ಡ್ರಿಫ್'ನ ಮಾದರಿಗಳ ಪರೀಕ್ಷೆ ನಡೆಸಿದೆ. ಈ ಮಾದರಿಗಳಲ್ಲಿ, ಅನುಮತಿಸಿದ ಮಿತಿಗಿಂತ ಅಧಿಕ ಪ್ರಮಾಣದಲ್ಲಿ 'ಡಿಇಜಿ' ಇರುವುದು ಪರೀಕ್ಷೆಯಿಂದ ದೃಢಪಟ್ಟಿದೆ ಎಂದು ಆರೋಗ್ಯ ಸಚಿವಾಲಯ ಹೇಳಿದೆ.

ತಮಿಳುನಾಡು ಆಹಾರ ಸುರಕ್ಷತೆ ಮತ್ತು ಔಷಧ ನಿರ್ವಹಣೆ ಇಲಾಖೆ ಅಧಿಕಾರಿಯೊಬ್ಬರು ಕೂಡ ಇದೇ ಮಾಹಿತಿ ನೀಡಿದ್ದಾರೆ.

ತಮಿಳುನಾಡಿನ ಕಾಂಚಿಪುರಂನಲ್ಲಿರುವ ಸ್ರೇಸನ್ ಫಾರ್ಮಾ ಕಂಪನಿಯ ಘಟಕದಲ್ಲಿ ಈ ಸಿರಪ್ ಅನ್ನು ತಯಾರಿಸಲಾಗುತ್ತಿದೆ.

ತನ್ನ ಘಟಕದಲ್ಲಿ ತಯಾರಾಗುವ ಕೆಮ್ಮಿನ ಸಿರಪ್‌ನಲ್ಲಿ 'ಡಿಇಜಿ' ಪ್ರಮಾಣ ಅಪಾಯಕಾರಿ ಮಟ್ಟದಲ್ಲಿ ಇರುವ ಕುರಿತು ಸ್ರೇಸನ್ ಫಾರ್ಮಾ ಯಾವುದೇ ಪ್ರತಿಕ್ರಿಯೆ ನೀಡಿಲ್ಲ ಎಂದು ರಾಯಿಟರ್ಸ್ ವರದಿ ಮಾಡಿದೆ.

'ಕೆಮ್ಮಿನ ಸಿರಪ್ ಪರೀಕ್ಷಾ ವರದಿ ಕೈಸೇರಿದ ಬೆನ್ನಲ್ಲೇ, ಅಕ್ಟೋಬರ್ 1ರಿಂದ ಅನ್ವಯವಾಗುವಂತೆ ರಾಜ್ಯದಲ್ಲಿ 'ಕೋಲ್ಡ್ರಿಫ್' ಮಾರಾಟವನ್ನು ತಮಿಳುನಾಡು ಸರ್ಕಾರ ನಿಷೇಧಿಸಿದೆ. ಮಾರುಕಟ್ಟೆಯಿಂದ ಈ ಸಿರಪ್ ಅನ್ನು ಹಿಂಪಡೆಯುವಂತೆಯೂ ಸೂಚಿಸಿದೆ' ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ಸಿಡಿಎಸ್‌ಸಿಒ ಆರು ಹಾಗೂ ಮಧ್ಯಪ್ರದೇಶದ ಆಹಾರ ಮತ್ತು ಔಷಧ ನಿರ್ವಹಣೆ(ಎಂಪಿಎಫ್‌ಡಿಎ) ಇಲಾಖೆ ಮೂರು ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಿತ್ತು. ಈ ಮಾದರಿಗಳಲ್ಲಿ ಡೈಇಥಿಲೀನ್ ಗ್ಲೈಕೋಲ್(ಡಿಇಜಿ) ಮತ್ತು ಇಥಿಲೀನ್ ಗ್ಲೈಕೋಲ್(ಇಜಿ) ಕಂಡುಬಂದಿಲ್ಲ ಎಂದು ಆರೋಗ್ಯ ಸಚಿವಾಲಯ ಶುಕ್ರವಾರ ಹೇಳಿತ್ತು.

'ಕೇಂದ್ರಕ್ಕೆ ಸರ್ವಪಕ್ಷ ನಿಯೋಗ ಒಯ್ಯಲಿ'

ಪ್ರಜಾವಾಣಿ ವಾರ್ತೆ

ವಿಜಯಪುರ: 'ರಾಜ್ಯದಲ್ಲಿ ಮಳೆ, ಪ್ರವಾಹಕ್ಕೆ ತುತ್ತಾಗಿರುವ ರೈತರಿಗೆ ಸೂಕ್ತ ಪರಿಹಾರ, ನೆರವು ಕಲ್ಪಿಸಲು ಕೇಂದ್ರ ಸರ್ಕಾರದ ಬಳಿಗೆ ಸರ್ವಪಕ್ಷ ನಿಯೋಗ ಒಯ್ಯಲು ಸರ್ಕಾರ ಶೀಘ್ರ ಮುಂದಾಗಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಭೀಮಾ ನದಿ ಪ್ರವಾಹ ಬಾಧಿತ ಜಿಲ್ಲೆಯ ಇಂಡಿ, ಆಲಮೇಲ ತಾಲ್ಲೂಕಿನ ರೈತರ ಹೊಲಗಳಿಗೆ ಶನಿವಾರ ಭೇಟಿ ನೀಡಿ ಹಾನಿ ಪರಿಶೀಲಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

'ರಾಜ್ಯದಲ್ಲಿ ಮಳೆ ಮತ್ತು ಪ್ರವಾಹದಿಂದ ಆಗಿರುವ ಹಾನಿಯನ್ನು ಈವರೆಗೂ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಗಮನಕ್ಕೆ ತಂದಿಲ್ಲ. ಕೇವಲ ಕೇಂದ್ರದ ಮೇಲೆ ಗೂಬೆ ಕೂರಿಸುವ ಯತ್ನವನ್ನು ಮುಖ್ಯಮಂತ್ರಿ, ಸಚಿವರು ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಮುಖಂಡರಾದ ಸಿ.ಟಿ. ರವಿ, ಎನ್.ರವಿಕುಮಾರ್, ಎ.ಎಸ್.ಪಾಟೀಲ ನಡಹಳ್ಳಿ ಬೆಳೆ ಹಾನಿ ವೀಕ್ಷಿಸಿದರು

'ಪ್ರವಾಹ ವೀಕ್ಷಣೆ ವರದಿಯನ್ನು ಶೀಘ್ರದಲ್ಲೇ ರಾಜ್ಯ ಸರ್ಕಾರಕ್ಕೆ ನೀಡಲಾಗುವುದು. ನೆರೆ ಹಾನಿ ಸಂಬಂಧ ಚರ್ಚಿಸಲು ಶೀಘ್ರ ಸರ್ವಪಕ್ಷ ಸಭೆ ಕರೆಯಬೇಕು' ಎಂದು ಆಗ್ರಹಿಸಿದರು.

ಭಾರತೀಯ ಸ್ಟೇಟ್ ಬ್ಯಾಂಕ್ (SBI)
ಪ್ರಾದೇಶಿಕ ವ್ಯವಹಾರ ಕಚೇರಿ–05 (CBD) ಆಡಳಿತ ಕಚೇರಿ–02 (ಬೆಂ.ಉ)
ನೆಟ್‌ವರ್ಕ್–1, 2ನೇ ಮಹಡಿ, ಎಸ್.ಬಿ.ಐ ಕಟ್ಟಡ, ಕೆ.ಜಿ. ರಸ್ತೆ, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು–560009
ಮಾಧವನಗರ ಶಾಖೆ (40196) ಅನ್ನು ಸ್ಥಳಾಂತರಗೊಳಿಸುವುದರ ಕುರಿತು
ನಮ್ಮ ಮಾಧವನಗರ ಶಾಖೆಯನ್ನು (40196) ಹೆಚ್ಚು ಅನುಕೂಲಕರ ಮತ್ತು ವಿಶಾಲವಾದ ಸ್ಥಳಕ್ಕೆ ಸ್ಥಳಾಂತರಗೊಳಿಸುವುದನ್ನು ಈ ಮೂಲಕ ಸೂಚಿಸುತ್ತೇವೆ. **01.12.2025** ರಿಂದ ಜಾರಿಗೆ ಬರುವಂತೆ **No. 2/1–1, ಮೊದಲನೇ ಮಹಡಿ, ಸೌತ್ ಎಂಡ್ ಸ್ಟ್ರೀಟ್, ಶಿವಾನಂದ ಸ್ಟೋರ್ಸ್ ಹಿಂಭಾಗ, ಕುಮಾರಕೃಪ ರಸ್ತೆ, ಬೆಂಗಳೂರು–560001 ಹೊಸ ವಿಳಾಸವಾಗಲಿದೆ. ನಮ್ಮ ದೂರವಾಣಿ ಸಂಖ್ಯೆಗಳು 8277898649.**
ಹೊಸ ಆವರಣಕ್ಕೆ ಲಾಕರ್‌ಗಳ ಸಾಗಣೆ ಮತ್ತು ಮರು ಸ್ಥಾಪನೆಯಿಂದಾಗಿ **24.11.2025** ರಿಂದ **30.11.2025**ರ ವರೆಗೆ ಲಾಕರ್ ಸೇವೆಗಳಿಗೆ ಅಡ್ಡಿಯಾಗಬಹುದೆಂದು ಈ ಮೂಲಕ ನಾವು ತಿಳಿಸಲು ವಿಷಾದಿಸುತ್ತೇವೆ. ನಿಮ್ಮ ಲಾಕರಿನ ವಸ್ತುಗಳನ್ನು ಹಿಂಪಡೆಯಲು ನೀವು ಬಯಸಿದರೆ, ಕೊನೆಯ ಕ್ಷಣದ ನೂಕುನುಗ್ಗಲನ್ನು ತಪ್ಪಿಸಲು, ಸ್ಥಳಾಂತರಿಸುವ ದಿನಾಂಕಕ್ಕೆ ಕನಿಷ್ಠ 7 ದಿನಗಳ ಮೊದಲು ದಯವಿಟ್ಟು ನಿರ್ವಹಿಸಿ. ಅಲ್ಲದೆ, ಸೌಲಭ್ಯವನ್ನು ಬದಲಾಯಿಸುವ ಅಥವಾ ಮುಚ್ಚುವ ಆಯ್ಕೆಯನ್ನು ನೀವು ಹೊಂದಿದ್ದೀರಿ. ಹೊಸ ಸ್ಥಳದಿಂದ ನಿಮಗೆ ಉತ್ತಮವಾಗಿ ಸೇವೆ ಸಲ್ಲಿಸಲು ನಾವು ಎದುರು ನೋಡುತ್ತಿದ್ದೇವೆ. ಸಹಿ/–ಪ್ರಾದೇಶಿಕ ವ್ಯವಸ್ಥಾಪಕರು, ಪ್ರಾದೇಶಿಕ ವ್ಯವಹಾರ ಕಚೇರಿ–05, ಆಡಳಿತ ಕಚೇರಿ–2

ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
KARNATAKA UPPARA DEVELOPMENT CORPORATION LTD.
(A Government of Karnataka Undertaking)
ಸಂಖ್ಯೆ: ಕಉಅನಿನಿ/ಸಿ.ಆರ್–29/2025–26 ದಿನಾಂಕ: 03.10.2025
ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತವು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಹೊರಗುತ್ತಿಗೆ ಆಧಾರದ ಮೇರೆಗೆ 02 ಎಸಿ ವಾಹನಗಳನ್ನು ಒದಗಿಸಲು ಇ–ಟೆಂಡರ್ ಆಹ್ವಾನಿಸಿದೆ.
ವಿವರಗಳಿಗೆ: https://kppp.karnataka.gov.in ವೆಬ್‌ಸೈಟ್ ವಿಳಾಸವನ್ನು ನೋಡಬಹುದಾಗಿದೆ
KPP PORTAL TENDER NUMBER: KUDCL/2025-26/SE0002
ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ:24/10/2025, 17.30 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:27/10/2025, 11.00ಗಂಟೆ. ಹೆಚ್ಚಿನ ವಿವರಗಳಿಗೆ ದೂರವಾಣಿ 080–22252555 ಸಂಖ್ಯೆಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು.
ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಕ.ಉ.ಅ.ನಿ.ನಿ
ಡಿಐಪಿಆರ್/ಸಿಪಿ/3102/ಸಿಸಿಎಲ್/2025–26

ಕರ್ನಾಟಕ ಸರ್ಕಾರ
ಉಪ ನಿರ್ದೇಶಕರ ಕಾರ್ಯಾಲಯ,
ಸಮಾಜ ಕಲ್ಯಾಣ ಇಲಾಖೆ, ಚಿತ್ರದುರ್ಗ–577501
ಸರ್ಕಾರಿ ವಸತಿ ಪಾಠಶಾಲೆ ಕಟ್ಟಡ, ಸರ್ಕಾರಿ ವಿಜ್ಞಾನ ಕಾಲೇಜು ಎದುರು, ಚಿತ್ರದುರ್ಗ.
ಫೋನ್ ನಂಬರ್ : 08194–295954 e-mail : ddswdcta@gmail.com
ಸಂ: ಉನಿ/ಸಕಇ/ಚಿದು/ಆಹಾರ ಟೆಂಡರ್/ಸಿಆರ್–01/2025–26 ದಿ:03–10–2025
ಟೆಂಡರ್ ಪ್ರಕಟಣೆ
2025–26ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಚಿತ್ರದುರ್ಗ ಜಿಲ್ಲೆಯ 06 ತಾಲ್ಲೂಕುಗಳಲ್ಲಿ ನಡೆಸಲಾಗುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಆಹಾರ ಪದಾರ್ಥಗಳು ಮತ್ತು ಇತರೆ ಅವಶ್ಯಕ ಸಾಮಗ್ರಿಗಳನ್ನು ಪೂರೈಸಲು ಇ–ಪ್ರಕ್ಯೂರಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನ ಮಾಹಿತಿಯು ಈ ಕೆಳಕಂಡಂತಿದೆ.
1) Tender Number: SWD/2025-26/IND0346 Date: 03-10-2025
2) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ: 17,02,80,000/–
3) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: 03.10.2025
4) ಪ್ರೀ ಬಿಡ್ ಸಭೆಯ ದಿನಾಂಕ: 27–10–2025 / ಬೆಳಗ್ಗೆ: 11.00 ಗಂಟೆಗೆ
5) ಆಹಾರ ಸಾಮಗ್ರಿಗಳ ಸ್ಯಾಂಪಲ್ಸ್ ಸಲ್ಲಿಸುವ ಕೊನೆಯ ದಿ:29.10.2025/5.00 pm
6) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿ:03.11.2025/5.00 pm
7) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: 05–11–2025 / 11.00 am
8) ಆರ್ಥಿಕ ಲಕೋಟೆ ತೆರೆಯುವ ದಿನಾಂಕ:– 06–11–2025 / 11.00 am
9) ಇ.ಎಂ.ಡಿ ಮೊತ್ತ ರೂ: 17,02,800/–
DIPR/CTA/KSMCA/403/2025-26 ಸಹಿ/– ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಚಿತ್ರದುರ್ಗ

ಕರ್ನಾಟಕ ಸರ್ಕಾರ
ಆಡಳಿತ ತರಬೇತಿ ಸಂಸ್ಥೆ
ಲಲಿತ ಮಹಲ್ ರಸ್ತೆ, ಮೈಸೂರು–570011
ಕಡತ ಸಂಖ್ಯೆ: ಆತಸಂ/90/ಸಿಬ್ಬಂದಿ/ಸಿಬ್ಬಂದಿ1/2025/ಆಡಳಿತ–ಆತಸಂ ದಿನಾಂಕ: 03.10.2025
ಬೋಧಕರು ಮತ್ತು ಇತರ ಹುದ್ದೆಗಳಿಗೆ ನಿಯೋಜನೆ/ಗುತ್ತಿಗೆ ಆಧಾರದ ಮೇಲೆ ನೇಮಕಾತಿ
ಆಡಳಿತ ತರಬೇತಿ ಸಂಸ್ಥೆ (ATI), ಮೈಸೂರು ಇಲ್ಲಿ ಸಂಸ್ಥೆಯ ವಿವಿಧ ಕೇಂದ್ರಗಳಿಗೆ ಬೋಧಕರು ಮತ್ತು ಇತರೆ ಹುದ್ದೆಗಳನ್ನು ನಿಯೋಜನೆ/ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಇಚ್ಛಿಸಿರುತ್ತದೆ. ಈ ಸಂಬಂಧ ಆಸಕ್ತರು, ಹುದ್ದೆಗಳ ವಿವರ, ವಿದ್ಯಾರ್ಹತೆ ಮತ್ತು ಇತರ ವಿವರಗಳಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ಕೆಳಗಿನ ಲಿಂಕ್‌ಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು. ಅರ್ಜಿ ಸಲ್ಲಿಸಲು ಪ್ರಾರಂಭಿಕ **ದಿನಾಂಕ : 04.10.2025** ಹಾಗೂ ಕೊನೆಯ **ದಿನಾಂಕ : 03.11.2025** ಆಗಿರುತ್ತದೆ.
ದೂರವಾಣಿ ಸಂಖ್ಯೆ : 0821–2520906/2443835
ಜಾಲತಾಣ ಸಂಪರ್ಕ ಕೊಂಡಿ : https://atimysore.karnataka.gov.in/350/ಬೋಧಕರು/ಸಮಾಲೋಚಕರು–ಮತ್ತು–ಇತರೆ–ಹುದ್ದೆಗಳನ್ನು–ನಿಯೋಜನೆ/ಗುತ್ತಿಗೆ–ಆಧಾರದ–ಮೇಲೆ–ಭರ್ತಿ–ಮಾಡಲು–ಅಧಿಸೂಚನೆ–ಹರಡಿಸುವ ಬಗ್ಗೆ./kn
ಸಹಿ/– ಜಂಟಿ ನಿರ್ದೇಶಕರು (ಆಡಳಿತ)
ವಾಸಾಸಂಇ/ಮೈಸೂರು/1043/ಶಿರಡಿ ಸಾಯಿ/2025–26

ಬಿಎಂಸಿಆರ್‌ಐ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
(ಪಿಎಮ್‌ಎಸ್‌ಎಸ್‌ವೈ)
ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೆ.ಆರ್. ರಸ್ತೆ, ಬೆಂಗಳೂರು – 560002.
ದೂರವಾಣಿ/ಫ್ಯಾಕ್ಸ್: 080–26705883
ಇ–ಮೇಲ್: pmssysshospital@gmail.com ವೆಬ್‌ಸೈಟ್: www.bmcrissh.karnataka.gov.in
ದಿನಾಂಕ: 04–10–2025
ಇ–ಟೆಂಡರ್ ಅಧಿಸೂಚನೆ
ಬಿಎಂಸಿಆರ್‌ಐ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಬೆಂಗಳೂರು ಈ ಆಸ್ಪತ್ರೆಗೆ ಅವಶ್ಯವಿರುವ ಸ್ವಚ್ಛತಾ ಸೇವೆ, ವಾರ್ಡ್ ಅಟೆಂಡರ್ ಸೇವೆ, ಭದ್ರತಾ ಸೇವೆ ಹಾಗೂ ಕಾರ್ಯಾಚರಣೆ ಮತ್ತು ನಿರ್ವಹಣಾ ಸೇವೆಗಳನ್ನು ಪಡೆಯುವ ಸಲುವಾಗಿ ಇ–ಟೆಂಡರ್ ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಅಧಿಸೂಚನೆ ಸಂಖ್ಯೆ	ವಿವರ
1	ಡಿಎಂಇ/2025–26/ ಎಸ್‌ಇ0558	ಹೊರಗುತ್ತಿಗೆ ಆಧಾರದ ಮೇಲೆ ಸ್ವಚ್ಛತಾ ಸೇವೆಯನ್ನು ಪಡೆಯುವ ಬಗ್ಗೆ.
2	ಡಿಎಂಇ/2025–26/ ಎಸ್‌ಇ0559	ಹೊರಗುತ್ತಿಗೆ ಆಧಾರದ ಮೇಲೆ ಅಟೆಂಡರ್ ಸೇವೆಯನ್ನು ಪಡೆಯುವ ಬಗ್ಗೆ.
3	ಡಿಎಂಇ/2025–26/ ಎಸ್‌ಇ0562	ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಹಾಗೂ ಕಾರ್ಯಾಚರಣೆ ಮತ್ತು ನಿರ್ವಹಣಾ (Operation and Maintenance Service) ಸೇವೆಯನ್ನು ಪಡೆಯುವ ಬಗ್ಗೆ.

ವೇಳಾಪಟ್ಟಿ: ➢ ಟೆಂಡರ್ ಅಪ್‌ಲೋಡ್ ಮಾಡಲು ಪ್ರಾರಂಭದ ದಿನಾಂಕ: 03–10–2025. ➢ ಟೆಂಡರ್ ಕುರಿತು ಪ್ರಶ್ನಾವಳಿಗೆ ಕೊನೆಯ ದಿನಾಂಕ: 13–10–2025. ➢ ಟೆಂಡರ್ ಕುರಿತು ಪ್ರಿ–ಬಿಡ್ ಮೀಟಿಂಗ್ ದಿನಾಂಕ: 13–10–2025. ➢ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 03–11–2025. ➢ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 05–11–2025. ಟೆಂಡರ್ ವಿವರಗಳನ್ನು https://www.kppp.karnataka.gov.in ಈ ವೆಬ್‌ಸೈಟಿನಲ್ಲಿ ವೀಕ್ಷಿಸಿ, ಟೆಂಡರ್‌ಗಳನ್ನು ಸಲ್ಲಿಸಬಹುದು ಮತ್ತು ಹೆಚ್ಚಿನ ವಿವರಗಳಿಗಾಗಿ ವಿಶೇಷಾಧಿಕಾರಿಗಳು, ಬಿಎಂಸಿಆರ್‌ಐ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯವರನ್ನು ಸಂಪರ್ಕಿಸಬಹುದು ದೂರವಾಣಿ: 080–26981928 / 26705883, ಇ–ಮೇಲ್: pmssysshospital@gmail.com, ವೆಬ್‌ಸೈಟ್: www.bmcrissh.karnataka.gov.in
ಸಹಿ/– ವಿಶೇಷಾಧಿಕಾರಿಗಳು ಬಿಎಂಸಿಆರ್‌ಐ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/3086/ಅಡ್ವರ್ಟೋರ್/2025–26

ಪುರಸಭೆ ಕಾರ್ಯಾಲಯ ಚಿಕ್ಕೋಡಿ
ಕ್ರ.ಸಂ:ಪುಸಚಿ:ಅಮೃತ 2.0:2025–26 ದಿನಾಂಕ:–30.09.2025.
("ಕೆಪಿಪಿ ಪೋರ್ಟಲ್") ಟೆಂಡರ ಪ್ರಕಟಣೆ
(Notice inviting tender through KPP Portal)
ಚಿಕ್ಕೋಡಿ ಪುರಸಭೆ ವ್ಯಾಪ್ತಿಯಲ್ಲಿ ಜಲ ಹೀ ಅಮೃತ (ಅಮೃತ–2.0) ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಕೊಳ್ಳುವ ಸಲುವಾಗಿ Manufacturer or Authorized Dealer or Supplier ಪೂರೈಕೆದಾರರಿಂದ ಐಟಂವಾರು ಶೀಲ ಬಂದ ಟೆಂಡರಗಳನ್ನು KG–3 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ 1, ವಿವರಗಳು 1) ಇಂಡೆಂಟ್ ಸಂಖ್ಯೆ :– 5452 ರೂ. 75.00 ಲಕ್ಷ ಈ ಮೇಲೆ ತಿಳಿಸಿದ ಕಾಮಗಾರಿಗಳ ಕಾಲಮಿತಿ 3 ತಿಂಗಳು.
ಅ.ನಂ.1 .ವಿವರ : ಖಾಲಿ ಟೆಂಡರಗಳನ್ನು On line ಮುಖಾಂತರ ಡೌನಲೋಡ ಮಾಡುವ ದಿನಾಂಕ .03.10.2025 ಅ.ನಂ.2 .ವಿವರ : ಭರ್ತಿ ಮಾಡಿದ ಟೆಂಡರಗಳನ್ನು On line ಮುಖಾಂತರ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ :23.10.2025 @ 4.00 PM ಅ.ನಂ.3 . ವಿವರ : Technical Bid ನ್ನು ತೆರೆಯುವ ದಿನಾಂಕ ಮತ್ತು ಸಮಯ :25.10.2025 @ 4.00 PM ಅ.ನಂ.4 .ವಿವರ : Financial Bid ನ್ನು ತೆರೆಯುವ ದಿನಾಂಕ ಮತ್ತು ಸಮಯ :27.10.2025 @ 11.00 AM ಅ.ನಂ.5 .ವಿವರ : Number of days to extend 2 ದಿನಗಳು
ಮೇಲ್ಕಾಣಿಸಿದ ಕಾಮಗಾರಿಗಳ ಎಲ್ಲಾ ವಿವರಗಳಿಗಾಗಿ ಈ–ಪ್ರೋಕ್ಯೂರಮೆಂಟ ವೇಬ ಸ್ಯೆಟ www.eproc.karnataka.gov.in ನಲ್ಲಿ ಅಥವಾ ಪುರಸಭೆ ವೇಬ ಸ್ಯೆಟ www.chikkoditown.mrc.gov.in ರಿಂದ ಮಾಹಿತಿ ಪಡೆಯಬಹುದಾಗಿದೆ.
ಸಹಿ/–ಮುಖ್ಯಾಧಿಕಾರಿ ಪುರಸಭೆ, ಚಿಕ್ಕೋಡಿ
DIPR/BGM/RO-NO-1133/KSMCA/2025-26

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ನಂ:ದಾಮಪಾ:ಕಾಅ1.ಇ.ಟೆಂಡರ್:31:2025–26 ದಿನಾಂಕ:03–10–2025
ಟೆಂಡರ್ ಪ್ರಕಟಣೆ
(ಕೆಪಿಪಿಪಿ ಪೋರ್ಟಲ್ ಮುಖಾಂತರ)
ಅಮೃತ್ 2.0 ನಿಧಿ.–07 ಕಾಮಗಾರಿಗಳು, 2025–26 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ.(2ನೇ ಕರೆ) – 02 ಕಾಮಗಾರಿಗಳು, 2025–26 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ – 01 ಕಾಮಗಾರಿ, ಒಟ್ಟು 10 ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ ಏಜನ್ಸಿದಾರರು/ ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು, ಈ ಕಛೇರಿಯಿಂದ ಕರೆಯಲಾದ ಟೆಂಡರ್ ನಂ. 29 ದಿನಾಂಕ: 12–09–2025 ರ ಕಾಮಗಾರಿಗಳನ್ನು ತಾಂತ್ರಿಕ ಕಾರಣಗಳಿಂದ ಕೆಪಿಪಿ ಪೋರ್ಟಲ್‌ನಲ್ಲಿ ಪ್ರಕಟಿಸಲು ಆಗಿರುವುದಿಲ್ಲ. ಸದರಿ ಟೆಂಡರ್ ನಂ. 29ರ ಕಾಮಗಾರಿಗಳನ್ನು ಈ ಮೇಲಿನ ಟೆಂಡರ್ ಪ್ರಕಟಣೆಯಲ್ಲಿ ಪರಿಗಣಿಸುವುದು ಹಾಗೂ ಈ ಕಛೇರಿಯಿಂದ ಕರೆಯಲಾದ ಟೆಂಡರ್ ನಂ. 30 ದಿನಾಂಕ: 25–09–2025ರ ಕಾಮಗಾರಿಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪ್ರಕಟಿಸಿದ ದಿನಾಂಕಗಳನ್ನು ಪರಿಗಣಿಸುವುಸು. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆಪಿಪಿಪಿ ಸಹಾಯಕ ದೂರವಾಣಿ ಸಂಖ್ಯೆ: +91–8046010000 +91–8068948777 ರಿಂದ ಮಾಹಿತಿ ಪಡೆಯಬಹುದು. ಅಂದಾಜು ಮೊತ್ತ, ಟೆಂಡರ್‌ಗಿಟ್ಟ ಮೊತ್ತ, ಇ.ಎಂ.ಡಿ. ಮೊತ್ತ ಮತ್ತು ಟೆಂಡರ್ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.
ಕ್ರಮ ಸಂ 01 ರಿಂದ 10 ರ ಕಾಮಗಾರಿಗಳಿಗೆ:– ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 03–10–2025 ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 17–10–2025 ಸಮಯ : 16.00 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 17–10–2025 ಸಮಯ : 17.00 ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 18–10–2025 ಸಮಯ : 17.05
ವಾಸಾಇ/ದಾವಣಗೆರೆ/399/ಕೆಎಸ್‌ಎಂಸಿಎ/2025–26 ಸಹಿ/–ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ದಾವಣಗೆರೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)
ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)
ಸಂಖ್ಯೆ: ಮುಇಂವಿ/ಟಿಮತ್ತುಪಿ/ಅಇಂ(ವಿ)–1/2025–26/6067–78 ದಿನಾಂಕ: 04.10.2025
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆ ಮೂಲಕ ಕೆಳಕಂಡ ಕಾಮಗಾರಿಗೆ **ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನುಆಹ್ವಾನಿಸಿದೆ:

ವಿಚಾರಣೆ ಸಂಖ್ಯೆ / ಕಾಮಗಾರಿಯ ವಿವರ
KPTCL/2025-26/TB/**WORK_INDENT2829**
ಬೆಂಗಳೂರು ನಗರ ಜಿಲ್ಲೆಯಲ್ಲಿ Sy No: 136 ಥಣಿಸಂದ್ರ ಮುಖ್ಯರಸ್ತೆ, ನಾಗವಾರದಲ್ಲಿ ಮೆ॥ BMRCLಗೆ 6000kVA ವರೆಗಿನ 220ಕೆವಿ ವಿದ್ಯುತ್ ಸಂಪರ್ಕ ಕಲ್ಪಿಸಲು, ಹಾಲಿಯಿರುವ 220ಕೆವಿ **ಪುಟ್ಟೇನಹಳ್ಳಿ ಉಪಕೇಂದ್ರದಲ್ಲಿ** ಒಂದು 220ಕೆವಿ AIS ಟರ್ಮಿನಲ್ ಬೇ ಮತ್ತು ಹಾಲಿಯಿರುವ 220ಕೆವಿ **GIS HBR ಉಪಕೇಂದ್ರದಲ್ಲಿ** ಒಂದು 220ಕೆವಿ GIS ಟರ್ಮಿನಲ್ ಬೇ ನಿರ್ಮಿಸುವ ಕಾಮಗಾರಿ.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್: **https://kptcl.karnataka.gov.in**ನ ಹೈಪರ್‌ಲಿಂಕ್ "ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ" ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ ದಿನಾಂಕ **09.10.2025 ರಂದು ಅಪರಾಹ್ನ 15.00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. ಕಾಮಗಾರಿಯ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ **30.10.2025 ರಂದು ಅಪರಾಹ್ನ 15.00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳಸಹಿದಾರರ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.
ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ಸೇರ್ಪಡೆಗಳನ್ನು ಗಮನಿಸತಕ್ಕದ್ದು.
ಸಹಿ/– ಮುಖ್ಯ ಇಂಜಿನಿಯರ್(ವಿದ್ಯುತ್) ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, 3ನೇಮಹಡಿ, ಕಾವೇರಿ ಭವನ, ಬೆಂಗಳೂರು–560 009.

2 ಕಿ.ಮೀ. ಪ್ರಯಾಣಕ್ಕೆ 30 ನಿಮಿಷ

ಹೊರ ವರ್ತುಲ ರಸ್ತೆಯಲ್ಲಿ ದಟ್ಟಣೆ: ಸಾಲುಗಟ್ಟಿ ನಿಲ್ಲುವ ವಾಹನಗಳು

• ಕೆ.ಎಸ್.ಸುನಿಲ್

ಬೆಂಗಳೂರು: ಕೆ.ಆರ್.ಪುರಂನಿಂದ ಸಿಲ್ಕ್ ಬೋರ್ಡ್‌ವರೆಗೆ ಸಂಪರ್ಕ ಕಲ್ಪಿಸುವ ಹೊರ ವರ್ತುಲ ರಸ್ತೆಯಲ್ಲಿ (ಒಆರ್‌ಆರ್) ವಿಪರೀತ ದಟ್ಟಣೆಯಿಂದ ವಾಹನ ಸವಾರರು ಪರದಾಡುತ್ತಿದ್ದಾರೆ.

ದಟ್ಟಣೆ ಅವಧಿಯಾದ ಬೆಳಿಗ್ಗೆ ಹಾಗೂ ಸಂಜೆ ಆಮೆಗತಿಯಲ್ಲಿ ಸಾಗುವ ವಾಹನಗಳ ಸಾಲು, ರಸ್ತೆ ದಾಟಲು ಜನ ಪರದಾಡುವುದು ಸಾಮಾನ್ಯವಾಗಿದೆ. ವಾರಾಂತ್ಯದಲ್ಲಿ ಈ ಸಮಸ್ಯೆ ಇನ್ನಷ್ಟು ಉಲ್ಬಣಿಸುತ್ತಿದೆ. ಪ್ರತಿನಿತ್ಯ ಬೆಳಿಗ್ಗೆ 8ರಿಂದ ಮಧ್ಯಾಹ್ನ 12 ಹಾಗೂ ಸಂಜೆ 4ರಿಂದ ರಾತ್ರಿ 10ರವರೆಗೆ ವಾಹನ ಚಾಲಕರಿಗೆ ದಟ್ಟಣೆಯ ಸಮಸ್ಯೆ ಕಾಡಲಾರಂಭಿಸಿದೆ.

2 ಕಿ.ಮೀ ಪ್ರಯಾಣಿಸಲು ಸುಮಾರು 20ರಿಂದ 30 ನಿಮಿಷ ಬೇಕಾಗುತ್ತದೆ. ಇದರಿಂದ ಉದ್ಯೋಗಿಗಳು ನಿಗದಿತ ಸಮಯಕ್ಕೆ ಕಚೇರಿ ತಲುಪಲು ಹಾಗೂ ವಿದ್ಯಾರ್ಥಿಗಳು ಶಾಲಾ- ಕಾಲೇಜಿಗೆ ತೆರಳಲು ಕಷ್ಟವಾಗಿದೆ.

ನೂರಾರು ಐಟಿ-ಬಿಟಿ ಕಂಪನಿಗಳು ಇಲ್ಲಿಯೇ ನೆಲೆ ಕಂಡಿರುವುದು ಒಂದು ಕಾರಣವಾದರೆ, ಮತ್ತೊಂದೆಡೆ ಜನರಿಗೆ, ಚಾಲಕರಿಗೆ ಅರಿವಿನ ಕೊರತೆಯೂ ದಟ್ಟಣೆ ಹೆಚ್ಚಿಸಿದೆ. ಸಾವಿರಕ್ಕೂ ಅಧಿಕ ಕಂಪನಿಗಳು ಮಾರತ್‌ಹಳ್ಳಿ-ಬೆಳ್ಳಂದೂರು ಭಾಗದಲ್ಲಿವೆ. ಒಂದೇ ಹೊತ್ತಿಗೆ ಈ ಕಂಪನಿಯ ಉದ್ಯೋಗಿಗಳು ಬರುತ್ತಿರುವುದು ದಟ್ಟಣೆ ಹೆಚ್ಚಿಸಿದೆ. ಬಿಎಂಟಿಸಿ ಬಸ್‌ಗಳು ಪ್ರಯಾಣಿಕರನ್ನು ಇಳಿಸಲು ಹಾಗೂ ಹತ್ತಿಸಿಕೊಳ್ಳಲು ರಸ್ತೆಯಲ್ಲಿ ನಿಲ್ಲುವುದು ಕೂಡ ಸಮಸ್ಯೆಗಳನ್ನು ತಂದೊಡ್ಡಿದೆ.

ನಗರದ ವಿವಿಧ ಭಾಗಗಳಿಂದ ಐಟಿ-ಬಿಟಿ ಕಂಪನಿಗಳಿಗೆ ಉದ್ಯೋಗಕ್ಕಾಗಿ ಬರುವ ಟೆಕಿಗಳು ಈ ರಸ್ತೆ ಮೂಲಕವೇ ಕಚೇರಿಗಳಿಗೆ ತೆರಳುತ್ತಾರೆ. ಕೆಲವರು ಸ್ವಂತ ವಾಹನಗಳಲ್ಲೂ ಬರುತ್ತಾರೆ.

> **ನಿತ್ಯ ಬೆಳಿಗ್ಗೆ ಮತ್ತು ಸಂಜೆ ವಾಹನಗಳು ಕಿಲೋ ಮೀಟರ್‌ಗಟ್ಟಲೆ ಸಾಲುಗಟ್ಟಿ ನಿಲ್ಲುತ್ತವೆ. ನಿಗದಿತ ಸಮಯಕ್ಕೆ ಕಚೇರಿಗೆ ತಲುಪಲು ಕಷ್ಟವಾಗುತ್ತದೆ**
> **ಅರ್ಜುನ್,** ಮಾರತ್‌ಹಳ್ಳಿಯ ಕಂಪನಿ ಉದ್ಯೋಗಿ

> **ಒಆರ್‌ಆರ್‌ನಲ್ಲಿ ಸಂಚಾರ ಸಮಸ್ಯೆ ಸಾಮಾನ್ಯ. ಹಾಗಾಗಿಯೇ ಮಾರತ್‌ಹಳ್ಳಿ, ಬೆಳ್ಳಂದೂರು ರಸ್ತೆಗೆ ಆಟೊದವರು ಬರಲು ಹಿಂದೇಟು ಹಾಕುತ್ತಾರೆ**
> **ರಾಜೇಶ್,** ಆಟೊ ಚಾಲಕ, ಬೆಳ್ಳಂದೂರು

ಹಾಗಾಗಿ, ಇಲ್ಲಿ ಜನ-ವಾಹನ ದಟ್ಟಣೆ ಎರಡೂ ಹೆಚ್ಚಾಗಿದೆ.

ನಿತ್ಯ ಬಸ್, ಕಾರು, ದ್ವಿಚಕ್ರ ವಾಹನ ಸೇರಿ ಲಕ್ಷಾಂತರ ವಾಹನಗಳು ಸಂಚರಿಸುತ್ತವೆ. ಸರ್ವಿಸ್ ರಸ್ತೆ ಬದಿಯಲ್ಲಿಯೇ ಉದ್ಯೋಗಿಗಳು ಹಾಗೂ ಕ್ಯಾಬ್ ಚಾಲಕರು ವಾಹನಗಳನ್ನು ನಿಲ್ಲಿಸುವುದರಿಂದ ಸಮಸ್ಯೆ ಹೆಚ್ಚಾಗುತ್ತಿದೆ.

'ಬೆಳಿಗ್ಗೆ 8 ಗಂಟೆಗೆ ಮನೆ ಬಿಡುತ್ತೇನೆ. ಆದರೂ ನಿಗದಿತ ಸಮಯಕ್ಕೆ ಕಚೇರಿ ತಲುಪಲು ಆಗುವುದಿಲ್ಲ. 2 ಕಿಲೋ ಮೀಟರ್ ಪ್ರಯಾಣಿಸಲು ಕನಿಷ್ಠ 20 ನಿಮಿಷ ಬೇಕು. ದಟ್ಟಣೆ ಅವಧಿಯಲ್ಲಿ 30 ನಿಮಿಷ ಬೇಕಾಗುತ್ತದೆ. ದ್ವಿಚಕ್ರ ವಾಹನದಲ್ಲಿಯೇ ಹೀಗಾದರೆ ಬಸ್‌ಗಳಲ್ಲಿ ಸಂಚರಿಸಿದರೆ ಇನ್ನೂ ಅಧಿಕ ಸಮಯ ಬೇಕಾಗುತ್ತದೆ' ಎಂದು ಪಣತ್ತೂರು ನಿವಾಸಿ ರಮೇಶ್ ಅನುಭವ ಹಂಚಿಕೊಂಡರು.

'ಉದ್ಯೋಗ, ಶಿಕ್ಷಣ ಹಾಗೂ ವ್ಯಾಪಾರಕ್ಕೆಂದು ನಗರಕ್ಕೆ ವಲಸೆ ಬರುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ನಗರದ ಐ.ಟಿ- ಬಿ.ಟಿ ಕ್ಷೇತ್ರದಲ್ಲಿ ಹೊರ ರಾಜ್ಯದವರು ಅಧಿಕ ಸಂಖ್ಯೆಯಲ್ಲಿ ಇದ್ದಾರೆ. ಹೆಚ್ಚಿನವರು ಸ್ವಂತ ವಾಹನಗಳನ್ನೇ ಬಳಸುತ್ತಿರುವ ಪರಿಣಾಮ ಜನರು ದಟ್ಟಣೆಯಲ್ಲಿ ಸಿಲುಕಿ ಪರದಾಡುವಂತಾಗಿದೆ' ಎಂದು ಹೇಳಿದರು.

'ಶಾಲೆಗಳಿಗೆ ರಜೆ ಇರುವ ಕಾರಣ ಸ್ವಲ್ಪ ಮಟ್ಟಿಗೆ ಸಂಚಾರ ಸಮಸ್ಯೆ ತಗ್ಗಿದೆ. ಹೊರ ವರ್ತುಲ ರಸ್ತೆಯ ಇಬ್ಬಲೂರು ಜಂಕ್ಷನ್‌ನಲ್ಲಿ ಸಮಸ್ಯೆ ತೀವ್ರ. ಪೀಕ್ ಅವರ್‌ನಲ್ಲಿ (ಬೆಳಿಗ್ಗೆ ಮತ್ತು ಸಂಜೆ) ವಾಹನ ಸವಾರರು ಪರದಾಡುತ್ತಿದ್ದಾರೆ. ಕೆಲವೊಮ್ಮೆ ಒಂದು ಕಿಲೋ ಮೀಟರ್‌ಗೂ ಹೆಚ್ಚು ದೂರ ವಾಹನಗಳು ಸಾಲುಗಟ್ಟಿ ನಿಲ್ಲುತ್ತವೆ. ನಗರದಲ್ಲಿ 1.2 ಕೋಟಿ ವಾಹನಗಳಿದ್ದು, ಪಾರ್ಕಿಂಗ್ ಸಮಸ್ಯೆ ಜಾಸ್ತಿಯಾಗಿದೆ' ಎಂದು ಸಂಚಾರ ವಿಭಾಗದ ಅಧಿಕಾರಿಗಳು ತಿಳಿಸಿದರು.

'ಸೋಮವಾರ ಬೆಳಿಗ್ಗೆ 8ರ ಹೊತ್ತಿಗೆ ವಾಹನ ದಟ್ಟಣೆ ಶುರುವಾದರೆ ಮಧ್ಯಾಹ್ನದವರೆಗೆ ಇರುತ್ತದೆ. ಮಂಗಳವಾರ ಮತ್ತು ಬುಧವಾರ ವಾಹನ ಜಂಗುಳಿ ನಿರ್ವಹಣೆಯೇ ಕಷ್ಟ' ಎಂದು ಹೇಳಿದರು.

ಹೊರ ವರ್ತುಲ ರಸ್ತೆಯ ಇಬ್ಬಲೂರು ಜಂಕ್ಷನ್ ಬಳಿಯ ಸಂಚಾರ ದಟ್ಟಣೆ ತಪ್ಪಿಸಲು, ವಿಪ್ರೊ ಕ್ಯಾಂಪಸ್ ಮೂಲಕ ಸಾರ್ವಜನಿಕ ವಾಹನಗಳ ಸೀಮಿತ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಡಿದ್ದ ಮನವಿಯನ್ನು ವಿಪ್ರೊ ಸಂಸ್ಥಾಪಕ ಅಜೀಂ ಪ್ರೇಮ್‌ಜಿ ತಿರಸ್ಕರಿಸಿದ್ದಾರೆ. ನಗರ ಸಂಚಾರ ತಜ್ಞರು ನಡೆಸಿದ ಪ್ರಾಥಮಿಕ ಮೌಲ್ಯಮಾಪನ ಪ್ರಕಾರ, ವಿಪ್ರೊ ಕ್ಯಾಂಪಸ್ ಮೂಲಕ ವಾಹನ ಸಂಚಾರಕ್ಕೆ ಅನುಮತಿ ನೀಡಿದ್ದರೆ ಹೊರ ವರ್ತುಲ ರಸ್ತೆಯಲ್ಲಿನ ದಟ್ಟಣೆ, ವಿಶೇಷವಾಗಿ ದಟ್ಟಣೆ ಅವಧಿಯಲ್ಲಿ ಶೇಕಡ 30ರಷ್ಟು ತಗ್ಗುತ್ತಿತ್ತು.

ನಗರದ ಹೊರ ವರ್ತುಲ ರಸ್ತೆಯಲ್ಲಿ ಸಾಲುಗಟ್ಟಿ ನಿಂತಿದ್ದ ವಾಹನಗಳು –ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಮತ್ತಷ್ಟು ದಟ್ಟಣೆ ಹೆಚ್ಚಳ ಸಾಧ್ಯತೆ

'ಮನೆಯಿಂದ ಕೆಲಸದ (ವರ್ಕ್ ಫ್ರಂ ಹೋಮ್) ವ್ಯವಸ್ಥೆ ಹಾಗೂ ಹೈಬ್ರಿಡ್ ಮಾದರಿಗೆ ತಿಲಾಂಜಲಿ ನೀಡಲು ಕಂಪನಿಗಳು ಮುಂದಾಗಿರುವ ಕಾರಣ ಅಕ್ಟೋಬರ್‌ನಿಂದ ಹೊರ ವರ್ತುಲ ರಸ್ತೆ (ಒಆರ್‌ಆರ್)ಯಲ್ಲಿ ಶೇಕಡ 15ರಷ್ಟು ವಾಹನ ದಟ್ಟಣೆ ಹೆಚ್ಚಾಗಲಿದೆ. ಒಆರ್‌ಆರ್ ಪ್ರದೇಶದ ವ್ಯಾಪ್ತಿಯಲ್ಲಿರುವ ಸಾಫ್ಟ್‌ವೇರ್ ಕಂಪನಿಗಳಲ್ಲಿ ಅಂದಾಜು 8ರಿಂದ 10 ಲಕ್ಷ ಉದ್ಯೋಗಿಗಳು ಕೆಲಸ ನಿರ್ವಹಿಸುತ್ತಿದ್ದಾರೆ. ಕೆಲವು ಕಂಪನಿಗಳು ಹೈಬ್ರಿಡ್ ಮಾದರಿ ಅಳವಡಿಸಿಕೊಂಡಿವೆ. ಅಂದರೆ ವಾರದಲ್ಲಿ ಎರಡು ದಿನ ಮನೆಯಿಂದ ಮತ್ತು ಮೂರು ದಿನ ಕಚೇರಿಯಲ್ಲಿ ಕೆಲಸ ನಿರ್ವಹಿಸುವುದು. ಬುಧವಾರ ಮತ್ತು ಗುರುವಾರ ಅತಿ ಹೆಚ್ಚು ವಾಹನ ದಟ್ಟಣೆ ಇರುತ್ತದೆ. ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಾಗುತ್ತಿದೆ' ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ಇ-ಮೇಲ್‌ನಲ್ಲಿ ಬೆದರಿಕೆ ಸಂದೇಶ

ಬೆಂಗಳೂರು: ಇಸ್ರೇಲ್ ರಾಯಭಾರ ಕಚೇರಿ ಹಾಗೂ ಹೈಕೋರ್ಟ್‌ನಲ್ಲಿ ಸ್ಫೋಟಕ ಇರಿಸಿರುವುದಾಗಿ ಇ-ಮೇಲ್ ಮೂಲಕ ಪ್ರತ್ಯೇಕ ಬೆದರಿಕೆ ಸಂದೇಶ ಬಂದಿದ್ದು, ಈ ಸಂಬಂಧ ಹಲಸೂರು ಹಾಗೂ ವಿಧಾನಸೌಧ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಇತ್ತೀಚೆಗೆ ಇ-ಮೇಲ್ ಮೂಲಕ ಬೆದರಿಕೆ ಸಂದೇಶ ಬಂದಿದೆ. ಸ್ಥಳಕ್ಕೆ ತೆರಳಿ ಪೊಲೀಸರು ತಪಾಸಣೆ ನಡೆಸಿದಾಗ ಇದೊಂದು ಹುಸಿ ಬೆದರಿಕೆ ಎಂಬುದು ಗೊತ್ತಾಗಿದೆ.

'ಆವರಣದಲ್ಲಿ ಆರ್‌ಡಿಎಕ್ಸ್ ಇರಿಸಲಾಗಿದ್ದು, ಅದು ಸ್ಫೋಟ ಆಗಲಿದೆ' ಎಂದು ಕಿಡಿಗೇಡಿ ಬರೆದಿದ್ದ. ಇ-ಮೇಲ್ ಕಳುಹಿಸಿದ್ದ ಖಾತೆಯ ಐಪಿ ವಿಳಾಸ ಪಡೆದುಕೊಳ್ಳಲಾಗಿದೆ. ಆರೋಪಿಯ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಡ್ರಗ್ಸ್ ಮಾರಾಟ ಮೂವರ ಬಂಧನ

ಬೆಂಗಳೂರು: ಸಿದ್ದಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಲಾಲ್‌ಬಾಗ್‌ನ ದಕ್ಷಿಣ ಗೇಟ್‌ನಿಂದ ಅಶೋಕ ಪಿಲ್ಲರ್‌ಗೆ ತೆರಳುವ ರಸ್ತೆಯಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಮಂಗಳೂರಿನ ಮೊಹಮ್ಮದ್ ಶಂಷೀರ್, ಜಾಬೀರ್, ಅಭಿಷೇಕ್ ಬಂಧಿತರು.

ಬಾತ್ಮೀದಾರರು ನೀಡಿದ ಖಚಿತ ಮಾಹಿತಿ ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು. ಹೊರರಾಜ್ಯದಿಂದ ಡ್ರಗ್ಸ್ ಅನ್ನು ಕಡಿಮೆ ಬೆಲೆಗೆ ಖರೀದಿಸಿ, ನಗರದಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು. ಮಾರಾಟಕ್ಕೆ ಇಟ್ಟುಕೊಂಡಿದ್ದ ಡ್ರಗ್ಸ್ ಅನ್ನು ಬಂಧಿತರಿಂದ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಮೆಟ್ರೊ ಹಳಿಗೆ ಹಾರಿ ವ್ಯಕ್ತಿ ಆತ್ಮಹತ್ಯೆಗೆ ಯತ್ನ: ಸ್ಥಿತಿ ಗಂಭೀರ

ಬೆಂಗಳೂರು: ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ನಿಲ್ದಾಣದಲ್ಲಿ ಶನಿವಾರ ಮಧ್ಯಾಹ್ನ ವ್ಯಕ್ತಿಯೊಬ್ಬರು ಮೆಟ್ರೊ ರೈಲು ಬರುವ ವೇಳೆ ಹಳಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಹಸಿರು ಮಾರ್ಗದಲ್ಲಿ ಮಧ್ಯಾಹ್ನ 3.17ಕ್ಕೆ ಮಾದಾವರದಿಂದ ರೇಷ್ಮೆ ಸಂಸ್ಥೆಯ ಕಡೆಗೆ ರೈಲು ಸಾಗುತ್ತಿದ್ದ ವೇಳೆ 3ನೇ ಪ್ಲ್ಯಾಟ್‌ಫಾರ್ಮ್‌ನಲ್ಲಿ ನಿಂತಿದ್ದ ಸುಮಾರು 35 ವರ್ಷದ ಪ್ರಯಾಣಿಕರೊಬ್ಬರು ಹಾರಿದ್ದಾರೆ. ಸ್ಟೇಷನ್ ಕಂಟ್ರೋಲರ್‌ಗಳಾದ ಗಣೇಶ, ವೆಂಕಟೇಶ್ ಮತ್ತು ಸಿಬ್ಬಂದಿ ಕೂಡಲೇ ವಿದ್ಯುತ್ ಸರಬರಾಜು ಸ್ಥಗಿತಗೊಳಿಸಿದ್ದಾರೆ. ರೈಲಿಗೆ ಸಿಲುಕಿ ಗಂಭೀರವಾಗಿ ಗಾಯಗೊಂಡಿರುವ ವ್ಯಕ್ತಿಯನ್ನು ಪ್ರಯಾಣಿಕರ ಸಹಾಯದಿಂದ ಹೊರತೆಗೆದು ಆಂಬುಲೆನ್ಸ್ ಮೂಲಕ ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲಾಯಿತು.

ವಿಧಾನಸೌಧದಲ್ಲಿ 'ಡಿ'ಗ್ರೂಪ್ ನೌಕರರಾಗಿರುವ ವೀರೇಶ್ ಆತ್ಮಹತ್ಯೆಗೆ ಯತ್ನಿಸಿದವರು ಎಂದು ಗುರುತಿಸಲಾಗಿದೆ. ಅವರ ಸ್ಥಿತಿ ಗಂಭೀರವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಈ ಘಟನೆಯಿಂದಾಗಿ ನ್ಯಾಷನಲ್ ಕಾಲೇಜು- ರಾಜಾಜಿನಗರ ನಡುವೆ ಸಂಚಾರ ಮಧ್ಯಾಹ್ನ 3.47ರವರೆಗೆ ಸ್ಥಗಿತಗೊಂಡಿತು. ನ್ಯಾಷನಲ್ ಕಾಲೇಜಿನಿಂದ ರೇಷ್ಮೆ ಸಂಸ್ಥೆಯವರೆಗೆ ಹಾಗೂ ರಾಜಾಜಿನಗರದಿಂದ ಮಾದಾವರವರೆಗೆ ಸಂಚಾರ ಎಂದಿನಂತಿತ್ತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದರು.

ನಿರ್ಮಾಣ ಹಂತದ ಕಟ್ಟಡದಲ್ಲಿ ಅಸ್ಥಿಪಂಜರ ಪತ್ತೆ

ಬೆಂಗಳೂರು: ಕೊತ್ತನೂರಿನ ಸಮೃದ್ಧಿ ಅಪಾರ್ಟ್‌ಮೆಂಟ್‌ನ ಕಟ್ಟಡದಲ್ಲಿ ಅಸ್ಥಿಪಂಜರ ಪತ್ತೆಯಾಗಿದೆ. ಏಳು ತಿಂಗಳ ಹಿಂದೆ ಮೃತಪಟ್ಟಿರಬಹುದಾದ ವ್ಯಕ್ತಿಯ ಅಸ್ಥಿಪಂಜರ ಎಂದು ಅಂದಾಜಿಸಲಾಗಿದೆ.

35ರಿಂದ 40 ವರ್ಷದ ಪುರುಷನ ಅಸ್ಥಿಪಂಜರವೆಂದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಘಟನಾ ಸ್ಥಳಕ್ಕೆ ಸೋಕೊ ತಂಡದವರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕೊತ್ತನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

ವಿವಾದದ ಕಾರಣಕ್ಕೆ ಅಪಾರ್ಟ್‌ಮೆಂಟ್ ಕಾಮಗಾರಿ ಸ್ಥಗಿತಗೊಂಡಿತ್ತು. ವ್ಯಾಜ್ಯ ಬಗೆಹರಿದ ಕಾರಣಕ್ಕೆ ಒಂದು ತಿಂಗಳಿನಿಂದ ಕಟ್ಟಡ ಶುಚಿಗೊಳಿಸುವ ಕೆಲಸ ಆರಂಭವಾಗಿತ್ತು. ಗುರುವಾರ ಸಂಜೆ ಕಟ್ಟಡದ ನಾಲ್ಕನೇ ಮಹಡಿಯನ್ನು ಶುಚಿಗೊಳಿಸುತ್ತಿದ್ದ ಕಾರ್ಮಿಕರು ಅಸ್ಥಿಪಂಜರವನ್ನು ಗಮನಿಸಿದ್ದರು. ಕೂಡಲೇ ಅಪಾರ್ಟ್‌ಮೆಂಟ್‌ನ ಭದ್ರತಾ ಸಿಬ್ಬಂದಿ ಕೊತ್ತನೂರು ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದರು.

ಸದ್ಯ ಅಸ್ಥಿಪಂಜರವನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಕೆನಡಾದಲ್ಲಿ ಉದ್ಯೋಗ: ವೀಸಾ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆನಡಾ ದೇಶದಲ್ಲಿ ಉದ್ಯೋಗ ಹಾಗೂ ಅಲ್ಲಿಗೆ ತೆರಳಲು ವೀಸಾ ಕೊಡಿಸುವುದಾಗಿ ನಂಬಿಸಿ ವಂಚಿಸಿರುವ ಕಂಪನಿ, ಅದರ ವ್ಯವಸ್ಥಾಪಕ ಹಾಗೂ ಉದ್ಯೋಗಿಯ ವಿರುದ್ಧ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

ನಂದಿನಿ ಲೇಔಟ್‌ನ ಪರಿಮಳಾ ನಗರದ ಚಂದನಾ ಅವರು ನೀಡಿದ ದೂರು ಆಧರಿಸಿ, ಜೀವನ್‌ಶಾಂತಿ ಕಾಲೊನಿಯ ಔಲ್‌ಸ್ಪ್ರಿಯಾರಿಟಿ ಇಂಡಿಯಾ ಪ್ರೈವೆಟ್ ಲಿಮಿಟೆಡ್, ಆ ಸಂಸ್ಥೆಯ ನಿರ್ದೇಶಕ ನೀನಾನ್ ಲಾರೆನ್ಸ್ ಹಾಗೂ ಉದ್ಯೋಗಿ ವಿಜಯ್ ದುರ್ಗಾ ಅವರ ವಿರುದ್ಧ ಎಫ್ಐಆರ್ ದಾಖಲಾಗಿದೆ ಎಂದು ಪೊಲೀಸರು ಹೇಳಿದರು.

ಚಂದನಾ ಅವರು ಕೆನಡಾ ದೇಶದಲ್ಲಿ ಕೆಲಸದ ಅವಕಾಶಕ್ಕಾಗಿ ಹುಡುಕಾಟ ನಡೆಸುತ್ತಿದ್ದರು. ಅದೇ ಸಂದರ್ಭದಲ್ಲಿ ಔಲ್‌ಸ್ಪ್ರಿಯಾರಿಟಿ ಇಂಡಿಯಾ ಸಂಸ್ಥೆಯು ಸಾಮಾಜಿಕ ಜಾಲತಾಣದ ಮೂಲಕ ಜಾಹೀರಾತು ನೀಡಿತ್ತು. ಕೆನಡಾ ದೇಶಕ್ಕೆ ಉದ್ಯೋಗಕ್ಕೆ ತೆರಳುವ ಅಭ್ಯರ್ಥಿಗಳಿಗೆ ವೀಸಾ ಕೊಡಿಸುವುದಾಗಿ ಹಾಗೂ ಅಲ್ಲಿ ಕೆಲಸ ಪಡೆದುಕೊಳ್ಳಲು ನೆರವು ನೀಡುವುದಾಗಿ ಪ್ರಕಟಿಸಿತ್ತು. ಭಾರತದಿಂದ ಹೋಗುವ ಅಭ್ಯರ್ಥಿಗಳಿಗೆ ವಿಮಾನದ ಟಿಕೆಟ್ ಸಹ ಮಾಡಿಕೊಡುವುದಾಗಿಯೂ ಹೇಳಿತ್ತು.

ಜಾಹೀರಾತಿನಲ್ಲಿ ನೀಡಿದ್ದ ಮಾಹಿತಿ ನಂಬಿದ್ದ ಚಂದನಾ ಅವರು, ಕಂಪನಿಯ ವೆಬ್‌ಸೈಟ್‌ನಲ್ಲಿ ನೋಂದಣಿ ಮಾಡಿಕೊಂಡಿದ್ದರು. ಅದಾದ ಮೇಲೆ ಕಂಪನಿಯ ಎಕ್ಸಿಕ್ಯುಟಿವ್ ವಿನಯ್ ಕೊಠಾರಿ ಅವರು ಕರೆ ಮಾಡಿ ವೀಸಾ ಪ್ರಕ್ರಿಯೆ ಆರಂಭಿಸುವುದಕ್ಕೆ ಹಾಗೂ ಉದ್ಯೋಗಕ್ಕೆ ನೆರವು ನೀಡುವುದಾಗಿ ಹೇಳಿದ್ದರು. ಆರಂಭದಲ್ಲಿ ₹1,500 ನೀಡುವಂತೆ ಹೇಳಿದ್ದರು. ಅದಾದ ಮೇಲೆ ಸಂಸ್ಥೆಯ ಕಚೇರಿಗೆ ತೆರಳಿದ್ದ ದೂರುದಾರೆ, ವಿನಯ್ ಕೊಠಾರಿ ಅವರನ್ನು ಭೇಟಿ ಮಾಡಿದ್ದರು. ಕೆನಡಾ ಸರ್ಕಾರದಿಂದ ಶಾಶ್ವತ ವೀಸಾ ಹಾಗೂ ಉದ್ಯೋಗ ಕೊಡಿಸುತ್ತೇನೆ. ಅದಕ್ಕೆ ₹1 ಲಕ್ಷ ಕೊಡಬೇಕೆಂದು ಹೇಳಿದ್ದರು ಎಂಬುದಾಗಿ ದೂರು ನೀಡಲಾಗಿದೆ.

ಸಂಸ್ಥೆಯ ಪ್ರತಿನಿಧಿ ಹೇಳಿದಂತೆ ಚಂದನಾ ಅವರು ₹1 ಲಕ್ಷ ಪಾವತಿಸಿದ್ದರು. ಒಪ್ಪಂದದ ಪ್ರತಿಯನ್ನು ಇ-ಮೇಲ್ ಮೂಲಕ ಕಂಪನಿ ನೀಡಿತ್ತು. ನಂತರ, ಕಂಪನಿ ಕಡೆಯಿಂದ ಯಾವುದೇ ಪ್ರತಿಕ್ರಿಯೆಯೂ ಬಂದಿರಲಿಲ್ಲ. ಆತಂಕಗೊಂಡ ಚಂದನಾ ಅವರು ಜೀವನ್ ಸಾಥಿ ಕಾಲೊನಿಯಲ್ಲಿರುವ ಸಂಸ್ಥೆಯ ಕಚೇರಿಗೆ ತೆರಳಿ ವಿಚಾರಿಸಿದ್ದರು. ಆಗ ನಕಲಿ ಇ-ಮೇಲ್ ಮೂಲಕ ಇದೇ ರೀತಿ ಹಲವರಿಗೆ ಮೇಲ್ ಕಳುಹಿಸಿ ಮೋಸ ಎಸಗಿರುವುದು ಗೊತ್ತಾಗಿತ್ತು ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಪ್ರಿಯಕರನ ಜೊತೆ ಸ್ನೇಹಿತೆ ಸಲುಗೆ: ಮಹಿಳೆ ಆತ್ಮಹತ್ಯೆ



ಯಶೋದ

ಬೆಂಗಳೂರು: ತಾನೇ ಪರಿಚಯಿಸಿದ್ದ ಸ್ನೇಹಿತೆ, ತನ್ನ ಪ್ರಿಯಕರನ ಜತೆಗೆ ಸಲುಗೆಯಿಂದ ಇರುವುದನ್ನು ಕಂಡು ವಿವಾಹಿತ ಮಹಿಳೆಯೊಬ್ಬರು ಹೌಸಿಂಗ್ ಬೋರ್ಡ್‌ನ ಪಾಪಯ್ಯ ಗಾರ್ಡನ್‌ನಲ್ಲಿರುವ ಒಯೊ ಕಂಫರ್ಟ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕಾಮಾಕ್ಷಿಪಾಳ್ಯ ನಿವಾಸಿ ಯಶೋದ (38) ಆತ್ಮಹತ್ಯೆ ಮಾಡಿಕೊಂಡ ಮಹಿಳೆ.

ಗುರುವಾರ ರಾತ್ರಿ ಈ ಘಟನೆ ನಡೆದಿದೆ. ಘಟನೆಗೆ ಸಂಬಂಧಿಸಿದಂತೆ ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿರುವ ಮಾಗಡಿ ರಸ್ತೆ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಆತಹತ್ಯೆ ಮಾಡಿಕೊಂಡಿರುವ ಯಶೋದ ಅವರಿಗೆ ಇಬ್ಬರು ಮಕ್ಕಳಿದ್ದಾರೆ. ಯಶೋದ ಅವರು ಲೆಕ್ಕ ಪರಿಶೋಧಕ ವಿಶ್ವನಾಥ್ ಎಂಬುವವರ ಜತೆಗೆ ಸಲುಗೆಯಿಂದ ಇದ್ದರು. ಈ ವಿಚಾರವನ್ನು ತನ್ನ ಗೆಳತಿಗೆ ತಿಳಿಸಿ ಪರಿಚಯಿಸಿದ್ದರು ಎಂದು ಮೂಲಗಳು ಹೇಳಿವೆ.

ಕೆಲವು ದಿನಗಳ ನಂತರ ಯಶೋದ ಅವರಿಂದ ವಿಶ್ವನಾಥ್ ಅಂತರ ಕಾಯ್ದುಕೊಂಡಿದ್ದರು. ಇದರಿಂದ ಅನುಮಾನಗೊಂಡಿದ್ದ ಯಶೋದ ಅವರು ತಾನೇ ಪರಿಚಯ ಮಾಡಿಸಿದ್ದ ಸ್ನೇಹಿತೆ, ವಿಶ್ವನಾಥ್ ಅವರೊಂದಿಗೆ ಓಡಾಟ ನಡೆಸುತ್ತಿರುವುದು ಗೊತ್ತಾಗಿತ್ತು. ಗುರುವಾರ ರಾತ್ರಿ 7.30ಕ್ಕೆ ವಿಶ್ವನಾಥ್ ಹಾಗೂ ತನ್ನ ಸ್ನೇಹಿತೆ ಹೌಸಿಂಗ್ ಬೋರ್ಡ್‌ನಲ್ಲಿರುವ ಲಾಡ್ಜ್‌ವೊಂದಕ್ಕೆ ಹೋಗಿರುವ ಮಾಹಿತಿ ತಿಳಿದು ಅಲ್ಲಿಗೆ ತೆರಳಿದ್ದರು. ಇಬ್ಬರೂ ಒಟ್ಟಿಗೆ ಇರುವುದನ್ನು ಗಮನಿಸಿ ಗಲಾಟೆ ಮಾಡಿದ್ದರು. ಇದಾದ ನಂತರ ಈಕೆಯ ಸ್ನೇಹಿತೆ ಅಲ್ಲಿಂದ ತೆರಳಿದ್ದರು. ನಂತರ ವಿಶ್ವನಾಥ್ ಅವರು ವಾಸ್ತವ್ಯ ಮಾಡಿದ್ದ ಕೊಠಡಿಯ ಪಕ್ಕದ ಕೊಠಡಿಯನ್ನು ಬುಕ್ ಮಾಡಿಕೊಂಡು ಯಶೋದ ಉಳಿದುಕೊಂಡಿದ್ದರು. ವಿಶ್ವನಾಥ್ ಅವರ ಜತೆಗೆ ಜಗಳ ಮಾಡಿಕೊಂಡು ರಾತ್ರಿ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದು ಗೊತ್ತಾಗಿದೆ. ತನಿಖೆ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

ವಿಜಯ ಮ್ಯೂಸಿಕ್ ಸ್ಕೂಲ್ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ನಡೆದ ಸಪ್ತಸ್ವರ ಸಂಗೀತ ಸಂಜೆ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಚಲನಚಿತ್ರ ನಿರ್ದೇಶಕ ಓಂ ಸಾಯಿಪ್ರಕಾಶ್, ಡಿಸಿಪಿ ಮಂಜುನಾಥ ಬಾಬು, ಜೆ.ಎಸ್.ನಿರಂಜನ್ ಭಾರದ್ವಾಜ್, ಶಿಬಿರಾಧಿಕಾರಿ ಪಿ.ಪಿ.ನಂದಕುಮಾರ್, ಚಲನಚಿತ್ರ ನಿರ್ದೇಶಕ ಕೆ.ವಸಂತ ಕುಮಾರ್, ವಂದೇ ಕರ್ನಾಟಕ ಮಾಸ ಪತ್ರಿಕೆ ಸಂಪಾದಕ ಲಿಂಗಯ್ಯ ಕಾಡದೇವರಮಠ, ಸಂಗೀತ ನಿರ್ದೇಶಕ ಪ್ರಸನ್ನ ಹರೀಶ್, ಕವಿ ಕಾ.ವೆಂ.ಶ್ರೀನಿವಾಸ್ ಮೂರ್ತಿ, ನಿರ್ಮಾಪಕ ಗಂಡಸಿ ಸದಾನಂದ ಸ್ವಾಮಿ ಹಾಗೂ ವಿಜಯ ಮ್ಯೂಸಿಕ್ ಸ್ಕೂಲ್ ಅಧ್ಯಕ್ಷೆ ಜಯಲಕ್ಷ್ಮಿ ನಾಗೇಂದ್ರ ಉಪಸ್ಥಿತರಿದ್ದರು.

ಜೈಲಲ್ಲೇ ಕೈದಿ ಜನ್ಮದಿನ ಆಚರಣೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಿಯಮಬಾಹಿರ ಚಟುವಟಿಕೆಗಳು ಮುಂದುವರಿದಿದ್ದು, ಕೈದಿಯೊಬ್ಬ ಜೈಲಿನ ಒಳಗೇ ಜನ್ಮದಿನ ಆಚರಿಸಿಕೊಂಡಿದ್ದಾನೆ. ಈ ಫೋಟೊಗಳು ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ರೌಡಿ ಶೀಟರ್‌ವೊಬ್ಬ ಸಹ ಕೈದಿಗಳ ಜತೆಗೆ ಪಾರ್ಟಿ ಮಾಡಿದ್ದಾನೆ. ಸೇಬಿನ ಹಾರ ಹಾಕಿ, ಕೇಕ್ ಕತ್ತರಿಸಿ ಜನ್ಮದಿನವನ್ನು ಆಚರಣೆ ಮಾಡಿಕೊಳ್ಳಲಾಗಿದೆ.

ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಫೋಟೊಗಳು ರೌಡಿ ಶೀಟರ್ ಸೀನ ಅಲಿಯಾಸ್ ಗುಬ್ಬಚ್ಚಿ ಎಂಬಾತನ ಜನ್ಮದಿನಾಚರಣೆಯದ್ದು ಎಂದು ಹೇಳಲಾಗಿದೆ. ಜೈಲಿನ ಒಳಗಿಂದಲೇ ವಿಡಿಯೊ ಹಾಗೂ ಫೋಟೊ ಪೋಸ್ಟ್ ಆಗಿದೆ ಎಂದು ಹೇಳಲಾಗಿದೆ.

ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ನಟ ದರ್ಶನ್ ಅವರಿಗೆ ವಿಶೇಷ ಆತಿಥ್ಯ ನೀಡಿದ್ದ ಫೋಟೊವೊಂದು ಕಳೆದ ವರ್ಷ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

ಜೈಲಿನ ಬ್ಯಾರಕ್ ಎದುರು ದರ್ಶನ್, ರೌಡಿಶೀಟರ್ ವಿಲ್ಸನ್ ಗಾರ್ಡನ್ ನಾಗ, ಕುಳ್ಳ ಸೀನ ಹಾಗೂ ದರ್ಶನ್ ವ್ಯವಸ್ಥಾಪಕ ನಾಗರಾಜ್ ಅವರು ಕಾಫಿ ಕಪ್ ಹಿಡಿದು, ಸಿಗರೇಟ್ ಸೇದುತ್ತಾ ಹರಟೆ ಹೊಡೆಯುತ್ತಿದ್ದ ಫೋಟೊವೊಂದು ಬಹಿರಂಗವಾಗಿತ್ತು. ಅದಾದ ಮೇಲೆ ಸಿಸಿಬಿ ಪೊಲೀಸರು ಜೈಲಿನ ಮೇಲೆ ದಾಳಿ ನಡೆಸಿದ್ದರು.

ವಿವಿಧ ಬ್ಯಾರಕ್‌ಗಳಲ್ಲಿ ತಂಬಾಕು ಉತ್ಪನ್ನಗಳಾದ ಚೈನಿ, ಸ್ವಾಗತ್ ಗೋಲ್ಡ್, ಗಾಂಜಾ ಸೇದಲು ಕೈದಿಗಳು ಬಳಸುತ್ತಿದ್ದ ಕೊಳವೆಗಳು, ಚಾಕು, ಟ್ರಿಮರ್, ಕತ್ತರಿ, ಮೊಬೈಲ್ ಚಾರ್ಜರ್, ಬೆಂಕಿ ಪೊಟ್ಟಣ, ಲೈಟರ್, ಪ್ಲೇ ಕಾರ್ಡ್ಸ್, ಪ್ಲೇ ಕಾರ್ಡ್‌ನ ಆಟದ ಬಳಿಕ ಸಂಖ್ಯೆ ಬರೆದುಕೊಳ್ಳಲು ಕೈದಿಗಳು ಉಪಯೋಗಿಸಿದ್ದ ಪುಸ್ತಕ, ಬಿಸಿ ನೀರು ಕಾಯಿಸುವ ಕಾಯಲ್, ಆಯುಧಗಳು, ಕಬ್ಬಿಣದ ರಾಡುಗಳು ಪತ್ತೆ ಆಗಿದ್ದವು.

ವಂಚನೆ: ಮಾಜಿ ಡಿವೈಎಸ್‌ಪಿ ವಿರುದ್ಧ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಕೋಟ್ಯಂತರ ರೂಪಾಯಿ ವಂಚನೆ ಮಾಡಿದ್ದಾರೆ' ಎಂದು ಆರೋಪಿಸಿ ಮಾಜಿ ಡಿವೈಎಸ್‌ಪಿ ನಂಜುಂಡಯ್ಯ ಅವರ ವಿರುದ್ಧ ದೂರು ನೀಡಲಾಗಿದ್ದು, ನೆಲಮಂಗಲ ಪಟ್ಟಣ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

ಕನಕಪುರ ಮುಖ್ಯರಸ್ತೆಯ ಒ.ಬಿ.ಚೌಡಹಳ್ಳಿಯ ಉದ್ಯಮಿ ಟಿ.ಮೋಹನ್‌ಕುಮಾರ್ ಅವರು ನೀಡಿದ ದೂರು ಆಧರಿಸಿ ನಂಜುಂಡಯ್ಯ, ಆರ್. ಲಾವಣ್ಯಾ ಹಾಗೂ ಹೇಮಂತ್‌ಕುಮಾರ್ ಅವರ ವಿರುದ್ಧ ಎಫ್ಐಆರ್ ದಾಖಲಾಗಿದೆ. ನಂಜುಂಡಯ್ಯ ಅವರು ರಾಜಾನುಕುಂಟೆಯಲ್ಲಿ ನೆಲಸಿದ್ದಾರೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 316(2), 318(4), 336(2), 351(2), 352, 61(2), 3(5) ಅಡಿ ಮೂವರ ವಿರುದ್ಧ ಪ್ರಕರಣ ದಾಖಲಾಗಿದೆ.

'ಪ್ರಕರಣದ ಸಂಬಂಧ ನಂಜುಂಡಯ್ಯ ಅವರ ವಿಚಾರಣೆ ನಡೆಸಲಾಗಿದೆ. ಚನ್ನಪಟ್ಟಣ ಪೊಲೀಸ್ ತರಬೇತಿ ಕೇಂದ್ರದಲ್ಲಿ (ಡಿಎಆರ್) ನಂಜುಂಡಯ್ಯ ಅವರು ಕೆಲಸ ಮಾಡುತ್ತಿದ್ದರು. ಇತ್ತೀಚೆಗೆ ಸ್ವಯಂ ನಿವೃತ್ತಿ ತೆಗೆದುಕೊಂಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಂಜುಂಡಯ್ಯ

'ನಂಜುಂಡಯ್ಯ ಅವರು ನಮ್ಮ 9 ಎಕರೆ ಜಮೀನು ಅಭಿವೃದ್ಧಿಪಡಿಸಿ, ನಿವೇಶನ ಮಾರಾಟ ಮಾಡಿ ಹಣ ನೀಡುವುದಾಗಿ ಹೇಳಿ ಜಮೀನು ತೆಗೆದುಕೊಂಡಿದ್ದರು. ಒಪ್ಪಂದದ ಕರಾರು ಮಾಡಿಸಿಕೊಂಡು ವಂಚನೆ ನಡೆಸಿದ್ದಾರೆ' ಎಂದು ಆರೋಪಿಸಿ ನಂಜುಂಡಯ್ಯ ಸಂಬಂಧಿಯೂ ಆಗಿರುವ ಟಿ.ಮೋಹನ್ ಕುಮಾರ್ ಅವರು ದೂರು ನೀಡಿದ್ದಾರೆ.

'ತಮ್ಮ ಗಮನಕ್ಕೆ ಬಾರದಂತೆ ನಕಲಿ ಸಹಿ ಮಾಡಿ ಒಂದೇ ನಿವೇಶನವನ್ನು ಹಲವರಿಗೆ ಕರಾರು ಮಾಡಿದ್ದು, ಪ್ರಶ್ನೆ ಮಾಡಿದರೆ ಬೆದರಿಕೆ ಹಾಕಿದ್ದಾರೆ. ಹಣ ನೀಡುವುದಾಗಿ ಕ್ರಯ ಮಾಡಿಸಿಕೊಂಡು ಹಣ ನೀಡದೆ ಬೆದರಿಸಿ ನನ್ನಿಂದ ಕ್ರಯಪತ್ರಗಳನ್ನು ಪಡೆದಿರುತ್ತಾರೆ' ಎಂದು ಮೋಹನ್ ಕುಮಾರ್ ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಹೈದರಾಬಾದ್ ರೇಸ್

ಅರ್ರೈವ್ಡ್ ಗೆಲ್ಲುವ ನಿರೀಕ್ಷೆ

ರೇಸ್2ವಿನ್ ಫೌಂಡೇಶನ್ ಹೈದರಾಬಾದ್ ಡೆಕ್ಕನ್ ಡರ್ಬಿ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅರ್ರೈವ್ಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 12:25ಕ್ಕೆ ಆರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ

1ನೇ ರೇಸ್: ಎಓಎಸ್ ಸಿ 3, ಎನ್‌ಆರ್‌ಐ ಸ್ಟಾರ್ 6, ಬ್ಯಾಟ್ಲ್ ಆನ್ 5
2ನೇ ರೇಸ್: ಟೇಕ್ ಎ ಬ್ರೀತ್ 5, ಕಲಾಂಜಿಂಜಿ 3, ಡಾಸ್ 2
3ನೇ ರೇಸ್: ಮಿಸ್ ಸ್ಮೈಲಿ ಏಂಜಲ್ 1, ಮಿಸ್ಟಿ ನೈಟ್ 2, ಬ್ಲ್ಯಾಕ್ ಡಸ್ಟ್ 3
4ನೇ ರೇಸ್: ಬಾರ್ನ್ ಬ್ರೇವ್ 6, ಕ್ಯಾಲಿಸ್ಟ ಗರ್ಲ್ 4, ಹೈ ಸ್ಪೀಡ್ ಡ್ರೈವ್ 11
5ನೇ ರೇಸ್: ಈಕ್ವೈನ್ ಪವರ್ 9, ಟುರಿಯಾ 2, ಗಸ್ಟೋಸ್ ಬೇಬಿ 7
6ನೇ ರೇಸ್: ಪೆಟಾಲುಮ 4, ಸೂರ್ಯವಂಶಿ 16, ಎಮಿರಾಲ್ಡ್ ಟಚ್ 15
7ನೇ ರೇಸ್: ನಾನ್‌ಪರೈಲ್ 1, ಉಚ್ಚೈಶ್ರವಾಸ್ 5, ಡಿ ಮಿಂಚು 4
8ನೇ ರೇಸ್: ಅರ್ರೈವ್ಡ್ 2, ರೆಡ್ ಬಿಷಪ್ 7, ಸೂಪರ್‌ಸ್ಟಾರ್ 8
9ನೇ ರೇಸ್: ಟೈಮ್‌ಲೆಸ್ ವಿಷನ್ 6, ಚೆರಿ ಚೆವಾಲಿಯರ್ 8, ಪೆಸಿಫಿಕ್ ಹೈಟ್ಸ್ 11

ಉತ್ತಮ ಬೆಟ್: ಟೈಮ್‌ಲೆಸ್ ವಿಷನ್

1ನೇ ಜಾಕ್‌ಪಾಟ್: 1,2,3,4,5 | **2ನೇ ಜಾಕ್‌ಪಾಟ್: 5,6,7,8,9**

1ನೇ ಟ್ರಿಬಲ್ 2,3,4 | **2ನೇ ಟ್ರಿಬಲ್** 4,5,6 | **3ನೇ ಟ್ರಿಬಲ್** 7,8,9

ನಗರದಲ್ಲಿ ಇಂದು

ವಿದ್ಯಾರ್ಥಿಗಳಿಗೆ '100 ದಿನಗಳ ಜ್ಞಾನ ಯಜ್ಞ' ಉಪನ್ಯಾಸ: ಆಯೋಜನೆ: ಕಬೀರ್ ಟ್ರಸ್ಟ್, ಸ್ಥಳ: ಕಬೀರ್ ಆಶ್ರಮ, ಜೆ.ಸಿ. ನಗರ, ಬೆಳಿಗ್ಗೆ 6.15

ಸ್ತನ ಕ್ಯಾನ್ಸರ್ ಜಾಗೃತಿ ವಾಕಥಾನ್: ಅತಿಥಿಗಳು: ಡಾ.ಸಿ.ಎನ್. ಮಂಜುನಾಥ್, ತೇಜಸ್ವಿ ಸೂರ್ಯ, ಶಿವಶ್ರೀ ಸ್ಕಂದಪ್ರಸಾದ್, ಆಯೋಜನೆ ಹಾಗೂ ಸ್ಥಳ: ಮಣಿಪಾಲ್ ಆಸ್ಪತ್ರೆ, ಕನಕಪುರ ರಸ್ತೆ, ಬೆಳಿಗ್ಗೆ 6.30

'ಭಕ್ತಿ ಭಾವಾನಂದಂ' ಅಖಂಡ ಭಜನೆ: ಆಯೋಜನೆ ಹಾಗೂ ಸ್ಥಳ: ಸತ್ಯಸಾಯಿ ಆಶ್ರಮ, ಕಾಡುಗೋಡಿ, ಬೆಳಿಗ್ಗೆ 9

ಸ್ವರ-ಸುಶಿರ: ಕೊಳಲು ವಾದನ: ಅಶ್ವಿನ್ ಶ್ರೀನಿವಾಸನ್, ತಬಲಾ: ಉದಯರಾಜ್ ಕರ್ಪೂರ್, ಗಾಯನ: ಓಂಕಾರ್ ಹವಾಲ್ದಾರ್, ತಬಲಾ: ಯೋಗೀಶ್ ಭಟ್, ಹಾರ್ಮೋನಿಯಂ: ಸಮೀರ್ ಹವಾಲ್ದಾರ್, ಆಯೋಜನೆ: ಸಪ್ತಕ ಬೆಂಗಳೂರು, ಸ್ಥಳ: ಸೇವಾ ಸದನ, ಮಲ್ಲೇಶ್ವರ 14ನೇ ಕ್ರಾಸ್, ಸಂಜೆ 5.30

ಧ್ವನಿ-ಬಿಕೆಎಫ್ ಪಂಡಿತ್ ಮಲ್ಲಿಕಾರ್ಜುನ ಮನ್ಸೂರ್ ಹಿಂದೂಸ್ತಾನಿ ಸಂಗೀತ ಉತ್ಸವ: ಸಂಗೀತ ಕಛೇರಿಗಳು, ಆಯೋಜನೆ: ಬೆಂಗಳೂರು ಕಿಡ್ನಿ ಫೌಂಡೇಷನ್, ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಬೆಳಿಗ್ಗೆ 9.30ರಿಂದ

ಭಾರತಿ ಕೋಕಲೆ ಅವರ 'ನೀನೇಕೆ ದೂರಾದೆ' ಕಾದಂಬರಿ ಬಿಡುಗಡೆ: ಕಂನಾಡಿಗಾ ನಾರಾಯಣ, ಉದ್ಘಾಟನೆ: ಆರ್. ಮಂಜುನಾಥ್, ಅಧ್ಯಕ್ಷತೆ: ವೈ.ಬಿ.ಎಚ್. ಜಯದೇವ್, ಆಯೋಜನೆ ಹಾಗೂ ಸ್ಥಳ: ಭೂಮಿಕಾ ಸೇವಾ ಫೌಂಡೇಷನ್, ಹೆಸರಘಟ್ಟ ಮುಖ್ಯರಸ್ತೆ, ಬೆಳಿಗ್ಗೆ 10

24ನೇ ವಾರ್ಷಿಕೋತ್ಸವ ಮತ್ತು ಪ್ರಶಸ್ತಿ ಪ್ರದಾನ: ಎಲ್. ಎನ್. ಮುಕುಂದರಾಜ್, ಅಧ್ಯಕ್ಷತೆ: ನೀರಜಾ ನಾಗೇಂದ್ರ ಕುಮಾರ್, ಪ್ರಶಸ್ತಿ ಪುರಸ್ಕೃತರು: ಪದ್ಮರಾಜ ದಂಡಾವತಿ, ಚಿತ್ತ ಜಿನೇಂದ್ರ, ಸನ್ಮಾನಿತರು: ಎಸ್. ಜಿತೇಂದ್ರಕುಮಾರ್, ಆಯೋಜನೆ: ಸಾಲಿಗ್ರಾಮ ಜೈನ ಮಿತ್ರ ಮಂಡಳಿ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

'ನೃತ್ಯ ನೀರಾಜನ' ನೃತ್ಯೋತ್ಸವ: ನೃತ್ಯ ಪ್ರದರ್ಶನ: ಅದಿತಿ ಸುರೇಶ್, ಬಿ. ಸಮೀಕ್ಷಾ, ಆರ್. ಅಂಕಿತಾ, ತನ್ವಿ ಶೆಟ್ಟಿ, ಅತಿಥಿಗಳು: ನರಹಳ್ಳಿ ಬಾಲಸುಬ್ರಹ್ಮಣ್ಯ, ಪ್ರಶಾಂತ್ ಮಾರ್ಟಿನ್ ಆಗೇರ, ಅಭಿಷೇಕ್ ಟಿ., ಆಯೋಜನೆ: ನೃತ್ಯ ದಿಶಾ ಟ್ರಸ್ಟ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 10.30

ಸಾಧನೆಯ ಸಂಭ್ರಮ: ಸರ್ಕಾರಿ ಹುದ್ದೆ ಪಡೆದ ಸಾಧಕರು ಹಾಗೂ ಅವರ ಕುಟುಂಬದ ಸದಸ್ಯರಿಗೆ ಗೌರವ, ಆಯೋಜನೆ: ಡಾ.ರಾಜ್‌ಕುಮಾರ್ ಸಿವಿಲ್ ಸರ್ವೀಸ್ ಅಕಾಡೆಮಿ, ಸ್ಥಳ: ತೆರಿಗೆ ಭವನ, ನಾಗರಬಾವಿ, ಬೆಳಿಗ್ಗೆ 11

ಪ್ರಕಾಶ್ ಬೆಳವಾಡಿ

ಶತಮಾನೋತ್ಸವ ಸಮಾರಂಭ: ಅತಿಥಿಗಳು: ಪ್ರಕಾಶ್ ಬೆಳವಾಡಿ, ಐ.ಎಂ. ವಿಠ್ಠಲಮೂರ್ತಿ, ಆಯೋಜನೆ: ಮುಂಬೈನ ಮೈಸೂರು ಅಸೋಸಿಯೇಷನ್, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10

ಜಿ. ಸತ್ಯನಾರಾಯಣ ಅವರ 'ಮರ್ಯಾದಾ ಪುರುಷೋತ್ತಮ' ಮತ್ತು 'ಬೆಂಗಳೂರು ನಿರ್ಮಾತೃ ಕೆಂಪೇಗೌಡ' ಪುಸ್ತಕ ಬಿಡುಗಡೆ: ಬೈರಮಂಗಲ ರಾಮೇಗೌಡ, ಅತಿಥಿಗಳು: ಆನಂದರಾಮ ಉಪಾಧ್ಯ, ನಂದಾ ಎಂ.ಎಲ್., ಆಯೋಜನೆ: ಪರಿಮಳ ಪ್ರಕಾಶನ, ಸ್ಥಳ: ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಬಸವ ಸಂಸ್ಕೃತಿ ಅಭಿಯಾನ ಸಮಾರೋಪ ಸಮಾರಂಭ: ಸಾನ್ನಿಧ್ಯ: ಬಸವಪರ ಮಠಾಧಿಪತಿಗಳು, ಅತಿಥಿಗಳು: ಸಿದ್ದರಾಮಯ್ಯ, ಬಿ.ಎಸ್. ಯಡಿಯೂರಪ್ಪ, ಎಂ.ಬಿ. ಪಾಟೀಲ ಹಾಗೂ ಜನಪ್ರತಿನಿಧಿಗಳು, ಆಯೋಜನೆ: ಲಿಂಗಾಯತ ಮಠಾಧಿಪತಿಗಳ ಒಕ್ಕೂಟ, ಸ್ಥಳ: ಗಾಯತ್ರಿ ವಿಹಾರ, ಅರಮನೆ ಮೈದಾನ, ಬೆಳಿಗ್ಗೆ 10.30

ಪ್ರೊ.ಕ.ನಂ. ನಾಗರಾಜ ಅವರಿಗೆ ನುಡಿ ನಮನ: ಉಪಸ್ಥಿತಿ: ಜಿ.ರಾಮಕೃಷ್ಣ, ಎಚ್.ಎಸ್. ರಾಘವೇಂದ್ರ ರಾವ್, ಎಚ್.ಎಸ್. ಮಾಧವರಾವ್, ಬಿ.ಎಸ್. ಸುಬ್ಬರಾವ್, ಶೂದ್ರ ಶ್ರೀನಿವಾಸ್, ಎನ್.ಬಿ. ಚಂದ್ರಮೋಹನ್, ಬಿ.ಪಿ.ವೀರೇಂದ್ರ ಕುಮಾರ್, ಸಿ.ಬಿ. ಅನ್ನಪೂರ್ಣಮ್ಮ, ಗಿರಿಧರ್ ಖಾಸನೀಸ್, ಕೆ.ವಿ. ನಾರಾಯಣ, ಡಿ.ಆರ್. ಶಶಿಧರ್, ಎಂ.ಲೀಲಾವತಿ, ಎಚ್. ಕೆ. ಮೌಳೇಶ್, ಎಚ್.ಎಸ್. ಶ್ರೀಮತಿ, ಕೆ.ಪುಟ್ಟಸ್ವಾಮಿ, ಕೆ.ಆರ್. ಗಣೇಶ್, ಎಚ್. ಗೋಕುಲ್, ಸಿ.ಪಿ. ರವಿ ಕುಮಾರ್, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30

ಪದವಿ ಪ್ರದಾನ ಸಮಾರಂಭ: ಅತಿಥಿಗಳು: ಶಾಲಿನಿ ರಜನೀಶ್, ಶೋಭಾ ಜಿ., ಅಧ್ಯಕ್ಷತೆ: ಬಿ.ಎಸ್. ರಾಗಿಣಿ ನಾರಾಯಣ್, ಆಯೋಜನೆ: ಬಿ.ಎಂ.ಎಸ್. ಮಹಿಳಾ ಕಾಲೇಜು, ಸ್ಥಳ: ಕ್ರೀಡಾ ಸಂಕೀರ್ಣ, ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 11

ದತ್ತಿ ಉಪನ್ಯಾಸ: 'ಬೆಳಗಾವಿ ಕಾಂಗ್ರೆಸ್ ಅಧಿವೇಶನ ಮತ್ತು ಗಾಂಧೀಜಿ–1924- ವೇಮಗಲ್ ಸೋಮಶೇಖರ್, 'ಕೆರೆಗಳು: ಹಳ್ಳಿಯ ಜೀವಜಲ'- ಎಸ್. ಆಶಾ, ಆಯೋಜನೆ: ದಿ ಮಿಥಿಕ್ ಸೊಸೈಟಿ, ಸ್ಥಳ: ಶತಮಾನೋತ್ಸವ ಸಭಾಂಗಣ, ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

'ಮಾಸದ ಮಂಥನ' 79ನೇ ಸಂಭ್ರಮ: 'ಸರ್.ಎಂ. ವಿಶ್ವೇಶ್ವರಯ್ಯ ಕಾಯಕ ನಿಷ್ಠೆ ಮತ್ತು ಸಮಯ ಪ್ರಜ್ಞೆ' ವಿಚಾರ ಸಂಕಿರಣ, ಉಪಸ್ಥಿತಿ: ವಿ.ಬಿ. ಆರತಿ, ಸ್ಥಳ: ನಂ.17, ಸಾನಿಧ್ಯ, 1ನೇ ಅಡ್ಡ ರಸ್ತೆ, ದೊಡ್ಡಕನ್ನೆಲ್ಲಿ, ಬೆಳಿಗ್ಗೆ 11

ಉಮಾಶ್ರೀ

ಅಂತರರಾಷ್ಟ್ರೀಯ ಮಹಿಳಾ ಸಾಧಕಿ ಪ್ರಶಸ್ತಿ ಪ್ರದಾನ: ಅತಿಥಿಗಳು: ಶೋಭಾ ಕರಂದ್ಲಾಜೆ, ಬಸವರಾಜ ಹೊರಟ್ಟಿ, ಶಮ್ಲಾ ಇಕ್ಬಾಲ್, ಪ್ರಶಸ್ತಿ ಪುರಸ್ಕೃತರು: ಉಮಾಶ್ರಿ, ಕುಸುಮಾ, ದೀಕ್ಷಾ ವಿ., ರಜನಿ, ಸುಶೀಲಾ ಡೋಣೂರ, ದೀಪಶ್ರೀ ಎಸ್., ಸಂಜನಾ ಬಾಯ್, ಅನುರಾಧ, ಡಾ. ಚೈತನ್ಯಾ ಶ್ರೀಧರ್, ಗಾಯತ್ರಿ ಚಂದ್ರಶೇಖರ್, ಅನುಷ್ಕಾ ರೈ, ಅರ್ಚನಾ ಸಿಂಗ್, ಖುಷ್ಬೂ, ಕೃಪಾ, ಆರ್ಚಿ, ಆಯೋಜನೆ: ಕಬ್ಬನ್ ಪಾರ್ಕ್ ನಡಿಗೆದಾರರ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಮಧ್ಯಾಹ್ನ 2.30

'ಬಿದಿರು ಕಂಬ' ಕಲಾ ಪ್ರದರ್ಶನ: ಉಪಸ್ಥಿತಿ: ಅಲಕಾ ರಾವ್, ಅರ್ಪಿತಾ, ಭಾಗ್ಯಲಕ್ಷ್ಮಿ, ಜೀತಿನ್ ರಂಗರ್, ಜ್ಯೋತಿ ಸಿ. ಸಿಂಗ್, ಮಂಗಲಾ, ಮೋನಿಕಾ ನಂಜುಂಡ, ಪರಮೇಶ್ ಡಿ. ಜೋಳದ್, ರಾಣಿ ರೇಖಾ, ಸಲೋನಿ ಬಾಪ್ನಾ, ಸಪ್ನಾ ಎಚ್.ಎಸ್., ಶಿವಪ್ರಸಾದ್, ಸ್ಮಿತಾ ಕರಿಯಪ್ಪ, ಶ್ರೀಧರ ಗಂಗೊಳ್ಳಿ, ಆಯೋಜನೆ ಹಾಗೂ ಸ್ಥಳ: ರಂಗೋಲಿ ಮೆಟ್ರೊ ಕಲಾ ಕೇಂದ್ರ, ಎಂ.ಜಿ.ರಸ್ತೆ, ಮಧ್ಯಾಹ್ನ 2

'ಶಕುಂತಲೆ' ನಾಟಕ ಪ್ರದರ್ಶನ: ನಿರ್ದೇಶನ: ಸುಷ್ಮಾ ಎಸ್.ವಿ., ಆಯೋಜನೆ ಹಾಗೂ ಸ್ಥಳ: ವಿಜಯನಗರ ಬಿಂಬ, ಹಂಪಿನಗರ, ಸಂಜೆ 4 ಮತ್ತು 7

ಮಧು ರಂಗನಾಥನ್ ಅವರ 'ದಿ ಚೈಲ್ಡ್ ಹೂ ನೆವರ್ ನ್ಯೂ' ಪುಸ್ತಕ ಬಿಡುಗಡೆ: ಸಂವಾದ: ಉಪಾಸನಾ ಮಹತಾನಿ, ಆಯೋಜನೆ: ದಿ ಮದ್ರಾಸ್ ರೀಡಿಂಗ್ ಕಂಪನಿ, ಸ್ಥಳ: ಸೇಂಟ್ ಮಾರ್ಕ್ಸ್ ಹೋಟೆಲ್, ಸಂಜೆ 4

ನವೀಕೃತ ನೂತನ ಆಡಳಿತ ಕಚೇರಿ ಉದ್ಘಾಟನೆ: ಆಯೋಜನೆ ಹಾಗೂ ಸ್ಥಳ: ದಿ ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಸಂಜೆ 6

ಶೋಭಾಯಾತ್ರೆ ಹಾಗೂ 'ಮಧ್ವವಿಜಯ ಪ್ರಶಸ್ತಿ' ಪ್ರದಾನ: ವಿದ್ಯಾವಲ್ಲಭ ಮಾಧವತೀರ್ಥ ಸ್ವಾಮೀಜಿ, ಅತಿಥಿಗಳು: ತೇಜಸ್ವಿ ಸೂರ್ಯ, ಬಸವನಗೌಡ ಪಾಟೀಲ ಯತ್ನಾಳ್, ಎಲ್. ರವಿಸುಬ್ರಹ್ಮಣ್ಯ, ಎಸ್. ರಘುನಾಥ್, ಗುರುರಾಜ ಪೀಶೆಟ್ಟಿಹಳ್ಳಿ, ಅಧ್ಯಕ್ಷತೆ: ಜಿ. ನಾಗೇಂದ್ರ, ಪ್ರಶಸ್ತಿ ಪುರಸ್ಕೃತರು: ಮಂತ್ರಾಲಯ ಗಯಾ ರಾಮಮೂರ್ತಿ, ಕೆ.ವಿ. ಲಕ್ಷ್ಮೀನಾರಾಯಣ ಆಚಾರ್ಯ, ಸಿ.ಆರ್. ಮುರಳಿ, ನಿಧಿ ಆಚಾರ್ಯ ಉತ್ತನೂರು, ಎಸ್. ಸುಘೋಷಾಚಾರ್ಯ, ಆಯೋಜನೆ: ವಿಶ್ವ ಮಧ್ವಮತ ವೆಲ್ಫೇರ್ ಫೌಂಡೇಷನ್, ಸ್ಥಳ: ವ್ಯಾಸರಾಜ ಮಠ, ಗಾಂಧಿಬಜಾರ್, ಶೋಭಾಯಾತ್ರೆ ಸಂಜೆ 4ಕ್ಕೆ, ವೇದಿಕೆ ಕಾರ್ಯಕ್ರಮ ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಚಿಟಿಕೆ ಸುದ್ದಿ

ಪ್ರವೇಶ ಅವಧಿ ವಿಸ್ತರಣೆ

ಬೆಂಗಳೂರು: ನಗರ ವಿಶ್ವವಿದ್ಯಾಲಯದ(ಬಿಸಿಯು) ಜಾಗತಿಕ ಭಾಷೆಗಳ ಕೇಂದ್ರವು 2025-26ನೇ ಶೈಕ್ಷಣಿಕ ಸಾಲಿನ ಪ್ರವೇಶದ ಕೊನೆ ದಿನಾಂಕವನ್ನು ಅಕ್ಟೋಬರ್ 11ರವರೆಗೆ ವಿಸ್ತರಿಸಿದೆ.

ಸರ್ಟಿಫಿಕೇಟ್ ಕೋರ್ಸ್‌ಗಳು (8 ತಿಂಗಳ ಅವಧಿ), ಪದವಿ ಡಿಪ್ಲೊಮಾ ಮತ್ತು ಸ್ನಾತಕೋತ್ತರ ಡಿಪ್ಲೊಮಾ (8 ತಿಂಗಳ ಅವಧಿ) ಫ್ರೆಂಚ್, ಜರ್ಮನ್, ಸ್ಪ್ಯಾನಿಷ್, ಜಪಾನೀಸ್, ಚೈನೀಸ್ ಮತ್ತು ರಷ್ಯನ್ ಭಾಷೆಗಳ ಕೋರ್ಸ್‌ಗಳಿಗೆ ಅವಕಾಶವಿದೆ ಎಂದು ಜಾಗತಿಕ ಭಾಷಾ ಕೇಂದ್ರದ ನಿರ್ದೇಶಕಿ ಜ್ಯೋತಿ ವೆಂಕಟೇಶ್ ತಿಳಿಸಿದ್ದಾರೆ. ವಿವರಗಳಿಗೆ: 080-29572019 / 6361756549

ಪ್ರಶಸ್ತಿಗೆ ಆಹ್ವಾನ

ಬೆಂಗಳೂರು: ಕುಣಿಗಲ್ ತಾಲ್ಲೂಕು ಕೆಂಚನಹಳ್ಳಿ ಗ್ರಾಮದ ಅವ್ವ ಪುಸ್ತಕಾಲಯವು 2025ನೇ ಸಾಲಿನ ಅವ್ವ ಸೃಜನಶೀಲ ಸಾಹಿತ್ಯ ಪ್ರಶಸ್ತಿಗೆ ಪ್ರಕಟಿತ ಕೃತಿಗಳನ್ನು ಆಹ್ವಾನಿಸಿದೆ.

ಮಕ್ಕಳ ಸಾಹಿತ್ಯ ಕೃತಿಗಳಿಗೆ ಜ್ಯೋತಿ ಬಸವರಾಜು ದತ್ತಿ, ಯುವ ಬರಹಗಾರರ ಚೊಚ್ಚಲ ಕೃತಿಗೆ ಎಸ್.ವಿ.ನಾಗಲಕ್ಷ್ಮಿ ಹಾಗೂ ಎಂ.ಜಿ.ಎನ್.ಪ್ರಸಾದ್ ದತ್ತಿ, ಕನ್ನಡಕ್ಕೆ ಅನುವಾದವಾಗಿರುವ ಕೃತಿಗೆ ಜಯಲಕ್ಷ್ಮಿ ವೆಂಕಟೇಶ್ ದತ್ತಿ, ಅತ್ಯುತ್ತಮ ಕಥಾಸಂಕಲನಕ್ಕೆ ಗೌರಿ ಅಣ್ಣಪ್ಪ ದತ್ತಿ, ವೈಜ್ಞಾನಿಕ ಅರಿವು ಮೂಡಿಸುವ ಕೃತಿಗೆ ಮಯೂರ ದತ್ತಿ, 20 ವರ್ಷದೊಳಗಿನ ಮಕ್ಕಳಿಂದ ರಚಿತವಾದ ಕೃತಿಗೆ ಲಾರಣ್ಯ ಮತ್ತು ತಾನ್ಯಾ ದತ್ತಿ, ಅತ್ಯುತ್ತಮ ಕಾದಂಬರಿಗೆ ಲಕ್ಷ್ಮಿದೇವಮ್ಮ ಜಯರಾಮಯ್ಯ ದತ್ತಿ, ನಾಡು, ನುಡಿ, ಭಾಷೆ, ಸಂಸ್ಕೃತಿ ವಿಚಾರಗಳ ಕೃತಿಗೆ ಲಿಂಗಮ್ಮ ತಮ್ಮಯ್ಯ ದತ್ತಿ, ಮಹಿಳಾ ಬರಹಗಾರ್ತಿಯರ ಕೃತಿಗೆ ಸರೋಜಮ್ಮ ನಿಂಗೇಗೌಡ ದತ್ತಿ, ಅತ್ಯುತ್ತಮ ಕವನ ಸಂಕಲನಕ್ಕೆ ರತ್ನ ಗವಿಗೌಡ ದತ್ತಿ ಪ್ರಶಸ್ತಿಯನ್ನುನೀಡಲಾಗುತ್ತದೆ. 2024ರ ಜುಲೈನಿಂದ 2025ರ ಜೂನ್ ಅಂತ್ಯದವರೆಗೆ ಪ್ರಕಟವಾದ ಕೃತಿಗಳನ್ನು ನವೆಂಬರ್ 15ರ ಒಳಗೆ ಸಲ್ಲಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಮಾಹಿತಿಗೆ 8548948660

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು 2025-26ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ ಹಾಗೂ ರತ್ನ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಿಸಿದೆ.

2025ರ ಡಿಸೆಂಬರ್ ಕೊನೆಯ ವಾರದಲ್ಲಿ ನಡೆಯುವ ಈ ಪರೀಕ್ಷೆಗಳಿಗೆ, ₹50 ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಸೆ.30ರವರೆಗೆ ಅವಕಾಶ ನೀಡಲಾಗಿತ್ತು. ಈಗ ಅ.15ರವರೆಗೆ ಅವಧಿ ವಿಸ್ತರಿಸಲಾಗಿದೆ. ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಪರಿಷತ್ತಿನ ಪುಸ್ತಕ ಮಾರಾಟ ಮಳಿಗೆಯಲ್ಲಿ ₹25 ಶುಲ್ಕ ಪಾವತಿಸಿ, ಪರೀಕ್ಷಾ ನಿಯಮಾವಳಿ ಹಾಗೂ ಅರ್ಜಿಯನ್ನು ಪಡೆಯಬಹುದು.

ಅಂತರ್ಜಾಲ ತಾಣ www.kasapa.in ಮೂಲಕವೂ ಪರೀಕ್ಷಾ ಅರ್ಜಿಗಳನ್ನು ಪಡೆದುಕೊಳ್ಳಬಹುದು. ಪರೀಕ್ಷಾ ಶುಲ್ಕದೊಂದಿಗೆ ₹ 25 ಅರ್ಜಿ ಶುಲ್ಕವನ್ನು ಪ್ರತ್ಯೇಕವಾಗಿ ಪಾವತಿಸಬೇಕು ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ. ಸಂಪರ್ಕಕ್ಕೆ: 080 26612991 ಅಥವಾ 224238567

ದೂರದ ವಾರ್ಡ್‌: ಶಿಕ್ಷಕರ ವಿರೋಧ

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ 25ರಿಂದ 30 ಕಿ.ಮೀ ದೂರ ನಿಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಲು ದೂರದ ವಾರ್ಡ್‌ಗಳಿಗೆ ಶಿಕ್ಷಕರನ್ನು ನಿಯೋಜಿಸಲಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ದೂರಿದ್ದಾರೆ.

ಈ ಬಗ್ಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರಿಗೆ ಅವರು ಪತ್ರ ಬರೆದಿದ್ದಾರೆ.

'ಸಮೀಕ್ಷಕರಾಗಿರುವ ಶಿಕ್ಷಕರಿಗೆ ತರಬೇತಿ ನೀಡುವ ಸಂದರ್ಭದಲ್ಲಿ ಶಾಲೆ ಮತ್ತು ನಿವಾಸಕ್ಕೆ ಹತ್ತಿರ ಇರುವ ಹತ್ತು ವಾರ್ಡ್‌ಗಳನ್ನು ಆಯ್ಕೆ ಮಾಡಲು ಅವಕಾಶ ನೀಡಲಾಗಿತ್ತು. ಆದರೆ, ಈ ಹತ್ತು ವಾರ್ಡ್‌ಗಳಲ್ಲಿ ಯಾವುದಾದರೂ ಒಂದು ವಾರ್ಡ್ ಅನ್ನು ನೀಡುವ ಬದಲು 25 ಕಿ.ಮೀ ನಿಂದ 30 ಕಿ.ಮೀ ದೂರದಲ್ಲಿ ಸಮೀಕ್ಷೆ ನಡೆಸಲು ಆದೇಶ ಬಂದಿದೆ' ಎಂದು ಶಿಕ್ಷಕರು ಆರೋಪಿಸಿ ಮಲ್ಲೇಶ್ವರದಲ್ಲಿರುವ ನಗರ ಪಾಲಿಕೆ ಜಂಟಿ ಆಯುಕ್ತರ ಕಚೇರಿ ಆವರಣದಲ್ಲಿ ಪ್ರತಿಭಟಿಸಿದರು.

'ತರಬೇತಿ ಸಂದರ್ಭದಲ್ಲಿ ಆಯ್ಕೆ ಮಾಡಿಕೊಂಡಿರುವ ವಾರ್ಡ್‌ಗಳಿಗೇ ಸಮೀಕ್ಷಕರನ್ನಾಗಿ ನೇಮಿಸಬೇಕು. ಹೃದಯ ಸಂಬಂಧಿ ಕಾಯಿಲೆ, ಕಿಡ್ನಿ, ಕ್ಯಾನ್ಸರ್ ಇನ್ನಿತರ ದೀರ್ಘಕಾಲದ ಕಾಯಿಲೆ ಇರುವವರಿಗೆ, ಅಂಗವಿಕಲರಿಗೆ ಸಮೀಕ್ಷೆಯಿಂದ ರಿಯಾಯಿತಿ ನೀಡಬೇಕು. ಎರಡು ತಿಂಗಳ ಒಳಗೆ ನಿವೃತ್ತರಾಗಲಿರುವವರನ್ನು ಸಮೀಕ್ಷೆಗೆ ನಿಯೋಜಿಸಬಾರದು' ಎಂದರು.

'ನನ್ನ ಮನೆ ಥಣಿಸಂದ್ರದಲ್ಲಿದೆ. ಸುಮಾರು 35 ಕಿ.ಮೀ. ದೂರದಲ್ಲಿರುವ ಅರೆಕೆರೆಯಲ್ಲಿ ಸಮೀಕ್ಷೆ ನಡೆಸಲು ಆದೇಶ ಬಂದಿದೆ. ಇದೇ ರೀತಿ ಅನೇಕರಿಗೆ ಆದೇಶಗಳು ಬಂದಿವೆ. ನಾವು ಸಮೀಕ್ಷೆ ನಡೆಸುವ ಸ್ಥಳಕ್ಕೆ ಹೋಗಿ ಬರುವುದಕ್ಕೆ ಸಂಚಾರ ದಟ್ಟಣೆಯ ನಡುವೆ 4 ತಾಸು ಬೇಕಾಗುತ್ತದೆ. ಹೀಗಾದರೆ ಸಮೀಕ್ಷೆ ನಡೆಸುವುದು ಹೇಗೆ' ಎಂದು ಶಿಕ್ಷಕ ಉಮೇಶ್ ಅಸಹಾಯಕತೆ ತೋಡಿಕೊಂಡರು.

ಸಮೀಕ್ಷಕರು ಶನಿವಾರ ಮಲ್ಲೇಶ್ವರದಲ್ಲಿ ಜಿಬಿಎ ಜಂಟಿ ಆಯುಕ್ತರ ಕಚೇರಿ ಮುಂದೆ ಜಮಾಯಿಸಿದರು ಪ್ರಜಾವಾಣಿ ಚಿತ್ರ

ಅವೈಜ್ಞಾನಿಕ ನೇಮಕ: ಪುಟ್ಟಣ್ಣ ಆರೋಪ

ಸಮೀಕ್ಷೆಗೆ ಶಿಕ್ಷಕರನ್ನು ಯಾವುದೋ ದೂರದ ಊರಿಗೆ ನೇಮಕ ಮಾಡುವ ಮೂಲಕ ಪಾಲಿಕೆ ಅಧಿಕಾರಿಗಳು ಅವೈಜ್ಞಾನಿಕವಾಗಿ ವರ್ತಿಸಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಆರೋಪಿಸಿದ್ದಾರೆ. ಶಿಕ್ಷಕರ ವಾಸ ಇರುವ ವಾರ್ಡ್, ಕೆಲಸ ಮಾಡುವ ವಾರ್ಡ್ ಅಥವಾ ಸುತ್ತಲಿನ 10 ವಾರ್ಡ್‌ಗಳ ವ್ಯಾಪ್ತಿಯಲ್ಲಿಯೇ ಸಮೀಕ್ಷೆ ಮಾಡಲು ಆದೇಶಿಸಬೇಕು. ಈಗ ಹೊರಡಿಸಿರುವ ಅವೈಜ್ಞಾನಿಕ ಆದೇಶವನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಪುಟ್ಟಣ್ಣ

'ಒಂದೆರಡು ದಿನದಲ್ಲಿ ಸಮಸ್ಯೆಗೆ ಪರಿಹಾರ'

'ಜಿಬಿಎ ವ್ಯಾಪ್ತಿಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಶನಿವಾರದಿಂದ ಆರಂಭವಾಗಿದ್ದು, ಮೊಬೈಲ್– ಆ್ಯಪ್ ಕಾರ್ಯ ನಿರ್ವಹಣೆಯಲ್ಲಿ ಕೆಲವು ಸಮಸ್ಯೆಗಳಾಗಿವೆ. ಇವುಗಳನ್ನು ನಾವು ಮೊದಲೇ ನಿರೀಕ್ಷಿಸಿದ್ದು, ಎಲ್ಲದ್ದಕ್ಕೂ ಒಂದೆರಡು ದಿನಗಳಲ್ಲಿ ಪರಿಹಾರ ಕಲ್ಪಿಸಲಾಗುವುದು' ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

'ಅನಾರೋಗ್ಯ, ಅನಿವಾರ್ಯ ಕಾರಣಗಳಿದ್ದವರಿಗೆ, ಅಂಗವಿಕಲರಿಗೆ ಸಮೀಕ್ಷೆಯಿಂದ ರಿಯಾಯಿತಿ ನೀಡಲಾಗಿದೆ. ಸುಮಾರು 875 ಮಂದಿಗೆ ರಿಯಾಯಿತಿ ನೀಡಿ ಆದೇಶಿಸಲಾಗಿದೆ. ಒಂದಷ್ಟು ಸಮಸ್ಯೆ ಇರಬಹುದು. ಕೆಲವರಿಗೆ ಆದೇಶ ತಲುಪದೇ ಇರಬಹುದು. ಮಾನವೀಯತೆ ದೃಷ್ಟಿಯಿಂದ, ಸ್ಪಷ್ಟ ಕಾರಣಗಳಿದ್ದರೆ ಅಂತಹವರಿಗೆ ನಾವು ಸಮೀಕ್ಷೆಯಿಂದ ರಿಯಾಯಿತಿ ನೀಡಿದ್ದೇವೆ' ಎಂದರು.

'ಯಾವುದೇ ಇಲಾಖೆಯವರನ್ನು ಸಮೀಕ್ಷೆಯಲ್ಲಿ ತೊಡಗಿಸಿಕೊಳ್ಳಬಹುದು ಎಂದು ಮುಖ್ಯಮಂತ್ರಿ ಸೂಚಿಸಿದ್ದಾರೆ. ಹೀಗಾಗಿ, ವೈದ್ಯ, ಆಸ್ಪತ್ರೆ ಸೇರಿದಂತೆ ಯಾವುದೇ ಇಲಾಖೆಯಲ್ಲಿ ಕನಿಷ್ಠ ಸಿಬ್ಬಂದಿ ಇರುವಂತೆ ನೋಡಿಕೊಂಡೇ, ಸಮೀಕ್ಷಕರನ್ನು ಗುರುತಿಸಿ ಆದೇಶಿಸಲಾಗಿದೆ' ಎಂದರು.

22 ಸಾವಿರ ಮನೆ ಸಮೀಕ್ಷೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ 22,141 ಮನೆಗಳಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಶನಿವಾರ ಪೂರ್ಣಗೊಂಡಿದೆ.

ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ 50 ಲಕ್ಷಕ್ಕೂ ಹೆಚ್ಚು ಮನೆಗಳ ಸಮೀಕ್ಷೆ ಕಾರ್ಯ ಶನಿವಾರ ಆರಂಭವಾಗಿದೆ. ಕೇಂದ್ರ ನಗರ ಪಾಲಿಕೆಯಲ್ಲಿ 2,822, ಪೂರ್ವ ನಗರ ಪಾಲಿಕೆಯಲ್ಲಿ 3,105, ಉತ್ತರ ನಗರ ಪಾಲಿಕೆಯಲ್ಲಿ 5,987, ದಕ್ಷಿಣ ನಗರ ಪಾಲಿಕೆಯಲ್ಲಿ 3,145, ಪಶ್ಚಿಮ ನಗರ ಪಾಲಿಕೆಯಲ್ಲಿ 7,082 ಮನೆಗಳಲ್ಲಿ ಸಮೀಕ್ಷೆ ಪೂರ್ಣಗೊಂಡಿದೆ ಎಂದು ಜಿಬಿಎ ಪ್ರಕಟಣೆ ತಿಳಿಸಿದೆ.

'ಅಂಗವಿಕಲರು ಭಾಗವಹಿಸಲ್ಲ'

ಅಂಗವಿಕಲರನ್ನು ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ ಬೇರೆ ಎಲ್ಲಿಯೂ ಸಮೀಕ್ಷಕರಾಗಿ ಬಳಕೆ ಮಾಡಿಕೊಂಡಿಲ್ಲ. ಇಲ್ಲಿ 350 ಅಂಗವಿಕಲರನ್ನು ಸಮೀಕ್ಷೆಗೆ ನೇಮಿಸಿಕೊಂಡಿದ್ದಾರೆ. ಅಂಗವಿಕಲರನ್ನು ಕೈಬಿಡುವಂತೆ ಜಿಬಿಎ ಮುಖ್ಯ ಆಯುಕ್ತರಿಗೆ ಮನವಿ ಸಲ್ಲಿಸಿದ್ದೇವೆ. ನಾವು ಸಮೀಕ್ಷೆಯಲ್ಲಿ ಪಾಲ್ಗೊಳ್ಳುವುದಿಲ್ಲ. ವಿನಾಯತಿ ನೀಡದಿದ್ದರೆ ನ್ಯಾಯಾಲಯದ ಮೊರೆ ಹೋಗುತ್ತೇವೆ ಎಂದು ಅಂಗವಿಕಲ ಸರ್ಕಾರಿ ನೌಕರರ ಅಧ್ಯಕ್ಷ ಬೀರಪ್ಪ ಹಂಡಿಗಿ ಹೇಳಿಕೆ ನೀಡಿದ್ದಾರೆ.

ಪಾಲಿಕೆಗಳ ನೌಕರರಿಗೆ ಪಾವತಿ ಆಗದ ವೇತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ಐದು ನಗರ ಪಾಲಿಕೆಗಳ ಅಧಿಕಾರಿಗಳು– ಹಾಗೂ ನೌಕರರಿಗೆ ಸೆಪ್ಟೆಂಬರ್ ವೇತನ ಹಾಗೂ ನಿವೃತ್ತರಿಗೆ ವೇತನ ಅಕ್ಟೋಬರ್ 4ರ ಸಂಜೆಯವರೆಗೂ ಪಾವತಿಯಾಗಿಲ್ಲ.

'ಅಧಿಕಾರಿಗಳು– ನೌಕರರಿಗೆ ವೇತನ ಹಾಗೂ ನಿವೃತ್ತರಿಗೆ ಸೌಲಭ್ಯಗಳನ್ನು ಕೂಡಲೇ ಪಾವತಿಸಬೇಕು' ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರಿಗೆ ಶನಿವಾರ ಪತ್ರ ಬರೆಯಲಾಗಿದೆ.

ಸೆಪ್ಟೆಂಬರ್ 2ರಂದು ಬಿಬಿಎಂಪಿ ವಿಸರ್ಜನೆಯಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರವಾಯಿತು. ಐದು ನಗರ ಪಾಲಿಕೆಗಳೂ ಅಸ್ತಿತ್ವಕ್ಕೆ ಬಂದವು. ಇದನ್ನು ಅರಿತಿದ್ದ ಬಿಬಿಎಂಪಿ ಅಧಿಕಾರಿಗಳು ಆಗಸ್ಟ್ ವೇತನವನ್ನು ಆ ತಿಂಗಳ ಕೊನೆಯ ವಾರದಲ್ಲೇ ಪಾವತಿಸಿದ್ದರು. ಆದರೆ ಜಿಬಿಎ, ನಗರ ಪಾಲಿಕೆಗಳು ಅಸ್ತಿತ್ವಕ್ಕೆ ಬಂದು ಒಂದು ತಿಂಗಳಾದರೂ ಸೆಪ್ಟೆಂಬರ್ ವೇತನವನ್ನು ಪಾವತಿಸಿಲ್ಲ.

'ಈ ಹಿಂದಿನ ವರ್ಷಗಳಲ್ಲಿ ಆಯುಧ ಪೂಜೆ ಸಂದರ್ಭದಲ್ಲಿ ಸಿಬ್ಬಂದಿಗೆ ಮುಂಗಡ, ಬೇಗ ವೇತನ ಪಾವತಿಸುವ ಪ್ರಕ್ರಿಯೆ ಇತ್ತು. ಆದರೆ ಈ ಬಾರಿ ಆಯುಧಪೂಜೆ, ವಿಜಯ ದಶಮಿ ಮುಗಿದರೂ ವೇತನ ಪಾವತಿಸಿಲ್ಲ' ಎಂದು ಸಿಬ್ಬಂದಿ ದೂರಿದರು.

'ಪಾಲಿಕೆಯ ಹಿಂದಿನ 10 ವರ್ಷಗಳಲ್ಲಿ ನೌಕರರಿಗೆ ಇಂತಹ ದಯನೀಯ ಸ್ಥಿತಿ ಒಮ್ಮೆಯೂ ಎದುರಾಗಿರಲಿಲ್ಲ. ಸೆಪ್ಟೆಂಬರ್ 2ರಂದು ಜಿಬಿಎ ರಚನೆಯಾಗಿದೆ. ಈ ದಿನದವರೆಗೂ ಸೆಪ್ಟೆಂಬರ್ ವೇತನವನ್ನು ಪಾವತಿಸಲು ಕ್ರಮವಹಿಸಿಲ್ಲ' ಎಂದು ಸಂಘದ ಅಧ್ಯಕ್ಷ ಎ.ಅಮೃತ್‌ರಾಜ್ ತಿಳಿಸಿದರು.

'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯಕ್ಕೆ ನಗರ ಪಾಲಿಕೆಗಳ 'ಬಿ' ಮತ್ತು 'ಸಿ' ದರ್ಜೆಯ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಪಾಲಿಕೆ ಯಾವ ಕಚೇರಿಯಲ್ಲೂ ವೇತನ ಬಿಲ್ಲನ್ನು ತಯಾರಿಸಲಾಗಿಲ್ಲ. ಆ ಬಿಲ್ಲನ್ನು ಪಾವತಿಸುವ ಬಗ್ಗೆ ಕ್ರಮ ವಹಿಸಲು ಲೆಕ್ಕ ಶಾಖೆಯಲ್ಲಿ ಸಿಬ್ಬಂದಿ ಇರುವುದಿಲ್ಲ. ಅವರೆಲ್ಲ ಚುನಾವಣೆ ಕರ್ತವ್ಯ, ಸಮೀಕ್ಷೆ ಕೆಲಸ ಕಾರ್ಯಗಳು ಮತ್ತು ಇತರೆ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದಾರೆ' ಎಂದರು.

'ಹಣದ ಕೊರತೆ ಇಲ್ಲ'

'ಜಿಬಿಎ, ನಗರ ಪಾಲಿಕೆಗಳು ರಚನೆಯಾದರೂ ವ್ಯವಸ್ಥೆ– ಪ್ರಕ್ರಿಯೆ ಹಿಂದಿನ ರೀತಿಯಲ್ಲೇ ಇದೆ. ಹಿಂದೆ ವೇತನದ ಬಿಲ್‌ಗಳನ್ನು ಸಿದ್ಧಪಡಿಸುವವರಿಗೆ ಈಗಲೂ ಜವಾಬ್ದಾರಿ ಇದೆ. ಅವರಿಂದ ಬಿಲ್ ಸಲ್ಲಿಕೆ ಆಗದ್ದರಿಂದ ವೇತನ ಇನ್ನೂ ಬಿಡುಗಡೆಯಾಗಿಲ್ಲ' ಎಂದು ಜಿಬಿಎ ಹಣಕಾಸು ವಿಭಾಗದ ಮುಖ್ಯ ಆಯುಕ್ತ ಹರೀಶ್‌ಕುಮಾರ್ ತಿಳಿಸಿದರು.

'ಸಿಬ್ಬಂದಿ ಸೌಲಭ್ಯ– ವೆಚ್ಚಕ್ಕೆ ಅಗತ್ಯವಿರುವಷ್ಟು ಹಣವನ್ನು ನಗರ ಪಾಲಿಕೆಗಳ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಲಾಗಿದೆ. ಸಮೀಕ್ಷೆ ಹಾಗೂ ಇತರೆ ಅನಿವಾರ್ಯ ಕೆಲಸಗಳಿಂದ ಬಿಲ್ ಸಲ್ಲಿಕೆ ವಿಳಂಬ ಆಗಿರಬಹುದು. ಆ ಪ್ರಕ್ರಿಯೆ ನಡೆಯುತ್ತಿದ್ದು, ಸೋಮವಾರ ವೇತನ ಪಾವತಿಯಾಗುತ್ತದೆ. ಹಣದ ಕೊರತೆ ಇಲ್ಲ' ಎಂದರು.

ಸನ್ಮಾನ...

ಪ್ರಜಾವಾಣಿ ಚಿತ್ರ

ಎಸ್.ಕೆ. ಕ್ರಿಯೇಷನ್ಸ್ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶನಿವಾರ ಆಯೋಜಿಸಿದ್ದ 'ಸಂಗೀತಾ ಸಾರ್ಥಕ 50' ಕಾರ್ಯಕ್ರಮದಲ್ಲಿ ಗಾಯಕಿ ಸಂಗೀತಾ ಕಟ್ಟಿ ಅವರನ್ನು ಸನ್ಮಾನಿಸಲಾಯಿತು. ಸಂತೋಷ್ ಕಶ್ಯಪ್, ಗೌರಿ ಸುಬ್ರಹ್ಮಣ್ಯ, ಚಂದ್ರ ಸಿ. ಅಶ್ವಥ್, ಚಂದ್ರಿಕಾ, ಗಂಡಸಿ ಸದಾನಂದ ಸ್ವಾಮಿ ಮತ್ತು ಅಜಿತ್ ಗುರೂಜಿ ಉಪಸ್ಥಿತರಿದ್ದರು

ಯಶವಂತಪುರ: ದಸರಾ ಮಹೋತ್ಸವಕ್ಕೆ ತೆರೆ

ರಾಜರಾಜೇಶ್ವರಿನಗರ: ಮಾಗಡಿ ರಸ್ತೆ ಅಂಜನಾನಗರದ ಬಿಇಎಲ್ ಬಡಾವಣೆಯಲ್ಲಿರುವ ನಾಡಪ್ರಭು ಕೆಂಪೇಗೌಡ ಭವನದ ಶಾಸಕರ ಕಚೇರಿಯಲ್ಲಿ ಈ ವರ್ಷವು ನಾಡ ದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ದಸರಾ ಮಹೋತ್ಸವ 11 ದಿನವೂ ನಡೆಯಿತು.

ಪ್ರತಿದಿನ ನಡೆದ ಶರನ್ನವರಾತ್ರಿ ಉತ್ಸವ ಕಾರ್ಯದಲ್ಲಿ ಯಶವಂತಪುರ ವಿಧಾನಸಭಾ ಕ್ಷೇತ್ರದ ಸಾವಿರಾರು ಭಕ್ತಾಧಿಗಳು ಶ್ರದ್ಧೆ-ಭಕ್ತಿಯಿಂದ ಪಾಲ್ಗೊಂಡು ಪೂಜೆ ಸಲ್ಲಿಸಿದರು.

ಪ್ರತಿ ದಿವಸ ನಡೆದ ಜಾನಪದ ಉತ್ಸವ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕಲಾವಿದರು ನಡೆಸಿಕೊಟ್ಟರು. ಸ್ಥಳೀಯ ಕಲಾವಿದರು, ಯುವಜನಾಂಗ ತಮ್ಮಲ್ಲಿ ಅಡಗಿರುವ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶ ಮಾಡಿಕೊಡಲಾಯಿತು.

ಗುರುವಾರ ವಿಜಯದಶಮಿ ಕಾರ್ಯಕ್ರಮದಲ್ಲಿ ಶಾಸಕ ಎಸ್.ಟಿ.ಸೋಮಶೇಖರ್ ಬನ್ನಿಮರಕ್ಕೆ ವಿಶೇಷಪೂಜೆ ಸಲ್ಲಿಸಿದರು. ಕುಂಕುಮಾರ್ಚನೆ ನೆರವೇರಿಸಿದ ಮಹಿಳೆಯರು ದೇವರನಾಮ, ಭಕ್ತಿಗೀತೆ ಹಾಡಿದರು.

ವಾಹನ ದಟ್ಟಣೆ, ಶಬ್ದ, ವಾಯು ಮಾಲಿನ್ಯದಿಂದ ತೊಂದರೆ: ಕ್ರಮಕ್ಕೆ ಆಗ್ರಹ

ರೈಲ್ವೆ ಕ್ರಾಸ್ ದಾಟಲು ಸವಾರರಿಗೆ ಕಿರಿಕಿರಿ

• ಪ್ರಸನ್ನಕುಮಾರ್ ಯಾದವ್

ಪೀಣ್ಯ ದಾಸರಹಳ್ಳಿ: ಮೇದರಹಳ್ಳಿ ರೈಲ್ವೆ ಕ್ರಾಸ್ ಬಳಿ ಅಂಡರ್‌ಪಾಸ್ ಕಾಮಗಾರಿ ಮುಗಿದಿಲ್ಲ. ರೈಲು ಬಂದಾಗ ಕೆಲ ಹೊತ್ತು ಕಾಯಬೇಕಾದ ಸಮಸ್ಯೆಗೆ ಪರಿಹಾರ ಸಿಗದೇ ಜನರು ಹೈರಾಣಾಗುತ್ತಿದ್ದಾರೆ.

ಶೆಟ್ಟಿಹಳ್ಳಿ ಕಡೆಯಿಂದ ಮೇದರಹಳ್ಳಿ, ಚಿಕ್ಕಬಾಣಾವರ, ಹೆಸರಘಟ್ಟ, ಅಬ್ಬಿಗೆರೆ, ಲಕ್ಷ್ಮಿಪುರ, ಎಂ.ಎಸ್. ಪಾಳ್ಯ, ಯಲಹಂಕ ಮುಂತಾದ ಕಡೆಗೆ ಹಾಗೂ ಮೇದರಹಳ್ಳಿ ಕಡೆಯಿಂದ ಶೆಟ್ಟಿಹಳ್ಳಿ, ದಾಸರಹಳ್ಳಿ, ನೆಲಮಂಗಲ, ಪೀಣ್ಯ, ಜಾಲಹಳ್ಳಿ ಕ್ರಾಸ್, ಸುಂಕದಕಟ್ಟೆ ಕಡೆಗೆ ಹೋಗುವ ವಾಹನ ಸವಾರರು ಈ ರಸ್ತೆ ಅವಲಂಬಿಸಿದ್ದಾರೆ.

ದಿನದಲ್ಲಿ 120ಕ್ಕೂ ಹೆಚ್ಚು ರೈಲುಗಳು ಈ ಮಾರ್ಗದಲ್ಲಿ ಸಂಚರಿಸುತ್ತವೆ. ರೈಲು ಬರುವ 5 ನಿಮಿಷ ಮುಂಚಿತವಾಗಿ ಗೇಟ್ ಹಾಕಲಾಗುತ್ತದೆ. ವಾಹನ ಸವಾರರ ಸಾಲು ಕಿ.ಮೀ ಗಟ್ಟಲೆ ಬೆಳೆಯುವುದರಿಂದ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಗೇಟ್ ತೆಗೆದಾಗ ಒಮ್ಮೆಲೆ ನುಗ್ಗುವ ವಾಹನಗಳ ದಟ್ಟಣೆಯಿಂದ ಶಬ್ದ ಮತ್ತು ವಾಯು ಮಾಲಿನ್ಯ ಉಂಟಾಗುತ್ತಿದೆ.

'ರೈಲ್ವೆ ಅಂಡರ್ ಪಾಸ್ ನಿರ್ಮಾಣಕ್ಕೆ ಚಾಲನೆ ನೀಡಿ ಎಂಟು ವರ್ಷಗಳಾಗಿದ್ದರೂ ಕಾಮಗಾರಿ ಪೂರ್ಣಗೊಳ್ಳದೆ ಇರುವುದು ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಸಮಸ್ಯೆಗಳಿಗೆ ಕಾರಣವಾಗಿದೆ. ರೈಲ್ವೆ ಇಲಾಖೆಯವರು ಕೂಡಲೇ ಕ್ರಮ ವಹಿಸಲಿ' ಎಂದು ವಾಹನ ಸವಾರ ರಾಜೇಂದ್ರ ಆಗ್ರಹಿಸಿದರು.

'ವಾಹನ ಸವಾರರ ಅನುಕೂಲಕ್ಕಾಗಿ ಶಾಸಕರ ಮುನಿರಾಜು ಅವರು ರೈಲ್ವೆ ಅಧಿಕಾರಿಗಳನ್ನು ಕರೆಸಿ ಅಂಡರ್ ಪಾಸ್ ಕಾಮಗಾರಿ ಮುಗಿಸಲು ಸೂಚಿಸಿದ್ದರೂ ಕೂಡ ಇನ್ನೂ ಆಗಿಲ್ಲ. ಬೇಗನೇ ಕೆಲಸ ಮುಗಿಸಲು ಒತ್ತಡ ಹೇರುತ್ತೇವೆ' ಎಂದು ಶ್ರೀ ಸಾಯಿ ಫೌಂಡೇಷನ್ ಅಧ್ಯಕ್ಷ ಬಿ. ಸುರೇಶ್ ತಿಳಿಸಿದರು.

ಮೇದರಹಳ್ಳಿ

ಮೇದರಹಳ್ಳಿ ರೈಲ್ವೆ ಹಳಿ ಕ್ರಾಸ್‌ನಲ್ಲಿ ವಾಹನ ದಟ್ಟಣೆ

- ಅಂಡರ್ ಪಾಸ್ ತ್ವರಿತ ಕಾಮಗಾರಿಗೆ ಬೇಡಿಕೆ
- ದಿನನಿತ್ಯ ಟ್ರಾಫಿಕ್ ಕಿರಿಕಿರಿ
- ಮಳೆ, ಸುಡು ಬಿಸಿಲಿನಲ್ಲಿ ಗಂಟೆಗಟ್ಟಲೆ ಕಾಯಬೇಕಾದ ಸನ್ನಿವೇಶ

ಬಿ. ಸುರೇಶ್

ಸಬ್ ಅರ್ಬನ್ ರೈಲು ಕಾಮಗಾರಿ ನಡೆಯುತ್ತಿರುವುದರಿಂದ ಅಂಡರ್ ಪಾಸ್ ವಿಸ್ತರಿಸಬೇಕು. ಶೀಘ್ರ ರೈಲ್ವೆ ಸಚಿವರ ಗಮನಕ್ಕೆ ತಂದು ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತೇವೆ

ಎಸ್. ಮುನಿರಾಜು, ಶಾಸಕ

ಬೆಂಗಳೂರು ಪಶ್ಚಿಮ ನಗರ ಪಾಲಿಕೆ– ಒಟ್ಟು 111 ವಾರ್ಡ್‌ಗಳು



ವಾರ್ಡ್: ಪ್ರಮುಖ ಪ್ರದೇಶಗಳು

1. **ದೊಡ್ಡಬಿದರಕಲ್ಲು:** ಸಪ್ತಗಿರಿ ಬಡಾವಣೆ, ವೇಣುಗೋಪಾಲ ನಗರ, ಬೈರವೇಶ್ವರ ನಗರ, ಮುನಿಸ್ವಾಮಪ್ಪ ಲೇಔಟ್, ದೊಡ್ಡ ಬಿದರಕಲ್ಲು
2. **ನಾಗಸಂದ್ರ:** ನಾಗಸಂದ್ರ, ರುಕ್ಮಿಣಿ ನಗರ, ಎಚ್‌ಎಂಟಿ ಲೇಔಟ್
3. **ಚೊಕ್ಕಸಂದ್ರ:** ತುಮಕೂರು ರಸ್ತೆ, ಪೀಳ್ಯ ಒಳ ವರ್ತುಲ ರಸ್ತೆ, ಕೆಐಎಡಿಬಿ ರಸ್ತೆ
4. **ಪೀಣ್ಯ:** ಶಬರಿ ನಗರ, ಪೀಣ್ಯ
5. **ಗೊರಗುಂಟೆಪಾಳ್ಯ:** ಗೊರಗುಂಟೆಪಾಳ್ಯ
6. **ಸುಬೇದಾರ ಪಾಳ್ಯ:** ಎಸ್‌ವಿ ಲೇಔಟ್, ನಂಜಪ್ಪ ರೆಡ್ಡಿ ಕಾಲೊನಿ
7. **ಮತ್ತಿಕೆರೆ:** ನೇತಾಜಿ ವೃತ್ತ
8. **ಅರಮನೆ ನಗರ:** ಪೂಜಾರಿ ಲೇಔಟ್, ಅಚ್ಚಯ್ಯ ಚೆಟ್ಟಿ ಲೇಔಟ್, ಅಪ್ಪರ್ ಪ್ಯಾಲೇಜಸ್, ಐಟಿಐ ಕಾಲೊನಿ, ಜಲದರ್ಶಿನಿ ಲೇಔಟ್
9. **ಗುಟ್ಟಹಳ್ಳಿ:** ಗುಟ್ಟಹಳ್ಳಿ, ಈಜುಕೊಳ ಎಕ್ಸ್‌ಟೆನ್ಷನ್
10. **ಕೋದಂಡರಾಮಪುರ:** ವೈಯಾಲಿ ಕಾವಲ್
11. **ಸದಾಶಿವನಗರ:** ದೀವಾನರಪಾಳ್ಯ, ಮಲ್ಲೇಶ್ವರ, ಲೋವರ್ ಪ್ಯಾಲೇಸ್ ಆರ್ಚರ್ಡ್
12. **ಮಲ್ಲೇಶ್ವರ:** ಮೌಂಟ್ ಲೇಔಟ್
13. **ಸುಬ್ರಹ್ಮಣ್ಯ ನಗರ:** ಸುಬ್ರಹ್ಮಣ್ಯ ನಗರ 2ನೇ ಹಂತ– 3ನೇ ಬ್ಲಾಕ್, ಮಿಲ್ಕ್ ಕಾಲೊನಿ, ಬ್ರಿಗೇಡ್ ಗೇಟ್‌ವೇ
14. **ನಾಲ್ವಡಿ ಕೃಷ್ಣರಾಜ ಒಡೆಯರ್:** ಶಂಕರನಗರ, ವಿಜಯಾನಂದ ನಗರ
15. **ಡಾ. ಪುನೀತ್ ರಾಜ್‌ಕುಮಾರ್:** ರಾಜೀವ್‌ಗಾಂಧಿ ನಗರ, ಗಾಯತ್ರಿ ಎಚ್‌ಬಿಸಿಎಸ್ ಲೇಔಟ್
16. **ಲಕ್ಷ್ಮೀದೇವಿ ನಗರ:** ಲಕ್ಷ್ಮೀದೇವಿ ನಗರ
17. **ಎಂಇಐ ಕಾಲೊನಿ:** ಎಂಇಐ ಕಾಲೊನಿ
18. **ನೆಲಗದರನಹಳ್ಳಿ:** ಗೃಹಲಕ್ಷ್ಮಿ ಲೇಔಟ್, ಪೀಣ್ಯ 2ನೇ ಹಂತ, ನೆಲಗದರನಹಳ್ಳಿ
19. **ಶಾಂತವೇರಿ ಗೋಪಾಲಗೌಡ:** ಶಿವಪುರ
20. **ಅಂದ್ರಹಳ್ಳಿ:** ಅಂದ್ರಹಳ್ಳಿ
21. **ನಾಡಪ್ರಭು ಕೆಂಪೇಗೌಡ ನಗರ:** ತುಂಗಾನಗರ, ವಿದ್ಯಮಾನ್ಯ ನಗರ, ಲಿಂಗಧೀರನಹಳ್ಳಿ, ಗೊಲ್ಲರಪಾಳ್ಯ, ಗೊಲ್ಲರಹಟ್ಟಿ
22. **ಹೇರೋಹಳ್ಳಿ:** ಹೇರೋಹಳ್ಳಿ, ಪ್ರಸನ್ನ ಲೇಔಟ್, ಮಾದೇಶ್ವರ ನಗರ
23. **ಸುಂಕದಕಟ್ಟೆ:** ಸಂಜೀವಿನಿ ನಗರ
24. **ದೊಡ್ಡಣ್ಣ ಇಂಡಸ್ಟ್ರಿಯಲ್ ಏರಿಯಾ:** ಕರೀಂಸಾಬ್ ನಗರ
25. **ಹೆಗ್ಗನಹಳ್ಳಿ:** ಹೆಗ್ಗನಹಳ್ಳಿ
26. **ರಾಜಗೋಪಾಲ ನಗರ:** ಜಿಕೆಡಬ್ಲ್ಯು ಲೇಔಟ್
27. **ಭೀಮನಾಯಕ್:** ದಾಸರಹಳ್ಳಿ 2ನೇ ಅಡ್ಡರಸ್ತೆ, ಸಂಪಿಗೆ ರಸ್ತೆ
28. **ಲಗ್ಗೆರೆ:** ಲಗ್ಗೆರೆ
29. **ಫ್ರೀಡಂ ಫೈಟರ್:** ಎಫ್‌ಎಫ್ ಲೇಔಟ್, ಫ್ರೀಡಂ ಫೈಟರ್ ಕಾಲೊನಿ, ಎಲ್‌ಜಿ ರಾಜಣ್ಣ ಬಡಾವಣೆ
30. **ನಂದಿನಿ ಲೇಔಟ್:** ಪಿಡಬ್ಲ್ಯುಡಿ ಕ್ವಾಟ್ರಸ್, ನಂದಿನಿ ಲೇಔಟ್
31. **ಕಿತ್ತೂರು ರಾಣಿ ಚನ್ನಮ್ಮ:** ಬಿಎಚ್‌ಇಎಲ್ ಆಫೀಸರ್ಸ್ ಕಾಲೊನಿ, ಸಾಕಮ್ಮ ಲೇಔಟ್
32. **ಮಹಾಲಕ್ಷ್ಮಿಪುರ:** ಮಹಾಲಕ್ಷ್ಮಿ ಲೇಔಟ್ 4ನೇ ಬ್ಲಾಕ್, ಅಶೋಕ ಪುರ
33. **ನಾಗಪುರ:** ನಾಗಪುರ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಮಹಾಲಕ್ಷ್ಮಿಪುರ 2ನೇ ಹಂತ, ಜೆಸಿ ನಗರ
34. **ಕೇತಮಾರನಹಳ್ಳಿ:** ಕೇತಮಾರನಹಳ್ಳಿ, ರಾಜಾಜಿನಗರ 1– ಆರ್– ಎನ್ ಬ್ಲಾಕ್, ಕುರುಬರಹಳ್ಳಿ, ಬಸವೇಶ್ವರನಗರ, ಟೀಚರ್ಸ್ ಕಾಲೊನಿ
35. **ಗಾಯತ್ರಿ ನಗರ:** ಗಾಯತ್ರಿ ನಗರ
36. **ಶ್ರೀರಾಮಪುರ:** ಗಾಯತ್ರಿ ನಗರ, ಪ್ರಕಾಶ ನಗರ, ಮಾರುತಿ ಎಕ್ಸ್‌ಟೆನ್ಷನ್
37. **ದಯಾನಂದ ನಗರ:** ಬ್ಯಾಟರಾಯನ-ಪುರ, ಶ್ರೀರಾಮಪುರ
38. **ಬಂಡಿರೆಡ್ಡಿ ವೃತ್ತ:** ಎಸ್‌ಎಲ್‌ಪುರ, ಆರ್‌ಜಿಐ ಕಾಲೊನಿ, ರಾಮಚಂದ್ರಪುರ
39. **ಪ್ರಕಾಶ ನಗರ:** ಜೂಗನಹಳ್ಳಿ, ಮರಿಯಪ್ಪ-ನಪಾಳ್ಯ
40. **ರಾಜಾಜಿನಗರ:** ರಾಜಾಜಿನಗರ 2–3ನೇ ಬ್ಲಾಕ್
41. **ಶಂಕರಮಠ:** ಕಿರ್ಲೋಸ್ಕರ್ ಕಾಲೊನಿ
42. **ಕುರುಬರಹಳ್ಳಿ:** ರೀಹ್ಸ್ ಲೇಔಟ್, ಮಹಾ-ಲಕ್ಷ್ಮಿಪುರ ಎಫ್ ಕ್ರಾಸ್, ರಾಜ್‌ಕುಮಾರ್ ಪ್ರತಿಮೆ 14ನೇ ಅಡ್ಡರಸ್ತೆ
43. **ಕೆಂಪೇಗೌಡ ಬಡಾವಣೆ:** ಕೆಂಪೇಗೌಡ ಬಡಾವಣೆ
44. **ಚೌಡೇಶ್ವರಿ ನಗರ:** ವಿಘ್ನೇಶ್ವರ ನಗರ, ಸುಂಕದಕಟ್ಟೆ
45. **ಶ್ರೀಗಂಧದ ಕಾವಲು:** ಚಂದನ ಲೇಔಟ್, ಶ್ರೀಗಂಧದ ಕಾವಲು, ಅನ್ನಪೂರ್ಣೇಶ್ವ-ರಿ ನಗರ
46. **ಬ್ಯಾಡರಹಳ್ಳಿ:** ಭರತ್ ನಗರ, ಬ್ಯಾಡರಹಳ್ಳಿ
47. **ಉಲ್ಲಾಳು:** ಸರ್ ಎಂವಿ ವಿಶ್ವೇಶ್ವರಯ್ಯ 3–4–5–6ನೇ ಬ್ಲಾಕ್, ಉಲ್ಲಾಳು, ಸೊಣ್ಣೇನಹಳ್ಳಿ
48. **ಮಲ್ಲತ್ತಹಳ್ಳಿ:** ಐಟಿಐ ಕಾಲೊನಿ
49. **ಕೊಟ್ಟಿಗೆಪಾಳ್ಯ:** ಪ್ರೇಮ್‌ನಗರ, ಕೊಟ್ಟಿಗೆಪಾಳ್ಯ, ಮಾಳಗಾಲ
50. **ಕಮಲ ನಗರ:** ಎನ್‌ಜಿಒಎಸ್ ಕಾಲೊನಿ, ಕಮಲನಗರ
51. **ಶಕ್ತಿ ಗಣಪತಿ ನಗರ:** ಶಕ್ತಿ ಗಣಪತಿ ನಗರ, ಗೃಹಲಕ್ಷ್ಮಿ ಕಾಲೊನಿ
52. **ಬಸವೇಶ್ವರ ನಗರ:** ಶಾರದಾ ಕಾಲೊನಿ
53. **ಸಾಣೆಗುರುವನ ಹಳ್ಳಿ:** ಸಾಣೆಗುರುವನ ಹಳ್ಳಿ
54. **ಮಂಜುನಾಥ ನಗರ:** ಇಂದಿರಾನಗರ, ಮಂಜುನಾಥನಗರ
55. **ಶಿವನರ:** ಶಿವನಹಳ್ಳಿ
56. **ರಾಮಮಂದಿರ:** ರಾಜಾಜಿನಗರ 4–5ನೇ ಬ್ಲಾಕ್
57. **ದ.ರಾ ಬೇಂದ್ರೆ:** ರಾಜಾಜಿನಗರ 4ನೇ ಎಂ ಬ್ಲಾಕ್
58. **ಡಾ. ರಾಜ್‌ಕುಮಾರ್:** ರಾಜಾಜಿನಗರ 6ನೇ ಬ್ಲಾಕ್
59. **ಅಗ್ರಹಾರ ದಾಸರಹಳ್ಳಿ:** ಬಸವೇಶ್ವರ ನಗರ 2ನೇ ಹಂತ
60. **ತಿಮ್ಮೇನಹಳ್ಳಿ:** ದಾಸರಹಳ್ಳಿ, ಗೋವಿಂದರಾಜ ನಗರ, ತಿಮ್ಮೇನಹಳ್ಳಿ
61. **ರಾಣಿ ಝಾನ್ಸಿ:** ಮೀನಾಕ್ಷಿ ನಗರ, ಕೆಎಚ್‌ಬಿ ಕಾಲೊನಿ
62. **ವೃಷಭಾವತಿ ನಗರ:** ವಿನಾಯಕ ನಗರ, ವೃಷಭಾವತಿ ನಗರ
63. **ಮಂಗಲ್ ಪಾಂಡೆ:** ಕಾಮಾಕ್ಷಿ ಪಾಳ್ಯ
64. **ಪಟ್ಟೇಗಾರ್ ಪಾಳ್ಯ:** ಕಾವೇರಿಪುರ, ಸಿಂಡಿಕೇಟ್ ಬ್ಯಾಂಕ್ ಕಾಲೊನಿ, ಸಂಪಿಗೆ ಲೇಔಟ್
65. **ಪ್ರಶಾಂತ ನಗರ:** ಪ್ರಶಾಂತ ನಗರ, ಅಮರಜ್ಯೋತಿ ನಗರ, ಸೆಂಟ್ರಲ್ ಎಕ್ಸೈಸ್ ಲೇಔಟ್, ಬಿನ್ನಿ ಲೇಔಟ್, ಎಂಸಿ ಲೇಔಟ್
66. **ಹೊಸಹಳ್ಳಿ:** ಹೊಸಹಳ್ಳಿ, ಶಾಮಣ್ಣನಗರ
67. **ಆರ್‌ಪಿಸಿ ಲೇಔಟ್:** ಆರ್‌ಪಿಸಿ ಲೇಔಟ್, ಟೆಲಿಕಾಂ ಲೇಔಟ್
68. **ವಿದ್ಯಾರಣ್ಯ ನಗರ:** ಚೋಳೂರು ಪಾಳ್ಯ
69. **ಕೆ.ಪಿ. ಅಗ್ರಹಾರ:** ಮಂಜುನಾಥ ನಗರ, ಹೊಸಹಳ್ಳಿ ಮೆಟ್ರೊ ನಿಲ್ದಾಣ
70. **ಸಂಗೊಳ್ಳಿ ರಾಯಣ್ಣ:** ಕೆಂಪಾಪುರ ಅಗ್ರಹಾರ
71. **ಕೃಷ್ಣದೇವರಾಯ:** ಬಾಪೂಜಿನಗರ
72. **ಬಾಪೂಜಿನಗರ:** ಗುಡ್ಡದಹಳ್ಳಿ
73. **ನ್ಯೂ ಟಿಂಬರ್ ಯಾರ್ಡ್ ಲೇಔಟ್:** ನ್ಯೂ ಟಿಂಬರ್ ಯಾರ್ಡ್ ಲೇಔಟ್, ಗಜೇಂದ್ರ ನಗರ, ಪೈಪ್‌ಲೈನ್ ಪಶ್ಚಿಮ, ರಾಘವನಗರ, ರಾಘವೇಂದ್ರ ನಗರ
74. **ಶ್ರೀನಗರ:** ಅನಂತಮೂರ್ತಿ ಲೇಔಟ್, ಮಾರ್ಕಂಡೇಯ ಬಡಾವಣೆ, ಆರ್‌ವಿ ಬ್ಲಾಕ್, ರಾಘವೇಂದ್ರ ಬ್ಲಾಕ್, ವೀವರ್ಸ್ ಕಾಲೊನಿ
75. **ಕೆಂಪಾಂಬುಧಿ:** ಗವಿಪುರ
76. **ಗವಿಪುರ:** ರಾಘವೇಂದ್ರ ಬ್ಲಾಕ್
77. **ಹನುಮಂತನಗರ:** ಹನುಮಂತನಗರ, ಮೌಂಟ್ ಜಾಯ್, ರಾಘವೇಂದ್ರ ಬ್ಲಾಕ್, 1ನೇ ಬ್ಲಾಕ್ ಶ್ರೀನಗರ
78. **ಎನ್.ಆರ್. ಕಾಲೊನಿ:** ಎನ್.ಆರ್. ಕಾಲೊನಿ, ಅಶೋಕ ನಗರ
79. **ಯಡಿಯೂರು:** ಜಯನಗರ 3ನೇ ಬ್ಲಾಕ್, ಯಡಿಯೂರು
80. **ದೇವಗಿರಿ ದೇವಸ್ಥಾನ:** ಜಯನಗರ 6–7ನೇ ಬ್ಲಾಕ್, ತ್ಯಾಗರಾಜ ನಗರ, ಕೆ.ಆರ್. ರಸ್ತೆ
81. **ಕರೇಸಂದ್ರ:** ಇಂಡಸ್ಟ್ರಿಯಲ್ ಲೇಔಟ್, ಕಾವೇರಿನಗರ
82. **ಗಣೇಶ ಮಂದಿರ:** ಕದಿರೇನಹಳ್ಳಿ, ಬನಶಂಕರಿ 2ನೇ ಹಂತ
83. **ತ್ಯಾಗರಾಜ ನಗರ:** 3ನೇ ಬ್ಲಾಕ್ ಮಂಜುನಾಥ ಕಾಲೊನಿ, ವಿದ್ಯಾಪೀಠ ಬಡಾವಣೆ, ವಿವೇಕಾನಂದ ನಗರ, ಬೋವಿ ಕಾಲೊನಿ
84. **ಕತ್ರಿಗುಪ್ಪೆ:** ಕೆಇಬಿ ಕಾಲೊನಿ, ಬನಶಂಕರಿ, ಖಾದಿ ಲೇಔಟ್, ಕತ್ರಿಗುಪ್ಪೆ
85. **ಶ್ರೀನಿವಾಸ ನಗರ:** ಪೂರ್ಣಪ್ರಜ್ಞಾ ಲೇಔಟ್, ಎನ್.ಆರ್. ಕಾಲೊನಿ 5ನೇ ಬಿ ಕ್ರಾಸ್
86. **ಅಶೋಕ ನಗರ:** ಬನಶಂಕರಿ 1ನೇ ಹಂತ, ವಿದ್ಯಾಪೀಠ ಬಡಾವಣೆ
87. **ಸ್ವಾಮಿ ವಿವೇಕಾನಂದ:** ಹೊಸಕೆರೆಹಳ್ಳಿ ಬಡಾವಣೆ, ಬನಶಂಕರಿ 3ನೇ ಬ್ಲಾಕ್, ಗಿರಿನಗರ
88. **ಕಾಮಕ್ಯ ಲೇಔಟ್:** ಭುವನೇಶ್ವರಿ ನಗರ
89. **ಚಿಕ್ಕಲಸಂದ್ರ:** ಇಟ್ಟಮಡು
90. **ಇಟ್ಟಮಡು:** ದತ್ತಾತ್ರೇಯ ನಗರ
91. **ಹೊಸಕೆರೆಹಳ್ಳಿ:** ಹೊಸಕೆರೆ ಹಳ್ಳಿ
92. **ದೀಪಾಂಜಲಿ ನಗರ:** ವೀರಭದ್ರ ನಗರ, ಕೆಎಚ್‌ಆರ್ ಕಾಲೊನಿ, ದೀಪಾಂಜಲಿ ನಗರ
93. **ಆವಲಹಳ್ಳಿ:** ಬ್ಯಾಟರಾಯನ ಪುರ, ಗಣಪತಿ ನಗರ, ಆವಲಹಳ್ಳಿ
94. **ಗಾಳಿ ಆಂಜನೇಯ ದೇವಸ್ಥಾನ:** ಎನ್‌ವಿವೈ ಲೇಔಟ್
95. **ಹಂಪಿ ನಗರ:** ಬಿಸಿಸಿ ಲೇಔಟ್, ಹಂಪಿ ನಗರ
96. **ಮಾರುತಿ ಮಂದಿರ:** ವಿಜಯನಗರ, ಪಿಎಫ್ ಲೇಔಟ್, ವಿನಾಯಕ ಲೇಔಟ್, ಜಿಕೆಡಬ್ಲ್ಯು ಲೇಔಟ್
97. **ಮಾರೇನಹಳ್ಳಿ:** ಸರಸ್ವತಿ ನಗರ, ಮಾರೇನಹಳ್ಳಿ, ಕಾವೇರಿ ಲೇಔಟ್, ಎನ್‌ಎಚ್‌ಸಿಎಸ್ ಲೇಔಟ್
98. **ಮೂಡಲಪಾಳ್ಯ:** ಎನ್‌ಜಿಇಎಫ್ ಲೇಔಟ್, ಶಿವಾನಂದ ಬಡಾವಣೆ
99. **ವಿನಾಯಕ ಲೇಔಟ್:** ನಾಗರಬಾವಿ, ಮಲ್ಲತ್ತಹಳ್ಳಿ, ವಿನಾಯಕ ಲೇಔಟ್, ನೃಪತುಂಗ ನಗರ, ಎನ್‌ಜಿಇಎಫ್ ಲೇಔಟ್
100. **ಅನುಭವ ನಗರ:** ಕೆನರಾಬ್ಯಾಂಕ್ ಕಾಲೊನಿ, ನಂಜರಸಪ್ಪ ಬಡಾವಣೆ, ಅನ್ನಪೂರ್ಣೇಶ್ವರಿ ನಗರ
101. **ಅತ್ತಿಗುಪ್ಪೆ:** ಚಂದ್ರ ಲೇಔಟ್, ಬಿಸಿಸಿ ಲೇಔಟ್, ಅತ್ತಿಗುಪ್ಪೆ
102. **ಚಂದ್ರ ಲೇಔಟ್:** ವಿದ್ಯಾಗಿರಿ ಬಡಾವಣೆ, ಅರುಂಧತಿ ನಗರ, ಚಂದ್ರ ಲೇಔಟ್
103. **ನಾಗರಬಾವಿ:** ಸಿದ್ದಾರ್ಥ ನಗರ, ಟೀಚರ್ಸ್ ಕಾಲೊನಿ 2ನೇ ಬ್ಲಾಕ್
104. **ನಾಯಂಡಹಳ್ಳಿ:** ವಿನಾಯಕ ಲೇಔಟ್
105. **ರಾಜರಾಜೇಶ್ವರಿ ನಗರ:** ಶ್ರೀನಿವಾಸಪುರ, ರಾಜರಾಜೇಶ್ವರಿ ನಗರ ಐಡಿಯಲ್ ಹೋಮ್ಸ್, ಬಿಇಎಂಎಲ್ ಲೇಔಟ್ 3–5ನೇ ಹಂತ, ಹಲಗೆವಡೇರಹಳ್ಳಿ, ಚನ್ನಸಂದ್ರ, ಕೆಂಚೇನಹಳ್ಳಿ
106. **ಮೈಲಸಂದ್ರ:** ಕೃಷ್ಣ ಗಾರ್ಡನ್, ಕಾನ್‌ಕಾರ್ಡ್ ಲೇಔಟ್, ಬಿಇಎಂಎಲ್ 7ನೇ ಹಂತ, ವಿಜಯಶ್ರೀ ಲೇಔಟ್, ಬಿಎಚ್‌ಇಎಲ್ ಲೇಔಟ್, ಬಿಡಿಎ ಜ್ಞಾನಭಾರತಿ ಎನ್‌ಕ್ಲೇವ್, ಬನಶಂಕರ್ 6ನೇ ಹಂತ 11ನೇ ಬ್ಲಾಕ್, ಪಟ್ಟಣಗೆರೆ, ಮೈಲಸಂದ್ರ, ಗಾಣಕಲ್ಲು
107. **ಹೆಮ್ಮಿಗೆಪುರ:** ಗಟ್ಟಿಗೆರೆಪಾಳ್ಯ, ಹೆಮ್ಮಿಗೆಪುರ, ಸೋಂಪುರ, ಕಾನ್ಸೆಪ್ಟ್ ಸಿಟಿ, ಕೋಡಿಪಾಳ್ಯ
108. **ಸುಭಾಷ್ ನಗರ:** ಮಾರುತಿ ನಗರ
109. **ಕೆಂಗೇರಿ ಉಪನಗರ:** ಕೆಂಗೇರಿ, ದುಬಾಸಿ ಪಾಳ್ಯ, ಸ್ಯಾಟಲೈಟ್ ಟೌನ್
110. **ನಾಗದೇವನಹಳ್ಳಿ:** ಭುವನೇಶ್ವರಿ ನಗರ 1–2ನೇ ಹಂತ, ನಾಗದೇವನಹಳ್ಳಿ
111. **ಜ್ಞಾನಭಾರತಿ:** ಜ್ಞಾನಭಾರತಿ

ಚಿಟಿಕೆ ಸುದ್ದಿ

ಟೋಲ್: ಯುಪಿಐ ಬಳಸಿದರೆ ಶುಲ್ಕ ಕಡಿಮೆ

ನವದೆಹಲಿ (ಪಿಟಿಐ): ಸಕ್ರಿಯ ಫಾಸ್ಟ್‌ಟ್ಯಾಗ್ ಇಲ್ಲದೆ ಟೋಲ್ ಪ್ಲಾಜಾ ಪ್ರವೇಶಿಸುವ ವಾಹನಗಳು ಯುಪಿಐ ಮೂಲಕ ಶುಲ್ಕ ಪಾವತಿ ವಿಧಾನ ಆಯ್ಕೆ ಮಾಡಿಕೊಂಡರೆ, ಸಾಮಾನ್ಯ ಟೋಲ್ ಶುಲ್ಕದ 1.25 ಪಟ್ಟು ಶುಲ್ಕ ವಿಧಿಸಲಾಗುವುದು ಎಂದು ಕೇಂದ್ರ ಸರ್ಕಾರ ಶನಿವಾರ ತಿಳಿಸಿದೆ.

ಈ ಹೊಸ ನಿಯಮ ನವೆಂಬರ್ 15ರಿಂದ ಜಾರಿಗೆ ಬರಲಿದೆ. ಪ್ರಸ್ತುತ, ಫಾಸ್ಟ್‌ಟ್ಯಾಗ್ ಇಲ್ಲದವರು ಟೋಲ್‌ನಲ್ಲಿ, ಶುಲ್ಕವನ್ನು ನಗದು ರೂಪದಲ್ಲಿ ಪಾವತಿಸುವುದಾದರೆ ಎರಡು ಪಟ್ಟು ಹೆಚ್ಚು ಪಾವತಿಸಬೇಕಿದೆ.

ಈ ಹೊಸ ನಿಯಮದಿಂದ ಟೋಲ್‌ನಲ್ಲಿ ನಗದು ವಹಿವಾಟು ಕಡಿಮೆ ಆಗಲಿದೆ. ಅಲ್ಲದೆ, ಡಿಜಿಟಲ್ ಪಾವತಿಗೆ ಉತ್ತೇಜನ ನೀಡಲು, ಟೋಲ್ ಕಾರ್ಯಾಚರಣೆಯಲ್ಲಿ ಪಾರದರ್ಶಕತೆ ಹೆಚ್ಚಿಸಲು ಈ ನಿಯಮ ಜಾರಿಗೆ ತರಲಾಗಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ತಿಳಿಸಿದೆ.

ಡಿ–ಮಾರ್ಟ್ ವರಮಾನ ಹೆಚ್ಚಳ

ನವದೆಹಲಿ (ಪಿಟಿಐ): ಡಿ–ಮಾರ್ಟ್ ಮಳಿಗೆಗಳ ಒಡೆತನ ಹೊಂದಿರುವ ಅವೆನ್ಯು ಸೂಪರ್‌ಮಾರ್ಟ್ಸ್ ಕಂಪನಿಯ ವರಮಾನವು ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 15.4ರಷ್ಟು ಏರಿಕೆಯಾಗಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ವರಮಾನವು ₹14,050 ಕೋಟಿಯಷ್ಟಿತ್ತು. ಈ ಬಾರಿ ₹16,219 ಕೋಟಿಯಷ್ಟಾಗಿದೆ ಎಂದು ಕಂಪನಿ ಷೇರುಪೇಟೆಗೆ ತಿಳಿಸಿದೆ. ಸೆಪ್ಟೆಂಬರ್ ಅಂತ್ಯದ ವೇಳೆಗೆ ಕಂಪನಿಯು ಒಟ್ಟು 432 ಮಳಿಗೆಗಳನ್ನು ಹೊಂದಿದೆ.

‘ಗ್ಯಾರಂಟಿ ಟೀಕೆಗೆ ದೇವೇಗೌಡರ ಬಳಕೆ’

ಬೆಂಗಳೂರು: ‘ಕಾಂಗ್ರೆಸ್ ನೇತೃತ್ವದ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳನ್ನು ಟೀಕಿಸಲು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೇವಾಲಾ ದೂರಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ಗ್ಯಾರಂಟಿ ಯೋಜನೆಗಳು ಕೇವಲ ಜನಪರ ಯೋಜನೆಗಳಲ್ಲ. ಸಾಮಾಜಿಕ ನ್ಯಾಯ ಎತ್ತಿ ಹಿಡಿದು, ಕೋಟ್ಯಂತರ ಜನರ ಜೀವನದಲ್ಲಿ ಬದಲಾವಣೆ ತಂದಿವೆ. ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ ಎಂಬ ದೇವೇಗೌಡರ ಹೇಳಿಕೆ ಬಿಜೆಪಿ-ಜೆಡಿಎಸ್ ದ್ವೇಷ ರಾಜಕಾರಣಕ್ಕೆ ಒಂದು ಉದಾಹರಣೆ. ಎರಡೂ ‘ಕುರುಡು ದೃಷ್ಟಿಯುಳ್ಳ ಪಕ್ಷಗಳು’ ಎಂದು ಟೀಕಿಸಿದರು.

ಮುಂಬೈ ಧಾರಣೆ (ಶೇಂಗಾ)

04-10-2025	
ಜಾವಾ 70/80(ಹೊಸ)	10300-10400
ಜಾವಾ 80/90(ಹೊಸ)	9600-9700
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1340 (1335)
ಒಂದು ವಾರದ ಡೆಲಿವರಿ	1335 (1330)
ಪಾಮ್ ವಾರದ ಡೆಲಿವರಿ	1268 (1273)
ಸೂರ್ಯಕಾಂತಿ ಎಣ್ಣೆ ಕಚ್ಚಾ	1365 (1370)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,17,350 (1,17,000)
ಬೆಳ್ಳಿ ಕೆ.ಜಿಗೆ	1,47,700 (1,47,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹401-652
ದ್ವಿತಳಿ (ಬಿ.ವಿ)	₹450-786

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹183
ಆರ್‌ಎಸ್‌ಎಸ್-5	₹178
ಗುಡ್ ಲಾಟ್	₹164

ಬ್ಯಾಂಕ್ ಸಾಲ ನೀಡಿಕೆ ಹೆಚ್ಚಳ

ಸೆಪ್ಟೆಂಬರ್ ತ್ರೈಮಾಸಿಕದ ಠೇವಣಿ, ವಹಿವಾಟು ಮೊತ್ತ ಪ್ರಕಟಿಸಿದ ಬ್ಯಾಂಕ್‌ಗಳು



ನವದೆಹಲಿ / ಕೋಲ್ಕತ್ತ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ದೇಶದ ಸರ್ಕಾರಿ ಮತ್ತು ಖಾಸಗಿ ಬ್ಯಾಂಕ್‌ಗಳ ಸಾಲ ನೀಡಿಕೆ ಹಾಗೂ ಠೇವಣಿ ಪ್ರಮಾಣ ಹೆಚ್ಚಳವಾಗಿದೆ.

ದೇಶದ ಅತಿದೊಡ್ಡ ಖಾಸಗಿ ಬ್ಯಾಂಕ್ ಆಗಿರುವ, ಎಚ್‌ಡಿಎಫ್‌ಸಿ ಬ್ಯಾಂಕ್‌ನ ಸಾಲ ನೀಡಿಕೆ ಪ್ರಮಾಣದಲ್ಲಿ ಶೇ 9ರಷ್ಟು ಹೆಚ್ಚಳವಾಗಿದ್ದು, ₹27.9 ಲಕ್ಷ ಕೋಟಿ ಸಾಲ ನೀಡಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹25.6 ಲಕ್ಷ ಕೋಟಿ ಸಾಲ ನೀಡಲಾಗಿತ್ತು ಎಂದು ಬ್ಯಾಂಕ್ ಶನಿವಾರ ತಿಳಿಸಿದೆ.

ಬ್ಯಾಂಕ್‌ನ ಠೇವಣಿ ಪ್ರಮಾಣ ಅಂದಾಜು ₹27.1 ಲಕ್ಷ ಕೋಟಿಯಾಗಿದ್ದು, ಶೇ 15ರಷ್ಟು ಹೆಚ್ಚಳವಾಗಿದೆ. ಕಳೆದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹23.5 ಲಕ್ಷ ಕೋಟಿ ಠೇವಣಿ ಆಗಿತ್ತು.

ಬ್ಯಾಂಕ್‌ನ ಸರಾಸರಿ ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆ (ಸಿಎಎಸ್‌ಎ) ಠೇವಣಿ ₹8.7 ಲಕ್ಷ ಕೋಟಿಯಾಗಿದ್ದು, ಶೇ 8.5 ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ಕೋಟಕ್ ಬ್ಯಾಂಕ್: ಕೋಟಕ್ ಮಹೀಂದ್ರ ಬ್ಯಾಂಕ್ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹4.62 ಲಕ್ಷ ಕೋಟಿ ಸಾಲ ನೀಡಿದೆ.

ಕಳೆದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹3.99 ಲಕ್ಷ ಕೋಟಿ ಸಾಲ ನೀಡಿತ್ತು. ಇದಕ್ಕೆ ಹೋಲಿಸಿದರೆ ಸಾಲ ನೀಡಿಕೆ ಪ್ರಮಾಣ ಶೇ 15.8ರಷ್ಟು ಹೆಚ್ಚಳವಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಯುಕೊ ಬ್ಯಾಂಕ್ ವಹಿವಾಟು ಏರಿಕೆ

ಸರ್ಕಾರಿ ಸ್ವಾಮ್ಯದ ಯುಕೊ ಬ್ಯಾಂಕ್‌ನ ಒಟ್ಟು ವಹಿವಾಟು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 13ರಷ್ಟು ಹೆಚ್ಚಳವಾಗಿದ್ದು, ₹5.37 ಲಕ್ಷ ಕೋಟಿ ವಹಿವಾಟು ನಡೆದಿದೆ.

ಬ್ಯಾಂಕ್ ₹2.31 ಲಕ್ಷ ಕೋಟಿ ಸಾಲ ನೀಡಿದ್ದು, ಕಳೆದ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇ 16ರಷ್ಟು ಹೆಚ್ಚಳವಾಗಿದೆ.

ಠೇವಣಿ ಪ್ರಮಾಣ ಶೇ 10ರಷ್ಟು ಏರಿಕೆಯಾಗಿದ್ದು, ₹3.06 ಲಕ್ಷ ಕೋಟಿಯಾಗಿದೆ. ದೇಶೀಯವಾಗಿ ಸಾಲ ನೀಡಿಕೆ ಪ್ರಮಾಣ ಶೇ 17ರಷ್ಟು ಹೆಚ್ಚಳವಾಗಿದ್ದು, ₹2.04 ಲಕ್ಷ ಕೋಟಿಯಷ್ಟಾಗಿದ್ದು, ಠೇವಣಿ ಪ್ರಮಾಣ ₹2.90 ಲಕ್ಷ ಕೋಟಿಯಾಗಿದೆ. ಸೆಪ್ಟೆಂಬರ್ ತ್ರೈಮಾಸಿಕದ ತಾತ್ಕಾಲಿಕ ಅಂಕಿ ಅಂಶಗಳು ಬ್ಯಾಂಕ್‌ನ ಲೆಕ್ಕಪರಿಶೋಧಕರ ಪರಿಶೀಲನೆಗೆ ಒಳಪಟ್ಟಿರುತ್ತವೆ ಎಂದು ಬ್ಯಾಂಕ್ ತಿಳಿಸಿದೆ.

ಐಡಿಬಿಐ ಬ್ಯಾಂಕ್: ಐಡಿಬಿಐ ಬ್ಯಾಂಕ್‌ನ ಸಾಲ ನೀಡಿಕೆ ಪ್ರಮಾಣ ಶೇ 15ರಷ್ಟು ಹೆಚ್ಚಳವಾಗಿದ್ದು, ₹2.3 ಲಕ್ಷ ಕೋಟಿ ಸಾಲ ನೀಡಿದೆ.

ಠೇವಣಿಯಲ್ಲಿ ಶೇ 9ರಷ್ಟು ಹೆಚ್ಚಳವಾಗಿದ್ದು, ₹3.03 ಲಕ್ಷ ಕೋಟಿ ಆಗಿದೆ. ಬ್ಯಾಂಕ್‌ನ ಒಟ್ಟು ವ್ಯವಹಾರ ಶೇ 12ರಷ್ಟು ಏರಿಕೆಯಾಗಿದ್ದು, ₹5.33 ಲಕ್ಷ ಕೋಟಿಯಾಗಿದೆ. ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆ ಠೇವಣಿಯು ಶೇ 4ರಷ್ಟು ಹೆಚ್ಚಳವಾಗಿದ್ದು, ₹1.39 ಲಕ್ಷ ಕೋಟಿಯಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಠೇವಣಿ ಪ್ರಮಾಣ ಶೇ 14.6ರಷ್ಟು ಏರಿಕೆಯಾಗಿದ್ದು, ₹5.28 ಲಕ್ಷ ಕೋಟಿಯಾಗಿದೆ. ಕಳೆದ ಬಾರಿ ಠೇವಣಿ ₹4.61 ಲಕ್ಷ ಕೋಟಿಯಷ್ಟಾಗಿತ್ತು.

ಸುದ್ದಿ 2 ನಿಮಿಷ

‘ರೆಪೊ ದರ ಇಳಿಕೆ ಸಾಧ್ಯತೆ’

ಕೋಲ್ಕತ್ತ (ಪಿಟಿಐ): ಮುಂದಿನ ದಿನಗಳಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರ ಕಡಿತ ಮಾಡುವ ಸಾಧ್ಯತೆ ಇದೆ ಎಂದು ಕ್ರಿಸಿಲ್ ಇಂಟೆಲಿಜೆನ್ಸ್ ವರದಿ ತಿಳಿಸಿದೆ.

ಅಕ್ಟೋಬರ್ 1ರಂದು ಆರ್‌ಬಿಐ, ಸತತ ಎರಡನೇ ಬಾರಿಯೂ ರೆಪೊ ದರವನ್ನು (ಶೇ 5.5) ಯಥಾಸ್ಥಿತಿಯಲ್ಲಿ ಕಾಯ್ದುಕೊಂಡಿದೆ.

ಭವಿಷ್ಯದಲ್ಲಿ ಹಣದುಬ್ಬರ ತಗ್ಗಿಸುವ ನಿಟ್ಟಿನಲ್ಲಿ ಆರ್‌ಬಿಐನ ಹಣಕಾಸು ನೀತಿ ಸಮಿತಿ ಸಭೆಯು (ಎಂಪಿಸಿ) ದರ ಪರಿಷ್ಕರಣೆಗೆ ತೀವ್ರವಾಗಿ ಕಸರತ್ತು ನಡೆಸುತ್ತಿದೆ. ಹೀಗಾಗಿ, ಮುಂದಿನ ದಿನಗಳಲ್ಲಿ ಆರ್‌ಬಿಐ ರೆಪೊ ದರ ಕಡಿತ ಮಾಡುವ ಸಾಧ್ಯತೆ ಇದೆ ಎಂದು ತಿಳಿಸಿದೆ.

ಅಮೆರಿಕದ ಹೆಚ್ಚುವರಿ ಸುಂಕದ ಪರಿಣಾಮದಿಂದ ಪ್ರಸಕ್ತ ಆರ್ಥಿಕ ವರ್ಷದ ಎರಡನೇ ಭಾಗದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಇಳಿಕೆಯಾಗಬಹುದು. ಆದರೂ ಜಿಎಸ್‌ಟಿ ಪರಿಷ್ಕರಣೆಯು ಒಟ್ಟಾರೆ ಪರಿಣಾಮವನ್ನು ಭಾಗಶಃ ಸರಿದೂಗಿಸುತ್ತದೆ ಎಂದು ಹೇಳಿದೆ.

ಅಮೆರಿಕದ ಸುಂಕದಿಂದ ಕೆಲವು ಕಾರ್ಮಿಕ ಕೇಂದ್ರಿತ ವಲಯಗಳ ಮೇಲೆ ಹೆಚ್ಚಿನ ಪರಿಣಾಮ ಬೀರಲಿದೆ. ಈ ವಲಯಗಳಿಗೆ ನೆರವು ಅಗತ್ಯ.

ಹಣದುಬ್ಬರ ಇಳಿಕೆಯಾಗುತ್ತಿದೆ. ಅಲ್ಲದೆ, ಅಮೆರಿಕದ ಫೆಡರಲ್ ರಿಸರ್ವ್‌ನ ಬಡ್ಡಿ ದರ ಕಡಿತವು, ಆರ್‌ಬಿಐ ರೆಪೊ ದರ ಕಡಿತಕ್ಕೆ ಅವಕಾಶ ಮಾಡಿಕೊಡಲಿದೆ ಎಂದು ಹೇಳಿದೆ.

ಫೆಬ್ರುವರಿಯಿಂದ ಆರ್‌ಬಿಐ ಶೇ 1ರಷ್ಟು ರೆಪೊ ದರ ಕಡಿತ ಮಾಡಿದೆ.

ವಿದೇಶಿ ವಿನಿಮಯ ಸಂಗ್ರಹ ಇಳಿಕೆ

ಮುಂಬೈ (ಪಿಟಿಐ): ಸೆಪ್ಟೆಂಬರ್ 26ಕ್ಕೆ ಅಂತ್ಯಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹದ ಪ್ರಮಾಣವು ₹20,700 ಕೋಟಿಯಷ್ಟು ಕಡಿಮೆ ಆಗಿದೆ.

ಒಟ್ಟು ಮೀಸಲು ಸಂಗ್ರಹ ₹62.15 ಲಕ್ಷ ಕೋಟಿಯಷ್ಟಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತಿಳಿಸಿದೆ.

ವಿದೇಶಿ ಕರೆನ್ಸಿಗಳ ಸಂಪತ್ತಿನ ಮೌಲ್ಯ ₹38,994 ಕೋಟಿಯಷ್ಟು ಕಡಿಮೆಯಾಗಿದ್ದು, ₹51.63 ಲಕ್ಷ ಕೋಟಿಯಾಗಿದೆ. ಚಿನ್ನದ ಮೀಸಲು ಸಂಗ್ರಹದಲ್ಲಿ ಹೆಚ್ಚಳವಾಗಿದ್ದು, ₹19,865 ಕೋಟಿಯಾಗಿದ್ದು, ₹8.43 ಲಕ್ಷ ಕೋಟಿಯಾಗಿದೆ. ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ₹798 ಕೋಟಿ ಕಡಿಮೆ ಆಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿ ಭಾರತದ ಪಾಲು ₹41,479 ಕೋಟಿಯಾಗಿದೆ ಎಂದು ತಿಳಿಸಿದೆ.

ದರ ಕುಸಿತ: ಈರುಳ್ಳಿ ಬೆಳೆ ನಾಶಪಡಿಸಿದ ರೈತ

ಪ್ರಜಾವಾಣಿ ವಾರ್ತೆ

ಹರಪನಹಳ್ಳಿ (ವಿಜಯನಗರ ಜಿಲ್ಲೆ): ಈರುಳ್ಳಿ ಇಳುವರಿ ಕುಂಠಿತ, ದರ ಕುಸಿತ ಕಾರಣ ತಾಲ್ಲೂಕಿನ ಚಿಗಟೇರಿ ಗ್ರಾಮದ ರೈತರೊಬ್ಬರು 12 ಎಕರೆಯಲ್ಲಿ ಬೆಳೆದ ಈರುಳ್ಳಿ ಬೆಳೆಯನ್ನು ಶನಿವಾರ ನಾಶಪಡಿಸಿದ್ದಾರೆ.

‘ಉತ್ತಮ ದರದ ನಿರೀಕ್ಷೆಯಲ್ಲಿ ಬಿತ್ತನೆ ಮಾಡಿದ್ದೆ. ಕಟಾವಿಗೆ ಬರುವಷ್ಟರಲ್ಲಿ ದರ ಕುಸಿತ ಆರಂಭವಾಯಿತು. ತೇವಾಂಶ ಹೆಚ್ಚಾಗಿ ಈಗ ಬೆಳೆ ಕೊಳೆಯಲು ಆರಂಭಿಸಿದೆ’ ಎಂದು ರೈತ ಡಿ.ರಾಮನಗೌಡ ವಿಷಾದಿಸಿದರು.

‘ಈಗ ಈರುಳ್ಳಿಗೆ ಉತ್ತಮ ದರ ಇಲ್ಲ. ಕಟಾವು ಮಾಡಿಸಿದರೆ ಇನ್ನಷ್ಟು ನಷ್ಟ ಆಗಲಿದೆ. ಹೀಗಾಗಿ ಟ್ರ್ಯಾಕ್ಟರ್‌ನಿಂದ ನಾಶಪಡಿಸಿದ್ದೇನೆ. ಸರ್ಕಾರ ಬೆಳೆಗೆ ಪರಿಹಾರ ಕೊಡಬೇಕು’ ಎಂದು ಆಗ್ರಹಿಸಿದರು.



ಹರಪನಹಳ್ಳಿ ತಾಲ್ಲೂಕು ಚಿಗಟೇರಿಯಲ್ಲಿ ಟ್ರ್ಯಾಕ್ಟರ್‌ನಿಂದ ಈರುಳ್ಳಿ ಬೆಳೆ ನಾಶಪಡಿಸಿದ ರೈತ ರಾಮನಗೌಡ

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1330 (1335)
ಸೋಯಾ (ರಿಫೈನ್ಡ್)	₹1275 (1280)
ಸೂರ್ಯಕಾಂತಿ (ರಿಫೈನ್ಡ್)	₹1425 (1430)
ಪಾಮೋಲಿನ್	₹1270 (1275)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹29000
ಎಸಿ	₹15260
ಆರ್‌ಪಿ	₹19250
ಆರ್‌ಸಿ	₹11000

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹560	100 ಕ್ಕೆ	₹570
12 ಕ್ಕೆ	₹75		

ಜಪಾನ್‌ನ ಮೊದಲ ಮಹಿಳಾ ಪ್ರಧಾನಿಯಾಗಿ ಸನೆ ತಾಕೈಚಿ?

ಸನೆ ತಾಕೈಚಿ

ಟೋಕಿಯೊ (ಎಎಫ್‌ಪಿ): ಜಪಾನ್‌ನ ಇತಿಹಾಸದಲ್ಲಿ ಮೊದಲ ಬಾರಿ ಮಹಿಳೆಯೊಬ್ಬರು ಪ್ರಧಾನಿ ಹುದ್ದೆ ಅಲಂಕರಿಸುವುದು ಬಹುತೇಕ ಖಚಿತವಾಗಿದೆ.

ಆಡಳಿತರೂಢ ಲಿಬರಲ್ ಡೆಮಾಕ್ರಟಿಕ್ ಪಕ್ಷದ (ಎಲ್‌ಡಿಪಿ) ಕಟ್ಟಾ ಸಂಪ್ರದಾಯವಾದಿಯಾಗಿರುವ ಸನೆ ತಾಕೈಚಿ ಅವರನ್ನು ಹೊಸ ನಾಯಕಿಯನ್ನಾಗಿ ಆಯ್ಕೆ ಮಾಡಲಾಗಿದೆ.

ಸನೆ ತಾಕೈಚಿ ಅವರನ್ನು ಸ್ತ್ರೀವಾದ ಪ್ರತಿಪಾದಿಸುವ ದೃಷ್ಟಿಯಿಂದ ಆಯ್ಕೆ ಮಾಡಿಲ್ಲ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಶನಿವಾರ ನಡೆದ ಚುನಾವಣೆಯಲ್ಲಿ 54 ವರ್ಷದ ಸನೆ ತಾಕೈಚಿ ಅವರನ್ನು ನಾಯಕಿಯಾಗಿ ಆಯ್ಕೆ ಮಾಡಲಾಗಿದೆ. ದೇಶದ ರಕ್ಷಣೆ ಹಾಗೂ ಆರ್ಥಿಕತೆ ವಿಚಾರದಲ್ಲಿ ಕೇಂದ್ರಿಕರಿಸಿ, ಕಠಿಣ ನಿಲುವಿನ ನಾಯಕಿಯಾಗಿ ಗುರುತಿಸಿಕೊಂಡಿದ್ದಾರೆ.

ಪಕ್ಷದ ಆಂತರಿಕ ಚುನಾವಣೆಯಲ್ಲಿ ದೇಶದ ಜನಪ್ರಿಯ ಮಾಜಿ ಪ್ರಧಾನಿ ಜುನಿಚಿರೊ ಕೊಯ್ಜುಮಿ ಅವರ ಪುತ್ರ ಹಾಗೂ ಕೃಷಿ ಸಚಿವ 44 ವರ್ಷದ ಶಿಂಜಿರೊ ಕೊಯ್ಜುಮಿ ಅವರನ್ನು ಸನೆ ತಾಕೈಚಿ ಮಣಿಸಿದರು. ಸಂಸತ್ತಿನಲ್ಲಿ ಅವರಿಗೆ ಅನುಮೋದನೆ ಸಿಕ್ಕ ಬಳಿಕ ಸನೆ ತಾಕೈಚಿ ಅವರು ದೇಶದ ಮೊದಲ ಮಹಿಳಾ ಪ್ರಧಾನಿಯಾಗಿ ಅಧಿಕಾರಕ್ಕೇರುವುದು ಖಚಿತವಾಗಿದೆ.

ನಾಯಕಿಯಾಗಿ ಆಯ್ಕೆಯಾಗುತ್ತಿದ್ದಂತೆಯೇ, ದೇಶದಲ್ಲಿ ‘ಹೊಸ ಯುಗ’ ಆರಂಭಗೊಂಡಿದೆ ಎಂದು ಶ್ಲಾಘಿಸಿದರು.

ಮಾರ್ಗರೆಟ್ ಥ್ಯಾಚರ್ ಅವರನ್ನು ತನ್ನ ನಾಯಕಿ ಎಂದು ಪರಿಗಣಿಸಿರುವ ತಾಕೈಚಿ, ಎಲ್‌ಡಿಪಿ ಪಕ್ಷದ ಗತವೈಭವವನ್ನು ಮರುಸ್ಥಾಪಿಸಲು ಬೆಟ್ಟದಷ್ಟು ಕೆಲಸಗಳು ಬಾಕಿ ಉಳಿದಿವೆ ಎಂದು ತಿಳಿಸಿದ್ದಾರೆ.

ಟ್ರಂಪ್ ಶಾಂತಿ ಸೂತ್ರ: ಹಮಾಸ್ ಭಾಗಶಃ ಒಪ್ಪಿಗೆ

ಮೊದಲ ಹಂತದ ಅನುಷ್ಠಾನಕ್ಕೆ ಇಸ್ರೇಲ್ ಸಿದ್ಧತೆ: ಗಾಜಾದಲ್ಲಿ ಇನ್ನೂ ನಿಲ್ಲದ ಸೇನಾ ಕಾರ್ಯಾಚರಣೆ

ಡೊನಾಲ್ಡ್ ಟ್ರಂಪ್

ಟೆಲ್ ಅವಿವ್/ಗಾಜಾಪಟ್ಟಿ (ಎಪಿ/ಎಎಫ್‌ಪಿ): ಗಾಜಾದಲ್ಲಿ ಯುದ್ಧ ಕೊನೆಗೊಳಿಸಲು ಮತ್ತು ಉಳಿದ ಒತ್ತೆಯಾಳುಗಳ ಬಿಡುಗಡೆಗೆ ಸಂಬಂಧಿಸಿದಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಸ್ತಾಪಿಸಿರುವ ಶಾಂತಿ ಯೋಜನೆಯ ಕೆಲವು ಅಂಶಗಳನ್ನು ಒಪ್ಪಿಕೊಳ್ಳುತ್ತೇವೆ' ಎಂದು ಹಮಾಸ್ ತಿಳಿಸಿದೆ.

ಆದರೆ, ಇತರ ವಿಷಯಗಳಿಗೆ ಸಂಬಂಧಿಸಿದಂತೆ ಇನ್ನಷ್ಟು ಮಾತುಕತೆ ನಡೆಸಬೇಕಿದೆ ಎಂದೂ ಅದು ಶನಿವಾರ ಹೇಳಿದೆ.

ಹಮಾಸ್ ಹೇಳಿಕೆ ಹೊರಬಿದ್ದ ಬೆನ್ನಲ್ಲೇ, ಟ್ರಂಪ್ ಅವರ ಯೋಜನೆಯ ಮೊದಲ ಹಂತದ ಅನುಷ್ಠಾನಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವುದಾಗಿ ಇಸ್ರೇಲ್ ಸೇನೆ ಶನಿವಾರ ಮಾಹಿತಿ ನೀಡಿದೆ.

‘ಇಸ್ರೇಲ್‌ನ ನಾಯಕರು ಯೋಜನೆ ಅನುಷ್ಠಾನಕ್ಕೆ ಸಿದ್ಧತಾ ಕಾರ್ಯವನ್ನು ಮುಂದುವರಿಸಲು ಸೂಚಿಸಿದ್ದಾರೆ’ ಎಂದು ಸೇನೆಯ ಹಿರಿಯ ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

ಮುಂದುವರಿದ ಕಾರ್ಯಾಚರಣೆ: ಗಾಜಾ ಮೇಲೆ ದಾಳಿ ನಡೆಸದಂತೆ ಟ್ರಂಪ್ ಅವರು ಇಸ್ರೇಲ್‌ಗೆ ಸೂಚಿಸಿದ ಬಳಿಕವೂ, ಇಸ್ರೇಲ್ ಪಡೆಗಳು ಗಾಜಾಪಟ್ಟಿಯಲ್ಲಿ ಶನಿವಾರ ಕಾರ್ಯಾಚರಣೆ ಮುಂದುವರಿಸಿವೆ. ಅಲ್ಲದೆ ನಿವಾಸಿಗಳಿಗೆ ಅಲ್ಲಿಂದ ತೆರಳದಂತೆ ಸೇನೆ ಎಚ್ಚರಿಕೆಯನ್ನೂ ನೀಡಿದೆ. ಇಸ್ರೇಲ್ ನಡೆಸಿದ ವೈಮಾನಿಕ ದಾಳಿ, ಬಾಂಬ್ ದಾಳಿಯಲ್ಲಿ 20ಕ್ಕೂ ಹೆಚ್ಚು ಮನೆಗಳು ನಾಶವಾಗಿವೆ ಎಂದು ಮೂಲಗಳು ತಿಳಿಸಿವೆ.

ತನ್ನ ಯೋಜನೆಯ ಕೆಲ ಅಂಶಗಳನ್ನು ಒಪ್ಪಿಕೊಂಡಿರುವುದಾಗಿ ಹಮಾಸ್ ಹೇಳಿದ ಬಳಿಕ, ಟ್ರಂಪ್ ಅವರು ಗಾಜಾ ಮೇಲಿನ ಬಾಂಬ್ ದಾಳಿಯನ್ನು ನಿಲ್ಲಿಸುವಂತೆ ಇಸ್ರೇಲ್‌ಗೆ ಸೂಚಿಸಿದ್ದರು. ‘ಯೋಜನೆಯ ಕೆಲ ಅಂಶಗಳನ್ನು ಒಪ್ಪಿಕೊಳ್ಳುವುದಾಗಿ ಹಮಾಸ್ ನೀಡಿರುವ ಹೇಳಿಕೆಯನ್ನು ಸ್ವಾಗತಿಸುತ್ತೇನೆ. ಅವರು ಸಹ ಶಾಶ್ವತ ಶಾಂತಿಗೆ ಸಿದ್ಧರಾಗಿದ್ದಾರೆ ಎಂಬುದಾಗಿ ನಾನು ನಂಬುತ್ತೇನೆ’ ಎಂದು ಟ್ರಂಪ್ ಪ್ರತಿಕ್ರಿಯಿಸಿದ್ದರು.

ಒತ್ತೆಯಾಳುಗಳ ಬಿಡುಗಡೆಗೆ ಸಿದ್ಧ: ಹಮಾಸ್

ದೀರ್ ಅಲ್-ಬಲಾಹ್ (ಎಪಿ/ಎಎಫ್‌ಪಿ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಶಾಂತಿ ಯೋಜನೆ ಅನ್ವಯ, ತನ್ನ ಬಳಿ ಇರುವ ಇಸ್ರೇಲ್‌ನ ಎಲ್ಲ ಜೀವಂತ ಒತ್ತೆಯಾಳುಗಳನ್ನು ಮತ್ತು ಕೆಲ ಒತ್ತೆಯಾಳುಗಳ ಮೃತ ದೇಹಗಳನ್ನು ಹಿಂದಿರುಗಿಸಲು ಸಿದ್ಧ ಇರುವುದಾಗಿ ಹಮಾಸ್ ತಿಳಿಸಿದೆ.

ಯೋಜನೆ ಪ್ರಕಾರ, ಹಮಾಸ್ ತನ್ನ ಬಳಿ ಇರುವ 48 ಒತ್ತೆಯಾಳುಗಳನ್ನು ಬಿಡುಗಡೆ ಮಾಡಬೇಕಿದೆ. ಈ ಪೈಕಿ 20 ಜನರು ಜೀವಂತ ಇದ್ದಾರೆ ಎಂದು ನಂಬಲಾಗಿದೆ. ಈ ಪ್ರಕ್ರಿಯೆ ಮೂರು ದಿನಗಳಲ್ಲಿ ನೆರವೇರಬೇಕು ಎಂದು ಹೇಳಲಾಗಿದೆ. ಇದಲ್ಲದೆ, ಹಮಾಸ್ ಅಧಿಕಾರವನ್ನು ಬಿಡಬೇಕು ಮತ್ತು ನಿಶ್ಶಸ್ತ್ರಗೊಳ್ಳಬೇಕು ಎಂದೂ ಪ್ರಸ್ತಾಪಿತ ಯೋಜನೆಯಲ್ಲಿ ಉಲ್ಲೇಖಿಸಲಾಗಿದೆ.

‘ಒತ್ತೆಯಾಳುಗಳ ಬಿಡುಗಡೆಗೆ ಸಮ್ಮತಿಸಿರುವ ಹಮಾಸ್, ಗಾಜಾ ಭವಿಷ್ಯ ಮತ್ತು ಪ್ಯಾಲೆಸ್ಟೀನಿಯರ ಹಕ್ಕು ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಮತ್ತಷ್ಟು ಮಾತುಕತೆ ಬಾಕಿ ಇದೆ ಎಂಬುದಾಗಿ ಅದು ತಿಳಿಸಿದೆ’ ಎಂದು ಮೂಲಗಳು ಹೇಳಿವೆ.

‘ಎಲ್ಲ ವಿಷಯಗಳನ್ನು ಪರಿಹರಿಸುವುದಕ್ಕೆ ಸಂಬಂಧಿಸಿದಂತೆ ತ್ವರಿತವಾಗಿ ಮಾತುಕತೆ ನಡೆಸಲಾಗುವುದು’ ಎಂದು ಹಮಾಸ್‌ನ ಹಿರಿಯ ನಾಯಕರೊಬ್ಬರು ಮಾಹಿತಿ ನೀಡಿದ್ದಾರೆ.

2023ರ ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ದಾಳಿ ನಡೆಸಿದ ಹಮಾಸ್, ಒಟ್ಟು 1,200 ಜನರನ್ನು ಕೊಂದಿತ್ತು. ಅಲ್ಲದೆ 251 ಜನರನ್ನು ಒತ್ತೆಯಾಳುಗಳಾಗಿ ಇರಿಸಿಕೊಂಡಿತ್ತು. ಈ ಸಂಬಂಧ ಗಾಜಾ ಪಟ್ಟಿಯಲ್ಲಿ ನಡೆದ ಯುದ್ಧದಲ್ಲಿ 66,000ಕ್ಕೂ ಹೆಚ್ಚು ಪ್ಯಾಲೆಸ್ಟೀನ್ ಜನರು ಮೃತಪಟ್ಟಿದ್ದಾರೆ. ಇದರಲ್ಲಿ ಮಹಿಳೆಯರು ಮತ್ತು ಮಕ್ಕಳೇ ಹೆಚ್ಚು ಎಂದು ಗಾಜಾದ ಆರೋಗ್ಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಇಸ್ರೇಲ್-ಹಮಾಸ್ ನಡುವಿನ ಯುದ್ಧವನ್ನು ಕೊನೆಗೊಳಿಸಲು ಮತ್ತು ಒತ್ತೆಯಾಳುಗಳ ವಿನಿಮಯ ಕುರಿತ ಟ್ರಂಪ್ ಈ ವಾರದ ಆರಂಭದಲ್ಲಿ ಪ್ರಸ್ತಾವ ಮುಂದಿಟ್ಟಿದ್ದರು. ಅದಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಂಬಲ ವ್ಯಕ್ತವಾಗಿತ್ತು. ಅಲ್ಲದೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸಹ ಟ್ರಂಪ್ ಯೋಜನೆಯನ್ನು ಅನುಮೋದಿಸಿ, ‘ಯುದ್ಧ ಅಂತ್ಯಗೊಳಿಸಲು ಇಸ್ರೇಲ್ ಬದ್ಧವಾಗಿದೆ’ ಎಂದೂ ಹೇಳಿದ್ದರು.

ಹಮಾಸ್ ಬಳಿ ಇರುವ ಒತ್ತೆಯಾಳುಗಳ ಬಿಡುಗಡೆ ಮತ್ತು ಇಸ್ರೇಲ್ ಬಂಧನದಲ್ಲಿ ಇರುವ ನೂರಾರು ಪ್ಯಾಲೆಸ್ಟೀನಿಯನ್ ಕೈದಿಗಳ ಬಿಡುಗಡೆ ಕುರಿತು ಮಾತುಕತೆ ನಡೆಯುತ್ತಿದೆ ಎಂದು ಈಜಿಪ್ಟ್‌ನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆಧಾರ್ ಅಪ್‌ಡೇಟ್ ಮಕ್ಕಳಿಗೆ ಶುಲ್ಕ ಮನ್ನಾ

ನವದೆಹಲಿ (ಪಿಟಿಐ): ಆಧಾರ್ ಕಾರ್ಡ್‌ನಲ್ಲಿ ಮಕ್ಕಳ ಬಯೋಮೆಟ್ರಿಕ್ ಅಪ್‌ಡೇಟ್ ಮಾಡಲು ವಿಧಿಸಲಾಗುತ್ತಿದ್ದ ಶುಲ್ಕವನ್ನು ವರ್ಷದ ಮಟ್ಟಿಗೆ ಮನ್ನಾ ಮಾಡಲಾಗಿದೆ ಎಂದು ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರ (ಯುಐಡಿಎಐ) ಶನಿವಾರ ತಿಳಿಸಿದೆ.

ಅಕ್ಟೋಬರ್ 1ರಿಂದ ಇದು ಜಾರಿಗೆ ಬಂದಿದ್ದು, ಒಂದು ವರ್ಷದವರೆಗೆ ಚಾಲ್ತಿಯಲ್ಲಿರುತ್ತದೆ ಎಂದು ಪ್ರಾಧಿಕಾರ ಪ್ರಕಟಣೆಯಲ್ಲಿ ಹೇಳಿದೆ.

ಮಕ್ಕಳ ‘ಕಡ್ಡಾಯ ಬಯೊಮೆಟ್ರಿಕ್ ನವೀಕರಣ’ಕ್ಕೆ (ಎಂಬಿಯು) ಶುಲ್ಕ ಮನ್ನಾ ಮಾಡಿರುವುದರಿಂದ 6 ಕೋಟಿ ಮಕ್ಕಳಿಗೆ ಉಪಯುಕ್ತವಾಗಲಿದೆ ಎಂದು ಅದು ತಿಳಿಸಿದೆ.

ಐದು ವರ್ಷದೊಳಗಿನ ಮಕ್ಕಳ ಭಾವಚಿತ್ರ, ಹೆಸರು, ಜನ್ಮ ದಿನಾಂಕ, ಲಿಂಗ, ವಿಳಾಸ ಮತ್ತು ಜನನ ಪ್ರಮಾಣ ಪತ್ರವನ್ನು ಒದಗಿಸಿ ಆಧಾರ್‌ಗೆ ನೋಂದಾಯಿಸಬಹುದು. ಈ ವಯಸ್ಸಿನ ಮಕ್ಕಳಲ್ಲಿ ಬೆರಳಚ್ಚು ಮತ್ತು ಕಣ್ಣಿನ ಪಾಪೆ (ಐರಿಸ್) ಅಷ್ಟಾಗಿ ಪಕ್ವವಾಗಿರುವುದಿಲ್ಲ. ಹೀಗಾಗಿ ಅವರ ಬಯೋಮೆಟ್ರಿಕ್ ದಾಖಲಿಸಲು ಆಗುವುದಿಲ್ಲ.

ಹಾಲಿ ನಿಯಮದ ಪ್ರಕಾರ ಮಕ್ಕಳಿಗೆ ಐದು ವರ್ಷಗಳು ತುಂಬಿದ ಬಳಿಕ ಅವರ ಬೆರಳಚ್ಚು, ಕಣ್ಣಿನ ಪಾಪೆ ಮತ್ತು ಭಾವಚಿತ್ರಗಳನ್ನು ಆಧಾರ್‌ನಲ್ಲಿ ಅಪ್‌ಡೇಟ್ ಮಾಡಬೇಕು. ಆ ಮಕ್ಕಳು 15ರಿಂದ 17ರ ನಡುವಿನ ವಯಸ್ಸಿನಲ್ಲಿ ಇರುವಾಗ ಎರಡನೇ ಬಾರಿಗೆ ಅವುಗಳನ್ನು ಅಪ್‌ಡೇಟ್ ಮಾಡಬೇಕು. ಹೀಗೆ 5ರಿಂದ 7 ವರ್ಷ ಮತ್ತು 15ರಿಂದ 17 ವರ್ಷದ ನಡುವಿನ ಮಕ್ಕಳ ಬಯೋಮೆಟ್ರಿಕ್ ಅಪ್‌ಡೇಟ್‌ಗೆ ಈಗ ಶುಲ್ಕ ವಿಧಿಸುವುದಿಲ್ಲ. ಆ ನಂತರ ಪ್ರತಿ ಅಪ್‌ಡೇಟ್‌ಗೆ ₹125 ವಿಧಿಸಲಾಗುತ್ತದೆ ಎಂದು ಪ್ರಾಧಿಕಾರ ಹೇಳಿದೆ. ಪ್ರಾಧಿಕಾರದ ಈ ನಿರ್ಧಾರದಿಂದ 5ರಿಂದ 17 ವರ್ಷದೊಳಗಿನ ಎಲ್ಲ ಮಕ್ಕಳಿಗೂ ‘ಕಡ್ಡಾಯ ಬಯೋಮೆಟ್ರಿಕ್ ಅಪ್‌ಡೇಟ್’ ವರ್ಷದ ಮಟ್ಟಿಗೆ ಉಚಿತವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

‘ವಾರಸುದಾರರಿಲ್ಲದ ಖಾತೆಗಳಲ್ಲಿದೆ ₹1.84 ಲಕ್ಷ ಕೋಟಿ’

ಅಹಮದಾಬಾದ್ (ಪಿಟಿಐ): ಬ್ಯಾಂಕ್‌ಗಳು ಮತ್ತು ಇತರ ಹಣಕಾಸು ಸಂಸ್ಥೆಗಳ ಬಳಿ ವಾರಸುದಾರರಿಲ್ಲದ ₹1.84 ಲಕ್ಷ ಕೋಟಿ ಮೊತ್ತದಷ್ಟು ಆಸ್ತಿ ಇದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಶನಿವಾರ ಇಲ್ಲಿ ‘ನಿಮ್ಮ ಹಣ, ನಿಮ್ಮ ಹಕ್ಕು’ ತ್ರೈಮಾಸಿಕ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ‘ಬ್ಯಾಂಕ್‌ಗಳಲ್ಲಿ ಠೇವಣಿ, ವಿಮೆ, ಪಿಎಫ್ ಮತ್ತು ಷೇರಿನ ರೂಪದಲ್ಲಿ ಅಪಾರ ಮೊತ್ತದ ಆಸ್ತಿಯ ವಾರಸುದಾರರಿಲ್ಲದೆ ಕೊಳೆಯುತ್ತಿದೆ. ಈ ಹಣವನ್ನು ಅದರ ಸರಿಯಾದ ಮಾಲೀಕರಿಗೆ ತಲುಪಿಸುವ ಕೆಲಸವನ್ನು ಅಧಿಕಾರಿಗಳು ಈ ಅಭಿಯಾನದಡಿ ಕೈಗೊಳ್ಳಬೇಕು’ ಎಂದರು. ‘ಈ ಮೊತ್ತಕ್ಕೆ ಸರ್ಕಾರವೇ ಉಸ್ತುವಾರಿ. ಅರ್ಹ ಮಾಲೀಕರು ದಾಖಲೆಗಳೊಂದಿಗೆ ಬಂದರೆ ಈ ಹಣವನ್ನು ವಾಪಸ್ ಪಡೆಯಬಹುದು ಎಂದು ನಿರ್ಮಲಾ ಹೇಳಿದರು.

ಆರೋಗ್ಯ ಕೇಂದ್ರ: ಮೇಲ್ದರ್ಜೆಗೆ ಏರಿಸಲು ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲು, ಹೊಸದಾಗಿ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲು ಜನಸಂಖ್ಯೆಯ ಜತೆಗೆ ಭೌಗೋಳಿಕ ಮಾನದಂಡದ ಅನ್ವಯ ಪರಿಶೀಲನೆ ಕೈಗೊಳ್ಳಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಹಾಲಿ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸುವ ಜತೆಗೆ, ಹೊಸ ಕೇಂದ್ರಗಳ ಪ್ರಾರಂಭಕ್ಕೆ ಅನೇಕ ಮನವಿಗಳು ಸರ್ಕಾರಕ್ಕೆ ಸಲ್ಲಿಕೆಯಾಗಿವೆ. ಈ ಸಂಬಂಧ ಪರಿಶೀಲನೆ ಕೈಗೊಳ್ಳಲು ಜನಸಂಖ್ಯೆಯ ಮಾನದಂಡವನ್ನು ಮಾತ್ರ ಪರಿಗಣಿಸದೆ, ಭೌಗೋಳಿಕ ಮಾನದಂಡವನ್ನೂ ಪರಿಗಣಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ನಿಗದಿತ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ (ಪಿಎಚ್‌ಸಿ) 10-15 ಕಿ.ಮೀ. ಅಂತರದಲ್ಲಿ, 30 ನಿಮಿಷಗಳ ಪ್ರಯಾಣದ ಸಮಯದಲ್ಲಿ ಯಾವುದೇ ಪಿಎಚ್‌ಸಿ ಅಥವಾ ಉನ್ನತ ಮಟ್ಟದ ಆರೋಗ್ಯ ಸೌಲಭ್ಯ ಅಸ್ತಿತ್ವದಲ್ಲಿ ಇರಬಾರದು. ಅದೇ ರೀತಿ, ನಿಗದಿತ ಸಮುದಾಯ ಆರೋಗ್ಯ ಕೇಂದ್ರದಿಂದ (ಸಿಎಚ್‌ಸಿ) 30 ಕಿ.ಮೀ. ಅಂತರದಲ್ಲಿ ಅಥವಾ ಒಂದು ಗಂಟೆಯ ಪ್ರಯಾಣದ ಸಮಯದಲ್ಲಿ ಯಾವುದೇ ಸಿಎಚ್‌ಸಿ ಅಥವಾ ಉನ್ನತ ಮಟ್ಟದ ಆರೋಗ್ಯ ಸೌಲಭ್ಯ ಅಸ್ತಿತ್ವದಲ್ಲಿ ಇರಬಾರದು ಎಂದು ಸೂಚಿಸಲಾಗಿದೆ.

ಈ ಮಾನದಂಡಗಳನ್ನು ಪೂರೈಸದ ಪ್ರಸ್ತಾವಗಳನ್ನು ಪರಿಗಣಿಸುವುದಿಲ್ಲ. ಅಷ್ಟಾಗಿಯೂ ಬೇಡಿಕೆ ಇದ್ದಲ್ಲಿ ನಿಗದಿತ ಮಾನದಂಡಗಳನ್ನು ಮೀರಿ, ಹೆಚ್ಚುವರಿ ವೈದ್ಯಾಧಿಕಾರಿಗಳನ್ನು ನೇಮಿಸುವ ಮೂಲಕ ಅಸ್ತಿತ್ವದಲ್ಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಬಲಪಡಿಸಲು ಕ್ರಮವಹಿಸಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಸೌತೆ ಮುದ್ದಿಪಲ್ಯ-ಅವರೆ ಮೆಲೋಗ್ರಾ

ಫ್ರೀಡಂ ಹೆಲ್ತಿ ಅಡುಗೆ ಎಣ್ಣೆ ಪ್ರಸ್ತುತಪಡಿಸುವ ‘ಕರುನಾಡ ಸವಿಯೂಟ ಆವೃತ್ತಿ–4'ರಲ್ಲಿ ಮೂಡಿಬರುವ ಪ್ರತಿಯೊಂದು ಭಕ್ಷ್ಯವು ವಿಭಿನ್ನವಾಗಿವೆ. ಈ ಹಬ್ಬದ ಋತುವಿನ 2ನೇ ಸಂಚಿಕೆಯಲ್ಲಿ ‘ಸೌತೆಕಾಯಿ ಮುದ್ದಿಪಲ್ಯ–ಅವರೆಬೇಳೆ ಮೆಲೋಗ್ರಾ’ವನ್ನು ಪ್ರಸಿದ್ಧ ಬಾಣಸಿಗ ಸಿಹಿ ಕಹಿ ಚಂದ್ರು ಅವರು ತಯಾರಿಸಲಿದ್ದಾರೆ. ಸಾಂಪ್ರದಾಯಿಕ ಭಕ್ಷ್ಯಗಳ ಪ್ರದರ್ಶನದ ಜತೆ ಅವರ ಕಚಗುಳಿಯಿಡುವ ವರ್ಣನೆ ನಿಮ್ಮನ್ನು ಆಕರ್ಷಿಸಲಿದೆ. ಈ ವಿಶೇಷ ಭಕ್ಷ್ಯಗಳ ಪ್ರದರ್ಶನ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಸಹಯೋಗದಲ್ಲಿ ಮೂಡಿಬರಲಿವೆ.

ಸೌತೆಕಾಯಿ ಮುದ್ದಿಪಲ್ಯ

ಪದಾರ್ಥಗಳು: ಸೌತೆಕಾಯಿ ಎರಡು, ನಾಲ್ಕು ಹಸಿಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು ಕಾಲು ಕಟ್ಟು, ತೆಂಗಿನತುರಿ ಅರ್ಧ ಕಪ್, ಜೀರಿಗೆ 1 ಚಮಚ, ಕಡಲೆಬೇಳೆ 1 ಚಮಚ, ಉದ್ದಿನಬೇಳೆ 1 ಚಮಚ, ಇಂಗು ಕಾಲು ಚಮಚ, ಮೆಂತ್ಯ ಕಾಲು ಚಮಚ, ಹುಣಿಸೆಹಣ್ಣು ಒಂದು ಸಣ್ಣ ಚೂರು, ಶೇಂಗಾ ಅರ್ಧ ಕಪ್, ಕರಿಬೇವು ಎಲೆಗಳು 10, ಕಡಲೆಹಿಟ್ಟು 2 ಚಮಚ, ಎಣ್ಣೆ 2 ಚಮಚ, ಉಪ್ಪು ರುಚಿಗೆ ತಕ್ಕಷ್ಟು.

ಮಾಡುವ ವಿಧಾನ: ಸೌತೆಕಾಯಿ ಕತ್ತರಿಸಿ ಬೀಜಗಳನ್ನು ತೆಗೆದು ತುರಿದಿಟ್ಟುಕೊಳ್ಳಿ. ಹಸಿಮೆಣಸಿನಕಾಯಿಗಳು, ಕೊತ್ತಂಬರಿ ಸೊಪ್ಪು, ತೆಂಗಿನತುರಿ, ಜೀರಿಗೆ, ಇಂಗು, ಹುಣಿಸೆಹಣ್ಣು, ಮೆಂತ್ಯ ಕಾಳು ಮತ್ತು ಸಾಸಿವೆ ಮಿಕ್ಸಿಗಾಗಿ ನೀರು ಬೆರೆಸದಂತೆ ಒರಟಾದ ಪೇಸ್ಟ್ ಮಾಡಿ. ನಂತರ ಕಡ್ಲೆಹಿಟ್ಟಿಗೆ ಸ್ವಲ್ಪ ನೀರು ಬೆರೆಸಿ ತೆಳುವಾಗಿ ಗಂಟುಗಳಿಲ್ಲದಂತೆ ಕಲೆಸಿಟ್ಟುಕೊಳ್ಳಿ. ಕಡಾಯಿಯಲ್ಲಿ ಕಾದ ಎಣ್ಣೆಗೆ ಸಾಸಿವೆ ಹಾಕಿ, ಸಿಡಿದ ನಂತರ ಕಡಲೆಬೇಳೆ, ಉದ್ದಿನಬೇಳೆ, ಶೇಂಗಾ ಸೇರಿಸಿ ಗೋಲ್ಡನ್ ಬ್ರೌನ್ ಬರುವವರೆಗೆ ಕಾಯ್ದು, ಕರಿಬೇವು ಎಲೆ ಹಾಕಿ ಬಾಡಿಸಿ. ನಂತರ ತುರಿದ ಸೌತೆಕಾಯಿ ಮತ್ತು ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ ಚೆನ್ನಾಗಿ ಕಲೆಸಿ. ಈಗಾಗಲೇ ಮಾಡಿಟ್ಟ ಪೇಸ್ಟ್ ಅನ್ನು ಹಾಕಿ ಸ್ವಲ್ಪ ನೀರು ಬೆರೆಸಿ ಸೌತೆಕಾಯಿ ಚೆನ್ನಾಗಿ ಬೇಯಿಸಿ. ಕಡಲೆಹಿಟ್ಟಿನ ಸ್ಲರಿ ಸೇರಿಸಿ ಚೆನ್ನಾಗಿ ಕಲೆಸಿ. ಸ್ವಲ್ಪ ಗಟ್ಟಿಯಾಗುವಂತೆ ಬೇಯಿಸಿದರೆ ಸೌತೆಕಾಯಿ ಮುದ್ದಿಪಲ್ಯ ತಯಾರು. ಚಪಾತಿ ಅಥವಾ ಅನ್ನದೊಂದಿಗೆ ತಿನ್ನಲು ಬಡಿಸಿ.

ಹಿತಕಿದ ಅವರೆಬೇಳೆ ಮೆಲೋಗ್ರಾ

ಪದಾರ್ಥಗಳು: ಹಿತಕಿದ ಅವರೆಬೇಳೆ 2 ಕಪ್, ಗುಂಟೂರು ಕೆಂಪು ಮೆಣಸಿನಕಾಯಿ 4, ಬ್ಯಾಡಗಿ ಮೆಣಸಿನಕಾಯಿ 10, ದನಿಯಾ 1 ಚಮಚ, ಜೀರಿಗೆ 1 ಚಮಚ, ಗಸಗಸೆ ಅರ್ಧ ಚಮಚ, ಉದ್ದಿನಬೇಳೆ 1 ಚಮಚ, ಚಕ್ಕೆ 2 ಇಂಚು, ಲವಂಗ 4, ಏಲಕ್ಕಿ 3, ತುರಿದ ಕೊಬ್ಬರಿ ಅರ್ಧ ಕಪ್, ಶೇಂಗಾ ಅರ್ಧ ಕಪ್, ತುಂಡರಿಸಿದ ಟೊಮೆಟೋ 1, ಅರಿಶಿನ ಅರ್ಧ ಚಮಚ, ಹುಣಿಸೆಹಣ್ಣಿನ ಪೇಸ್ಟ್ 2 ಚಮಚ, ಕರಿಬೇವು 20 ಎಲೆಗಳು, ಸಣ್ಣಗೆ ಕತ್ತರಿಸಿದ ಕೊತ್ತಂಬರಿ ಸೊಪ್ಪು ಕಾಲು ಕಪ್, ಸಾಸಿವೆ ಅರ್ಧ ಚಮಚ, ಕಾಲು ಚಮಚ ಇಂಗು, 2 ಚಮಚ ಎಣ್ಣೆ, 2 ಚಮಚ ತುಪ್ಪ, ಉಪ್ಪು ರುಚಿಗೆ ತಕ್ಕಷ್ಟು.

ಮಾಡುವ ವಿಧಾನ: ಒಂದು

ಪಾತ್ರೆಯಲ್ಲಿ ಹಿತಕಿದ ಅವರೆಬೇಳೆ ಮತ್ತು ಕಡಲೆಕಾಯಿ ಬೀಜ ಹಾಕಿ, ಮುಳುಗುವಷ್ಟು ನೀರನ್ನು ಸೇರಿಸಿ. ಅದಕ್ಕೆ ಸ್ವಲ್ಪ ಉಪ್ಪಾಕಿ ಚೆನ್ನಾಗಿ ಬೇಯಿಸಿ. ಮತ್ತೊಂದು ಸ್ಟೌವ್ ಮೇಲೆ ಪ್ಯಾನ್ ಇಟ್ಟು ಚಕ್ಕೆ, ಲವಂಗ, ಏಲಕ್ಕಿ, ಉದ್ದಿನಬೇಳೆ, ದನಿಯಾ, ಜೀರಿಗೆ, ಗಸಗಸೆ, ಗುಂಟೂರು ಮತ್ತು ಬ್ಯಾಡಗಿ ಮೆಣಸಿನಕಾಯಿಗಳನ್ನು ಹಾಕಿ ಘಮ ಬರುವವರೆಗೆ ಹುರಿಯಿರಿ. ಅದಕ್ಕೆ ಟೊಮೆಟೋ ಸೇರಿಸಿ ಮೆತ್ತಗಾಗುವವರೆ ಬಾಡಿಸಿ. ಸ್ಟೌವ್ ಆಫ್ ಮಾಡಿ ಪದಾರ್ಥಗಳು ತಣ್ಣಗಾಗುವವರೆಗೆ ಕಾಯಿರಿ. ನಂತರ ಎಲ್ಲವನ್ನೂ ಮಿಕ್ಸಿಗಾಕಿ ಸ್ವಲ್ಪ ನೀರು ಬೆರೆಸಿ ನುಣ್ಣಗೆ ರುಬ್ಬಿ ಪೇಸ್ಟ್ ಮಾಡಿಕೊಳ್ಳಿ. ಬೇಯುತ್ತಿರುವ ಅವರೆಬೇಳೆಗೆ ಈ ಪೇಸ್ಟ್ ಹಾಕಿ ಚೆನ್ನಾಗಿ ಕಲೆಸಿ. ಕರಿಬೇವು ಮತ್ತು ಉಪ್ಪನ್ನು ಹಾಕಿ ಮೆಲೋಗ್ರಾದ ಪರಿಮಳ ಬರುವವರೆಗೆ ಚೆನ್ನಾಗಿ ಬೇಯಿಸಿ. ಒಗ್ಗರಣೆ ಪ್ಯಾನ್‌ಗೆ ತುಪ್ಪ ಹಾಕಿ ಬಿಸಿಯಾದ ನಂತರ ಅದಕ್ಕೆ ಇಂಗು, ಸಾಸಿವೆ ಹಾಕಿ, ಸಾಸಿವೆ ಸಿಡಿಯುವವರೆಗೆ ಕಾಯಿರಿ. ಒಗ್ಗರಣೆ (ತಡ್ಕ)ಯನ್ನು ಕುದಿಯುತ್ತಿರುವ ಅವರೆಬೇಳೆಗೆ ಸುರಿಯಿರಿ. ಅದರ ಮೇಲೆ ಕತ್ತರಿಸಿಟ್ಟ ಕೊತ್ತಂಬರಿ ಸೊಪ್ಪನ್ನು ಹರಡಿ ಅಲಂಕರಿಸಿದರೆ ಅವರೆಬೇಳೆ ಮೆಲೋಗ್ರಾ ರೆಡಿ. ಚಪಾತಿ ಜತೆ ತಿನ್ನಲು ತಯಾರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಅಡುಗೆಯ ವಿಧಾನಗಳ ವೀಕ್ಷಣೆಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

LPG Partner: Indane | Kitchen Partner: Prestige | Special Partner: BHIMA | Snacks Partner: Lay's | Associate Sponsors: SBI card, Vencobb, eco crystal

ಕರೂರಿನಲ್ಲಿ ನಡೆಸಿದ ರ್‍ಯಾಲಿ ವೇಳೆ ಕಾಲ್ತುಳಿತ ಪ್ರಕರಣ • ಮೃದು ನೀತಿ ತಳೆದ ಎಐಎಡಿಎಂಕೆ, ಬಿಜೆಪಿ

ವಿಜಯ್ ಜೊತೆ ಸಖ್ಯ ಬೆಳೆಸಲು ಬಿಜೆಪಿ ಕಸರತ್ತು

ಪ್ರಜಾವಾಣಿ ವಾರ್ತೆ

ವಿಜಯ್

ಚೆನ್ನೈ: ಕರೂರಿನಲ್ಲಿ ತಮಿಳಗ ವೆಟ್ರ ಕಳಗಂ (ಟಿವಿಕೆ) ಪಕ್ಷದ ನಡೆಸಿದ ರ್‍ಯಾಲಿ ವೇಳೆ ಕಾಲ್ತುಳಿತ ಪ್ರಕರಣದಲ್ಲಿ 41 ಮಂದಿ ಮೃತಪಟ್ಟ ಪ್ರಕರಣದಲ್ಲಿ ವಿರೋಧ ಪಕ್ಷವಾದ ಎಐಎಡಿಎಂಕೆ, ಬಿಜೆಪಿಯು, ಟಿವಿಕೆ ಅಧ್ಯಕ್ಷ ವಿಜಯ್ ವಿಚಾರದಲ್ಲಿ ಮೃದುನೀತಿ ತಳೆದಿವೆ. ಈ ಪ್ರಕರಣದಲ್ಲಿ ವಿಜಯ್ ಅವರನ್ನು ದೂಷಿಸುವುದನ್ನು ಕೈಬಿಟ್ಟಿರುವ ಎರಡು ಪಕ್ಷಗಳು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಜವಾಬ್ದಾರಿಯನ್ನು ನೆನಪಿಸುತ್ತಿವೆ.

ಹೀಗಾಗಿ, ಎರಡು ಪಕ್ಷಗಳು ತಮ್ಮ ಮೈತ್ರಿಕೂಟಕ್ಕೆ ಟಿವಿಕೆ ಸೇರಿಸಿಕೊಳ್ಳಲು ಕಸರತ್ತು ನಡೆಸುತ್ತಿವೆ ಎಂದು ವಿಶ್ಲೇಷಿಸಲಾಗಿದೆ.

ಟಿವಿಕೆ ಬೆಂಬಲಿಸುವ ಕುರಿತಂತೆ ಬಿಜೆಪಿ ನಾಯಕರೊಬ್ಬರು ವಿಜಯ್ ಅವರ ಆಪ್ತ ವಲಯಕ್ಕೆ ಮಾಹಿತಿ ನೀಡಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ. ಈ ನಾಯಕರೇ ಎಐಎಡಿಎಂಕೆ ಪಕ್ಷವನ್ನು ಮರಳಿ ಎನ್‌ಡಿಎ ಮೈತ್ರಿಕೂಟ ಸೇರಲು ಪ್ರಮುಖ ಪಾತ್ರ ವಹಿಸಿದ್ದರು.

ಪಳನಿಸ್ವಾಮಿ, ಅಣ್ಣಾಮಲೈ ಬಹಿರಂಗ ಬೆಂಬಲ

ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ಬಹಿರಂಗವಾಗಿ ವಿಜಯ್ ಅವರನ್ನು ಬೆಂಬಲಿಸಿದ್ದರು. ಕಾಲ್ತುಳಿತ ಸಂತ್ರಸ್ತರ ಮಧ್ಯೆ ಅವರ ಅನುಪಸ್ಥಿತಿ ಪ್ರಶ್ನಿಸುವುದು ಸರಿಯಲ್ಲ. ಅವರು ಏನು ನೋವು ಅನುಭವಿಸುತ್ತಿದ್ದಾರೆ ಎಂಬುದು ಯಾರಿಗೂ ತಿಳಿದಿಲ್ಲ ಎಂದು ಹೇಳಿದ್ದರು.

‘ನಟ ವಿಜಯ್ ಅವರು ಅಭಿಮಾನಿಗಳ ಬಳಗವನ್ನು ಸೇರಿಕೊಳ್ಳಬೇಕು. ಇಡೀ ಘಟನೆಗೆ ನಟನನ್ನು ಮಾತ್ರ ದೂರುವುದರಲ್ಲಿ ಅರ್ಥವಿಲ್ಲ’ ಎಂದು ಬಿಜೆಪಿಯ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಕೆ. ಅಣ್ಣಾಮಲೈ ಹೇಳಿಕೆ ನೀಡಿದ್ದರು.

ಸೆ.28ರಂದು ವಿಜಯ್ ಜೊತೆಗೆ ರಾಹುಲ್ ಗಾಂಧಿ ಮಾತುಕತೆ ನಡೆಸಿದ ಬೆನ್ನಲ್ಲೇ, ಈ ಸಂದೇಶ ರವಾನಿಸಿದ್ದಾರೆ.

ಟಿವಿಕೆ ಎದುರಿಸುತ್ತಿರುವ ಪರಿಸ್ಥಿತಿ ಎದುರಿಸಲು ಪಕ್ಷವೂ ಸಹಾಯ ಮಾಡಲು ಸಿದ್ಧವಿದೆ ಎಂದು ಬಿಜೆಪಿ ನಾಯಕರು ಸಂದೇಶ ಕಳುಹಿಸಿದ್ದಾರೆ. ಆದರೆ, ಎನ್‌ಡಿಎ ಸೇರ್ಪಡೆಯಾಗುವ ಅಥವಾ ಬಿಜೆಪಿಯನ್ನು ಒಪ್ಪುವುದು ದೂರದ ವಿಚಾರ ಎಂದು ಮೂಲಗಳು ತಿಳಿಸಿವೆ.

ಮೈತ್ರಿ ಅನುಮಾನ: ಬಿಜೆಪಿಯು ತಮ್ಮ ಪಕ್ಷದ ಸೈದ್ಧಾಂತಿಕವಾಗಿ ವಿರೋಧ ಪಕ್ಷ ಎಂದು ಟಿವಿಕೆ ಅಧ್ಯಕ್ಷ ವಿಜಯ್ ಬಹಿರಂಗವಾಗಿ ಘೋಷಿಸಿದ್ದರು. ಹಲವು ಭಾಷಣಗಳಲ್ಲಿ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದರು. ಬಿಜೆಪಿ–ಎಐಎಡಿಎಂಕೆ ಪಕ್ಷದ ಮೈತ್ರಿಯೂ ಹೊಂದಿಕೆಯಾಗುವುದಿಲ್ಲ. ತಳಹಂತದ ಕಾರ್ಯಕರ್ತರು ಇದನ್ನು ಒಪ್ಪುವುದಿಲ್ಲ ಎಂದು ಕಳೆದ ವಾರ ಕೂಡ ಸಾರ್ವಜನಿಕವಾಗಿ ಟೀಕಿಸಿದ್ದರು.

‘ಬಿಜೆಪಿ ಆಣತಿಯಂತೆ ಎಸ್‌ಐಆರ್’

ಬಿಹಾರ: ಅಂತಿಮ ಮತದಾರರ ಪಟ್ಟಿಯಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ– ಆರೋಪ

ಪ್ರಜಾವಾಣಿ ವಾರ್ತೆ



ಮುಂಬರುವ ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಹಾಗೂ ಅದರ ಮಿತ್ರಪಕ್ಷಗಳಿಗೆ ಅನುಕೂಲ ಮಾಡುವ ಉದ್ದೇಶದಿಂದ ಎಸ್‌ಐಆರ್ ಕೈಗೊಂಡಿರುವುದು ಖಚಿತವಾಗಿದೆ

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ನವದೆಹಲಿ: ಬಿಹಾರದಲ್ಲಿ ನಡೆಸಿದ್ದ ‘ವಿಶೇಷ ಸಮಗ್ರ ಪರಿಷ್ಕರಣೆ’ (ಎಸ್‌ಐಆರ್) ಬಳಿಕ ಸಿದ್ಧಪಡಿಸಿರುವ ಅಂತಿಮ ಮತದಾರರ ಪಟ್ಟಿಯಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ ಎಂದು ವಿರೋಧ ಪಕ್ಷಗಳು ಶನಿವಾರ ಟೀಕಿಸಿವೆ.

‘ಚುನಾವಣಾ ಆಯೋಗವು ಬಿಜೆಪಿ ಆಣತಿಯಂತೆಯೇ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ನಡೆಸಿದೆ’ ಎಂದು ಕಾಂಗ್ರೆಸ್ ಆರೋಪಿಸಿದೆ.

‘ಮತದಾರರ ಪಟ್ಟಿಗೆ ಸೇರಿಸಲಾದ ಮತ್ತು ಪಟ್ಟಿಯಿಂದ ತೆಗೆದು ಹಾಕಲಾದ ಮತದಾರರ ಹೆಸರುಗಳನ್ನು ಹಾಗೂ ತೆಗೆದು ಹಾಕುವುದಕ್ಕೆ ನೀಡಿರುವ ಕಾರಣಗಳನ್ನು ತಿಳಿಸಬೇಕು’ ಎಂದು ಸಿಪಿಐ(ಎಂಎಲ್) ಆಗ್ರಹಿಸಿದೆ.

ಬಿಹಾರ ವಿಧಾನಸಭೆ ಚುನಾವಣೆಗಾಗಿ ಕೈಗೊಂಡಿರುವ ಸಿದ್ಧತೆಗಳ ಕುರಿತಂತೆ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ ಕುಮಾರ್ ಪರಿಶೀಲನೆ ಆರಂಭಿಸಿದ ದಿನವೇ, ಅವರಿಗೆ ತಮ್ಮ ಬೇಡಿಕೆಗಳನ್ನು ಒಳಗೊಂಡ ಪತ್ರವೊಂದನ್ನು ಸಿಪಿಐ(ಎಂಎಲ್) ಸಲ್ಲಿಸಿದೆ.

ಮತದಾರರ ಪಟ್ಟಿಯ ಕರಡಿನಿಂದ 3.66 ಲಕ್ಷ ಹೆಸರುಗಳನ್ನು ತೆಗೆದು ಹಾಕಲಾಗಿದ್ದು, ಈ ಕ್ರಮಕ್ಕೆ ಕಾರಣ ಸಹಿತ ಮಾಹಿತಿ ನೀಡುವಂತೆ ಸಿಪಿಐ(ಎಂಎಲ್) ಮುಖಂಡರು ಪತ್ರದಲ್ಲಿ ಕೋರಿದ್ದಾರೆ.

ಅಂದಾಜು 21.53 ಲಕ್ಷ ಹೊಸ ಮತದಾರರ ಹೆಸರುಗಳನ್ನು ಪಟ್ಟಿಗೆ ಸೇರಿಸಲಾಗಿದೆ. ಆಕ್ಷೇಪಣೆ ಹಾಗೂ ಅರ್ಜಿ ಸಲ್ಲಿಸಿದ ಬಳಿಕ ಕೆಲ ಹಳೆಯ ಮತದಾರರ ಹೆಸರುಗಳನ್ನು ಪಟ್ಟಿಗೆ ಸೇರಿಸಲಾಗಿದೆ. ಹೀಗಾಗಿ, ಈ ರೀತಿ ಸೇರಿಸಲಾದ ಮತದಾರರ ಹೆಸರುಗಳಿಗೆ ಸಂಬಂಧಿಸಿ, ಮತಗಟ್ಟೆವಾರು ವಿವರಗಳನ್ನು ನೀಡಬೇಕು ಎಂದೂ ಕೋರಿದ್ದಾರೆ.

‘ಚುನಾವಣಾ ಆಯೋಗವು ಬಿಜೆಪಿಯ ‘ಬಿ’ ತಂಡದಂತೆ ಕಾರ್ಯ ನಿರ್ವಹಿಸದೇ, ನಿಷ್ಪಕ್ಷಪಾತದಿಂದ ಮತದಾರರ ಪಟ್ಟಿಯ ಪರಿಷ್ಕರಣೆ ನಡೆಸಬೇಕು’ ಎಂದು ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಎಸ್‌ಐಆರ್ ಕಾರ್ಯ ಪೂರ್ಣಗೊಂಡ ಬಳಿಕವೂ ಅಂತಿಮ ಮತದಾರರ ಪಟ್ಟಿಯಲ್ಲಿ ಹಲವಾರು ನ್ಯೂನತೆಗಳಿವೆ. ಈ ಪ್ರಕ್ರಿಯೆ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ಆದೇಶಗಳಿಗೆ ಚುನಾವಣಾ ಆಯೋಗ ಗೌರವ ನೀಡುವುದಿಲ್ಲ ಎಂಬುದನ್ನು ಇದು ತೋರಿಸುತ್ತದೆ’ ಎಂದು ಟೀಕಿಸಿದ್ದಾರೆ.

ವಿಪಕ್ಷಗಳ ಆರೋಪ–ಬೇಡಿಕೆಗಳು

- ವಿದೇಶಿಯರು ಎಂಬ ಕಾರಣ ನೀಡಿ 6 ಸಾವಿರ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಈ ಮತದಾರರ ಹೆಸರು ಹಾಗೂ ಅವರ ಪೌರತ್ವದ ಬಗ್ಗೆ ಶಂಕೆ ವ್ಯಕ್ತಪಡಿಸಲು ಕಾರಣವಾದ ಅಂಶಗಳನ್ನು ತಿಳಿಸಬೇಕು
- ಮುಸ್ಲಿಂ, ದಲಿತರು ಅಥವಾ ತುಳಿತಕ್ಕೆ ಒಳಗಾದ ಸಮುದಾಯಗಳಿಗೆ ಸೇರಿದ ಹಿರಿಯ ಅಧಿಕಾರಿಗಳನ್ನು ನಿರ್ಲಕ್ಷಿಸಲಾಗಿದೆ ಹಾಗೂ ಅವರ ಬದಲಾಗಿ ಪ್ರಬಲ ಜಾತಿಗಳ ಅಧಿಕಾರಿಗಳನ್ನು ಎಸ್‌ಐಆರ್ ಕಾರ್ಯಕ್ಕೆ ಬಳಸಲಾಗಿದೆ ಎಂಬ ಆರೋಪಗಳಿವೆ. ಈ ಕುರಿತು ತನಿಖೆ ನಡೆಸಬೇಕು
- ಕೆಲ ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾರರ ಪಟ್ಟಿಯಿಂದ ಕೈಬಿಡಲಾದ ಮತದಾರರ ಸಂಖ್ಯೆಯು ಅದೇ ಕ್ಷೇತ್ರದಲ್ಲಿ ಕಳೆದ ಚುನಾವಣೆಯಲ್ಲಿನ ಜಯದ ಅಂತರಕ್ಕಿಂತ ಹೆಚ್ಚು ಇರುವುದು ಆತಂಕಕಾರಿ. ಹೀಗಾಗಿ, ಪಟ್ಟಿಯನ್ನು ತರಾತುರಿಯಲ್ಲಿ ಅಂತಿಮಗೊಳಿಸುವ ಬದಲು ನಿಷ್ಪಕ್ಷಪಾತವಾಗಿ ಆಯೋಗ ಕಾರ್ಯ ನಿರ್ವಹಿಸಬೇಕು

‘ಬುರ್ಖಾ ಧರಿಸುವವರ ಗುರುತು ಪರಿಶೀಲಿಸಿ’

ಪಟ್ನಾ (ಪಿಟಿಐ): ಮುಂಬರಲಿರುವ ಬಿಹಾರ ವಿಧಾನಸಭಾ ಚುನಾವಣೆಯನ್ನು ಒಂದು ಅಥವಾ ಎರಡು ಹಂತಗಳಲ್ಲಿ ನಡೆಸುವಂತೆ ಚುನಾವಣಾ ಆಯೋಗವನ್ನು ಆಗ್ರಹಿಸಿರುವ ಬಿಜೆಪಿ, ‘ಮತಗಟ್ಟೆಗಳಿಗೆ ಬುರ್ಖಾ ಧರಿಸಿ ಬರುವ ಮಹಿಳಾ ಮತದಾರರ ಚಹರೆಯನ್ನು ಅವರ ಮತದಾರರ ಚೀಟಿಯಲ್ಲಿನ ಭಾವಚಿತ್ರದ ಜತೆಗೆ ಸರಿಯಾಗಿ ಪರಿಶೀಲಿಸಬೇಕು’ ಎಂದು ಒತ್ತಾಯಿಸಿದೆ.

ಒಂದು ಅಥವಾ ಎರಡು ಹಂತಗಳಲ್ಲಿ ಚುನಾವಣೆ ನಡೆಸಬೇಕು ಎಂಬ ಬಿಜೆಪಿ ಬೇಡಿಕೆಗೆ ಸಹಮತ ವ್ಯಕ್ತಪಡಿಸಿರುವ ಪ್ರಮುಖ ವಿರೋಧ ಪಕ್ಷ ಆರ್‌ಜೆಡಿ, ‘ಬುರ್ಖಾ ಧರಿಸುವ ಮಹಿಳಾ ಮತದಾರರ ಬಗ್ಗೆ ಪ್ರಶ್ನೆಗಳನ್ನೆತ್ತುವ ಮೂಲಕ ಬಿಜೆಪಿ ರಾಜಕೀಯ ಪಿತೂರಿ ಮಾಡುತ್ತಿದೆ’ ಎಂದು ಆರೋಪಿಸಿದೆ.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ನೇತೃತ್ವದ ಚುನಾವಣಾ ಆಯೋಗದ ತಂಡ, ಬಿಹಾರ ಚುನಾವಣೆಯ ಸಿದ್ಧತೆ ಕುರಿತು ಶನಿವಾರ ಪಟ್ನಾದಲ್ಲಿ ಪರಿಶೀಲನಾ ಸಭೆಗಳನ್ನು ನಡೆಸಿತು. ಭಾನುವಾರವೂ ಪರಿಶೀಲನೆ ಮುಂದುವರಿಯಲಿದೆ.

ಆಯೋಗ ಶನಿವಾರ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಜತೆ ಸಭೆ ನಡೆಸಿತು. ಚುನಾವಣಾ ವೇಳಾಪಟ್ಟಿ ಪ್ರಕಟಿಸುವುದಕ್ಕೂ ಮುನ್ನ ಆಯೋಗ ಈ ರೀತಿಯ ಸಭೆ ನಡೆಸುವುದು ವಾಡಿಕೆಯಾಗಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ದಿಲೀಪ್ ಜೈಸ್ವಾಲ್ ಅವರು ಬಿಜೆಪಿ ನಿಯೋಗದ ಮತ್ತು ಲೋಕಸಭಾ ಸದಸ್ಯ ಅಭಯ್ ಕುಶ್ವಾಹ ಅವರು ಆರ್‌ಜೆಡಿ ನಿಯೋಗದ ನೇತೃತ್ವ ವಹಿಸಿದ್ದರು.

‘ಕೇಂದ್ರ ಚುನಾವಣಾ ಆಯೋಗವು ಬಿಹಾರದಲ್ಲಿ ಇತ್ತೀಚೆಗಷ್ಟೇ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸಿದೆ. ಹೊಸದಾಗಿ ಮತದಾರರ ಚೀಟಿಯನ್ನು ನೀಡಿದೆ. ಅದರಲ್ಲಿ ಮತದಾರರ ಈಗಿನ ಭಾವ ಚಿತ್ರಗಳನ್ನು ಮುದ್ರಿಸಲಾಗಿದೆ. ಮತದಾರರ ಗುರುತು ಪತ್ತೆ ಮಾಡುವುದು ದೊಡ್ಡ ಸಮಸ್ಯೆಯಲ್ಲ. ಆದರೆ ಬಿಜೆಪಿ ಈ ವಿಷಯದಲ್ಲಿ ತನ್ನ ಗೋಪ್ಯ ಕಾರ್ಯಸೂಚಿ ನುಸುಳಿಸಲು ಯತ್ನಿಸುತ್ತಿದೆ’ ಎಂದು ಆರ್‌ಜೆಡಿಯ ಅಭಯ್ ಕುಶ್ವಾಹ ಆರೋಪಿಸಿದರು.

‘ದೀಪಾವಳಿ ಬಳಿಕ ಬರುವ ಛತ್ ಹಬ್ಬದ ನಂತರ ಚುನಾವಣೆ ನಡೆಸಲು ವೇಳಾಪಟ್ಟಿ ಸಿದ್ಧಪಡಿಸುವಂತೆ ಆಯೋಗಕ್ಕೆ ಮನವಿ ಮಾಡಿದ್ದೇವೆ’ ಎಂದು ಅವರು ಸುದ್ದಿಗಾರರಿಗೆ ವಿವರಿಸಿದರು.

ಲೋಕಜನಶಕ್ತಿ ಪಕ್ಷ (ರಾಮ ವಿಲಾಸ್) ಮತ್ತು ಸಿಪಿಐ (ಎಂಎಲ್) ಪಕ್ಷಗಳ ನಿಯೋಗ ಸಹ ಎರಡಕ್ಕಿಂತ ಹೆಚ್ಚು ಹಂತಗಳಲ್ಲಿ ಚುನಾವಣೆ ನಡೆಸುವುದು ಬೇಡ ಎಂದು ಆಯೋಗಕ್ಕೆ ತಿಳಿಸಿದವು.

ಯುವಜನರ ಶಿಕ್ಷಣ ಮತ್ತು ಕೌಶಲಕ್ಕೆ ಸಂಬಂಧಿಸಿದ ವಿವಿಧ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಚಾಲನೆ ನೀಡಿದರು –ಪಿಟಿಐ ಚಿತ್ರ

ಬಿಹಾರಿಗಳು ವಲಸೆ ಹೋಗಲು ಆರ್‌ಜೆಡಿ ಕಾರಣ: ಮೋದಿ

ನವದೆಹಲಿ (ಪಿಟಿಐ): ಬಿಹಾರದ ಜನರು ಬೃಹತ್ ಪ್ರಮಾಣದಲ್ಲಿ ವಲಸೆ ಹೋಗಲು ಆರ್‌ಜೆಡಿ ಆಡಳಿತ ಅವಧಿಯಲ್ಲಿದ್ದ ಕಳಪೆ ಶಿಕ್ಷಣ ವ್ಯವಸ್ಥೆಯೇ ಕಾರಣ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಟೀಕಿಸಿದರು.

ಯುವ ಸಮುದಾಯಕ್ಕಾಗಿ ಶಿಕ್ಷಣ ಮತ್ತು ಕೌಶಲ ಕಾರ್ಯಕ್ರಮಗಳು ಸೇರಿದಂತೆ ₹62 ಸಾವಿರ ಕೋಟಿ ಮೊತ್ತದ ಹಲವಾರು ಯೋಜನೆಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ‘ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಸರ್ಕಾರವು ಸುಧಾರಣೆಯನ್ನು ತರುವ ಮೂಲಕ ಬಿಹಾರವನ್ನು ಅಭಿವೃದ್ಧಿಯ ಪಥದತ್ತ ಕೊಂಡೊಯ್ಯುತ್ತಿದೆ’ ಎಂದರು.

ಕೇಂದ್ರ ಸರ್ಕಾರ ಪ್ರಾಯೋಜಕತ್ವದ ₹60 ಸಾವಿರ ಕೋಟಿ ಹೂಡಿಕೆಯ ‘ಪಿ.ಎಂ ಸೇತು’ ಯೋಜನೆ ಹಾಗೂ ಚುನಾವಣೆಯನ್ನು ಎದುರು ನೋಡುತ್ತಿರುವ ಬಿಹಾರದಲ್ಲಿ, ಜನನಾಯಕ ಕರ್ಪೂರಿ ಠಾಕೂರ್ ಕೌಶಲ ವಿಶ್ವವಿದ್ಯಾಲಯ ಲೋಕಾರ್ಪಣೆ ಸೇರಿದಂತೆ ಹಲವು ಯೋಜನೆಗಳಿಗೆ ಪ್ರಧಾನಿ ಮೋದಿ ಚಾಲನೆ ನೀಡಿದರು.

‘ಜನನಾಯಕ ಬಿರುದು ಕಸಿಯಲು ಯತ್ನ’

ಹಿಂದುಳಿದ ವರ್ಗಗಳ ನಾಯಕ ಮತ್ತು ಬಿಹಾರದ ಮಾಜಿ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಅವರಿಗಿರುವ ಜನನಾಯಕ ಎಂಬ ಬಿರುದನ್ನು ಕಸಿಯಲು ನಡೆಯುತ್ತಿರುವ ಪ್ರಯತ್ನಗಳ ಬಗ್ಗೆ ಬಿಹಾರದ ಜನರು ಜಾಗರೂಕರಾಗಿರಬೇಕು ಎಂದು ಪ್ರಧಾನಿ ಮೋದಿ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

‘ಸಾಮಾಜಿಕ ಜಾಲತಾಣಗಳ ಟ್ರೋಲ್‌ಗಳ ಮೂಲಕ ಕರ್ಪೂರಿ ಅವರಿಗೆ ಜನನಾಯಕ ಎಂಬ ಬಿರುದು ದೊರಕಿಲ್ಲ, ಬದಲಾಗಿ ಜನರಿಗೆ ಅವರ ಮೇಲಿದ್ದ ಪ್ರೀತಿಯ ಪ್ರತಿಬಿಂಬವಾಗಿ ಆ ಬಿರುದು ಲಭಿಸಿದೆ’ ಎಂದರು.

ಚಿಟಿಕೆ ಸುದ್ದಿ

ಅಮೆರಿಕದಲ್ಲಿ ಹೈದರಾಬಾದ್ ವಿದ್ಯಾರ್ಥಿ ಹತ್ಯೆ

ಹೈದರಾಬಾದ್ (ಪಿಟಿಐ): ಅಮೆರಿಕದಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಹೈದರಾಬಾದ್‌ನ ವಿದ್ಯಾರ್ಥಿ ಪೋಲೆ ಚಂದ್ರಶೇಖರ್ (28) ಮೃತಪಟ್ಟಿದ್ದಾರೆ ಎಂದು ಬಿಆರ್‌ಎಸ್ ಶಾಸಕ ಟಿ.ಹರೀಶ್ ರಾವ್ ಅವರು ಶನಿವಾರ ತಿಳಿಸಿದರು.

‘ಭಾರತದಲ್ಲಿ ಬಿಡಿಎಸ್ ಪೂರ್ಣಗೊಳಿಸಿ ಉನ್ನತ ವಿದ್ಯಾಭ್ಯಾಸಕ್ಕಾಗಿ ಡಲ್ಲಾಸ್‌ಗೆ ಚಂದ್ರಶೇಖರ್ ತೆರಳಿದ್ದರು. ಗ್ಯಾಸ್ ಸ್ಟೇಷನ್‌ವೊಂದರಲ್ಲಿ ಅರೆಕಾಲಿಕ ಉದ್ಯೋಗ ಮಾಡುತ್ತಿದ್ದ ವೇಳೆ ಶುಕ್ರವಾರ ರಾತ್ರಿ ದುಷ್ಕರ್ಮಿಗಳ ಗುಂಡೇಟಿಗೆ ಬಲಿಯಾಗಿದ್ದಾರೆ’ ಎಂದು ತಿಳಿಸಿದರು.

‘ಮೃತದೇಹವನ್ನು ಭಾರತಕ್ಕೆ ತರಲು ತೆಲಂಗಾಣ ಸರ್ಕಾರ ಕ್ರಮ ಕೈಗೊಳ್ಳಬೇಕು’ ಎಂದು ಅವರು ಒತ್ತಾಯಿಸಿದರು.

ಮೃತದೇಹವನ್ನು ಭಾರತಕ್ಕೆ ತರಲು ಎಲ್ಲ ರೀತಿಯ ಸಹಕಾರ ನೀಡುವುದಾಗಿ ಮುಖ್ಯಮಂತ್ರಿ ರೇವಂತ್ ರೆಡ್ಡಿ ಭರವಸೆ ನೀಡಿದ್ದಾರೆ.

ಮಣಿಪುರ– ಸರ್ಕಾರ ಮರುಸ್ಥಾಪನೆ: ಬಿಜೆಪಿ ಶಾಸಕರ ಒಲವು

ಗುವಾಹಟಿ: ಮಣಿಪುರದಲ್ಲಿ ಇರುವ ರಾಷ್ಟ್ರಪತಿ ಆಳ್ವಿಕೆಯನ್ನು ಕೊನೆಗೊಳಿಸಿ, ಜನರಿಂದ ಚುನಾಯಿತವಾದ ಸರ್ಕಾರವನ್ನು ಮರುಸ್ಥಾಪಿಸುವಂತೆ ಪಕ್ಷದ ಕೇಂದ್ರ ನಾಯಕರಿಗೆ ಮನವರಿಕೆ ಮಾಡಿಕೊಡಲು ಮಾಜಿ ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಸೇರಿ ಮೂವರು ಶಾಸಕರು ಶನಿವಾರ ದೆಹಲಿಗೆ ತೆರಳಿದರು.

‘ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯ ಸ್ಥಿತಿಗತಿ ಸೇರಿದಂತೆ ಸಂಘರ್ಷದಿಂದ ನಿರಾಶ್ರಿತರಾದವರ ಬಗ್ಗೆ ಮತ್ತು ಹೆದ್ದಾರಿಗಳಲ್ಲಿ ಸಂಚಾರ ಆರಂಭಿಸುವ ಕುರಿತು ವಸ್ತುಸ್ಥಿತಿಯನ್ನು ನಮ್ಮ ನಾಯಕರಿಗೆ ತಿಳಿಸಲಿದ್ದೇವೆ’ ಎಂದು ಬಿರೇನ್ ಸಿಂಗ್, ಪತ್ರಕರ್ತರಿಗೆ ಮಾಹಿತಿ ನೀಡಿದರು.

ವಿಧಾನಸಭೆ ಸ್ಪೀಕರ್ ಅವರ ನೇತೃತ್ವದಲ್ಲಿಯೂ ಕೆಲ ಬಿಜೆಪಿ ಶಾಸಕರು ದೆಹಲಿಗೆ ತೆರಳಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಶಾಸಕರು ಮೊದಲಿಗೆ ಮಣಿಪುರ ಉಸ್ತುವಾರಿ ಸಂಬಿತ್ ಪಾತ್ರ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಬಳಿಕ, ಕೇಂದ್ರ ಗೃಹ ಸಚಿವರನ್ನು ಭೇಟಿ ಮಾಡುವರು ಎನ್ನಲಾಗುತ್ತಿದೆ.

ಮಣಿಪುರದಲ್ಲಿ ಫೆಬ್ರುವರಿಯಿಂದ ರಾಷ್ಟ್ರಪತಿ ಆಳ್ವಿಕೆ ಹೇರಲಾಗಿದೆ. ‘ಕೆಲವು ತಿಂಗಳಿಂದ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸುಧಾರಿಸಿದೆ. ಆದ್ದರಿಂದ, ಚುನಾಯಿತ ಸರ್ಕಾರವನ್ನು ಮರುಸ್ಥಾಪಿಸಬಹುದು’ ಎನ್ನುವುದು ಕೆಲವು ಬಿಜೆಪಿ ನಾಯಕರ ಅಭಿಪ್ರಾಯ. ‘ಬಹುಪಕ್ಷ ರಾಜ್ಯದಲ್ಲಿ ಉಂಟಾಗಿರುವ ಸಂಘರ್ಷಕ್ಕೆ ಪರಿಹಾರ ಸಿಗುವವರೆಗೂ ರಾಷ್ಟ್ರಪತಿ ಆಳ್ವಿಕೆಯನ್ನು ತೆಗೆಯುವುದಿಲ್ಲ’ ಎನ್ನುವುದು ಇನ್ನೂ ಕೆಲವು ನಾಯಕರ ಅಭಿಮತ.

ಜುಬಿನ್ ಸಾವು: ತನಿಖೆಗೆ ನ್ಯಾಯಾಂಗ ಆಯೋಗ ರಚನೆ

ಗುವಾಹಟಿ (ಪಿಟಿಐ): ಗಾಯಕ ಜುಬಿನ್ ಗರ್ಗ್ ಸಾವಿನ ಪ್ರಕರಣಕ್ಕೆ ಸಂಬಂಧಿಸಿದ ತನಿಖೆಗೆ ಏಕಸದಸ್ಯ ನ್ಯಾಯಾಂಗ ಆಯೋಗವನ್ನು ಅಸ್ಸಾಂ ಸರ್ಕಾರ ರಚಿಸಿದೆ.

ಗುವಾಹಟಿ ಹೈಕೋರ್ಟ್‌ನ ನ್ಯಾಯಮೂರ್ತಿ ಸೌಮಿತ್ರ ಸೈಕಿಯಾ ಅವರ ನೇತೃತ್ವದ ಆಯೋಗವು ಆರು ತಿಂಗಳ ಒಳಗಾಗಿ ವರದಿ ಸಲ್ಲಿಸಬೇಕೆಂದು ಸರ್ಕಾರ ಆದೇಶದಲ್ಲಿ ತಿಳಿಸಿದೆ.

ಸಿಂಗಪುರದಲ್ಲಿ ಆಯೋಜಿಸಲಾಗಿದ್ದ ಈಶಾನ್ಯ ಭಾರತ ಉತ್ಸವದಲ್ಲಿ ಪಾಲ್ಗೊಳ್ಳಲು ಜುಬಿನ್ ತೆರಳಿದ್ದರು. ಅಲ್ಲಿ ಸ್ಕೂಬಾ ಡೈವಿಂಗ್ ನಡೆಸುತ್ತಿದ್ದ ವೇಳೆ ಜುಬಿನ್ ಉಸಿರುಗಟ್ಟಿ ಮೃತಪಟ್ಟಿದ್ದರು. ಉತ್ಸವದ ಆಯೋಜಕರ ವಿರುದ್ಧ ಅಸ್ಸಾಂನಲ್ಲಿ 60ಕ್ಕೂ ಅಧಿಕ ಎಫ್‌ಐಆರ್ ದಾಖಲಾಗಿದ್ದು, ಸಿಐಡಿ ಪ್ರಕರಣದ ತನಿಖೆ ನಡೆಸುತ್ತಿದೆ.

‘ವಿಷಪ್ರಾಶನದಿಂದ ಸಾವು’

ಜುಬಿನ್ ಅವರಿಗೆ ಸಿಂಗಪುರದಲ್ಲಿ ವಿಷ ನೀಡಿ ಸಾಯಿಸಲಾಗಿದೆ ಎಂದು ಅವರ ಜತೆಗಿದ್ದ ಬ್ಯಾಂಡ್‌ಮೇಟ್ ಶೇಖರ್ ಜ್ಯೋತಿ ಗೋಸ್ವಾಮಿ ಅವರು ಆರೋಪಿಸಿದ್ದಾರೆ. ಜುಬಿನ್ ಅವರ ಮ್ಯಾನೇಜರ್ ಸಿದ್ಧಾರ್ಥ್ ಶರ್ಮಾ ಮತ್ತು ಉತ್ಸವದ ಸಂಘಟಕ ಶ್ಯಾಮಕಾನು ಮಹಾಂತ ಅವರು ವಿಷ ನೀಡಿದ್ದರು ಎಂದು ಆರೋಪಿಸಿದ್ದಾರೆ. ಉತ್ಸವ ಆಯೋಜಕರು, ಜುಬಿನ್ ಅವರ ಮ್ಯಾನೇಜರ್, ಗೋಸ್ವಾಮಿ, ಅಮೃತಪ್ರಭ ಮಹಂತ ಅವರನ್ನು ಬಂಧಿಸಿ 14 ದಿನ ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ.

ಎರಡನೇ ಮರಣೋತ್ತರ ವರದಿ ಹಸ್ತಾಂತರ

ಜುಬಿನ್ ಗರ್ಗ್ ಅವರ ಎರಡನೇ ಮರಣೋತ್ತರ ಪರೀಕ್ಷೆಯ ವರದಿಯನ್ನು ಜುಬಿನ್ ಅವರ ಪತ್ನಿ ಗರಿಮಾ ಸೈಕಿಯಾ ಗರ್ಗ್ ಅವರಿಗೆ ಅಸ್ಸಾಂ ಪೊಲೀಸರು ಶುಕ್ರವಾರ ಹಸ್ತಾಂತರಿಸಿದರು ಎಂದು ಮೂಲಗಳು ತಿಳಿಸಿವೆ. ಸಿಂಗಪುರದಲ್ಲಿ ನಡೆದಿದ್ದ ಮೊದಲ ಮರಣೋತ್ತರ ಪರೀಕ್ಷಾ ವರದಿಯನ್ನು ಗುರುವಾರ ನೀಡಲಾಗಿತ್ತು. ‘ಎಸ್‌ಐಟಿ ಅಧಿಕಾರಿಯೊಬ್ಬರು ಗರಿಮಾ ಅವರ ನಿವಾಸಕ್ಕೆ ತೆರಳಿ ಎರಡನೇ ವರದಿಯನ್ನು ಸಲ್ಲಿಸಿದರು’ ಎಂದು ಸಿಐಡಿ ಮೂಲಗಳು ತಿಳಿಸಿವೆ. ಆದರೆ ಜುಬಿನ್ ಅವರ ಪತ್ನಿ ಮರಣೋತ್ತರ ವರದಿಯನ್ನು ಪೊಲೀಸರಿಗೆ ಪುನಃ ಮರಳಿಸಿದ್ದಾರೆ.

ನಕ್ಸಲರ ಜತೆ ಮಾತುಕತೆ ಇಲ್ಲ: ಶಾ

ಜಗದಲಪುರ (ಪಿಟಿಐ): ನಕ್ಸಲರ ಜತೆಗಿನ ಮಾತುಕತೆಯನ್ನು ತಳ್ಳಿ ಹಾಕಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ‘ಆಕರ್ಷಕವಾಗಿರುವ ಶರಣಾಗತಿ ಹಾಗೂ ಪುನರ್ವಸತಿ ನೀತಿಯನ್ನು ಒಪ್ಪಿಕೊಂಡ ಬಳಿಕ ಶಸ್ತ್ರಾಸ್ತ್ರಗಳನ್ನು ತ್ಯಜಿಸಬೇಕಾಗುತ್ತದೆ’ ಎಂದು ಹೇಳಿದರು.

ಛತ್ತೀಸಗಢದ ಬಸ್ತರ್ ಜಿಲ್ಲೆಯ ಜಗದಲಪುರದಲ್ಲಿ ಶನಿವಾರ ಆಯೋಜಿಸಿದ್ದ ಬಸ್ತರ್ ದಸರಾ ಲೋಕೋತ್ಸವ ಹಾಗೂ ಸ್ವದೇಶಿ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

‘ನಕ್ಸಲರೊಂದಿಗೆ ಮಾತುಕತೆ ನಡೆಸಲು ಕೆಲವರು ಕರೆ ನೀಡಿದ್ದಾರೆ. ಆದರೆ, ಅವರೊಂದಿಗೆ ಮಾತನಾಡಲು ಏನಿದೆ’ ಎಂದು ಪ್ರಶ್ನಿಸಿದ್ದಾರೆ. ಮಾ ದಂತೇಶ್ವರಿ ದೇವಾಲಯಕ್ಕೆ ಭೇಟಿ ನೀಡಿದ್ದ ಶಾ, ‘ಮುಂದಿನ ಮಾರ್ಚ್ 31ರೊಳಗೆ ಇಡೀ ಬಸ್ತರ್ ಪ್ರದೇಶವನ್ನು ‘ಕೆಂಪು ಭಯೋತ್ಪಾದನೆ’ಯಿಂದ ಮುಕ್ತಗೊಳಿಸಲು ಭದ್ರತಾ ಪಡೆಗಳಿಗೆ ಶಕ್ತಿ ನೀಡುವಂತೆ ಪ್ರಾರ್ಥಿಸಿದ್ದೇನೆ. ಶಸ್ತ್ರಾಸ್ತ್ರಗಳ ಮೂಲಕ ಬಸ್ತರ್‌ನ ಶಾಂತಿಯನ್ನು ಕದಡುವವರಿಗೆ ಭದ್ರತಾ ಪಡೆಗಳು ತಕ್ಕ ಪ್ರತ್ಯುತ್ತರ ನೀಡಲಿವೆ’ ಎಂದು ಹೇಳಿದರು.

ಪೂರ್ವಭಾವಿ ಪರೀಕ್ಷೆ ಬಳಿಕ ತಾತ್ಕಾಲಿಕ ಕೀ–ಉತ್ತರ ಪ್ರಕಟ: ಯುಪಿಎಸ್‌ಸಿ

ನವದೆಹಲಿ (ಪಿಟಿಐ): ಪೂರ್ವಭಾವಿ (ಪ್ರಿಲಿಮಿನರಿ) ಪರೀಕ್ಷೆ ಬಳಿಕ ತಾತ್ಕಾಲಿಕ ಕೀ–ಉತ್ತರಗಳನ್ನು ಪ್ರಕಟಿಸಲು ನಿರ್ಧರಿಸಲಾಗಿದೆ ಎಂದು ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಪ್ರತಿಷ್ಠಿತ ನಾಗರಿಕ ಸೇವಾ ಪರೀಕ್ಷೆಗಳೂ ಸೇರಿದಂತೆ ವಿವಿಧ ಪರೀಕ್ಷೆಗಳನ್ನು ನಡೆಸುವ ಯುಪಿಎಸ್‌ಸಿ, ಕಳೆದ ತಿಂಗಳು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ. ಅಂತಿಮ ಫಲಿತಾಂಶದ ಬಳಿಕ ಅಂತಿಮ ಕೀ- ಉತ್ತರಗಳನ್ನು ಪ್ರಕಟಿಸಲಾಗುವುದು ಎಂದು ಅದು ಮಾಹಿತಿ ನೀಡಿದೆ.

ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಪಾರದರ್ಶಕತೆ ಹೆಚ್ಚಿಸುವ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಕೆಯಾಗಿರುವ ಅರ್ಜಿಯೊಂದಕ್ಕೆ ಸಂಬಂಧಿಸಿದಂತೆ ಆಯೋಗ ಪ್ರಮಾಣಪತ್ರ ಸಲ್ಲಿಸಿದೆ.

ಈ ಪ್ರಕರಣದ ವಿಚಾರಣೆ ಸಂದರ್ಭದಲ್ಲಿ ನ್ಯಾಯಾಲಯ ನೇಮಿಸಿದ್ದ ಅಮಿಕಸ್ ಕ್ಯೂರಿಯ ಸಲಹೆಗಳನ್ನು ಪಡೆದು, ವಿವಿಧ ವಿಷಯಗಳ ಬಗ್ಗೆ ಚರ್ಚಿಸಿ, ಪ್ರಮಾಣ ಪತ್ರ ಸಲ್ಲಿಸಿರುವುದಾಗಿ ಆಯೋಗ ತಿಳಿಸಿದೆ.

‘ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳು ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಶೀಲಿಸಲಾಗುವುದು. ಅಭ್ಯರ್ಥಿಗಳು ಕೀ- ಉತ್ತರಗಳಿಗೆ ಆಕ್ಷೇಪಣೆಗಳನ್ನು ಸಲ್ಲಿಸುವಾಗ, ಪ್ರತಿ ಆಕ್ಷೇಪಣೆಗೆ ಮೂರು ಅಧಿಕೃತ ಮೂಲಗಳ ದಾಖಲೆಗಳನ್ನು ಸಲ್ಲಿಸಬೇಕು. ಆ ದಾಖಲೆಗಳು ಪೂರಕ ಎಂದು ಕಂಡು ಬರದಿದ್ದರೆ ಅವುಗಳನ್ನು ತಿರಸ್ಕರಿಸಲಾಗುವುದು’ ಎಂದು ಆಯೋಗ ಹೇಳಿದೆ.

‘ಅಭ್ಯರ್ಥಿಗಳು ಸಲ್ಲಿಸಿದ ದಾಖಲೆಗಳು ಅಧಿಕೃತವೋ ಅಥವಾ ಅಲ್ಲವೋ ಎಂಬುದನ್ನು ಆಯೋಗ ನಿರ್ಧರಿಸುತ್ತದೆ’ ಎಂದು ಅದು ಉಲ್ಲೇಖಿಸಿದೆ.

‘ಇದಕ್ಕಾಗಿ ವಿಷಯ ತಜ್ಞರ ತಂಡವನ್ನು ರಚಿಸಲಾಗುತ್ತದೆ. ಅದು ಅಭ್ಯರ್ಥಿಗಳ ಆಕ್ಷೇಪಣೆಗಳು, ಮೂಲ ದಾಖಲೆಗಳನ್ನು ಪರಾಮರ್ಶಿಸಿ ಅಂತಿಮ ಕೀ- ಉತ್ತರಗಳನ್ನು ಸಿದ್ಧಪಡಿಸುತ್ತದೆ. ಅದನ್ನು ಆಧರಿಸಿಯೇ ಪೂರ್ವಭಾವಿ ಪರೀಕ್ಷೆಯ ಫಲಿತಾಂಶ ಪ್ರಕಟಿಸಲಾಗುತ್ತದೆ. ಈ ವಿಧಾನಗಳನ್ನು ಸಾಧ್ಯವಾದಷ್ಟು ಬೇಗ ಅನುಸರಿಸಲು ಆಯೋಗ ಬಯಸುತ್ತದೆ’ ಎಂದು ವಿವರಿಸಿದೆ.

ಆಟೊ ಚಾಲಕರಿಗೆ ತಲಾ ₹15 ಸಾವಿರ

ವಿಜಯವಾಡ (ಪಿಟಿಐ): ಆಟೊ, ಕ್ಯಾಬ್ ಮತ್ತು ಮ್ಯಾಕ್ಸಿ ಕ್ಯಾಬ್ ಚಾಲಕರ ಆರ್ಥಿಕ ಪರಿಸ್ಥಿತಿ ಸುಧಾರಿಸುವ ನಿಟ್ಟಿನಲ್ಲಿ ‘ಆಟೊ ಡ್ರೈವರ್ ಸೇವಲೊ’ (ಆಟೊ ಚಾಲಕರ ಸೇವಾ ಯೋಜನೆ) ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಶನಿವಾರ ಚಾಲನೆ ನೀಡಿದರು.

2.26 ಲಕ್ಷ ಆಟೊ ಚಾಲಕರು, 38 ಸಾವಿರ ಪ್ರಯಾಣಿಕ ವಾಹನ ಚಾಲಕರು, 20 ಸಾವಿರ ಕ್ಯಾಬ್ ಚಾಲಕರು, 6 ಸಾವಿರ ಮ್ಯಾಕ್ಸಿ ಕ್ಯಾಬ್ ಚಾಲಕರು ಸೇರಿದಂತೆ ಒಟ್ಟು 2.9 ಲಕ್ಷ ಫಲಾನುಭವಿಗಳಿಗೆ ವಾರ್ಷಿಕ ತಲಾ ₹15 ಸಾವಿರ ನೀಡಲಾಗುತ್ತದೆ. 2025-26ನೇ ಸಾಲಿನಲ್ಲಿ ₹436 ಕೋಟಿ ಮೊತ್ತವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ಸಂದಾಯ ಮಾಡಲಾಗುತ್ತದೆ.



ಚಂದ್ರಬಾಬು ನಾಯ್ಡು

ವಿಜಯವಾಡದ ಸಿಂಗ್ ನಗರದಲ್ಲಿ ಅಧಿಕಾರಿಗಳು ಹಾಗೂ ಫಲಾನುಭವಿಗಳ ಸಮ್ಮುಖದಲ್ಲಿ ಯೋಜನೆಗೆ ಚಾಲನೆ ನೀಡಿದ ನಾಯ್ಡು, ‘ಹದಗೆಟ್ಟ ರಸ್ತೆಗಳಿಂದಾಗಿ ಆಟೊ ಚಾಲಕರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಆಟೊ ದುರಸ್ತಿಗಾಗಿ ಗಳಿಕೆಯ ಅರ್ಧ ಹಣ ಖರ್ಚಾಗುತ್ತಿದೆ. ಇದರಿಂದ ನಿಮ್ಮ ದೇಹಕ್ಕೂ ಬಹಳಷ್ಟು ಹಣ ವ್ಯಯವಾಗುತ್ತಿದೆ. ಟಿಡಿಪಿ ನೇತೃತ್ವದ ಎನ್‌ಡಿಎ ಸರ್ಕಾರವು 23 ಸಾವಿರ ಕಿ.ಮೀ. ರಸ್ತೆ ದುರಸ್ತಿಗೆ ₹3,400 ಕೋಟಿ ಅನುದಾನ ನೀಡಿದ್ದು, ಗುಂಡಿಮುಕ್ತ ರಸ್ತೆ ಮಾಡಲಾಗುತ್ತದೆ’ ಎಂದು ಭರವಸೆ ನೀಡಿದರು.

ಎಪಿಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸುವ ‘ಸ್ತ್ರೀ ಶಕ್ತಿ’ ಯೋಜನೆ ಜಾರಿಗೊಳಿಸಿದ ಬಳಿಕ, ಆಟೊ, ಕ್ಯಾಬ್ ಚಾಲಕರ ಜೀವನೋಪಾಯದ ಮೇಲೆ ಪರಿಣಾಮ ಬೀರಿತ್ತು. ಇವರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಈ ಯೋಜನೆ ಜಾರಿಗೊಳಿಸಲಾಗಿದೆ.

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
Raichur Institute of Medical Sciences, Raichur
(ಸರ್ಕಾರದ ಸ್ವಾಯತ್ತ ಸಂಸ್ಥೆ) ಹೈದ್ರಾಬಾದ್ ರೋಡ್, ರಾಯಚೂರು –584102
Phone /Fax-08532-238488/89
www.rims-raichur.karnataka.gov.in info@rims-raichur.com
ರಿಮ್ಸ್/ಸಿಬ್ಬಂದಿ(1)/ನೇಮಕಾತಿ/2025–26 ದಿನಾಂಕ: 01.10.2025

ನೇಮಕಾತಿ ಅಧಿಸೂಚನೆ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ರಾಜೀವ್‌ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳ ಭರ್ತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ	ಹುದ್ದೆಗಳ ವಿವರ	ಒಟ್ಟು ಹುದ್ದೆಗಳ ಸಂಖ್ಯೆ
1	ಪ್ರಾಧ್ಯಾಪಕರು (ರಾ.ಗಾ.ಸೂ.ಸ್ಪೆ.ಆಸ್ಪತ್ರೆ)	04
2	ಸಹ ಪ್ರಾಧ್ಯಾಪಕರು (ರಾ.ಗಾ.ಸೂ.ಸ್ಪೆ.ಆಸ್ಪತ್ರೆ)	01
3	ಸಹಾಯಕ ಪ್ರಾಧ್ಯಾಪಕರು (ರಿಮ್ಸ್ ಮತ್ತು ರಾ.ಗಾ.ಸೂ.ಸ್ಪೆ.ಆಸ್ಪತ್ರೆ)	35
	ಒಟ್ಟು ಹುದ್ದೆಗಳು	40

ಅರ್ಹತೆ, ವಯಸ್ಸು, ವಿದ್ಯಾರ್ಹತೆಗಳು, ಸೇವಾ ಅನುಭವ ಮತ್ತು ಮೀಸಲಾತಿ ವಿವರಗಳು ಹಾಗೂ ಇತರೆ ವಿವರಗಳನ್ನು ಸಂಸ್ಥೆಯ ಅಂತರ್ಜಾಲ ವಿಳಾಸ www.rimsraichur.karnataka.gov.in ನಲ್ಲಿ ಪಡೆಯಬಹುದು.

ಸಹಿ/– ನಿರ್ದೇಶಕರು
DIP/RCR/451/KSMC&A/452/2025-26 ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರಾಯಚೂರು

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರ–2 ರವರ ಕಚೇರಿ, 1ನೇ ಮಹಡಿ, ಬಿಐಎಎಲ್‌ಎ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು – 560052
No: DGM-2/BSWML/Tend/22/25-26 Date: 04.10.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಟಿಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1) ಉಪ ಪ್ರಧಾನ ವ್ಯವಸ್ಥಾಪಕರು–2 ಬಿ ಎಸ್ ಡಬ್ಲ್ಯೂ ಎಂ ಎಲ್ ಇವರು ವ್ಯವಸ್ಥಾಪಕ ನಿರ್ದೇಶಕರು, ಬಿ ಎಸ್ ಡಬ್ಲ್ಯೂ ಎಂ ಎಲ್, ಇವರ ಪರವಾಗಿ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿರುವ ಕಾಮಗಾರಿಗಳಿಗೆ ಯೋಜನಾ ನಿರ್ವಹಣಾ ಸಲಹಾ ಸೇವೆಗಳಿಗೆ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರಕಾರದ ಕೆಪಿಪಿ ಪೋರ್ಟಲ್ : https ://kppp.karnataka.gov.in ಮೂಲಕ ಬಿಡ್‌ಗಳನ್ನು ಆಹ್ವಾನಿಸುತ್ತಾರೆ. ಕಾಮಗಾರಿ ಅರ್ಹತೆ ಹಾಗೂ ಆರ್ಥಿಕ ಅರ್ಹತಾ ಮಾನದಂಡಗಳನ್ನು ಗಮನಿಸಲು ಟೆಂಡರ್‌ದಾರರಿಗೆ ಸೂಚಿಸಲಾಗಿದೆ. ಹೆಚ್ಚಿನ ವಿವರಗಳನ್ನು ಟೆಂಡರ್ ಡಾಕ್ಯುಮೆಂಟ್ ನಲ್ಲಿ ವೀಕ್ಷಿಸಬಹುದು.

ಕ್ರ. ಸಂ.	ಕಾಮಗಾರಿಯ ವಿವರಗಳು	ಮೂಲ ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಅವಧಿ (ಮಳೆಗಾಲ ಸೇರಿದಂತೆ)	ಇಎಂಡಿ (ರೂ.ಗಳಲ್ಲಿ)
1	Appointment of PMC for the work of Establishment and Development of new landfill site in available quarry pit at Kadagrahara quarry sites.	ರೂ.6760.00	12 ತಿಂಗಳು	ರೂ. 1,40,000/–
2	Appointment of PMC for the work of Operation and Maintenance of Landfill sites.	ರೂ.10000.00	12 ತಿಂಗಳು	ರೂ. 2,35,800/–

ವೇಳಾಪಟ್ಟಿ:
1. ಪೂರ್ವಭಾವಿ ಸಭೆಯ ದಿನಾಂಕ : 13.10.2025, ಮಧ್ಯಾಹ್ನ 3 ಗಂಟೆಗೆ. ಸ್ಥಳ : ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರ ಕಚೇರಿ (ತಾಂತ್ರಿಕ), ಬಿಐಎಎಲ್‌ಎ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು. 2) ಬಿಡ್ ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 23.10.2025, ಸಂಜೆ 4.00 ಗಂಟೆಯವರೆಗೆ. 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 24.10.2025, ಸಂಜೆ 4.30 ಗಂಟೆಗೆ. 4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕವನ್ನು ತಾಂತ್ರಿಕವಾಗಿ ಅರ್ಹರಾಗುವ ಬಿಡ್‌ದಾರರಿಗೆ ತಿಳಿಸಲಾಗುವುದು.

DIPR/CP/3082/Zen/2025-26 ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–2, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–55/1024/2025–26 ದಿನಾಂಕ: 04.10.2025

ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಆಧುನಿಕ ತಂತ್ರಜ್ಞಾನ ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಸಿವಿಲ್ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ ಹಂತ–1 ಕೈಗಾರಿಕಾ ಪ್ರದೇಶದ 45 ಮೀ ಅಗಲದ ರಸ್ತೆ ಸಂಖ್ಯೆ 1 ರಲ್ಲಿ ಆಯ್ದ ಸ್ಥಳಗಳಲ್ಲಿ ರಸ್ತೆ ಮರು ಮೇಲ್ಮೈ ನಿರ್ಮಾಣ, ಚರಂಡಿ ಹೂಳು ತೆಗೆಯುವುದು ರಸ್ತೆ ಮಧ್ಯದ ಮೀಡಿಯನ್ ಪೈಂಟಿಂಗ್ ಮತ್ತು ರೋಡ್ ಮಾರ್ಕಿಂಗ್ ಕಾಮಗಾರಿ. (ಮೀಸಲಾತಿ ಪರಿಶಿಷ್ಟ ಜಾತಿ)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 29.10.2025 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/3107/Zen/2025-26

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಕಾರ್ಯಪಾಲಕ ಅಭಿಯಂತರರ ಕಛೇರಿ
ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಬಂದೀಗೌಡ ಬಡಾವಣೆ, ಮಂಡ್ಯ.
ದೂರವಾಣಿ : ಫ್ಯಾಕ್ಸ್ 08232–224816. e mail- kwbeemnd@gmail.com
ಸಂಖ್ಯೆ:–ಕಜಮ/ಕಾಅ/ಮಂಡ್ಯ/ತಾ.ಶಾ/ತಾ.ಸ/ಸ.ಅ/1013/2025–26 ದಿನಾಂಕ:03.10.2025

Corrigendum

ಕ್ರಮ ಸಂ	ಕೆ.ಪಿ.ಪಿ ಪೋರ್ಟಲ್ ಇಂಡೆಂಟ್ ಸಂಖ್ಯೆ	ವೇಳಾಪಟ್ಟಿ
1	KUWSDB/2025-26/WS/WORK_INDENT393/CALL-2	(1) ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು / ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: 08.10.2025 ರ 17.30 ಗಂಟೆಯವರೆಗೆ. (2) ಸದರಿ ಕಾಮಗಾರಿಯ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 10.10.2025 ರ 11.00 ಗಂಟೆಯ ನಂತರ (3) ಸದರಿ ಕಾಮಗಾರಿಯ ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 14.10.2025 ರ 11.00 ಗಂಟೆಯ ನಂತರ.
2	KUWSDB/2025-26/WS/WORK_INDENT394/CALL-2	

ಹೆಚ್ಚಿನ ವಿವರಗಳಿಗೆ ಕಾರ್ಯಪಾಲಕ ಅಭಿಯಂತರರು, ಮಂಡ್ಯ ವಿಭಾಗ ಮಂಡ್ಯ ರವರನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಮಂಡ್ಯ.
ವಾಸಾಸಂ/ಸಹಿ–ಮಂ/ಕೆಯುಡಬ್ಲ್ಯುಎಸ್/469 'ಎ' ವಿಭಾಗ/2025–26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಸಂ.49, 4 & 5ನೇ ಮಹಡಿ, ಪೂರ್ವ ವಿಭಾಗ ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು– 560001. ಫೋನ್ ನಂ. 080–22267905 ವೆಬ್‌ಸೈಟ್: www.kiadb.in
ಸಂಖ್ಯೆ: ಐಎಡಿಬಿ/ಜೆಡಿಟಿಪಿ/ಇಐಎ/ಇಟಿಎನ್‌ಡಿ–ಇಪಿ–08/813/2025–26 ದಿನಾಂಕ: 04–10–2025

ಪರಿಸರ ವಿಮೋಚನಾ ಪತ್ರ (ಎನ್‌ವಿರಾನ್‌ಮೆಂಟ್ ಕ್ಲಿಯರೆನ್ಸ್) ಪಡೆಯಲು ಸಲಹಾ ಸೇವೆಗಳನ್ನು ಒದಗಿಸಲು ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಜಿಟಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಪರಿಸರ ಸಮಾಲೋಚಕರಿಂದ ಸಲಹಾ ಸೇವೆಗಳನ್ನು ಒದಗಿಸಲು ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಿದೆ. ಪರಿಸರ ಮತ್ತು ಅರಣ್ಯ ಸಚಿವಾಲಯ, ನವದೆಹಲಿ ಇವರಿಂದ ಮಾನ್ಯತೆ ಪಡೆದ ಪಟ್ಟಿಯಲ್ಲಿ 7(c) ವರ್ಗದಲ್ಲಿ ಸಲಹೆಗಾರರಾಗಿ ಹೆಸರು ಸೇರ್ಪಡೆಯಾಗಿರುವ ಅರ್ಹ ಸಂಸ್ಥೆಗಳು NABET & NABL Accredited Consultant/ NABET consultancy MoU with NABL Accredited Consultant ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಕ್ರ. ಸಂ.	ಕೆಲಸದ ಹೆಸರು	ಇ.ಎಂ.ಡಿ ರೂ. (ಲಕ್ಷಗಳಲ್ಲಿ)
1	ಬಳ್ಳಾರಿ ಜಿಲ್ಲೆಯ, ಬಳ್ಳಾರಿ ತಾಲ್ಲೂಕು, ಸಂಜೀವರಾಯನಕೋಟೆಯ ಗ್ರಾಮದ ವ್ಯಾಪ್ತಿಯಲ್ಲಿ ಬರುವ ವಿವಿಧ ಸರ್ವೆ ನಂಬರ್‌ಗಳ ಒಟ್ಟು ವಿಸ್ತೀರ್ಣ 492.39ಎ ಪ್ರದೇಶದಲ್ಲಿ ಸಂಜೀವರಾಯನಕೋಟೆ ಕೈಗಾರಿಕಾ ಪ್ರದೇಶ 2ನೇ ಹಂತಕ್ಕೆ ರಾಜ್ಯ ಪರಿಸರ ಪ್ರಭಾವ ಅಂದಾಜೀಕರಣ ಪ್ರಾಧಿಕಾರದಿಂದ (SEIAA) / ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ (MoEF&CC) ಪರಿಸರ ವಿಮೋಚನಾ (EC) ಪತ್ರ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ)ಯಿಂದ ಸ್ಥಾಪನೆ ಅನುಮತಿ ಪತ್ರ (CFE) ಪಡೆಯುವ ಹಾಗೂ 3 ವರ್ಷಗಳ ಅವಧಿಯವರೆಗೆ ಪರಿಸರ ವಿಮೋಚನಾ ಪತ್ರ ಮತ್ತು ಸ್ಥಾಪನೆ ಅನುಮತಿ ಪತ್ರಗಳಲ್ಲಿ ವಿಧಿಸುವ ನಿಬಂಧನೆಗಳಿಗೆ ಅರ್ಧವಾರ್ಷಿಕ ಅನುಸರಣಾ ವರದಿಯನ್ನು ತಯಾರಿಸಿ ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ಸಲ್ಲಿಸಲು, ಇಐಎ ವರದಿ, ಎಸ್‌ಐಎಸ್ ಅಧ್ಯಯನಗಳ ಇತ್ಯಾದಿಯನ್ನು ಸಿದ್ಧಪಡಿಸಲು. (3ನೇ ಕರೆ).	2.00

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ https://kppp.Karnataka.gov.in ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ದಿನಾಂಕ ಕೆಳಕಂಡಂತಿರುವುದು: ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ: 17–10–2025 ರಂದು ಸಂಜೆ 4.00 ಘಂಟೆಯವರೆಗೆ.

ಸಹಿ/– ಮುಖ್ಯ ಅಭಿಯಂತರರು–2 ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು.
ವಾಸಾಸಂ/ನಾ.ಪ್ರ/ಎಐ/3108/2025–26

ಶೈಯೋಕ್ ಕಣಿವೆಯ ಚೆಲುವು
ಲಡಾಖ್‌ನಲ್ಲಿರುವ ಪರ್ವತಗಳ ತಪ್ಪಲಿನಲ್ಲಿ ಹರಿಯುವ ಶೈಯೋಕ್ ನದಿಯ ಸಂಗ...
13

ಮುತ್ತು ಬೆಳೆದವರ ಕಥೆ!

ಕಲ್ಲು ಕ್ವಾರಿಯ ನೀರಿನಲ್ಲಿ ಮುತ್ತು ಕೃಷಿ

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ ನಗರದಿಂದ ಹಾತಲಗೇರಿ ಗ್ರಾಮಕ್ಕೆ ಹತ್ತು ನಿಮಿಷದ ಹಾದಿ. ಬೆಳಗಿನ ಎಳೆಬಿಸಿಲು ಮೈಚುರುಗುಟ್ಟಿಸುವ ಮೊದಲೇ ಅಲ್ಲಿಗೆ ತಲುಪಿದ್ದೆ. ಜಾನುವಾರುಗಳ ನೀರಡಿಕೆ ತಣಿಸಲು ರಸ್ತೆಬದಿಯಲ್ಲಿರಿಸಿದ್ದ ನೀರಿನ ತೊಟ್ಟಿ ಬಳಿ ಕುಕ್ಕರಗಾಲಿನಲ್ಲಿ ಕೂತು ಮಹಿಳೆಯೊಬ್ಬರು ಬಟ್ಟೆ ಒಗೆಯುತ್ತಿದ್ದರು. ಬೈಕ್‌ನ ವೇಗ ತಗ್ಗಿಸಿ, 'ಕರಿ ಅವರ ಫಾರ್ಮ್ ಎಲ್ಲಿದೆ' ಅಂತ ಕೇಳಿದೆ. 'ಹಿಂಗೆ ಸ್ವಲ್ಪ ಮುಂದಕ್ ಹೋದ್ರೆ ಸಾಲಿ ಸಿಕ್‌ತೈತಿ. ಅಲ್ಲಿಂದ ಚೂರ್ ಮುಂದಕ್ ಹೋಗಿ, ಎಡಕ್ಕೆ ತಿರುಕ್ಕಳಿ' ಅಂದರು.

ಮಹಿಳೆ ಹೇಳಿದ ಗುರುತುಗಳ ಜಾಡು ಹಿಡಿದು ಸಾಗಿದೆ. ಜಾಗ ಸಿಕ್ಕಿತು. ಅಲ್ಲಿಂದ ಕಾಲುದಾರಿಯಲ್ಲಿ ಹೋಗಬೇಕಿದ್ದ ಕಾರಣ ಬೈಕ್ ಅಲ್ಲೇ ನಿಲ್ಲಿಸಿ ಎದೆಯೆತ್ತರಕ್ಕೆ ಬೆಳೆದಿದ್ದ ಜೋಳದಗಿಡಗಳನ್ನು ಪಕ್ಕಕ್ಕೆ ಸರಿಸುತ್ತ ಮುಂದೆ ಸಾಗಿದೆ. ನಿಮಿಷ ಕಳೆಯುವುದರೊಳಗೆ ಜೋಳದ ಹೊಲ ಮುಗಿಯಿತು. ಅಲ್ಲಿಂದ ಮುಂದಕ್ಕೆ ಇಪ್ಪತ್ತು ಹೆಜ್ಜೆ ಹಾಕುವಷ್ಟರಲ್ಲಿ ಕ್ವಾರಿ ಕಂಡಿತು.

ಒಂದು ಎಕರೆಯಷ್ಟಿರುವ ಕ್ವಾರಿ ಅದು. ನೀರಿನ ಒರತೆ ಹೆಚ್ಚಾದ ಕಾರಣಕ್ಕಾಗಿ ಎಂಟ್ಹತ್ತು ವರ್ಷಗಳ ಹಿಂದೆಯೇ ಕ್ವಾರಿ ಬಂದ್ ಆಗಿತ್ತು. 55 ಅಡಿಗಳಷ್ಟು ಆಳವಿದ್ದು, ಅಲ್ಲಿ ಸಹಜವಾಗಿಯೇ ಉತ್ತಮ ಖನಿಜಾಂಶವಿರುವ ನೀರು ತುಂಬಿಕೊಂಡಿತ್ತು. ಇಲ್ಲಿನ ಸಮೃದ್ಧ ನೀರಿನತ್ತ ಕಣ್ಣುನೆಟ್ಟ ಪ್ರಿನ್ಸ್ ವೀರ್, ಕೃಷ್ಣ ಜಾಲಮ್ಮನವರ ಮತ್ತು ವೀರೇಶ್ ಹಿರೇಮಠ 2021ರಲ್ಲಿ ಮುತ್ತು ಕೃಷಿ ಆರಂಭಿಸಿ ಯಶ ಕಂಡಿದ್ದಾರೆ.

ಕಪ್ಪೆ ಚಿಪ್ಪುಗಳಿಗೆ ಕುಶಲಿಗಳಿಂದ ಸರ್ಜರಿ

ಡಿಸೈನರ್ ಮುತ್ತು ಬಳಸಿ ತಯಾರಿಸಿದ ಆಭರಣ

ವೀರ್ ಮತ್ತು ಗೆಳೆಯರು ಒಟ್ಟಿಗೆ ಎಂಬಿಎ ಪದವಿ ಪಡೆದಿದ್ದಾರೆ. ಸ್ಫುರದ್ರೂಪಿ ವೀರ್ ಸಿನಿಮಾಮೋಹಿ. ಇದೇ ಕಾರಣಕ್ಕೆ ಓದು ಮುಗಿದ ತಕ್ಷಣ ಬೆಂಗಳೂರು ಬಸ್ ಹತ್ತಿದರು. ಗಾಂಧಿನಗರ ಅಡ್ಡಾಡಿ ಅವಕಾಶ ಗಿಟ್ಟಿಸಿಕೊಂಡರು. 15 ಸಿನಿಮಾಗಳಲ್ಲಿ ಸಹ ಕಲಾವಿದರಾಗಿ ಕಾಣಿಸಿಕೊಂಡರು. ಕಿರುತೆರೆಯಲ್ಲೂ ನಸೀಬು ಪರೀಕ್ಷಿಸಿದರು. ಅಷ್ಟರಲ್ಲಿ ಎರಡು ವರ್ಷ ಕಳೆದಿತ್ತು. ಇನ್ನೇನು ಸಿನಿಹಾದಿ ಮತ್ತೊಂದು ಹಂತಕ್ಕೆ ಹೋಗುತ್ತಿದೆ ಅನ್ನುವಾಗ ಕೋವಿಡ್ ಕಾಲಿಟ್ಟಿತು. ಲಾಕ್‌ಡೌನ್ ಘೋಷಣೆ ಆಯಿತು. ಅನಿವಾರ್ಯವಾಗಿ ಊರಿಗೆ ಹಿಂದಿರುಗಿದರು. ಗೆಳೆಯರಾದ ಕೃಷ್ಣ ಮತ್ತು ವೀರೇಶ ಗದಗದಲ್ಲೇ ಉದ್ಯಮ ನಡೆಸುತ್ತಿದ್ದರು. ವೀರ್ ಮತ್ತೆ ಚಡ್ಡಿ ದೋಸ್ತ್‌ಗಳ ಜತೆ ಸೇರಿಕೊಂಡರು.

ಕೃಷ್ಣ ಅವರ ಮಾವ ಪ್ರಕಾಶ್ ಕರಿ ಮತ್ತು ಸಹೋದರರಿಗೆ ಸೇರಿದ್ದ ಕ್ವಾರಿ ಬಳಿ ಮೂವರು ಗೆಳೆಯರು ಆಗಾಗ ಸೇರುತ್ತಿದ್ದರು. ಊರಲ್ಲಿದ್ದುಕೊಂಡೇ ಉದ್ಯಮದ ಜತೆಗೆ ಹೊಸದೇನು ಮಾಡಬಹುದು ಎಂದು ಚರ್ಚಿಸುತ್ತಿದ್ದರು. ಆಗ ಕ್ವಾರಿ ಮತ್ತು ನೀರು ಅವರ ಗಮನ ಸೆಳೆಯಿತು. ನಿಸರ್ಗದತ್ತವಾಗಿ ಇಲ್ಲಿ ಇಷ್ಟೊಂದು ನೀರಿದೆ. ಮೀನು ಕೃಷಿ ಮಾಡಬಹುದೇ ಎಂಬ ಯೋಚನೆ ಸುಳಿಯಿತು. ಆದರೆ, ನಿರ್ವಹಣೆ ಕಷ್ಟ ಎಂಬ ಕಾರಣಕ್ಕೆ ಆ ಯೋಚನೆಯನ್ನು ಅಲ್ಲಿಗೆ ಬಿಟ್ಟರು. ಅಂತರ್ಜಾಲ ತಡಕಾಡಿದಾಗ ಮುತ್ತು ಕೃಷಿ ಬಗ್ಗೆ ತಿಳಿದು, ಅದರತ್ತ ಮುಖ ಮಾಡಿದರು.

'ಮೀನು ಕೃಷಿ ಮಾಡಿದರೆ ಹೆಚ್ಚು ಶ್ರಮ ಬೇಕು. ಕ್ವಾರಿಯಲ್ಲಿ 50 ಅಡಿ ಆಳದಷ್ಟು ನೀರು ಇರುವುದರಿಂದ ಬಲೆ ಹಾಕಿ ಮೀನು ಹಿಡಿಯುವುದು ಕಷ್ಟ. ಈ ಕಾರಣಕ್ಕೆ ಇಲ್ಲಿ ಬೇರೆ ಏನು ಮಾಡಬಹುದು ಅಂತ ಯೋಚಿಸುವಾಗ ಮುತ್ತು ಕೃಷಿ ಬಗ್ಗೆ ಹೊಳೆಯಿತು. ದಕ್ಷಿಣ ಭಾರತದಲ್ಲಿ ಮುತ್ತು ಕೃಷಿ ಮಾಡಿದವರ ಸಂಖ್ಯೆ ತುಂಬ ಕಡಿಮೆ ಇದೆ. ನೈಸರ್ಗಿಕ ಕಾರಣಕ್ಕಾಗಿಯೇ ಪಶ್ಚಿಮ ಬಂಗಾಳದಲ್ಲಿ ಮುತ್ತು ಕೃಷಿ ಜಾಸ್ತಿ ಇದೆ. ನಮ್ಮ ಬಳಿ ಕೂಡ ಅಂತಹದ್ದೊಂದು ಜಾಗ ಇದ್ದಿದ್ದರಿಂದ, ಕ್ವಾರಿಗೆ ವರ್ಷಕ್ಕೆ ₹1 ಲಕ್ಷದಂತೆ ಲಾವಣಿ ಮಾಡಿಕೊಂಡು ಮುತ್ತು ಕೃಷಿ ಆರಂಭಿಸಿದೆವು' ಎಂದು ವೀರ್ ಹೇಳಿದರು.

ಮುತ್ತು ಕೃಷಿ ಮಾಡಬೇಕು ಅಂತ ನಿರ್ಧರಿಸಿದ ಮೇಲೆ ಮೂವರು ಸ್ನೇಹಿತರು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳನ್ನು ಸಂಪರ್ಕಿಸಿದರು. ಕ್ವಾರಿಯ ನೀರು ಪರೀಕ್ಷೆ ಮಾಡಿಸಿದರು. ಮುತ್ತು ಕೃಷಿ ಆರಂಭಿಸುವ ಯೋಚನೆ ಮಾಡಿದಾಗ ಇದರ ಬಗ್ಗೆ ಅವರಿಗೆ ಹೇಳಿಕೊಡಲು ಇಲ್ಲಿ ಅನುಭವಿಗಳು ಯಾರೂ ಇರಲಿಲ್ಲ. ಹಾಗಾಗಿ, ಆರಂಭಕ್ಕೂ ಮುನ್ನ ಮುತ್ತು ಕೃಷಿಗೆ ಸಂಬಂಧಿಸಿದ ವಿಡಿಯೊ ನೋಡಿ ಸ್ವಲ್ಪಮಟ್ಟಿಗೆ ತಿಳಿದುಕೊಂಡರು. ಇಲ್ಲೂ ಮುತ್ತು ಕೃಷಿ ಮಾಡಬಹುದು ಅಂತ ಅನ್ನಿಸಿದ ತಕ್ಷಣವೇ ಪಶ್ಚಿಮ ಬಂಗಾಳದ ಕಂಪನಿಯೊಂದನ್ನು ಸಂಪರ್ಕಿಸಿದರು. ಮಾತುಕತೆ ಫಲಪ್ರದವಾಯಿತು. 'ನೀವು ಮುತ್ತು ಕೃಷಿ ಮಾಡಿ; ಅವುಗಳನ್ನು ನಾವು ಖರೀದಿಸುತ್ತೇವೆ' ಎಂಬ ಕಂಪನಿಯವರ ಭರವಸೆಯ ಮಾತುಗಳನ್ನು ನಂಬಿ ಮುತ್ತು ಕೃಷಿ ಆರಂಭಿಸಿಯೇ ಬಿಟ್ಟರು.

2021ರಲ್ಲಿ ಮೊದಲ ಪ್ರಯತ್ನವಾಗಿ ತಲಾ ₹2 ಲಕ್ಷದಂತೆ ₹6 ಲಕ್ಷ ಹೂಡಿಕೆ ಮಾಡಿ, 18 ಸಾವಿರ ಕಪ್ಪೆಚಿಪ್ಪು ತರಿಸಿದರು. ಕಂಪನಿಯವರೇ ಬಂದು ಸರ್ಜರಿ ಮಾಡಿ, ಅವುಗಳ ನಿರ್ವಹಣೆಯ ವಿಧಾನವನ್ನೂ ಹೇಳಿಕೊಟ್ಟು ಹೋದರು. ಒಂದು ವರ್ಷ ಆಯಿತು. ಅದರ ಮೇಲೆ ಇನ್ನೂ ಆರು ತಿಂಗಳು ಕಳೆಯಿತು. ಅಕ್ಕಪಕ್ಕದ ಜನರು ಬಂದು, 'ಏನ್ರೋ ಹುಡುಗ್ರಾ, ₹6 ಲಕ್ಷ ನೀರಿಗೆ ಹಾಕ್ಬಿಟ್ರಲ್ಲಾ' ಅಂತ ಹೇಳಿ ನಕ್ಕರು. 'ನೀರಿನ್ಯಾಗ್ ರೊಕ್ಕ ಹಾಕಿದ್ರೆ ಹೆಂಗ್ ವಾಪಸ್ ಬರ್‌ತೈತಿ' ಅಂತ ಅಣಕಿಸಿದರು. ಎರಡು ವರ್ಷ ಕಳೆದ ಮೇಲೆ ಅವರಿಗೆ ₹15 ಲಕ್ಷ ಹಣ ಬಂತು. ಈ ಸುದ್ದಿ ಕೇಳಿ ಕುಹುಕವಾಡಿದವರು ದಂಗಾದರು. ಆಮೇಲೆ, ಹೆಚ್ಚಿನವರಿಗೆ ಮುತ್ತು ಕೃಷಿ ಮೇಲೆ ನಂಬಿಕೆ ಬಂತು. ಎರಡನೇ ಸುಗ್ಗಿಯಲ್ಲೂ ₹35 ಲಕ್ಷ ಹೂಡಿಕೆ ಮಾಡಿ ₹70 ಲಕ್ಷ ಗಳಿಸಿದರು. ಈಗ ಇವರ ಜತೆಗೆ ಇನ್ನೂ 23 ಮಂದಿ ಸೇರಿಕೊಂಡಿದ್ದಾರೆ. ಈ ವರ್ಷ ₹75 ಲಕ್ಷ ಮೌಲ್ಯದ 1.30 ಲಕ್ಷ ಕಪ್ಪೆಚಿಪ್ಪು ಹಾಕಿದ್ದು, ₹1.50 ಕೋಟಿ ಹಣದ ನಿರೀಕ್ಷೆಯಲ್ಲಿದ್ದಾರೆ.

ಮುತ್ತು ಕೃಷಿಯಲ್ಲಿ ಕಪ್ಪೆಚಿಪ್ಪುಗಳಿಗೆ ಸರ್ಜರಿ ಮಾಡುವುದು ಮುಖ್ಯ ಪ್ರಕ್ರಿಯೆ. ಸರ್ಜರಿ ಮಾಡಿ, ಉಪಚರಿಸಿದ ನಂತರ ಬೇಕಾದ ಆಕಾರದಲ್ಲಿ ಮುತ್ತು ಬೆಳೆಯುವಂತೆ ಮಾಡಬಹುದು. ಕಪ್ಪೆಚಿಪ್ಪಿನೊಳಗೆ ಸರ್ಜರಿ ಮೂಲಕ ಬಿತ್ತಿದ ಆ ಚಿಕ್ಕ ವಸ್ತುವೇ ಶಿವ, ಪಾರ್ವತಿ, ಗಣೇಶನ ಆಕೃತಿಗಳು, ಅಕ್ಷರ-ಸಂಖ್ಯೆಗಳ ವಿನ್ಯಾಸಗಳು ಮುತ್ತಾಗಿ ಬೆಳೆಯುತ್ತವೆ. ಕಂಪನಿಯವರು ಖರೀದಿಸಿದ ಬಳಿಕ ಕುಶಲಿಗಳಿಗೆ ಕೊಟ್ಟು, ಅದನ್ನು ಮತ್ತಷ್ಟು ನಾಜೂಕುಗೊಳಿಸಿ ಹೆಚ್ಚಿನ ಬೆಲೆಗೆ ಮಾರುತ್ತಾರೆ.

ವೀರ್ ಮತ್ತು ಅವರ ಗೆಳೆಯರು ಕಂಪನಿಯ ಮಾರ್ಗದರ್ಶನದಂತೆ ಮುತ್ತು ಕೃಷಿ ಮಾಡಲು ಕ್ವಾರಿಯ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ 10 ಮಿಲಿಮೀಟರ್ ದಾರ ಕಟ್ಟಿದ್ದಾರೆ. ಬಳಿಕ ಆ ದಾರಕ್ಕೆ ಮತ್ತೆ 2 ಮಿಲಿಮೀಟರ್ ದಾರ ಹಾಕಿ, 20 ಕಪ್ಪೆಚಿಪ್ಪುಗಳನ್ನು ಕಟ್ಟಿ ಎಳೆಗಳ ರೀತಿಯಲ್ಲಿ ಜೋತು ಬಿಟ್ಟಿದ್ದಾರೆ. ಈ ದಾರಗಳು ನೀರಿನ ಮೇಲಿನಿಂದ ನಾಲ್ಕೈದು ಅಡಿ ಆಳದವರೆಗೆ ನೇತಾಡುತ್ತಿರುತ್ತವೆ. ಜಾಸ್ತಿ ಆಳಕ್ಕೆ ಹೋದಂತೆ ಆಮ್ಲಜನಕ ಪೂರೈಕೆ ಆಗುವುದಿಲ್ಲ. ಹಾಗಾಗಿ, ಕಪ್ಪೆಚಿಪ್ಪುಗಳು ತೇಲುವಂತೆ ಮಾಡಲು ದಾರಕ್ಕೆ ಪ್ಲಾಸ್ಟಿಕ್ ಬಾಟಲಿಗಳನ್ನು ಕಟ್ಟಿದ್ದಾರೆ. ಆಭರಣ ತಯಾರಿಕೆಗೆ ಹೆಚ್ಚು ಬಳಕೆಯಾಗುವ ಡಿಸೈನರ್ ಮುತ್ತುಗಳನ್ನು ಇವರು ಬೆಳೆಸುತ್ತಿದ್ದಾರೆ.

11ನೇ ಪುಟಕ್ಕೆ...

ಗದಗಿನ ಮೂವರು ಉತ್ಸಾಹಿ ಯುವಕರು ಮುತ್ತು ಕೃಷಿ ಕೈಗೊಂಡು ಯಶಸ್ಸು ಕಂಡಿದ್ದಾರೆ. ಈಗಾಗಲೇ ಉತ್ತಮ ಲಾಭಗಳಿಸಿರುವ ಇವರೊಂದಿಗೆ ಇಪ್ಪತ್ತೈದು ಮಂದಿ ಹೊಸದಾಗಿ ಸೇರಿಕೊಂಡಿದ್ದಾರೆ. ಇವರಿಂದಾಗಿ ಈ ಕೃಷಿಯತ್ತ ಆಸಕ್ತರು ಮುಖ ಮಾಡುತ್ತಿದ್ದಾರೆ.

ಕಪ್ಪೆ ಚಿಪ್ಪಿನೊಂದಿಗೆ ಕೃಷ್ಣ ಜಾಲಮ್ಮನವರ, ಪ್ರಿನ್ಸ್ ವೀರ್ ಮತ್ತು ವೀರೇಶ್ ಹಿರೇಮಠ

ಬೋನ್ಸಾಯ್ ಕಲೆಯತ್ತ ಒಲವು

ಪ್ರದರ್ಶನದಲ್ಲಿದ್ದ ಬೋನ್ಸಾಯ್ ಮರಗಳು

ಚಿತ್ರಕೃಪೆ: ವೃಕ್ಷ ಬೋನ್ಸಾಯ್

• ಸ್ವೀಕೃತಿ ಕೆ.

ಗೋಪಿನಾಥ್ ಮಲ್ಯ ಅವರ ಮಂಗಳೂರಿನ ಗಾರ್ಡನ್‌ನಲ್ಲಿ 1.5 ಇಂಚು ಎತ್ತರದ ಕುಂಡಗಳಲ್ಲಿ ವೈವಿಧ್ಯಮಯ ಬೋನ್ಸಾಯ್ ಮರಗಳು ಮೈದಳೆದಿವೆ. ಇವುಗಳಲ್ಲಿ ಹೆಚ್ಚಿನವು ಮೂರು ಅಥವಾ ನಾಲ್ಕು ದಶಕಗಳಷ್ಟು ಹಳೆಯವು. 'ಐವತ್ತು ವರ್ಷಗಳ ಹಿಂದೆ ಈ ಹವ್ಯಾಸ ತಂದೆಯಿಂದ ನನ್ನಲ್ಲಿ ಬೆಳೆಯಿತು. ಅವರಿಗೆ ಗಾರ್ಡನ್ ಮಾಡುವುದರಲ್ಲಿ ಹೆಚ್ಚಿನ ಆಸಕ್ತಿ ಇತ್ತು. ಅವರ ಸ್ನೇಹಿತರೊಬ್ಬರು ವಿದೇಶದಿಂದ ಬೋನ್ಸಾಯ್ ಪದ್ಧತಿ ಕುರಿತ ಪುಸ್ತಕವನ್ನು ತಂದು ಕೊಟ್ಟಿದ್ದರು' ಎಂದು ಮಲ್ಯ ನೆನಪಿಸಿಕೊಂಡರು.

ಮಲ್ಯ ಅವರು ಐದು ದಶಕಗಳಲ್ಲಿ ಸಾವಿರ ಬೋನ್ಸಾಯ್ ಮರಗಳನ್ನು ಬೆಳೆಸಿದ್ದಾರೆ. ಅವರ ಉದ್ಯಾನದಲ್ಲಿ ಫೈಕಸ್, ಬೋಗನ್‌ವಿಲ್ಲಾ, ಬೀಚ್‌ವುಡ್ (ಜಮೆಲಿನಾ ಅರ್ಬೋರಿಯಾ) ಕಾಶ್ಯುರೀನಾ, ಬಾರ್ಬಡೋಸ್ ಚೆರ್ರಿ ಸೇರಿ ಹಲವು ವೈವಿಧ್ಯಮಯ ಮರಗಳು ಬೆಳೆದಿವೆ. ಜನಪ್ರಿಯ ಊಹೆಗೆ ವಿರುದ್ಧವಾಗಿ ಅನೇಕ ಮರಗಳು ಹಣ್ಣುಗಳನ್ನೂ ಕೊಡುತ್ತಿವೆ.

'ನಮ್ಮಲ್ಲಿ ಹಣ್ಣು ಬಿಡುವ ಹಲವು ಮಾವಿನಮರಗಳಿವೆ. ಹಲವು ಮರಗಳಲ್ಲಿ ಹೂವುಗಳು ಅರಳುತ್ತವೆ' ಎನ್ನುತ್ತಾರೆ ಮಲ್ಯ.

ಕೆಲವರಿಗೆ ಈ ಹವ್ಯಾಸವು ನಂತರ ವೃತ್ತಿಯಾಗುತ್ತದೆ. 1998ರಲ್ಲಿ ನಡೆದ ಪ್ರದರ್ಶನವೊಂದರಲ್ಲಿ ಅನುಪಮಾ ವೇದಾಚಲ ಅವರು ಮೊದಲಿಗೆ ಈ ಕಲೆಗೆ ಮುಖಾಮುಖಿಯಾದರು. ಪ್ರಸ್ತುತ ಅವರು ಭಾರತದಾದ್ಯಂತ ಪ್ರಯಾಣಿಸಿ ಬೋನ್ಸಾಯ್ ಕುರಿತು ಕಾರ್ಯಾಗಾರ ಮತ್ತು ತರಬೇತಿಯನ್ನು ನೀಡುತ್ತಾರೆ.

'ಬೋನ್ಸಾಯ್ ಪದ್ಧತಿಯು ಕಲೆ, ತೋಟಗಾರಿಕೆ ಮತ್ತು ವಿಜ್ಞಾನದ ಸಮ್ಮಿಶ್ರಣ. ಒಮ್ಮೆ ಕಲಿಕೆ ಆರಂಭಿಸಿದರೆ, ನಿಲ್ಲಿಸುವ ಮನಸ್ಸೇ ಆಗದು. ಕಲಿಯುವ ಹಂಬಲ ಹೆಚ್ಚುತ್ತಲೇ ಇರುತ್ತದೆ' ಎನ್ನುತ್ತಾರೆ ಅನುಪಮಾ. ಈಗ ವೃತ್ತಿಪರ ಬೋನ್ಸಾಯ್ ಕಲಾವಿದೆಯಾಗಿರುವ ಅನುಪಮಾ, ಸುಮಾರು ಐದು ಸಾವಿರ ಮರಗಳನ್ನು ಬೆಳೆಸಿದ್ದಾರೆ.

ಸಮುದಾಯ ಕಲಿಕೆ

ಅನೇಕರಂತೆ ಅನುಪಮಾ ಅವರೂ ಸಮುದಾಯ ಕಲಿಕೆಯಿಂದಲೇ ಈ ಹವ್ಯಾಸ ಬೆಳೆಸಿಕೊಂಡರು. ಬೋನ್ಸಾಯ್ ಮರಗಳ ಪ್ರದರ್ಶನದಲ್ಲಿ 'ವೃಕ್ಷ ಬೋನ್ಸಾಯ್ ಸರ್ಕಲ್' ಎಂಬ ಕೂಟದೊಂದಿಗೆ ಸಂಪರ್ಕ ಸಾಧಿಸಿದರು. ಇದು 1990ರಲ್ಲಿ ಸ್ಥಾಪನೆಯಾದ ಬೆಂಗಳೂರು ಮೂಲದ ಕೂಟವಾಗಿದ್ದು, ನಿವೃತ್ತರು, ಎಂಜಿನಿಯರ್‌ಗಳು, ವೈದ್ಯರು, ಗಾಲ್ಫ್ ಆಟಗಾರರು ಸೇರಿ ಐವತ್ತು ಮಂದಿ ಸದಸ್ಯರನ್ನು ಒಳಗೊಂಡಿದೆ.

'ಮೊದಲು ಗೃಹಿಣಿಯರು ಮಾತ್ರ ಕೂಟದಲ್ಲಿ ಇದ್ದರು. ಈಗ, ವೃತ್ತಿಪರರು, ನಿವೃತ್ತರೂ ಕೂಟದ ಭಾಗವಾಗಿದ್ದಾರೆ. ಇತ್ತೀಚೆಗೆ ಯುವ ಜನರು ಆನ್‌ಲೈನ್ ಮೂಲಕ ಕೂಟದ ಬಗ್ಗೆ ಮಾಹಿತಿ ತಿಳಿದು ಬೋನ್ಸಾಯ್ ಕಲೆ ಕುರಿತ ಆಸಕ್ತಿ ವ್ಯಕ್ತಪಡಿಸುತ್ತಿದ್ದಾರೆ' ಎನ್ನುತ್ತಾರೆ ಅನುಪಮಾ.

'ತಿಂಗಳಿಗೆ ಒಮ್ಮೆ ಭೇಟಿಯಾಗಿ, ವರ್ಷಕ್ಕೆ ಎರಡು ಬಾರಿ ಪ್ರದರ್ಶನ ಆಯೋಜಿಸುತ್ತೇವೆ. ಜಪಾನ್ ಮತ್ತು ಇಂಡೊನೇಷ್ಯಾದಲ್ಲಿ ಜರುಗುವ ಶೃಂಗಗಳಲ್ಲೂ ಭಾಗಿಯಾಗುತ್ತೇವೆ' ಎನ್ನುತ್ತಾರೆ 'ವೃಕ್ಷ'ದ ಅಧ್ಯಕ್ಷೆ ಉಮಾ ಎಸ್.

'ಈ ಕಲೆಯು ಒತ್ತಡ ನಿವಾರಣೆಗೆ ಅತ್ಯುತ್ತಮ ಮಾರ್ಗ. ಬೋನ್ಸಾಯ್ ಪದ್ಧತಿಯಲ್ಲಿ ಕುಂಡಗಳಲ್ಲಿ ಮರಗಳನ್ನು ಬೆಳೆಸುವುದು ಹೆಚ್ಚು ವಿಶೇಷ ಎನಿಸುತ್ತದೆ' ಎಂಬುದು ಉಮಾ ಅವರ ಮಾತು.

'ನಾನು ಅಪಾರ್ಟ್‌ಮೆಂಟ್ ವಾಸಿ. ಇಲ್ಲಿನ ಪಾರ್ಕಿಂಗ್ ಪ್ರದೇಶದ ಬಳಿ ಕಿರಿದಾದ ಜಾಗ ಇದೆ. ಅಲ್ಲಿ ನೆಲದ ಮೇಲೆ ಯಾವ ಗಿಡಗಳನ್ನು ನೆಡುವುದೂ ಅಸಾಧ್ಯ. ಹಾಗಿದ್ದರೂ ಮೂರು ಹಂತದ ಗ್ಯಾಲರಿ ಮಾಡಿಸಿ ಐವತ್ತು ಬೋನ್ಸಾಯ್ ಮರಗಳನ್ನು ಇಡಲು ಸಾಧ್ಯವಾಗಿದೆ' ಎಂದು ಉಮಾ ಹೇಳುತ್ತಾರೆ.

ಹೋಂ ಗಾರ್ಡನ್‌ಗಳ ಹೊರತಾಗಿ, ಲಾಲ್‌ಬಾಗ್ ಬೊಟಾನಿಕಲ್ ಗಾರ್ಡನ್ ಮತ್ತು ರಾಕ್ ಗಾರ್ಡನ್‌ಗಳು ಬೋನ್ಸಾಯ್ ಪ್ರಿಯರನ್ನು ಆಕರ್ಷಿಸುತ್ತಿವೆ. ಹೊಸ ವಿನ್ಯಾಸ ಮತ್ತು ವಿನೂತನ ತಳಿಯ ವೈವಿಧ್ಯಮಯ ಮರಗಳು ಹೆಚ್ಚಿನ ಜನರನ್ನು ಸೆಳೆಯುತ್ತವೆ ಮತ್ತು ಅವರಲ್ಲಿ ಬೋನ್ಸಾಯ್ ಬಗ್ಗೆ ಆಸಕ್ತಿಯನ್ನು ಹುಟ್ಟುಹಾಕುತ್ತವೆ. ಎರಡನೇ ಹಂತ ತಳಿ ಅಭಿವೃದ್ಧಿ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಭೇಟಿ ನೀಡಲು ಇಚ್ಛಿಸುವವರು ಹೊಸ ತಳಿಗಳು ಮತ್ತು ವಿನ್ಯಾಸಗಳ ಬೋನ್ಸಾಯ್ ಮರಗಳನ್ನು ನಿರೀಕ್ಷಿಸಬಹುದು.

11ನೇ ಪುಟಕ್ಕೆ...

45 ವರ್ಷದ ಆಲದ ಮರ
ಚಿತ್ರ ಕೃಪೆ: ಗೋಪಿನಾಥ್ ಮಲ್ಯ

ಊರು ಸೇರಿದ ಕರಡಿ ಪ್ರಸಂಗ...

• ಸ್ವರೂಪ್ ಕೊಟ್ಟೂರು

ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ಚಂದ್ರಶೇಖರಪುರದ ಮಾಳಗೇರ ಶಿವಕುಮಾರ್ ತಮ್ಮ ಕುರಿಹಟ್ಟಿಯಲ್ಲಿ ನಿದ್ದೆಯಲ್ಲಿದ್ದರು. ಅದೇ ವೇಳೆ ಹಟ್ಟಿಯ ಜಾನುವಾರುಗಳು ಬೆದರಿದ್ದಲ್ಲದೆ ವಿಚಿತ್ರ ಸದ್ದು ಮಾಡುತ್ತಿದ್ದವು. ನಾಯಿಗಳು ಬೊಗಳಲು ಆರಂಭಿಸಿದವು. ಶಿವಕುಮಾರ್ ಗಾಬರಿಯಿಂದ ಎದ್ದು ನೋಡಿದರೆ ಅನತಿ ದೂರದಲ್ಲಿ ದೈತ್ಯ ಕರಡಿ! ದನಕರುಗಳು, ನಾಯಿಗಳಿಂದ ಹೆದರಿದಂತೆ ಕಂಡ ಅದು ಬೇವಿನಮರ ಏರಿತ್ತು. ಈ ಸುದ್ದಿ ಹಬ್ಬಿ ಜನರು ಆ ರಾತ್ರಿಯಲ್ಲೇ ಜಮಾವಣೆಗೊಂಡರು.

ಅರಣ್ಯ ಇಲಾಖೆಗೂ ಸುದ್ದಿ ಮುಟ್ಟಿತು. ಅವರು ಹಾಜರಾದರು. ಪೊಲೀಸರು ಜನರನ್ನು ದೂರ ಸರಿಸುತ್ತಾ ಮರದ ಸುತ್ತಲಿನ ಪ್ರದೇಶವನ್ನು ಕಾರ್ಯಾಚರಣೆಗೆ ಸಿದ್ಧಗೊಳಿಸಿದರು. ವೈಲ್ಡ್ ಲೈಫ್ ಎಸ್.ಒ.ಎಸ್ ತಂಡ ಧಾವಿಸಿತು. ಪಶು ವೈದ್ಯರು ಅರವಳಿಕೆ ನೀಡುವ ಗನ್ ಹಿಡಿದು ಜೆಸಿಬಿಯ ಮುಂದಿನ ಬಕೆಟ್ ಏರಿ ಕುಳಿತರು. ಆಪರೇಟರ್ ಬಕೆಟ್ ಅನ್ನು ಕರಡಿಗೆ ಸಮನಾಂತರವಾಗಿ ಒಯ್ದು ಕೊಂಚ ದೂರ ನಿಲ್ಲಿಸಿದ. ಅರವಳಿಕೆ ಗುರಿಮುಟ್ಟಿತು. ಕರಡಿ ಪ್ರಜ್ಞೆ ತಪ್ಪಿದ ನಂತರ ಮರವೇರಿದ ಒಂದಿಬ್ಬರು ಅದರ ಹೊಟ್ಟೆಗೆ ಹಗ್ಗ ಬಿಗಿದು ನಿಧಾನವಾಗಿ ಬಕೆಟ್‌ಗೆ ಇಳಿಸಿದರು. ಅಲ್ಲಿಂದ ಕರಡಿಯನ್ನು ಬೋನಿಗೆ ವರ್ಗಾಯಿಸಿ,ಅರಣ್ಯ ಇಲಾಖೆ ಕಚೇರಿಗೆ ಒಯ್ದರು. ಮರುಕ್ಷಣ ಜನ ಸಾಗರವೂ ಕರಗಿತು.

ಕರಡಿಗಳಿಗೆ ಅರಣ್ಯವೇ ಆಹಾರ ತಾಣ. ಬಿಟ್ಟರೆ ಹೊಲಗಳು. ಆದರೆ ಒಂದಿಷ್ಟು ಕರಡಿಗಳಿಗೆ ಊರೇ ಆಹಾರದ ಮೂಲವಾಗಿ ಬಿಡುತ್ತದೆ. ಹೊಸಪೇಟೆ, ಸಂಕ್ಲಾಪುರ, ಕಾರಿಗನೂರು ಹೀಗೆ ಜನವಸತಿ ಸ್ಥಳಗಳಲ್ಲಿ ನಾಲ್ಕೈದು ತಿಂಗಳಿಂದ ಒಂದು ಕರಡಿ ಅಲ್ಲಲ್ಲಿ ಕಾಣಿಸಿಕೊಂಡು ಕಣ್ಮರೆ ಆಗುತ್ತಿರುವುದು ಇತ್ತೀಚೆಗಷ್ಟೆ ಕೇಳಿ ಬಂದಿತ್ತು. ಆತಂಕಗೊಂಡ ಜನರೇ ಇದನ್ನು ಸೆರೆಹಿಡಿಯಲು ಅರಣ್ಯ ಇಲಾಖೆಗೆ ದುಂಬಾಲು ಬಿದ್ದಿದ್ದರು. ಆ ಕರಡಿಯ ಸೆರೆ ಹಿಡಿಯುವ ಸತತ ಪ್ರಯತ್ನ ಕೈಗೂಡಿದ್ದು ಒಂದು ರಾತ್ರಿ ಹೊಸಪೇಟೆಯ ಸಂಡೂರು ರಸ್ತೆಯಲ್ಲಿ.

ಕರಡಿಯನ್ನು ಸೆರೆಹಿಡಿದೊಯ್ಯುತ್ತಿರುವುದು

ಊರ ಆಹಾರವೇ ಇಷ್ಟ...

ಕಾಡಿನ ಹಣ್ಣು ಹಂಪಲು, ಜೇನು, ಗೆದ್ದಲು ಹುಳುಗಳು, ಗೊದ್ದಿಗೆ ಇವುಗಳೇ ಕರಡಿಗಳ ಆಹಾರ. ಆಹಾರಕ್ಕೆ ಅಭಾವ ಆದಾಗ ಜಮೀನುಗಳಿಗೆ ಬರುತ್ತವೆ. ಅಲ್ಲದೆ ಗುಡಿ ಗುಂಡಾರಗಳಲ್ಲಿ ಸಿಗುವ ದೀಪದ ಎಣ್ಣೆ, ತೆಂಗಿನಕಾಯಿ, ಇಟ್ಟ ಎಡೆ ತಿನ್ನುತ್ತವೆ. ಮುಸುರೆ ಸಿಕ್ಕರೂ ಕುಡಿಯುತ್ತವೆ. ಒಮ್ಮೆ ಕರಡಿಗಳು ಇಂತಹ ಜಾಗ ನೋಡಿಕೊಂಡರೆ ಪ್ರತಿ ನಿತ್ಯ ಅದೇ ಸಮಯಕ್ಕೆ ಕಾಯಂ ಬರುತ್ತವೆ. ವಿಶೇಷವಾಗಿ ಹೊಸಪೇಟೆ, ಚಂದ್ರಶೇಖರ ಪುರದಲ್ಲಿ ಕಂಡ ಕರಡಿಗಳು ಹೆಚ್ಚಾಗಿ ಇಂತಹ ಆಹಾರಕ್ಕೇ ಒಗ್ಗಿಕೊಂಡಂತೆ ಕಾಣುತ್ತವೆ.

ನಿತ್ಯ ರಾತ್ರಿ ಕನಿಷ್ಠ ಆರೇಳು ಕಿ.ಮೀ ಆಹಾರಕ್ಕಾಗಿ ಸಂಚರಿಸುತ್ತವೆ. ಮಳೆಗಾಲದಲ್ಲಿ ಮಾತ್ರ ಇವುಗಳಿಂದ ಬೆಳೆ ಹಾನಿ, ಮನುಷ್ಯರ ಮೇಲೆ ದಾಳಿಗಳು ಹೆಚ್ಚು. ಹೊಲಗಳಲ್ಲಿ ಶೇಂಗಾ, ಮೆಕ್ಕೆಜೋಳ, ಸಜ್ಜೆ, ದಾಳಿಂಬೆ ಹೀಗೆ ಸಾಂಪ್ರದಾಯಿಕ ಬೆಳೆಗಳ ಸುಗ್ಗಿ. ಇಳಿಸಂಜೆ ಆಗುತ್ತಿದ್ದಂತೆ ಕಾಡಿನ ಅಂಚಿಗೆ ಬಂದು ಕತ್ತಲಾಗುತ್ತಿದ್ದಂತೆ ಹೊಲಗಳಿಗೆ ದಾಳಿ ಇಡುತ್ತವೆ. ರೈತರು ಓಡಿಸಿದರೆ, ಆಹಾರ ಸಿಗದಿದ್ದರೆ ಬೇರೆ ಹೊಲಗಳಿಗೆ ಹೋಗುತ್ತವೆ. ಆಹಾರ ಅರಸುತ್ತಾ ಬಹು ದೂರ ಹೋಗಿ ವಾಪಸ್ ವಾಸಸ್ಥಾನಕ್ಕೆ ಬರುವಷ್ಟರಲ್ಲಿ ಒಮ್ಮೊಮ್ಮೆ ದಾರಿ ಮಧ್ಯದಲ್ಲಿ ಬೆಳಕು ಹರಿದು ಬಿಟ್ಟರೆ, ಮಳೆ ಮೋಡ ಕವಿದ ಕಾರಣಕ್ಕೆ ಬೆಳಕು ಹರಿಯುವ ಸಮಯವನ್ನು ಊಹಿಸದೇ ನಡುದಾರಿಯಲ್ಲಿ ಸಿಕ್ಕಿ ಹಾಕಿಕೊಂಡರೆ, ಪರಿಸರಕ್ಕೆ ಹೊಸತಾದ ಕರಡಿಗಳು ತನ್ನ ನೆಲೆ ಪತ್ತೆ ಹಚ್ಚಲು ಆಗದೇ ದಿಕ್ಕೆಟ್ಟು ಅಲೆಯುವಾಗ ತಾವಿದ್ದಲ್ಲೇ ಸಿಗುವ ಪೊದೆ, ಬೆಳೆಗಳ ಮಧ್ಯೆ ಅವಿತುಕೊಳ್ಳುತ್ತವೆ. ಆಗ ಕೃಷಿಕರು ಇವುಗಳ ಇರುವಿಕೆಯ ಗುರುತಿಸದೇ ಅವುಗಳ ಸುತ್ತಮುತ್ತ ಸುಳಿದಾಗ ಜೀವ ಭಯದಿಂದ ಆಕ್ರಮಣ ಮಾಡುತ್ತವೆ.

12ನೇ ಪುಟಕ್ಕೆ...

ಜನ ಜಾಣರಾಗುತ್ತಿದ್ದಾರೆ..

ಏಷ್ಯಾದಲ್ಲಿಯೇ ಕರಡಿಧಾಮಗಳಿರುವುದು ಅಖಂಡ ಬಳ್ಳಾರಿ ಜಿಲ್ಲೆಯಲ್ಲಿ ಮಾತ್ರ. ಒಂದು ದರೋಜಿ (8272.80 ಹೆಕ್ಟರ್) ಮತ್ತೊಂದು ಗುಡೇಕೋಟೆ (916759.79) ಯಲ್ಲಿ. ಮೊದಲೆಲ್ಲ ಇವುಗಳಿಗೆ ವಿಷ ಉಣಿಸುವ, ಅಟ್ಟಾಡಿಸಿಕೊಂಡು ಹೋಗುವ, ಕಲ್ಲುಗಳಿಂದ ಹೊಡೆಯುವ, ಸಿಟ್ಟಿಗೇಳಿಸುವ ಇಂತಹ ಅಮಾನವೀಯ ಘಟನೆಗಳು ಸಿಕ್ಕಾಪಟ್ಟೆ ಜರುಗುತ್ತಿದ್ದವು. ಈಗ ಇದಕ್ಕೆಲ್ಲ ತಡೆ ಬಿದ್ದಿದೆ. ಅರಣ್ಯದಂಚಿನ ಕೃಷಿಕರು ಕರಡಿ ತಿನ್ನದ ಔಡಲ, ಎಳ್ಳು, ಹತ್ತಿ ಬೆಳೆಯುವ ಜಾಣ್ಮೆ ತೋರುತ್ತಿದ್ದಾರೆ. ಕರಡಿ ಭಾದಿತ ಬೆಳೆಗಳ ರೈತರು ರಾತ್ರಿ ಬೆಂಕಿ ಹಾಕಿಕೊಂಡು, ಗದ್ದಲ ಮಾಡುತ್ತಾ, ಪಟಾಕಿ ಸಿಡಿಸುತ್ತಾ ಬೆಳೆ ಸಂರಕ್ಷಿಸಿಕೊಳ್ಳುತ್ತಾರೆ. ಕರಡಿ ಕಂಡರೆ ದೂರ ಹೋಗುತ್ತಾರೆ. ಅರಣ್ಯ ಇಲಾಖೆಗೆ ಸುದ್ದಿ ಮುಟ್ಟಿಸುತ್ತಾರೆ. ಸೆರೆ ಹಿಡಿಯಲು ಸಹಕರಿಸುತ್ತಾರೆ. ಅರಣ್ಯ ಇಲಾಖೆ ಕರಡಿಗಳ ಜೀವನ ಕ್ರಮದ ಬಗ್ಗೆ, ಅವುಗಳು ದಾಳಿ ಮಾಡಲು ಕಾರಣವಾಗುವ ಸಂದರ್ಭ, ಅಂಶಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುತ್ತಿದೆ. ಬಿಗಿ ಕಾನೂನಿನ ಭಯವೂ ಜನರಲ್ಲಿದೆ. ಹಾಗೆ ಸರ್ಕಾರ ಬೆಳೆ, ಪ್ರಾಣ ಹಾನಿಗೆ ಪರಿಹಾರದ ಮೊತ್ತವನ್ನು ಹೆಚ್ಚಿಸಿದ್ದಲ್ಲದೇ ಅರಣ್ಯದಲ್ಲಿ ನೀರಿನ ಮೂಲಗಳ ಸಂರಕ್ಷಣೆ, ಸೃಷ್ಟಿ ಮಾಡುತ್ತಿದೆ. ಹಣ್ಣಿನ ಗಿಡಗಳನ್ನು ನಾಟಿ ಮಾಡುತ್ತಿದೆ.

ಮರದ ಮೇಲಿರುವ ಕರಡಿಯನ್ನು ಹಿಡಿಯಲು ಕಸರತ್ತು...



ಮಕ್ಕಳ ಸಾಹಿತ್ಯ ಲೋಕದ 'ಆನಂದ'

ಆನಂದ ಪಾಟೀಲ

70ರ ದಶಕದ ಬಳಿಕ ಎಚ್.ಎಸ್. ವೆಂಕಟೇಶಮೂರ್ತಿ, ನಾ ಡಿಸೋಜ, ಆರ್.ವಿ. ಭಂಡಾರಿ ಸೇರಿದಂತೆ ಕೆಲವರು ಕನ್ನಡದಲ್ಲಿ ಮಕ್ಕಳ ಸಾಹಿತ್ಯಕ್ಕೆ ಹೊಸ ದಿಕ್ಕು ನೀಡಿದರು. ಅದೇ ಸಾಲಿಗೆ ಧಾರವಾಡದ ಆನಂದ ಪಾಟೀಲ ಕೂಡ ಸೇರುತ್ತಾರೆ. ಇವರ ಕೃತಿಗಳಿಗೆ ಸಾಕಷ್ಟು ಪ್ರಶಸ್ತಿಗಳೂ ಲಭಿಸಿವೆ.

• ತಮ್ಮಣ್ಣ ಬೀಗಾರ

ಮಕ್ಕಳ ಭಾವಲೋಕ ಪ್ರವೇಶಿಸಿದರೆ... ಒಂದು ರೀತಿಯ ಅನಿರ್ವಾಚನೀಯ ಆನಂದದ ಅನುಭವ ನಮ್ಮದಾಗುತ್ತದೆ. ಅಲ್ಲಿನ ಮುಗ್ಧ ಭಾವ ಚೈತನ್ಯ, ಕುತೂಹಲ, ಪ್ರೀತಿ ಎಲ್ಲವೂ ನಾವು ಬೇಡುವವೇ ಆಗಿದೆ. 'ಮಕ್ಕಳ ಸಂಗದೊಳೆಚ್ಚರಗೊಳ್ಳಲಿ ಆನಂದದ ಆ ದಿವ್ಯಶಿಶು/ ಹಾಡಲಿ ಕುಣಿಯಲಿ ಹಾರಲಿ ಏರಲಿ ದಿವಿಜತ್ವಕ್ಕೆ ಈ ಮನುಜ ಪಶು' ಎಂಬುದು ಕುವೆಂಪು ಅವರ ಪದ್ಯದ ಸಾಲುಗಳು. ಇಂತಹ ದಿವ್ಯ ಶಿಶುವನ್ನು ಸದಾ ಎಚ್ಚರವಾಗಿಟ್ಟುಕೊಂಡವರು ಧಾರವಾಡದ ಆನಂದ ಪಾಟೀಲರು. ಸದಾ ಮಕ್ಕಳ ಕಣ್ಣೋಟದಲ್ಲಿ ಸೃಜನಾತ್ಮಕ ಕೃತಿಗಳನ್ನು ರಚಿಸುತ್ತ ಜೊತೆ ಜೊತೆಗೇ ಉಪನ್ಯಾಸ, ಚರ್ಚೆ, ಮಾರ್ಗದರ್ಶನ, ವಿಮರ್ಶೆ, ಪತ್ರಿಕೆ- ಹೀಗೆ ನಿರಂತರವಾಗಿ ತಮ್ಮ ಅಭಿಪ್ರಾಯಗಳ ಮೂಲಕವೇ ಕನ್ನಡ ಮಕ್ಕಳ ಸಾಹಿತ್ಯಕ್ಕೆ ಹೊಸ ಅರಿವನ್ನೂ, ಹರಿವನ್ನೂ ಹರಿಸಲು ಪ್ರಯತ್ನಿಸುತ್ತಾ ಕನ್ನಡದ ಮಕ್ಕಳ 'ಆನಂದ' ಆಗಿದ್ದಾರೆ.

ಪಾಟೀಲರದು ವಿಶ್ವದೆಲ್ಲಡೆಯ ಮಕ್ಕಳ ಸಾಹಿತ್ಯ ಕುರಿತು ಸದಾ ಕುತೂಹಲದ ನೋಟ. ಆಕಾಶವಾಣಿಯಲ್ಲಿ ದೀರ್ಘಕಾಲ ಕೆಲಸ ಮಾಡಿ ನಿಲಯದ ನಿರ್ದೇಶಕರಾಗಿ ನಿವೃತ್ತರಾದವರು. ಅದನ್ನೇ ಅವರು ಹೇಳುತ್ತಿರುತ್ತಾರೆ... 'ನಾನೇನು ಶಿಕ್ಷಕನಾಗಿ ಮಕ್ಕಳ ಸಂಗಡ ಇರುವವನಲ್ಲ. ಆದರೆ ಅದ್ಯಾವುದೋ ಒಳಗಿನ ಸೆಳೆತ ಹಾಗೂ ತುಡಿತದಿಂದಲೇ ಮಕ್ಕಳ ಸಾಹಿತ್ಯದಲ್ಲಿ ತೊಡಗಿಕೊಂಡಿರುವುದು' ಎಂದು.

ಮಕ್ಕಳಿಗೆ ಇದನ್ನೇ ಇಷ್ಟನ್ನೇ ಹೇಳಬೇಕು, ಬೋಧಕವಾಗಿರಬೇಕು, ಪದ್ಯಗಳಲ್ಲಿ ಪ್ರಾಸಗಳಿರಬೇಕು ಮುಂತಾದ ಚೌಕಟ್ಟಿನಿಂದ ಕಲಾತ್ಮಕತೆ ಪಡೆಯುವಲ್ಲಿ ಹಿಂದಾಗಿ ಕನ್ನಡದ ಮಕ್ಕಳ ಸಾಹಿತ್ಯ ನಿಂತ ನೀರಾಗಿತ್ತು. ಸುಮಾರು 70ರ ದಶಕದ ನಂತರ ಎಚ್.ಎಸ್. ವೆಂಕಟೇಶಮೂರ್ತಿ, ನಾ ಡಿಸೋಜ, ಆರ್.ವಿ. ಭಂಡಾರಿ ಸೇರಿದಂತೆ ಅನೇಕರು ಈ ಚೌಕಟ್ಟಿನಿಂದ ಹೊರಬಂದು ಹೊಸರೀತಿಯಲ್ಲಿ ಬರೆದು ಮಕ್ಕಳ ಸಾಹಿತ್ಯಕ್ಕೆ ಹೊಸದನ್ನು ತೆರೆದರು. ಭಾಷಾಶೈಲಿ ರಚನಾ ಕ್ರಮ ವಸ್ತು ವಿನ್ಯಾಸಗಳ ಬದಲಾವಣೆಯ ಮೂಲಕ ಪ್ರಯೋಗಕ್ಕಿಳಿದರು. ಈ ಹೊಸತು ತಂದ ಪ್ರಮುಖರಲ್ಲಿ ಆನಂದರೂ ಒಬ್ಬರು.

ಧಾರವಾಡ ಸೀಮೆಯ ಭಾಷೆಯಲ್ಲಿ ಬಹುತೇಕ ಮಕ್ಕಳ ಸಾಹಿತ್ಯ ರಚಿಸುತ್ತಾ ಬಂದಿದ್ದಾರೆ. ಆ ಮೂಲಕ ಪ್ರಾದೇಶಿಕ ಮಣ್ಣಿನ ಸೊಗಡು ಮಕ್ಕಳ ಸಾಹಿತ್ಯದಲ್ಲಿ ಕಾಣಿಸಿಕೊಂಡಿತು. ಈಗ ಅದು ವಿಸ್ತಾರವಾಗಿದೆ. 'ಮಲ್ಲಿಗಿ ಹೂ ಬಿದ್ದಾವ/ ಮಾಟನ ಹೆಜ್ಜಿ ಮೂಡ್ಯಾವ' ಎನ್ನುತ್ತಾ ಪುಟ್ಟ ಮಕ್ಕಳ ಕಣ್ಣೋಟದ ಹೆಜ್ಜೆಯನ್ನು ಸಾಕಷ್ಟು ಮೂಡಿಸುತ್ತಿರುವ ಪಾಟೀಲರು ಕಥೆ, ಪ್ರಬಂಧ ಮಾದರಿ, ಕಾದಂಬರಿ, ನಾಟಕ, ಕವನ, ಕಥನ ಕವನ ಇನ್ನೂ ಅನೇಕ ರೀತಿಯ ಪ್ರಯೋಗಗಳು ಅವರ ಸೃಜನಶೀಲ ಕೃತಿಗಳಲ್ಲಿ ದೊರೆಯುತ್ತವೆ. ಪಾಟೀಲರು ಚಿತ್ರಕಲಾವಿದರೂ ಆಗಿದ್ದು ತನ್ನ ಹಾಗೂ ಅನೇಕರ ಪುಸ್ತಕಗಳಿಗೆ ಅವರು ಚಿತ್ರ ರಚಿಸಿದ್ದಾರೆ.

ಅಭಿನವ ಸಂಸ್ಥೆ ಆನಂದ ಪಾಟೀಲರ ಸಂಪಾದಕತ್ವದಲ್ಲಿ 'ಮೇವುಂಡಿ ಮಲ್ಲಾರಿ ಮಕ್ಕಳ ಕಾದಂಬರಿ ಸುಗ್ಗಿ' ಮಾಲಿಕೆಯಲ್ಲಿ ವಿವಿಧ ಲೇಖಕರಿಂದ ಹತ್ತು ಕಾದಂಬರಿಗಳನ್ನು ಪ್ರಕಟಿಸಿದೆ. ಈ ಮಾಲಿಕೆಯಲ್ಲಿ ಪ್ರಕಟವಾದ ಪಾಟೀಲರ 'ಪುಟ್ಟಾರಿ ಆನೆ ಪುಟ್ ಪುಟ್' 383 ಪುಟಗಳಷ್ಟು ದೀರ್ಘವಾದ ಮಕ್ಕಳ ಕಾದಂಬರಿ. ಇದರಲ್ಲಿ ಒಂದು ಪುಟ್ಟ ಆಟಿಕೆ ಆನೆಯೊಂದಿಗೆ ಮಗುವಿನ ಸಂಬಂಧ, ಸಂಭಾಷಣೆ, ಆಶಯಗಳ ವಿನಿಮಯ ಎಲ್ಲಾ ಬೆರಗನ್ನು ಉಂಟುಮಾಡುತ್ತದೆ. ಹುಡುಕಾಟ, ಕಳೆದುಕೊಂಡ ವೇದನೆ, ಅಗಲುವಿಕೆಯ ಅನಿವಾರ್ಯತೆಗಳೆಲ್ಲ ಓದುತ್ತಾ ನಮಗೆ ದಾಟುತ್ತವೆ. 'ಪುಟ್ಟನ ಹಾವು ಹುತ್ತ ಬಿಟ್ಟು ಹೊರ ಬಂತು' ಕೃತಿಯಲ್ಲಿ ಮಕ್ಕಳ ಹುಡುಗಾಟಿಕೆ ಕಂಡರೆ 'ಮೋಪ್ಯಾನ ಮ್ಯಾಪು ಪರಮಪದ ಸೋಪಾನ ಪಟ' ಕಾದಂಬರಿಯಲ್ಲಿ ಆರ್ಥಿಕ ಬಿಕ್ಕಟ್ಟು ತರುವ ಸವಾಲುಗಳನ್ನು ಮಕ್ಕಳು ಎದುರಿಸುವ ರೀತಿ ಕಾಣಬಹುದು. ಪಾಟೀಲರ 'ಡಂಡಂ ಊರಿಗೆ ಡಿಂಡಿಂ ಗಾಡಿ' ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಬಂದಿದೆ. ಇವರ ಸಮಗ್ರ ಸಾಹಿತ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ 2014ರ ಬಾಲ ಸಾಹಿತ್ಯ ಪುರಸ್ಕಾರ ನೀಡಿದೆ.

ಪಾಟೀಲರು ಮಕ್ಕಳ ಸಾಹಿತ್ಯ ವಿಭಾಗದಲ್ಲಿ ಕನ್ನಡದಲ್ಲಿ ಯಾರೂ ಮಾಡದಷ್ಟು ವಿಮರ್ಶಾ ಸಂಶೋಧನಾ ಬರಹಗಳನ್ನು ಪ್ರಕಟಿಸಿದ್ದಾರೆ. ಅಕಾಡೆಮಿ, ಪುಸ್ತಕ ಪ್ರಾಧಿಕಾರ, ಹಂಪಿಯ ಕನ್ನಡ ವಿಶ್ವವಿದ್ಯಾಲಯ, ಕನ್ನಡ ಸಾಹಿತ್ಯ ಪರಿಷತ್ತುಗಳಿಗೂ ಮಕ್ಕಳ ಸಾಹಿತ್ಯ ಕುರಿತು ಒಳನೋಟದ ವಿಸ್ತಾರವಾದ ಬರೆಹಗಳನ್ನು ಬರೆದುಕೊಟ್ಟಿದ್ದಾರೆ. ಅಲರು, ಮುಗುಳು, ಪಾಶ್ಚಾತ್ಯ ಮಕ್ಕಳ ಸಾಹಿತ್ಯ ನನ್ನ ಓದು, ಮಕ್ಕಳ ಸಾಹಿತ್ಯ ಮತ್ತೆ ಮತ್ತೆ ಅನುಸಂಧಾನ ಮುಂತಾದವೆಲ್ಲ ವಿಮರ್ಶಾ ಗ್ರಂಥಗಳು. ಈ ಕೃತಿಗಳಲ್ಲಿ ವಿವಿಧ ಭಾಷೆ ಹಾಗೂ ನೆಲದ ಭಾಷೆಯ ಮಕ್ಕಳ ಸಾಹಿತ್ಯ ಮಾದರಿಗಳ ವಿಶ್ಲೇಷಣೆಗಳಿವೆ. ಪಾಶ್ಚಾತ್ಯ ಲೇಖಕರ ಸಾಹಿತ್ಯ ಪರಿಚಯಿಸಿದ್ದು ಹೊಸ ಪ್ರಯೋಗಗಳಿಗೆ ಒಡ್ಡಿಕೊಳ್ಳುವವರಿಗೆ ವಿದೇಶಿ ದೃಷ್ಟಿಕೋನ ಪರಿಚಯಿಸಿದೆ. ಮಕ್ಕಳ ಸಾಹಿತ್ಯ ಎನ್ನುವ ಕೃತಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ್ದು, ಇದರಲ್ಲಿ ನವೋದಯ ಕಾಲದಿಂದ ಮಕ್ಕಳ ಸಾಹಿತ್ಯ ರಚನೆಯಲ್ಲಾದ ಪಲ್ಲಟಗಳನ್ನು ಪ್ರಮುಖ ಕವಿಗಳ ಕವಿತೆಗಳೊಂದಿಗೆ ವಿಶ್ಲೇಷಿಸಿದ್ದಾರೆ. ಆಕಾಶವಾಣಿಯ ಮೂಲಕವೂ ಮಕ್ಕಳಿಗಾಗಿ ವಿಶಿಷ್ಟ ಕಾರ್ಯಕ್ರಮಗಳ ಕೊಡುಗೆ ನೀಡಿದ್ದಾರೆ. ಸಂಧ್ಯಾ ಗೆಳೆಯಯರ ಬಳಗ ಕಟ್ಟಿ ರವಿ ಹೀರೆಮಠ, ಬಸು ಬೇವಿನಗಿಡದ, ರಾಜಶೇಖರ ಕುಕ್ಕುಂದ ಮುಂತಾದ ಅನೇಕರ ಜೊತೆಗೂಡಿ ಪುತ್ತೂರಿನಿಂದ ಮಹಾರಾಷ್ಟ್ರದ ಅಕ್ಕಲಕೋಟೆಯವರೆಗೂ ರಾಜ್ಯದ ಉದ್ದಗಲಕ್ಕೂ ಸಂಧ್ಯಾ ಕಾವ್ಯೋತ್ಸವ ಇಪ್ಪತ್ತೈದು ವರ್ಷ ಮಾಡಿದ್ದು ಬರೆದರೆ ದೊಡ್ಡ ಪುಸ್ತಕವಾಗುವಷ್ಟು ಸಂಗತಿಗಳಿವೆ.

ಬಹುಮುಖ್ಯವಾಗಿ ಎರಡು ಆನ್‌ಲೈನ್ ತ್ರೈಮಾಸಿಕ ಪತ್ರಿಕೆಗಳನ್ನು ಕನ್ನಡ ಹಾಗೂ ಇಂಗ್ಲಿಷಿನಲ್ಲಿ 32 ವರ್ಷಗಳಿಂದಲೂ ಸತತವಾಗಿ ಒಬ್ಬರೇ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಇದರಲ್ಲಿ ಅನುವಾದ, ವಿಮರ್ಶೆ, ಸಂಶೋಧನೆ, ಪರಿಚಯ, ಸುದ್ದಿ ಹೀಗೆ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದ ಎಲ್ಲ ಸಂಗತಿಗಳನ್ನು ಬರೆಯುತ್ತಾರೆ. ಇಲ್ಲಿ ರಾಜ್ಯ ದೇಶವಷ್ಟೇ ಅಲ್ಲದೆ ವಿಶ್ವದ ನಾನಾ ಭಾಗಗಳ ಸಾಹಿತಿಗಳ ವಿಶ್ಲೇಷಣೆ ಪರಿಚಯವಿರುತ್ತದೆ. ಇಂತಹ ಒಂದು ಪತ್ರಿಕೆ ಮಕ್ಕಳ ಸಾಹಿತ್ಯಕ್ಕೆ ಬರುತ್ತಿರುವುದು, ಒಬ್ಬರೇ ನಿರ್ವಹಿಸುತ್ತಿರುವುದೂ ಆದ ಮತ್ತೊಂದು ನಿದರ್ಶನ ಇರಲಾರದು ಎನಿಸುತ್ತದೆ.

ಮಕ್ಕಳ ಸಾಹಿತ್ಯದಲ್ಲಿ ತೊಡಗುವವರು ನೆರೆಯ ವಿವಿಧ ಭಾಷೆಗಳಲ್ಲಿ ಆಗುತ್ತಿರುವ ಪ್ರಯೋಗ, ಅಧ್ಯಯನ ಮಾಡುತ್ತಿರಬೇಕು. ಮಕ್ಕಳಿಗಾಗಿ ಎಂದು ಬರೆಯದೆ ತನ್ನೊಳಗಿನ ಮಗುತನ ತಾನಾಗಿ ಅನಾವರಣಗೊಳ್ಳಬೇಕು. ಭಾಷೆ ಮತ್ತು ರಚನಾ ಕ್ರಮಗಳನ್ನು ಅನುಕರಣೆ ಮಾಡದೆ ಸ್ವಂತಿಕೆ ಮೈಗೂಡಿಸಿಕೊಳ್ಳಬೇಕು. ಪೂರ್ವಗ್ರಹದಿಂದ ಹೊರಬಂದು ಮಕ್ಕಳ ಸಾಹಿತ್ಯ ರಚನೆಯೆಲ್ಲಾಗುತ್ತಿರುವ ಪ್ರಯೋಗಗಳನ್ನು ಸಂಶೋಧಕರು ಗಮನಿಸಬೇಕು ಎಂಬ ಕಾಳಜಿ ಆನಂದ ಪಾಟೀಲರ ಆಶಯ. ಸದಾ ಅಧ್ಯಯನ ಮತ್ತು ಬರೆಹವನ್ನೇ ವ್ರತವಾಗಿಸಿಕೊಂಡಿರುವ ಇವರು ಯುವಕರನ್ನು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಕಾಳಜಿ ಆಪ್ತವಾದದ್ದು. ಪಾಟೀಲರ ಮಾದರಿಯಂತೆ ಸಮಾನಮನಸ್ಕರೆಲ್ಲ ಸೇರಿಕೊಂಡು ಆಗಾಗ ಚರ್ಚೆ, ವಿಚಾರಗೋಷ್ಠಿಗಳನ್ನು ಯಾವ ಪ್ರಚಾರದ ಹಂಗೂ ಇಲ್ಲದೆ ಮಾಡುತ್ತಲೇ ಇರುವ ಶಕ್ತಿ ಹೆಚ್ಚಾಗಲಿ.

❖

35 ವರ್ಷ ಹಳೆಯದಾದ ಕಾಡು ಪೇರ

ಬೋನ್ಸಾಯ್ ಕಲೆಯತ್ತ ಒಲವು

10ನೇ ಪುಟದಿಂದ...

'ಲಾಲ್‌ಬಾಗ್‌ಗೆ ಭೇಟಿ ನೀಡಿದ ನಂತರ ಈ ಬಗ್ಗೆ ನನಗೆ ಆಸಕ್ತಿ ಮೂಡಿತು. ಅದರ ಕುರಿತು ಓದಲು ಪ್ರಾರಂಭಿಸಿದೆ. ಒಎಲ್‌ಎಕ್ಸ್ ಮತ್ತು ಕ್ವಿಕರ್ (Quikr) ವೇದಿಕೆಗಳಲ್ಲಿ ಕೆಲವು ಬೋನ್ಸಾಯ್ ಗಿಡಗಳನ್ನು ಖರೀದಿಸಿದೆ' ಎಂದು ಅಜಯ್.ಎಚ್ ಹೇಳುತ್ತಾರೆ.

2014ರಲ್ಲಿ, ನಗರದ ಪ್ರತಿಯೊಂದು ಮನೆಗೆ ಒಂದು ಮರವನ್ನು ತರುವ ಗುರಿಯೊಂದಿಗೆ ಅವರು ಬೆಂಗಳೂರಿನಲ್ಲಿ 'ಬೋನ್ಸಾಯ್ ಮನೆ' ಎಂಬ ನರ್ಸರಿಯನ್ನು ಪ್ರಾರಂಭಿಸಿದರು.

'ಹತ್ತು ವರ್ಷಗಳ ಹಿಂದೆ ಈ ಕಲೆಯ ಬಗ್ಗೆ ಅಲ್ಪಜ್ಞಾನ ಇತ್ತು. ಕಚ್ಚಾ ವಸ್ತುಗಳನ್ನು ಪಡೆಯುವುದು ತುಂಬಾ ಕಷ್ಟವಾಗಿತ್ತು. ಅಗತ್ಯವಿರುವ ವಸ್ತುಗಳನ್ನು ನಾವೇ ಬೆಳೆಸಬೇಕಾಗಿತ್ತು ಮತ್ತು ಗಿಡಗಳನ್ನು ಪಡೆಯಲು ಭಾರತದಾದ್ಯಂತ ಪ್ರಯಾಣಿಸಬೇಕಾಗಿತ್ತು. ಆಗ, ಬೋನ್ಸಾಯ್ ಎಂಬ ಪದವೂ ಹೊಸದಾಗಿತ್ತು. ನೆರೆಹೊರೆಯವರಲ್ಲಿ ಅರಿವು ಮೂಡಿಸಲು ಕರಪತ್ರಗಳನ್ನು ಹಂಚುತ್ತಿದ್ದೆ' ಎಂದು ನೆನಪಿಸಿಕೊಂಡರು.

ಸದ್ಯ ಬೋನ್ಸಾಯ್ ಕುರಿತ ಜ್ಞಾನವು ಬೆಳೆಯುತ್ತಿದೆ. ನಗರಗಳಲ್ಲಿನ ಸಣ್ಣ ನರ್ಸರಿಗಳಲ್ಲಿಯೂ ಹಲವು ವಿಧದ ಬೋನ್ಸಾಯ್ ಗಿಡಗಳು ಲಭ್ಯ ಇವೆ. ಲಾಲ್‌ಬಾಗ್‌ನಲ್ಲಿಯೂ ಬೋನ್ಸಾಯ್ ಮರಗಳು ಗ್ರಾಹಕರಿಗೆ ಲಭ್ಯ ಇವೆ.

'ಜಪಾನ್ ಮತ್ತು ದಕ್ಷಿಣ ಏಷ್ಯಾದ ಕೆಲವು ದೇಶಗಳಿಂದ ಬೋನ್ಸಾಯ್ ಗಿಡಗಳನ್ನು ತರಿಸಿಕೊಳ್ಳುತ್ತೇವೆ. ಹೀಗಾಗಿ ನಮ್ಮಲ್ಲಿ ₹5,000 ದಿಂದ ₹20,000ವರೆಗೆ ಗಿಡಗಳು ಲಭ್ಯವಿವೆ' ಎಂದು ಬೆಂಗಳೂರು ಉತ್ತರ ಗಾರ್ಡನ್‌ನ ಸಿಬ್ಬಂದಿಯೊಬ್ಬರು ತಿಳಿಸುತ್ತಾರೆ.

'ಗ್ರಾಹಕರ ಅರಿವಿನ ಕೊರತೆಯೇ ಕೆಲವರಿಗೆ ಬಂಡವಾಳವಾಗುವ ಸಾಧ್ಯತೆ ಇರುತ್ತದೆ. ಸಣ್ಣ ಬೋನ್ಸಾಯ್ ಮರಕ್ಕೆ ₹1,000 ದಿಂದ ₹5000 ಇರುತ್ತದೆ. ಸೆಮಿ ಮೆಚ್ಯೂರ್ ಮರಗಳಿಗೆ ₹5,000 ದಿಂದ ₹15,000 ವರೆಗೆ ಬೆಲೆ ಇರುತ್ತದೆ. ಮೆಚ್ಯೂರ್ ಮರಗಳ ಬೆಲೆಯು ಹಲವು ಅಂಶಗಳನ್ನು ಆಧರಿಸಿರುತ್ತದೆ. ಇಂತಿಷ್ಟೇ ಬೆಲೆ ಎಂದು ನಿಗದಿಪಡಿಸಲು ಸಾಧ್ಯವಿಲ್ಲ' ಎಂದು ಅಜಯ್ ವಿವರಿಸುತ್ತಾರೆ.

ಸ್ಥಳೀಯ ಪ್ರಭೇದಗಳಿಗೆ ಆದ್ಯತೆ

ಬೋನ್ಸಾಯ್ ವಿದೇಶಿ ಕಲೆ ಎಂಬ ಗ್ರಹಿಕೆಯು ಖರೀದಿದಾರರ ಆದ್ಯತೆ ಮೇಲೆ ಪ್ರಭಾವ ಬೀರುತ್ತದೆ. 'ಜನರು ಚೀನಾ ಮೂಲದ ತಳಿಗಳನ್ನು ಖರೀದಿಸಲು ಬಯಸುತ್ತಾರೆ. ಅವುಗಳು ಸಣ್ಣ ಎಲೆಗಳನ್ನು ಹೊಂದಿರುತ್ತವೆ ಅಥವಾ ಹೆಚ್ಚು 'ಅಲಂಕಾರಿಕ'ವಾಗಿ ಕಾಣುತ್ತವೆ. ಆದರೆ ನಾವು ಅರಳಿಮರ ಮತ್ತು ಆಲದಮರದಂತಹ ಸ್ಥಳೀಯ ಪ್ರಭೇದಗಳಿಗೆ ಆದ್ಯತೆ ನೀಡಬೇಕಾಗಿದೆ' ಎಂದು ಅಜಯ್ ಹೇಳುತ್ತಾರೆ.

ಬೋನ್ಸಾಯ್ ಕಲೆಯು ಸಂಯಮ, ತಾಳ್ಮೆ ಮತ್ತು ಸತತ ಪರಿಶ್ರಮದ ಪ್ರಕ್ರಿಯೆಯಾಗಿದೆ. ಒಂದೇ ಮರದ ಬೆಳವಣಿಗೆಗೆ ಹಲವು ವರ್ಷಗಳ ಸೂಕ್ತ ಆರೈಕೆ ಬೇಕಾಗುತ್ತದೆ. ಆದರೆ ಪ್ರತಿಫಲಗಳು ಹಲವು ಪಟ್ಟು ಹೆಚ್ಚಿರುತ್ತದೆ ಎಂದು ಕಲಾವಿದರು ಒತ್ತಿ ಹೇಳುತ್ತಾರೆ. 'ಬೋನ್ಸಾಯ್ ನಿಮಗೆ ಪ್ರಕೃತಿಯೊಂದಿಗೆ ಬೆರೆಯಲು ಅನುವು ಮಾಡಿಕೊಡುತ್ತದೆ. ದಿನಚರಿಯನ್ನು ರೂಪಿಸುತ್ತದೆ. ನಮ್ಮಲ್ಲಿ ಧ್ಯಾನಸ್ಥ ಮತ್ತು ಶಾಂತ ಸ್ವಭಾವವನ್ನು ಬೆಳೆಸುತ್ತದೆ' ಎಂದು ಹೇಳುತ್ತಾರೆ ಅನುಪಮಾ.

'ನಾವು ಪ್ರಕೃತಿಯ ಮಕ್ಕಳು. ಬೋನ್ಸಾಯ್ ಒಂದು ಉದ್ದೇಶದೊಂದಿಗೆ ವಿಭಿನ್ನವಾಗಿ ಏನನ್ನಾದರೂ ಮಾಡುವ ಅವಕಾಶವನ್ನು ನೀಡುತ್ತದೆ ಮತ್ತು ಪರಂಪರೆಗೆ ಕೊಡುಗೆ ನೀಡಲು ನಮ್ಮನ್ನು ಪ್ರೇರೇಪಿಸುತ್ತದೆ' ಎಂದು ಅಜಯ್ ಹೇಳುತ್ತಾರೆ.

(ಅನುವಾದ: ಕೀರ್ತಿಕುಮಾರಿ ಎಂ.)



ಕಲ್ಲಿನ ಮೇಲೆ ಬೆಳೆದ ಬಾಕ್ಸ್ ಟ್ರೀ

ಚಿತ್ರಕೃಪೆ: ಗೋಪಿನಾಥ್ ಮಲ್ಯ

ಮುತ್ತು ಬೆಳೆದವರ ಕಥೆ!

10ನೇ ಪುಟದಿಂದ...

ಪ್ರತಿ ಹದಿನೈದು ದಿನಕ್ಕೊಮ್ಮೆ ನೀರಿನ ಪಿಎಚ್, ಟಿಡಿಎಸ್, ಅಮೋನಿಯಂ ಮಟ್ಟವನ್ನು ಪರಿಶೀಲಿಸಬೇಕು. ಏರುಪೇರಾಗಿದ್ದಲ್ಲಿ ಅದರ ಸಮತೋಲನಕ್ಕಾಗಿ ಆಕಳ ಸಗಣಿ, ಸಾಸಿವೆ ಹಿಂಡಿ, ಶೇಂಗಾ ಹಿಂಡಿ, ಅರಿಸಿನ, ಸುಣ್ಣ, ಉಪ್ಪು, ಕ್ಯಾಲ್ಸಿಯಂ, ವಿಟಮಿನ್‌ಗಳನ್ನು ಆಹಾರವಾಗಿ ನೀಡಬೇಕು. ಕೆಲವು ರಾಸಾಯನಿಕಗಳನ್ನು ಸಹ ತಕ್ಕಮಟ್ಟಿಗೆ ಸೇರಿಸುತ್ತಾರೆ.

'ಒಂದು ಕಪ್ಪೆಚಿಪ್ಪಿಗೆ ₹60 ವೆಚ್ಚ ಮಾಡಿದರೆ, ಬೆಳೆಸಿದ ನಂತರ ಕಂಪನಿಯವರು ನಮ್ಮಿಂದ ಅದನ್ನು ₹230 ಕೊಳ್ಳುತ್ತಾರೆ. ಅಸಲಿನ ಜತೆಗೆ ಎರಡು ಪಟ್ಟು ಹೆಚ್ಚು ಲಾಭ ಸಿಗುತ್ತದೆ. ಆದರೆ, ನಾವು ಶೇಕಡ 50 ರಷ್ಟು ನಷ್ಟ ಅಂದುಕೊಂಡೇ ಕೃಷಿ ಮಾಡುತ್ತೇವೆ. ಇದರಲ್ಲಿ ₹100ಕ್ಕೆ ₹300 ಬರುವುದು ಬೇಡ. ₹200 ಬಂದರೆ ಸಾಕು. ಹಾಕಿದ ಬಂಡವಾಳ ಡಬಲ್ ಆಗುತ್ತದೆ' ಎಂದು ಲಾಭ ನಷ್ಟದ ಲೆಕ್ಕಾಚಾರ ಮುಂದಿಡುತ್ತಾರೆ ಯುವಕರು.

ವೀರ್ ಮತ್ತು ಗೆಳೆಯರು ಹೇಳಿಕೊಳ್ಳುವಂತೆ, ಇವರು ಮುತ್ತು ಕೃಷಿ ಆರಂಭಿಸಿದಾಗ ದಕ್ಷಿಣ ಭಾರತದಲ್ಲೇ ಯಾರು ಇಂತಹ ಪ್ರಯತ್ನ ಮಾಡಿರಲಿಲ್ಲವಂತೆ. ದಕ್ಷಿಣದಲ್ಲಿ ಈಗಲೂ ಇಷ್ಟು ದೊಡ್ಡ ಪ್ರಮಾಣದಲ್ಲಿ ಯಾರೂ ಮುತ್ತು ಕೃಷಿ ಮಾಡುತ್ತಿಲ್ಲವಂತೆ. ಕಳೆದ ವರ್ಷ ಬೆಂಗಳೂರು ಭಾಗದಲ್ಲಿ ಒಂದು ಪ್ರಯತ್ನ ನಡೆಯಿತು. ಅದು ಫಲಪ್ರದವಾಗಿಲ್ಲ. ಕರಾವಳಿ ಭಾಗದಲ್ಲಿ ಕೆಲವರು ಸಣ್ಣದಾಗಿ ಮುತ್ತು ಕೃಷಿ ಮಾಡುತ್ತಿರುವುದನ್ನು ಗುರುತಿಸಿರುವುದಾಗಿ ತಿಳಿಸಿದರು.

ಡಿಸೈನರ್ ಮುತ್ತುಗಳು

ಆಭರಣದೊಳಗೆ ಕಂಗೊಳಿಸುವ ಡಿಸೈನರ್ ಮುತ್ತು

ಡಿಸೈನರ್ ಮುತ್ತು ಬಳಸಿ ತಯಾರಿಸಿದ ಆಭರಣ

ಮುತ್ತು ಕೃಷಿಗೆ ಸರ್ಕಾರದ ನೆರವು ಅಗತ್ಯವಾಗಿ ಬೇಕಿದೆ ಎಂಬುದು ಕೃಷಿಕರ ಅಭಿಪ್ರಾಯ. ಮುತ್ತು ಕೃಷಿ ಮಾಡುವವರಿಗೆ ಸರ್ಕಾರದಿಂದ ಸಬ್ಸಿಡಿ, ಪ್ರೋತ್ಸಾಹಧನ, ವಿಮೆ, ಸುರಕ್ಷತಾ ಪರಿಕರಗಳು ಸೇರಿದಂತೆ ಇನ್ನಿತರ ಸೌಲಭ್ಯಗಳು ಸಿಗಬೇಕು. ಆದರೆ, ಮುತ್ತು ಕೃಷಿಕರಿಗೆ ಸರ್ಕಾರದಿಂದ ಈವರೆಗೆ ಯಾವುದೇ ಸೌಲಭ್ಯಗಳು ಸಿಕ್ಕಿಲ್ಲ. ಮೀನುಗಾರಿಕೆ ಇಲಾಖೆಯವರಿಗೆ ಈ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಶಾಲಾ, ಕಾಲೇಜು ಅಥವಾ ಆಸಕ್ತರಿಗೆ ಮುತ್ತು ಕೃಷಿ ಬಗ್ಗೆ ತಿಳಿಸಿಕೊಡಲು ಇವರನ್ನೇ ಕರೆದುಕೊಂಡು ಹೋಗುತ್ತಾರಂತೆ.

'ಮುತ್ತು ಕೃಷಿಯಲ್ಲಿ ಯಶಸ್ವಿಯಾಗಿ ನಾಲ್ಕು ವರ್ಷ ಪೂರ್ಣಗೊಳಿಸಿದ್ದರೂ ಇಂದಿಗೂ ಅನೇಕ ಸವಾಲುಗಳಿವೆ. ಮುಂದೆ ಕಂಪನಿಯವರು ಮುತ್ತುಗಳನ್ನು ಕೊಳ್ಳುತ್ತಾರೆಯೋ ಇಲ್ಲವೋ ಎಂಬ ಆತಂಕ ಇದ್ದೇ ಇರುತ್ತದೆ. ಹಾಗಾಗಿ, ಸರ್ಕಾರವೇ ಮುತ್ತುಗಳನ್ನು ಖರೀದಿಸುವುದು, ವಿಮೆ, ಪ್ರೋತ್ಸಾಹಧನ ಕೊಟ್ಟರೆ ಹೆಚ್ಚಿನ ಅನುಕೂಲ ಆಗಲಿದೆ. ಇಲ್ಲವಾದರೆ, ಹೂಡಿಕೆ ಮಾಡಲು ಜನರು ಹೆದರುತ್ತಾರೆ' ಎಂದು ಕೃಷ್ಣ ಜಾಲಮ್ಮನವರ ಹೇಳುತ್ತಾರೆ.

ಮುತ್ತು ಕೃಷಿಯಲ್ಲಿ ಲಾಭ ಇದೆ ಅಂತ ಗೊತ್ತಾದರೆ, ಆಸಕ್ತರಿಗೆ ಅನುಕೂಲ ಆಗುತ್ತದೆ. ಅವರ ಮನೆಯವರೂ ಒಂದಿಷ್ಟು ಹಣದ ಮುಖ ನೋಡುತ್ತಾರೆ ಎಂಬುದು ಈ ಯುವಕರ ಯೋಚನೆಯಾಗಿದೆ. ಅದಕ್ಕಾಗಿ, ಇವರು ಮೂವರಷ್ಟೇ ಅಲ್ಲದೇ ಆಸಕ್ತಿಯಿಂದ ಬಂದವರನ್ನೆಲ್ಲಾ ಪಾಲುದಾರರನ್ನಾಗಿ ಮಾಡಿಕೊಂಡಿದ್ದಾರೆ.

'ಮುತ್ತು ಕೃಷಿಕರು ಹೆಚ್ಚಾದಂತೆ ಸ್ಪರ್ಧೆ ಹೆಚ್ಚಬಹುದು ಎಂಬ ಕಾರಣಕ್ಕೆ ಕೆಲವರು, 'ಕೆಜಿಎಫ್ ರೀತಿ ಬಂಗಾರ ತೆಗೆಯುವ ಜಾಗ ಇಟ್ಟುಕೊಂಡಿದ್ದೀರಿ. ಯಾಕ್ ಮಂದಿಗೆ ಹೇಳಿ ಕೊಡ್ತೀರಾ. ಎಲ್ರಿಗೂ ಹೇಳಿದರೆ ನಿಮ್ಗೇನು ಲಾಭ' ಅಂತ ಬೈಯ್ಯುತ್ತಾರೆ. ಆದರೆ, ಇಲ್ಲಿ ಪೂರೈಕೆದಾರರೇ ಕಡಿಮೆ ಇದ್ದಾರೆ. ಪ್ರತಿ ವರ್ಷ ಸಾವಿರಾರು ಕೋಟಿಗಳ ಲೆಕ್ಕದಲ್ಲಿ ಮುತ್ತುಗಳು ಹೊರ ದೇಶಗಳಿಂದ ಭಾರತಕ್ಕೆ ಆಮದಾಗುತ್ತದೆ. ಬೇಡಿಕೆ ಹೆಚ್ಚಿರುವ ಕಾರಣ ಮುತ್ತು ಕೃಷಿಯ ಭವಿಷ್ಯವೂ ಚೆನ್ನಾಗಿದೆ. ಇನ್ನೂ ಹತ್ತು ವರ್ಷ ಮುತ್ತಿನ ಮಾರುಕಟ್ಟೆ ಮಿಸುಕಾಡುವುದಿಲ್ಲ. ದಕ್ಷಿಣದ ಮಹಿಳೆಯರು ಚಿನ್ನದ ಆಭರಣ ಇಷ್ಟಪಡುತ್ತಾರೆ. ಉತ್ತರದ ಕೆಲವು ರಾಜ್ಯಗಳಲ್ಲಿ ಮುತ್ತಿನ ಆಭರಣಗಳ ಬಳಕೆ ಹೆಚ್ಚಿದೆ. ಹಾಗಾಗಿ, ಮುತ್ತುಗಳಿಗೆ ಹೆಚ್ಚಿನ ಬೇಡಿಕೆಯಂತೂ ಇದ್ದೇ ಇದೆ' ಎನ್ನುತ್ತಾರೆ ಯುವಕರು.

ದುಡ್ಡು, ಜಾಗ, ನೀರು ಎಲ್ಲವೂ ಇದೆ. ಆದರೆ, ದಿನವೂ ಬಂದು ದುಡಿಯಲು ಸಮಯ ಇಲ್ಲ ಎನ್ನುವವರಿಗೆ ಮುತ್ತು ಕೃಷಿ ಬಗ್ಗೆ ಆಸಕ್ತಿ ಬಂದರೆ, ಇಬ್ಬರನ್ನು ಕೆಲಸಕ್ಕೆ ಇಟ್ಟುಕೊಂಡು ಅವರಿಗೆ ತರಬೇತಿ ಕೊಡಿಸಿ ಸರಳವಾಗಿ ಈ ಕೃಷಿ ಮಾಡಬಹುದು ಎಂಬುದು ಪ್ರಿನ್ಸ್ ವೀರ್ ಮತ್ತು ಗೆಳೆಯರ ಸಲಹೆ.

❖

ಮುನ್ನೋಟ 05-10-2025 ರಿಂದ 11-10-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಕಳ್ಳರ ಹಾವಳಿ ಇರುವುದರಿಂದ ನಿಮ್ಮ ವಸ್ತುಗಳನ್ನು ಹೆಚ್ಚು ಜೋಪಾನವಾಗಿ ನೋಡಿಕೊಳ್ಳಿ. ವಿದ್ಯಾರ್ಥಿಗಳಿಗೆ ಸಾಮಾನ್ಯ ಏಳಿಗೆ ಇರುತ್ತದೆ. ಬರಹಗಾರರಿಗೆ ಸಾಕಷ್ಟು ಪ್ರಾಮುಖ್ಯ ಇರುತ್ತದೆ. ಮಾನಸಿಕ ಚಂಚಲದಿಂದ ಭಯದ ವಾತಾವರಣವನ್ನು ಕಾಣುವಿರಿ. ಶಸ್ತ್ರಾಸ್ತ್ರ ವ್ಯಾಪಾರಿಗಳಿಗೆ ಹೆಚ್ಚಿನ ಪೂರೈಕೆಗಾಗಿ ಹಣ ಸಂದಾಯವಾಗುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಕೃಷಿ ಕ್ಷೇತ್ರದಲ್ಲಿ ದುಡಿಯುವವರಿಗೆ ಉತ್ತಮ ಸಹಕಾರ ದೊರೆತು ಆದಾಯ ಹೆಚ್ಚುತ್ತದೆ. ನಿಮ್ಮ ಸ್ವಂತ ಆದಾಯವು ಹೆಚ್ಚುತ್ತದೆ. ನೀವು ಮಾಡಿದ ಕಾರ್ಯದಿಂದ ನಿಮ್ಮ ಸಂಸ್ಥೆಗೆ ಲಾಭವಾಗಿ ಎಲ್ಲರೂ ಪ್ರಶಂಸಿಸುವರು. ಮಹಿಳೆಯರ ಆರೋಗ್ಯದಲ್ಲಿ ವ್ಯತ್ಯಾಸವನ್ನು ಕಾಣಬಹುದು. ಪ್ರೀತಿ ಪ್ರೇಮಗಳಲ್ಲಿ ಸಿಲುಕಿರುವವರಿಗೆ ಶುಭ ಫಲವಿರುತ್ತದೆ. ತಂದೆಯಿಂದ ಕುಲ ವೃತ್ತಿಯನ್ನು ಕಲಿಯಬಹುದು. ಮಕ್ಕಳಿಂದ ನಿಮಗೆ ಗೌರವ ದೊರಕುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಹೈನುಗಾರಿಕೆಯಲ್ಲಿ ತೊಡಗಿಕೊಂಡಿರುವವರಿಗೆ ಆದಾಯ ಕಡಿಮೆಯಾಗುತ್ತದೆ. ನಿಮಗೆ ಬರಬೇಕಾಗಿದ್ದ ಬಾಕಿ ಹಣ ಈಗ ಬರುವ ಸಾಧ್ಯತೆ ಇದೆ. ಸರ್ಕಾರಿ ಕಚೇರಿಗಳ ವ್ಯವಹಾರಗಳು ಸುಗಮವಾಗಿ ಆಗುತ್ತವೆ. ಹಿರಿಯರ ಅನಾರೋಗ್ಯಕ್ಕೆ ಹೆಚ್ಚು ವೆಚ್ಚವನ್ನು ಭರಿಸಬೇಕಾದೀತು. ನಿಮ್ಮ ವ್ಯವಹಾರಗಳಲ್ಲಿ ಆದಾಯವು ಕಡಿಮೆ ಇರುತ್ತದೆ. ನಿಮ್ಮ ಸಂಗಾತಿಯ ಸಹಕಾರ ಸಾಕಷ್ಟು ದೊರೆಯುತ್ತದೆ. ಪ್ರಿಯವ್ಯಕ್ತಿಗಳ ಆಗಮನದಿಂದ ಸಂತೋಷಪಡುವಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ನಿಮ್ಮ ಬಗ್ಗೆ ನಿಮಗೆ ಬಲವಾದ ನಂಬಿಕೆ ಇರುತ್ತದೆ. ಆದಾಯವು ಸ್ವಲ್ಪ ಚೇತರಿಕೆ ಹಾದಿಯನ್ನು ಕಾಣುತ್ತದೆ. ವ್ಯಾಪಾರದ ಒಳಗುಟ್ಟುಗಳನ್ನು ಕರಗತ ಮಾಡಿಕೊಳ್ಳುವಿರಿ. ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವತ್ತ ಗಮನ ಹರಿಸುವಿರಿ. ಕೆಲಸದಲ್ಲಿ ಹೆಚ್ಚು ಜಾಗರೂಕರಾಗಿರುವುದು ಬಹಳ ಉತ್ತಮ. ದಾಂಪತ್ಯದ ಸಮಸ್ಯೆಗಳು ನಿವಾರಣೆಯಾಗಿ ಮನಸ್ಸಿಗೆ ಸಂತೋಷವೆನಿಸುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಮನಸ್ಸಿನಲ್ಲಿ ಸಂತಸವಿದ್ದರೂ ಅದನ್ನು ತೋರಿಸಿಕೊಳ್ಳಲಾಗುವುದಿಲ್ಲ. ಆದಾಯವು ನಿರೀಕ್ಷೆಯ ಹತ್ತಿರ ಬರುತ್ತದೆ. ವಿದ್ಯಾರ್ಥಿಗಳಲ್ಲಿ ಪ್ರಗತಿಯನ್ನು ಕಾಣಬಹುದು. ಮಕ್ಕಳಿಂದ ನಿಮಗೆ ಆರ್ಥಿಕ ಸಹಾಯ ದೊರೆಯುವ ಸಾಧ್ಯತೆ ಇದೆ. ಜನಪ್ರತಿನಿಧಿಗಳಿಗೆ ಮುಜುಗರ ಉಂಟಾಗುವ ಸಂದರ್ಭಗಳು ಎದುರಾಗಬಹುದು. ದೂರಪ್ರಯಾಣದಲ್ಲಿ ಆರೋಗ್ಯ ಸಮಸ್ಯೆ ಕಾಣಿಸಬಹುದು. ಒಂದೆಡೆ ಸಾಲವನ್ನು ಪಡೆದು ಉಳಿದ ಕೈಸಾಲಗಳನ್ನು ತೀರಿಸಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನೆರೆಹೊರೆಯವರೊಂದಿಗೆ ಬಾಂಧವ್ಯವನ್ನು ವೃದ್ಧಿಮಾಡಿಕೊಳ್ಳುವಿರಿ. ವ್ಯವಹಾರಗಳಲ್ಲಿ ತಕ್ಕಮಟ್ಟಿನ ಚೇತರಿಕೆಯನ್ನು ಕಾಣಬಹುದು. ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗದ ಬಗ್ಗೆ ಗೊಂದಲವಾಗಬಹುದು. ವಾಹನ ವಿಷಯದಲ್ಲಿ ಜಾಗರೂಕರಾಗಿರುವುದು ನಿಮಗೆ ಒಳ್ಳೆಯದು. ದೂರದಲ್ಲಿರುವ ಮಿತ್ರರಿಂದ ಈಗ ಸಹಾಯ ದೊರೆಯುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ನಿಮ್ಮ ನಿರ್ಧಾರಗಳಲ್ಲೇ ಸಾಕಷ್ಟು ದ್ವಂದ್ವ ಇರುತ್ತದೆ. ನಿಮ್ಮ ಕೆಲಸ ಕಾರ್ಯಗಳು ನಿರೀಕ್ಷೆಯಂತೆ ನಡೆಯದೆ ಸ್ವಲ್ಪ ಬೇಸರವಾಗಬಹುದು. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಆರ್ಥಿಕ ಸಹಾಯ ಲಭಿಸುತ್ತದೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಶತ್ರುಗಳ ಯೋಜನೆಗಳನ್ನು ಧ್ವಂಸ ಮಾಡುವಂತಹ ತಂತ್ರಗಳನ್ನು ರೂಪಿಸುವಿರಿ. ರಾಜಕೀಯ ವ್ಯಕ್ತಿಗಳು ತಮ್ಮತನವನ್ನು ಉಳಿಸಿಕೊಂಡಲ್ಲಿ ರಾಜಕೀಯದಲ್ಲಿ ಮುಂದುವರೆಯಲು ಅನುಕೂಲವಾಗುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಉದ್ಯೋಗದಲ್ಲಿ ಒಳ್ಳೆಯ ಹೆಸರನ್ನು ಪಡೆಯುವಿರಿ. ನಿಮ್ಮ ನಡೆ-ನುಡಿಯಿಂದ ಜನರಿಂದ ಗೌರವ ಪಡೆಯುವಿರಿ. ಕೆಲವು ಮಹಿಳೆಯರಿಗೆ ವಸ್ತ್ರಾಭರಣಗಳನ್ನು ಖರೀದಿ ಮಾಡುವ ಯೋಗವಿದೆ. ಹಳೆಯ ಸಾಲಗಳಿಂದ ವಿಮುಕ್ತಿ ಪಡೆಯುವಿರಿ. ರಾಜಕಾರಣಿಗಳಿಗೆ ಯಶಸ್ಸು ಇರುತ್ತದೆ. ಕಳೆದು ಹೋದ ಕೆಲವು ವಸ್ತುಗಳು ನಿಮಗೆ ಮರಳಿ ದೊರಕುತ್ತವೆ. ವಿದ್ಯಾರ್ಥಿಗಳಿಗೆ ಆಟಪಾಠಗಳಲ್ಲಿ ಹೆಚ್ಚಿನ ಪ್ರಗತಿ ಇರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ನಿಮ್ಮ ಪಾಲಿನ ಕೆಲಸವನ್ನು ಸರಾಗವಾಗಿ ಮಾಡಿ ಮುಗಿಸುತ್ತೀರಿ. ದೂರದೂರುಗಳಿಗೆ ಪ್ರಯಾಣ ಮಾಡುವ ಸಾಧ್ಯತೆಗಳಿವೆ. ಹಣ ಕಡಿಮೆ ಇರುತ್ತದೆ. ಬೇರೆಯವರ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡುವಿರಿ. ಬಂಧುಗಳ ವಿರೋಧ ಎದುರಾಗಬಹುದು. ಖರ್ಚುಗಳು ಅನಿರೀಕ್ಷಿತವಾಗಿ ಎದುರಾಗಬಹುದು. ಕೃಷಿಕರ ವರಮಾನದಲ್ಲಿ ಸ್ವಲ್ಪಮಟ್ಟಿಗೆ ಇಳಿಮುಖವಾಗಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಮಕ್ಕಳಿಂದ ಆಗುತ್ತಿದ್ದ ಸಮಸ್ಯೆಗಳು ಕಡಿಮೆಯಾಗುತ್ತವೆ. ಅಧಿಕಾರಸ್ಥ ಮಹಿಳೆಯರಿಗೆ ನೆಮ್ಮದಿ ಕದಡುವ ಸಂದರ್ಭವಿದೆ. ವ್ಯಾಪಾರದಲ್ಲಿ ಸಾಮಾನ್ಯ ಲಾಭ ಇರುತ್ತದೆ. ಔಷಧ ವ್ಯಾಪಾರ ಮಾಡುವವರಿಗೆ ವ್ಯಾಪಾರ ಹೆಚ್ಚಳವಾಗುತ್ತದೆ. ಶತ್ರುಗಳನ್ನು ಮಟ್ಟ ಹಾಕುವ ಅವಕಾಶ ದೊರೆಯುತ್ತದೆ. ಪ್ರಸೂತಿ ವೈದ್ಯರಿಗೆ ಬೇಡಿಕೆ ಹೆಚ್ಚಾಗುವ ಸಾಧ್ಯತೆಗಳಿವೆ. ಸಹೋದರರಿಂದ ನಿಮ್ಮ ಕೆಲಸಗಳಿಗೆ ಹೆಚ್ಚಿನ ಸಹಕಾರ ದೊರೆಯುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ವೈಯಕ್ತಿಕ ಬದುಕಿನಲ್ಲಿ ಸಾಕಷ್ಟು ಹಿತಕರ ಬದಲಾವಣೆಯನ್ನು ಕಾಣಬಹುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಹುಮ್ಮಸ್ಸು ಬರುತ್ತದೆ. ಆದಾಯವು ಕಡಿಮೆ ಇರುತ್ತದೆ. ಆಮದು ಮತ್ತು ರಫ್ತು ಮಾಡುವವರಿಗೆ ಈಗ ಆದಾಯ ಉತ್ತಮವಾಗಿರುತ್ತದೆ. ಚಿನ್ನ ಬೆಳ್ಳಿ ವ್ಯಾಪಾರಸ್ಥರಿಗೆ ವ್ಯಾಪಾರ ಹೆಚ್ಚಾಗಿ ಲಾಭ ಬರುತ್ತದೆ. ಸ್ವಂತ ಉದ್ಯೋಗ ಮಾಡುವವರಿಗೆ ಬೇಕಾದ ಸಾಲ ಸೌಲಭ್ಯಗಳು ದೊರೆಯುತ್ತವೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ವಾರದ ಆರಂಭದಲ್ಲಿ ಜಡ್ಡುಗಟ್ಟಿದ ವಾತಾವರಣವಿರುತ್ತದೆ. ಆದಾಯವು ಕಡಿಮೆ ಇದ್ದು ಖರ್ಚು ಹೆಚ್ಚಾಗುವ ಸಂಭವವಿದೆ. ಹಿರಿಯರ ಸಹಕಾರ ದೊರೆಯುವುದು ಕಡಿಮೆ. ಆಸ್ತಿ ಖರೀದಿಯ ವಿಷಯದಲ್ಲಿ ಮುನ್ನಡೆ ಇರುತ್ತದೆ. ಬೇರೆಯವರ ಪಾಲಾಗಿದ್ದ ನಿಮ್ಮ ಪೂರ್ವಿಕರ ಆಸ್ತಿಯನ್ನು ಖರೀದಿ ಮಾಡಲು ತಯಾರಿ ನಡೆಸುವಿರಿ.

ಪದಬಂಧ 2912



ಮೇಲಿನಿಂದ ಕೆಳಕ್ಕೆ

1. ಸಸ್ಯಗಳಿಂದ ಕಂಗೊಳಿಸುವ ನೀಲವರ್ಣದ ದಂಡಕದ ದೇವತೆ 3
2. ಕಾವ್ಯದಲ್ಲಿ ಒದರಿ ಹೇಳು 3
3. ನೀ ಕುಳಿತಾಗ ಪಾಂಡವರ ತಾಯಿ ಕಂಡಳು 2
4. ದೇವಿ ನಿವಾಸದ ಅಚಲವಾದ ಬೆಳ್ಳಿ ಬೆಟ್ಟ 5
5. ಯಾರವ ಅಂದರೆ ಅರ್ಧಂಬರ್ಧ ತಮಿಳಿಗ 3
7. ಅನೇಕ ಬೀಜಗಳಿಂದ ಕೂಡಿದ ಸಂಸ್ಕೃತ ಸೀಬೆ ಹಣ್ಣು 6
9. ಶತ್ರುವಧೆ ಮಾಡುವ ದೇವಿ 6
11. ಕೆಳಗಿನಿಂದ ಮೇಲಕ್ಕೆ ತಾ ಎಂದಾಗ ಸಿಗುವ ಮರ 2
14. ಆವರಿಸುವ ಕಾವ್ಯ ರಚನಕಾರ 2
15. ಪೂಜೆಗೆ ಪಾತ್ರಳಾದ ಬಲಶಾಲಿ ತಾಯಿ 5
18. ಪರಾಗತುಂಬಿದ ಹೂವು 3
20. ವಾತ್ಸಲ್ಯವೇ ನನ್ನದು ಅದನ್ನು ತಾ ಎನ್ನುವ ಹೆಣ್ಣು 3
21. ಸಾಧಾರಣ ಅಕ್ಷಿಯ ಹಿಂದಿರುವ ತೆರೆ 3
22. ಚೆನ್ನಾಗಿ ಬದುಕು ಎನ್ನುವ ಆಶಯ 2

ಎಡದಿಂದ ಬಲಕ್ಕೆ

1. ಹಿಂದೆ ಹಳೆ ಕಡತವನ್ನು ತೆಗೆಯುತ್ತಿದ್ದ ಹಳ್ಳಿಯ ಪ್ರಮುಖ 4
3. ಚಕ್ರದ ಮೇಲೆ ಮಣ್ಣಿನ ಮಡಿಕೆ ಮಾಡುವ ಕುಲಾಲ 3
5. ಬರಬಹುದಾದ ಕೆಟ್ಟ ಕೀರ್ತಿ 4
6. ಬಹಳ ದೂರ ಹೋದ ಜೈಕಿಸಾನ್ ಖ್ಯಾತಿಯ ಪ್ರಧಾನಿ 6
8. ಅಧೀನ ಮಂತ್ರದ ಶಂಕರಿ 4
10. ಕಡೂರಿನ ಅವಳಿ ಪಟ್ಟಣ ಬೀರ ಬೇರೂರಿದ ಸ್ಥಳ 3
12. ಹೆದರಿದ ಹೇಡಿಗೆ ಪುಕ್ಕ ಸೇರಿದೆ 3
13. ಆತುರದ ಆತಂಕ 3
15. ಶಿಶುನಾಳದ ಮರ್ಯಾದಸ್ಥ ಸಂತ 3
16. ಹಾಡಿನಲ್ಲಿ ಅಗಲಿಕೆಯ ವೇದನೆ ನೂರು ತರಹ 3
17. ಎಲ್ಲೆಡೆಯಿಂದ ದಾಳಿಮಾಡು ಆಕ್ರಮಿಸು 4
19. ಅಮೃತದಂತಹ ರತ್ನಗಳಿಂದ ಕಂಗೊಳಿಸುವ ನಡುಗಡ್ಡೆ 6
22. ಚಿಕ್ಕ ಹುಡುಗನಾಗಿ ಕೌಸಲ್ಯೆಯ ಪುತ್ರ 4
23. ಹೊರಡು, ವಾಪಾಸ್ಸಾಗು 3
24. ಆಕಾಶದಲ್ಲಿ ಮಿನುಗುವ ನಕ್ಷತ್ರದ ಶಕ್ತಿಯ ಪ್ರಭಾವ 4

ಪದಬಂಧ ಉತ್ತರ -2911

ಮೇಲಿಂದ ಕೆಳಕ್ಕೆ

1.ಪೂರ್ವಜ 2.ಮಹಾಮಿಲನ 3.ಗುಪ್ತಗಾಮಿನಿ 4.ರುದ್ರಾವತಾರ 6.ಯದುನಂದನ 11.ರಾಗಮಂಜರಿ 12.ಸತ್ಯಸಂಗತಿ 13.ಯಮಸದನ 14.ಸಮಕಾಲೀನ 19.ಕಾನಡ

ಎಡದಿಂದ ಬಲಕ್ಕೆ

1.ಪೂರ್ಣವಿರಾಮ 3.ಗುಡಿತೇರು 5.ವಿಜಯದಶಮಿ 7.ಗಾಳಿದೇವ 8.ಲಕುಮಿ 9.ದಯಾನಂದ 10.ನಿರಾಧಾರ 12.ಸವಿನಯ 15.ಸಮಂಜಸ 16.ಮಧ್ಯಮ 17.ಸಂಧ್ಯಾಭ್ಯಾಸ 18.ಕಾದಂಬರಿಕಾರ 20.ತಿಳಿಮೌನ 21.ನಡುಗನ್ನಡ

ಡಿವಿಜಿ ಪತ್ರಗಳು: ಅಶ್ವತ್ಥದ ಎಲೆಗಳು

• ಎಸ್. ಸೂರ್ಯಪ್ರಕಾಶ ಪಂಡಿತ್

ನಮ್ಮ ಕಾಲದಲ್ಲಿ ಕಾಣಿಸಿಕೊಂಡ ಹೊಸದಾದ ಕಲ್ಪನೆಗಳಲ್ಲೊಂದು 'ಪಬ್ಲಿಕ್ ಇಂಟಲೆಕ್ಚುಯಲ್'. ಸಮಾಜದಲ್ಲಿ ನಡೆಯುವ ಆಗುಹೋಗುಗಳ ಬಗ್ಗೆ ಪ್ರಾಮಾಣಿಕವಾಗಿ ವಿಶ್ಲೇಷಿಸಿ, ವಿಷಯಗಳನ್ನು ಸಮಾಜಾಭಿಮುಖವಾಗಿ ಮಂಡಿಸಬಲ್ಲವನು/ಳು ಈ ಪಬ್ಲಿಕ್ ಇಂಟಲೆಕ್ಚುಯಲ್. ದಿಟವಾದ ಅರ್ಥದಲ್ಲಿ ಪಬ್ಲಿಕ್ ಇಂಟಲೆಕ್ಚುಯಲ್ ಆಗಬೇಕಾದರೆ ತೀವ್ರವಾದ ಅಧ್ಯಯನ, ಚಿಂತನೆ, ನಿಃಸ್ವಾರ್ಥ ವ್ಯಕ್ತಿತ್ವ, ಕ್ರಿಯಾಶೀಲಗುಣ, ತಾಳ್ಮೆ, ಸಹೃದಯತೆ–ಇಂಥ ಹಲವು ಗುಣಗಳು ಬೇಕಾಗುತ್ತವೆ. ಇವನ್ನೆಲ್ಲ ಮೈಗೂಡಿಸಿಕೊಂಡವರು ಸಿಗುವುದು ಸುಲಭವಲ್ಲ. ಬಹಳ ಹಿಂದೆಯೇ ನಮ್ಮ ನಾಡಿನಲ್ಲಿ ಹೀಗೆ ಕಾಣಿಸಿಕೊಂಡ ಪಬ್ಲಿಕ್ ಇಂಟಲೆಕ್ಚುಯಲ್ ಎಂದರೆ ಅದು ಡಿವಿಜಿ (1887–1975). ಇಂಥ ಧೀಮಂತ ವ್ಯಕ್ತಿಯ ಮನೆಯ ಹಾಗೂ ಮನದ ಒಳಗಣ–ಹೊರಗಣ ನಡೆ–ನುಡಿಗಳ ಬಗ್ಗೆ ಬೆಳಕನ್ನು ಚೆಲ್ಲುವ ಕೃತಿಯೇ 'ಡಿವಿಜಿ ಥ್ರೂ ಲೆಟರ್ಸ್'. ಇದು ಡಿವಿಜಿ ಅವರ ಪತ್ರಗಳ ಸಂಗ್ರಹ; ಇದೇ ಮೊದಲ ಬಾರಿಗೆ ಪ್ರಕಟವಾಗುತ್ತಿದೆ. ಎಸ್. ಆರ್. ರಾಮಸ್ವಾಮಿ ಮತ್ತು ಬಿ. ಎನ್. ಶಶಿಕಿರಣ್ ಸಂಪಾದಿಸಿರುವ ಈ ಗ್ರಂಥವನ್ನು ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಪ್ರಕಟಿಸಿದೆ.

ಇತ್ತೀಚೆಗಷ್ಟೆ ಡಿವಿಜಿ ಅವರ ಇಂಗ್ಲಿಷ್ ಬರಹಗಳ ಹನ್ನೊಂದು ಸಂಪುಟಗಳು ಲೋಕಾರ್ಪಣೆ ಆಗಿದ್ದವು. ಇದೀಗ ಅವರ ಪತ್ರಗಳ ಸಂಗ್ರಹವೂ ಪ್ರಕಟವಾಗುತ್ತಿರುವುದು ಡಿವಿಜಿ ವಾಙ್ಮಯದ ಸಮಗ್ರ ಪರಿಚಯಕ್ಕೆ ಪೂರ್ಣತೆ ಲಭಿಸಿದಂತಾಗಿದೆ. ಡಿವಿಜಿಯವರು ಇಂಗ್ಲಿಷ್ ಮತ್ತು ಕನ್ನಡ– ಎರಡು ಭಾಷೆಗಳಲ್ಲೂ ಪತ್ರಗಳನ್ನು ಬರೆದಿದ್ದಾರೆ. ಡಿವಿಜಿಯವರು ಸಾಹಿತಿ, ಪತ್ರಕರ್ತ, ರಾಜಕಾರಣಿ, ರಾಜ್ಯಶಾಸ್ತ್ರಜ್ಞ – ಹೀಗೆ ಹಲವು ಆಯಾಮಗಳಲ್ಲಿ ಸಾರ್ವಜನಿಕ ಜೀವನದಲ್ಲಿದ್ದವರು; ಜೊತೆಗೆ ಪತಿಯಾಗಿ, ತಂದೆಯಾಗಿ, ಗುರುವಾಗಿ ಖಾಸಗಿ ಜೀವನದ ಹಲವು ಹೊಣೆಗಾರಿಕೆಗಳನ್ನು ನಿರ್ವಹಿಸಿದವರು. ಈ ಎಲ್ಲ ವಿವರಗಳಲ್ಲಿ ಅವರು ಯಾವ ಮಾರ್ಗವನ್ನು ತುಳಿದರೋ ಆ 'ಯೋಗಮಾರ್ಗ'ದ ನಕ್ಷೆಗಳಂತೆ ಇಲ್ಲಿ ಸಂಗ್ರಹಗೊಂಡಿರುವ ಸುಮಾರು ಇನ್ನೂರು ಪತ್ರಗಳು ಹೊಳೆಯುತ್ತಿವೆ. ಡಿವಿಜಿಯವರು ಯಾವೆಲ್ಲ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿಯನ್ನು ಮಾಡಿದ್ದಾರೋ ಆ ಎಲ್ಲ ನಂದನವನಗಳ ಸೌರಭವನ್ನು ಈ ಪತ್ರಗಳಲ್ಲಿಯೂ ಕಾಣಬಹುದು.



ಡಿವಿಜಿ ಥ್ರೂ ಲೆಟರ್ಸ್
ಸಂ: ಎಸ್. ಆರ್. ರಾಮಸ್ವಾಮಿ
ಬಿ.ಎನ್. ಶಶಿ ಕಿರಣ್
ಪ್ರ: ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ
ಸಂ: 080–26613147
ಪುಟ: 376 ₹500

ಆರು ಶೀರ್ಷಿಕೆಗಳಲ್ಲಿ ಇಲ್ಲಿಯ ಪತ್ರ ಸಂಗ್ರಹವನ್ನು ವಿಂಗಡಿಸಲಾಗಿದೆ: ರಾಜ್ಯತಾಂತ್ರಿಕರು ಮತ್ತು ಸಾರ್ವಜನಿಕ ಚಿಂತಕರು; ವಿದ್ವಾಂಸರು ಮತ್ತು ಸಾಹಿತಿಗಳು; ಪ್ರಮುಖ ಘಟನೆಗಳಿಗೆ ಪ್ರತಿಕ್ರಿಯೆ; ಕುಟುಂಬಸ್ಥರು ಮತ್ತು ಸಂಬಂಧಿಕರು; ಸ್ನೇಹಿತರು, ವಿದ್ಯಾರ್ಥಿಗಳು ಮತ್ತು ಸಹಚರರು; ಟಿಪ್ಪಣಿಗಳು ಮತ್ತು ಆಗ–ಈಗಗಳ ಜ್ಞಾಪಕಪತ್ರಗಳು.ಇವುಗಳ ಜೊತೆಗೆ ಡಿವಿಜಿ ಕೈಬರಹದ ಹಲವು ಪತ್ರಗಳ ಚಿತ್ರಗಳೂ, ಅವರ ಬದುಕಿಗೆ ಸಂಬಂಧಿಸಿದ ಹಲವು ಅಪರೂಪದ ಚಿತ್ರಗಳೂ ಇವೆ. ಡಿವಿಜಿಯವರಿಗೆ ಸರ್. ಎಂ. ವಿಶ್ವೇಶ್ವರಯ್ಯನವರಂಥವರು ಕೊಟ್ಟಿದ್ದ, ಆದರೆ ಗುಂಡಪ್ಪನವರು ನಗದಾಗಿಸಿಕೊಳ್ಳದ ಚೆಕ್‌ಗಳ ಚಿತ್ರಗಳೂ ಇಲ್ಲಿ ಸೇರಿವೆ. ಪತ್ರಗಳ ಬಗ್ಗೆ ವಿವರಣಾತ್ಮಕ ಟಿಪ್ಪಣಿಗಳೂ, ಡಿವಿಜಿಯವರ ವಂಶವೃಕ್ಷದ ವಿವರಗಳೂ ಕೃತಿಯ ಪ್ರಯೋಜನವನ್ನು ಹೆಚ್ಚಿಸಿವೆ.

ಮೈಸೂರು ಸರ್ಕಾರದ ಕಾರ್ಯದರ್ಶಿ, ಎಂ.ವಿಶ್ವೇಶ್ವರಯ್ಯ, ವಿ. ಎಸ್. ಶ್ರೀನಿವಾಸ ಶಾಸ್ತ್ರಿ, ಎ. ಆರ್. ಬ್ಯಾನರ್ಜಿ, ಸಿ. ರಾಜಗೋಪಾಲಚಾರಿ, ಮಿರ್ಜಾ ಇಸ್ಮಾಯಿಲ್, ಎನ್. ಮಾಧವ ರಾವ್, ಪಿ. ಕೋದಂಡ ರಾವ್, ಕೆ. ಸಿ. ರೆಡ್ಡಿ, ಎಂ. ಹಿರಿಯಣ್ಣ, ಎಂ. ಗೋವಿಂದ ಪೈ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕುವೆಂಪು, ವಿ. ಸೀತಾರಾಮಯ್ಯ, ತೀ. ನಂ. ಶ್ರೀಕಂಠಯ್ಯ, ವಿ. ಕೆ. ಗೋಕಾಕ್, ಕೆ. ಎಸ್. ನರಸಿಂಹಸ್ವಾಮಿ, ಎಲ್. ಎಸ್. ಶೇಷಗಿರಿ ರಾವ್, ಕೆ. ಪ್ರಭುಶಂಕರ್ – ಇಂಥ ಹಲವರು ಗಣ್ಯರಿಗೆ ಡಿವಿಜಿ ಪತ್ರಗಳನ್ನು ಬರೆದಿದ್ದಾರೆ. ಅವರ ಸಾರ್ವಜನಿಕ ಜೀವನದ ವ್ಯಾಪ್ತಿಯನ್ನು ಇದರಿಂದ ಸ್ವಲ್ಪಮಟ್ಟಿಗೆ ಗ್ರಹಿಸಬಹುದು. ಡಿವಿಜಿಯವರ ಲೋಕಾಭಿಮುಖವಾದ ದೃಷ್ಟಿ, ಸಾಮಾಜಿಕ ಬದ್ಧತೆ, ಆದರ್ಶಗಳು ಈ ಪತ್ರಗಳಲ್ಲಿ ಎದ್ದುಕಾಣುವ ವಿವರಗಳು. ಡಿವಿಜಿ ಅವರ ಮಡದಿ ಮತ್ತು ಮಗ (ಬಿ.ಜಿ.ಎಲ್. ಸ್ವಾಮಿ), ಸಹಚರರಾದ ಎಸ್. ಆರ್. ರಾಮಸ್ವಾಮಿ, ಟಿ. ಎನ್. ಪದ್ಮನಾಭನ್, ಡಿ. ಆರ್. ವೆಂಕಟರಮಣನ್, ಬಿ. ಎಸ್. ಸುಬ್ಬರಾಯ ಮುಂತಾದವರಿಗೆ ಬರೆದ ಪತ್ರಗಳೂ ಇಲ್ಲಿವೆ. ಇವುಗಳಲ್ಲಿ ಗುಂಡಪ್ಪನವರ ಸರಸತೆ, ಆತ್ಮೀಯರಲ್ಲಿ ಪ್ರೀತಿ–ವಿಶ್ವಾಸ–ಕಾಳಜಿಗಳು, ಜೀವನದ ಸತ್ಯ–ಶಿವ–ಸೌಂದರ್ಯಗಳನ್ನು ಅವರಿಗೆ ಕಾಣಿಸಬೇಕೆಂಬ ತವಕಗಳು ಕಾಣುತ್ತವೆ.

ಆ ಕಾಲದ ರಾಜಕೀಯ, ಸಾಮಾಜಿಕ, ಸಾಹಿತ್ಯಿಕ ವಾತಾವರಣದ ಬಗ್ಗೆ ಇಲ್ಲಿಯ ಪತ್ರಗಳು ಹಲವು ವಿವರಗಳನ್ನು ಸೂಚಿಸುತ್ತವೆ. ಬಿ. ಆರ್. ಅಂಬೇಡ್ಕರ್ ಅವರು 'ರೌಂಡ್ ಟೇಬಲ್ ಕಾನ್ಫರೆನ್ಸ್'ನಲ್ಲಿ ಡಿವಿಜಿಯವರ ಬರಹವನ್ನು ಉಲ್ಲೇಖಿಸಿರುವ, ಮಿರ್ಜಾ ಇಸ್ಮಾಯಿಲ್‌ಗೆ ಬರೆದ ಪತ್ರದಲ್ಲಿ ಆಡಳಿತಭಾಷೆಯಾಗಿ ಕನ್ನಡ ಹೇಗೆ ಮುಖ್ಯವಾಗುತ್ತದೆ ಎಂದು ವಿವರಿಸಿರುವ ಪತ್ರಗಳಂಥವನ್ನು ಇಲ್ಲಿ ಹೆಸರಿಸಬಹುದು. ಪ್ರಶಸ್ತಿಗಳ ಹಿಂದೆ ಓಡುವವರು ಗಮನಿಸಲೇಬೇಕಾದ ಪತ್ರ ಎನ್. ರಘುನಾಥನ್ ಅವರಿಗೆ ಬರೆದಿರುವುದು, 'ಮಂಕುತಿಮ್ಮನ ಕಗ್ಗ'ಕ್ಕೆ ಜ್ಞಾನಪೀಠ ತಪ್ಪಿಹೋದ ಸಂದರ್ಭದ್ದು. ಕುವೆಂಪು ಅವರ ವಿವಾಹದ ಸಂದರ್ಭದಲ್ಲಿ ಡಿವಿಜಿ ಪದ್ಯರೂಪದಲ್ಲಿ ಸರಳರಗಳೆಯಲ್ಲಿ ಕಳುಹಿಸಿರುವ ಸಂದೇಶ ಮನೋಜ್ಞವಾಗಿದೆ. ಡಿವಿಜಿಯವರು ಮಡದಿ ಭಾಗೀರಥಮ್ಮನವರಿಗೆ ಬರೆದಿರುವ ಪತ್ರಗಳು ಆರ್ದ್ರವಾಗಿವೆ, ತಾರುಣ್ಯಸಹಜವಾಗಿವೆ, ಪ್ರೇಮಾಂತಃಕರಣದಿಂದ ತುಂಬಿಹೋಗಿವೆ; ಮಗ ಬಿ.ಜಿ.ಎಲ್. ಸ್ವಾಮಿಗೆ ಬರೆದಿರುವ ಪತ್ರವೊಂದರಲ್ಲಂತೂ ನಮ್ಮೆಲ್ಲರ ಜೀವನದುದ್ದಕ್ಕೂ ಜೊತೆಯಾಗಿರಬೇಕಾದ ಜೀವನಸೂತ್ರವೇ ಹರಳುಗಟ್ಟಿದೆ. ಆತ್ಮೀಯರಿಗೆ ಬರೆದಿರುವ ಪತ್ರಗಳಲ್ಲಿ ಸ್ನೇಹದ ವ್ಯಾಖ್ಯೆ, ಹರಟೆಗೂ ಸ್ನೇಹಕ್ಕೂ ವಿಚಾರಶಕ್ತಿಗೂ ಇರುವ ನಂಟು, ಹೊಣೆಗಾರಿಕೆ, ಹಾಸ್ಯಪ್ರಜ್ಞೆಯ ಒರತೆ, ಸ್ನೇಹದ ಸಲುಗೆ, ಸರಸತೆ – ಇಂಥ ಹಲವು ಗುಣಗಳ ಉತ್ಸವವನ್ನೇ ಕಾಣಬಹುದು. ಒಬ್ಬ ಪರಿಪೂರ್ಣ ವ್ಯಕ್ತಿ, ಡಿವಿಜಿಯವರ ಮಾತಿನಲ್ಲಿಯೇ ಹೇಳುವುದಾದರೆ ಸುಸಂಸ್ಕೃತ ವ್ಯಕ್ತಿಯೊಬ್ಬ, ಲೋಕಾಂತದಲ್ಲೂ ಏಕಾಂತದಲ್ಲೂ ಹೇಗಿರುತ್ತಾನೆ ಎನ್ನುವುದಕ್ಕೆ ಸಾಕ್ಷ್ಯಗಳಾಗಿವೆ ಇಲ್ಲಿಯ ಪತ್ರಗಳು.

ಒಟ್ಟಿನಲ್ಲಿ ಈ ಕೃತಿ ಸಾರಸ್ವತಲೋಕಕ್ಕೆ ದೊಡ್ಡ ಕೊಡುಗೆಯಾಗಿದೆ ಎನ್ನುವುದು ದಿಟ. ಡಿವಿಜಿ ನಮ್ಮನ್ನು ಅಗಲಿ ಇದೇ ಏಳನೇ ತಾರೀಖಿಗೆ ಐವತ್ತು ವರ್ಷಗಳಾಗುತ್ತವೆ. ಅಂದೇ ಇದು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಲೋಕಾರ್ಪಣೆಯಾಗುತ್ತಿದೆ. ❖

ಮೊದಲ ಓದು

ಅತ್ತ ಇತ್ತ ಸುತ್ತ ಮುತ್ತಲಿನ ಕತೆಗಳು



ಒಳಚರಂಡಿ (ಕಥಾ ಸಂಕಲನ)
ಸಂ: ನಾಗತಿಹಳ್ಳಿ ಚಂದ್ರಶೇಖರ
ಪ್ರ: ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ
ಸಂ: 99005 55255

ಅರೆರೆ.. ಇಂಥವರಿಲ್ಲೇ ಇದ್ರಲ್ಲಪ್ಪ.. ನಮ್ಮ ಓಣಿಯಿಂದಾಚೆ, ಇಂಥವರೊಬ್ಬರು ನಮ್ಮ ಪಕ್ಕದ ಮನೇಲೇ ಇದ್ರು, ಛೆ.. ಛೆ.. ಇದೊಂಚೂರು ನಮ್ಮ ಯೌವ್ವನದ ಕತೆ ಇದ್ದಂತೆಯೇ ಇದೆ ಅಂತನ್ಕೊಂಡು, ಹುಳ್ಳನಗೆ ಬೀರುವಾಗಲೇ ಹುಬ್ಬುಗಂಟಾಗುತ್ತದೆ.. ಕೆಲವೊಮ್ಮೆ ಕಳ್ಳನಗು, ಕೆಲವೊಮ್ಮೆ ಎಲ್ಲೋ ಓದಿದ್ದೆವಲ್ಲ ಈ ಕತೆ ಎಂಬ ಅನುಮಾನದಲ್ಲಿಯೇ ಮತ್ತೆ ಇಡಿಯಾಗಿಯೇ ಓದಿಸಿಕೊಂಡು ಹೋಗುತ್ತವೆ.

ಈ ಹಿಂದೆ, ಪ್ರಜಾವಾಣಿ, ಮಯೂರ ಸೇರಿದಂತೆ ಮತ್ತಿತರ ಪತ್ರಿಕೆಗಳಲ್ಲಿ ಪ್ರಕಟವಾದ ಕತೆಗಳ ಸಂಕಲನ ಇದು. ಹೊಸ ಓದುಗರಿಗೆ ತಾಜಾ ಓದು ಎಂದೆನಿಸುತ್ತದೆ. ಎಂಟು ಕತೆಗಳು ಅಷ್ಟ ದಿಕ್ಕುಗಳಿಂದಲೂ ನಮ್ಮ ಸಮಾಜದ ಚಲನೆಯನ್ನು ಹಿಡಿದಿಡುತ್ತವೆ. ನಮ್ಮೊಳಗಿನ ಸಣ್ಣತನ, ಸಣ್ಣವರ ಔದಾರ್ಯ, ಭ್ರಷ್ಟಾಚಾರ, ಮಾಧ್ಯಮಗಳ ಮನಸ್ಥಿತಿ, ಲಾಭಕೋರರು.. ಇವರೆಲ್ಲ ಇಲ್ಲೇ ನಮ್ಮ ಸುತ್ತಲೂ ಇರುವ ಪಾತ್ರಗಳೇ ಎನಿಸುತ್ತವೆ.

ಸಿನಿಮಾ, ಮಾಧ್ಯಮ, ಆರೋಗ್ಯ, ಅಭಿಯಾನ ಇತರ ಪ್ರಚಲಿತ ವಿದ್ಯಮಾನಗಳೇ ಕಥೆಯ ಹೂರಣ ಆಗಿರುವುದರಿಂದ ಓದುಗರೆಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ಕನೆಕ್ಟ್ ಆಗುತ್ತವೆ. ಕತೆಗಳು ಆಯಾ ಕಾಲದ ಕನ್ನಡಿಯಾಗಿರುವಂತೆ, ಇಲ್ಲಿಯ ಕತೆಗಳು ಆಯಾ ಕಾಲಮಾನದ ವಿಡಂಬನೆಯನ್ನು ಹಿಡಿದಿಟ್ಟಿವೆ. ಕೆಲವೊಮ್ಮೆ ಹತಾಶರಾಗುವಂತೆ, ಕೆಲವೊಮ್ಮೆ ರೋಷ ಉಕ್ಕಿಸುವಂತೆ, ಕೆಲವೊಮ್ಮೆ ನಮ್ಮದೇ ಸಣ್ಣತನವನ್ನು ನೋಡಿ, ಸಂಕೋಚ ಪಟ್ಟಂಥ ಭಾವಗಳು, ಇಲ್ಲಿಯ ಕತೆಗಳನ್ನು ಓದಿದಾಗ ಮೂಡುತ್ತವೆ.

ಪ್ರತಿ ಕತೆಯೂ ಈ ಕಾಲಮಾನದ ಜನಮನಸ್ಥಿತಿಯನ್ನು ಬಯಲಿಗೆಳೆಯುತ್ತವೆ. ಕತೆ ಮುಗಿದಾಗ ಓದುಗರಿಂದ ಬರುವ ನಿಡಿದಾದ ಉಸಿರಿನಲ್ಲಿ ಅನಿರೀಕ್ಷಿತ ಅಂತ್ಯದ ಬಗ್ಗೆ ಒಂದು ಪ್ರಶ್ನೆ, ಒಂದು ಚಿಂತನೆ ಎರಡನ್ನೂ ಉಳಿಸಿಹೋಗುತ್ತವೆ.

ಪುಟ: 128 ₹125

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಕೇಸವೆ

ಕೇಸವೆ (ನಾ). ಕೆಂಪು ಬಣ್ಣದ ಎಮೆ, -ರೆಪ್ಪೆ.

ಮೇಘನಾದನು ರಾತ್ರಿಯುದ್ಧದಲ್ಲಿ ವಿಷದ ಹಾವಿನ ಪ್ರವಾಹದ ಬಾಣ ಹೂಡಿದನು. ರಾಮಸೇನೆಯ ವೀರ ಸೈನಿಕರ ಚೈತನ್ಯ ಉಡುಗಿ ಹೋಗಿ ಅವರು ನೆಲಕ್ಕೆ ಉರುಳಿದರು. ರಾಮಚಂದ್ರನು ಮೂರ್ಛಿತನಾದನು. ಆಗ ಗರುಡ ತನ್ನ ರೆಕ್ಕೆಗಳಿಂದ ಬೀಸುತ್ತಿದ್ದ ಗಾಳಿಗೆ ನಾಗನ ಬಾಣದ ವಿಷಸರ್ಪಗಳು ಅಲ್ಲಿರದೆ ಹರಿದೋಡಿದವು. ಇಕ್ಷ್ವಾಕು ಕುಲದೀಪನ ಕಣ್ಣುಗಳು ಅರಳಿದವು. ಅಷ್ಟು ಹೊತ್ತಿಗೆ ಬೆಳಗಾದ ಚಿತ್ರಣವನ್ನು ಕುವೆಂಪು ನೀಡುವಾಗ 'ಕೇಸವೆ' ಪದ ರೂಪಿಸಿ ಹೀಗೆ ಬಣ್ಣಿಸಿದ್ದಾರೆ.

'ಉಷೆಯ ಕಣ್
ಕೇಸವೆದೆರೆದುದಾಶೆಯಂದದಿ ಇಂದ್ರನಾಶೆಯಲಿ.'

ಶಂಕೆವೆಂಕೆ

ಶಂಕೆವೆಂಕೆ (ನಾ). ಸಂಶಯದ ಬೆಂಕಿ

ಸೇನಾನಿ ಮಹಾಪಾರ್ಶ್ವನು ಇಡೀ ರಾತ್ರಿ ವೈರಿಗಳ ಧಾಳಿಯಿಂದ ಲಂಕೆಯನ್ನು ರಕ್ಷಿಸುವನು. ಸೂರ್ಯೋದಯವಾಗಲು ರಾಕ್ಷಸಸೇನೆ ಜಯಘೋಷಿಸುತ್ತ ಲಂಕೆಗೆ ಮರಳುವುದು. ಆದರೆ ವಿಜಯ ಕಾರಣನಾದ ಮಹಾಪಾರ್ಶ್ವನು ಎಲ್ಲೂ ಕಾಣುವುದಿಲ್ಲ. ಅವನ ಬಗ್ಗೆ ರಾವಣನು ಚಿಂತಿಸುತ್ತ 'ಶಂಕೆವೆಂಕೆ'ಯಲ್ಲಿ ಬೇಯುವನು ಎಂದು ಕುವೆಂಪು ಹೀಗೆ ವರ್ಣಿಸಿದ್ದಾರೆ:

'ಮೇಣೆನಗೆ ಪೇಸುತ್ತೆ,
ದೇಶಚ್ಯುತಿಯ ಬಹುಕ್ಲೇಶಕ್ಕೆ ತರಿಸಂದು,
ತೊರೆದನೋ ತಾಯ್‌ಭೂಮಿಯಂ? ಶಂಕೆವೆಂಕೆಯಲಿ
ಬೇಯುತಿರಲಂತು ಲಂಕೇಶ್ವರಂ.'

ಊರು ಸೇರಿದ ಕರಡಿ ಪ್ರಸಂಗ...



ಹೊಸಪೇಟೆಯಲ್ಲಿ ಸೆರೆ ಸಿಕ್ಕ ಕರಡಿ ಚಿತ್ರ: ಲವ

10ನೇ ಪುಟದಿಂದ...

ಇನ್ನು ಜನರು ಕಲ್ಲುಗಳಿಂದ ಹೊಡೆದು, ನಾಯಿಗಳನ್ನು ಛೂ ಬಿಟ್ಟು, ಬಾಯಿ ಮಾಡಿ ಓಡಿಸಿದ ಕರಡಿಗಳು ಜನರ ಮೇಲೆ ಮನಸ್ಸಲ್ಲಿ ರಚ್ಚು ಇಟ್ಟುಕೊಂಡು ಪ್ರತಿಕಾರ ತೀರಿಸಿಕೊಳ್ಳಲು ದಾಳಿ ಮಾಡುತ್ತವೆ. ಬಿಟ್ಟರೆ ಮರಿ ಕರಡಿಗಳೊಂದಿಗೆ ತಾಯಿ ಕರಡಿ ಇದ್ದಾಗ, ಬೆದೆಗೆ ಬಂದಾಗ ದಾಳಿ ಮಾಡುತ್ತವೆ.

ಇವು ಹೆಚ್ಚುಕಮ್ಮಿ ಮನುಷ್ಯರಷ್ಟೇ ಹುಷಾರು. ಮನುಷ್ಯರ ಮೇಲೆ ದಾಳಿ ಮಾಡಿದರೆ ಮೊದಲು ಹಿಡಿದು ಎಳೆಯುವುದೇ ಕಾಲುಗಳನ್ನು. ನೆಲಕ್ಕೆ ಬೀಳಿಸಿ ಮೊದಲು ಪರಚುವುದೇ ಮುಖದ ಭಾಗವನ್ನು. ಆಮೇಲೆ ಸಿಕ್ಕ ಸಿಕ್ಕಲ್ಲಿ ಕಚ್ಚುತ್ತವೆ. ವಿಷ ಸೇರಿದಂತೆ ಇನ್ನಿತರೆ ಜೀವ ಹಾನಿಕಾರಕ, ರಾಸಾಯನಿಕ ವಸ್ತುಗಳನ್ನು ಮೂಸಿ ನೋಡಿ ಮುಟ್ಟುವುದಿಲ್ಲ. ಮನಷ್ಯರನ್ನು ದೂರದಿಂದಲೇ ಗಮನಿಸಿ ಮರೆ ಆಗುತ್ತವೆ. ಅಲ್ಲದೆ ಬೆಳೆಗಳ ಕಾವಲಿಗೆ ರೈತರು ಹಾಕಿದ ಎಕ್ಸಲೇಟರ್ ವಯರ್, ದಪ್ಪ ತಂತಿ, ಪ್ಲಾಸ್ಟಿಕ್ ಹಗ್ಗ... ಇವು ಒಂದು ಕಾಲಿಗೆ, ಹೊಟ್ಟೆ ಭಾಗಕ್ಕೆ ಬಿದ್ದರೆ ಅದನ್ನು ತನ್ನ ಎರಡೂ ಕೈಗಳಿಂದ ಸುಲಭವಾಗಿ ಬಿಡಿಸಿಕೊಂಡು ಅಲ್ಲಿಂದ ಕಾಲ್ಕೀಳುತ್ತವೆ.

ಬಲೆಗೆ ಬೀಳಿಸುವ ಬಗೆ..

ಕರಡಿ ದಾಳಿ ಮಾಡಿದೆ, ಬೆಳೆ ಮಧ್ಯೆ ಅವಿತು ಕುಳಿತಿದೆ ಎನ್ನುವ ಸುದ್ದಿ ಬಂದರೆ ಬೋನು, ಬಲೆ, ಕವಲು ಕಟ್ಟಿಗೆಗಳೊಂದಿಗೆ ಅರಣ್ಯ ಸಿಬ್ಬಂದಿ ಸ್ಥಳಕ್ಕೆ ಧಾವಿಸುತ್ತಾರೆ. ಕರಡಿ ಇರುವ ಸ್ಥಳ, ಅದನ್ನು ಯಾವ ದಿಕ್ಕಿಗೆ ಓಡಿಸಿಕೊಂಡು ಹೋದರೆ ಬಲೆಗೆ ಬೀಳಿಸಬಹುದು ಎಂಬ ಲೆಕ್ಕಾಚಾರ ಮಾಡಿ, ಆಯಕಟ್ಟಿನ ಸ್ಥಳದಲ್ಲಿ ಬಲೆ ಕಟ್ಟುತ್ತಾರೆ. ಅದರಲ್ಲೇ ಒಂದಿಬ್ಬರು ಧೈರ್ಯವಂತರು ಕೈಯಲ್ಲಿಯೂ ಬಲೆಗಳನ್ನು ಹಿಡಿದುಕೊಂಡು ಮುನ್ನುಗ್ಗಿ ಕರಡಿಯನ್ನು ಬಲೆ ಕಟ್ಟಿದ ಸ್ಥಳದತ್ತ ಅಟ್ಟಿಸಿಕೊಂಡು ಹೋಗುತ್ತಾರೆ. ಲೆಕ್ಕಾಚಾರದಂತೆ ಕಟ್ಟಿದ ಬಲೆಗೆ ಬಿದ್ದರೆ ಸರಿ. ಒಂದು ವೇಳೆ ಆ ಕರಡಿ ಹಿಂತಿರುಗಿ ಅಟ್ಟಿಸಿಕೊಂಡು ಹೋದವರ ಮೈಮೇಲೆ ಏರಿ ಬಂದರೆ ಅದೇ ಬಲೆಯನ್ನು ಹಾಕಿ ಬಂಧಿಸುತ್ತಾರೆ. ಹೀಗೆ ಬಲೆಗೆ ಸಿಕ್ಕಾಕ್ಷಣ ಕರಡಿಗೆ ಕವಲು ಕಟ್ಟಿಗೆ ಹಾಕಿ ಅದುಮುತ್ತಾರೆ. ಕರಡಿಯ ಆರ್ಭಟ ತಣ್ಣಗಾಗುತ್ತಿದ್ದಂತೆ ಬಲೆ ಬಿಡಿಸಿ ಬೋನಿಗೆ ಹಾಕುತ್ತಾರೆ.

ಒಂಟಿ ಕರಡಿ ಕಂಡರೆ ಭಯ ಬೀಳುವ ಜನ ಗುಂಪಾಗಿದ್ದಾಗ ಹೆದರಿಸುವುದು, ಕೆರಳಿಸುವುದು, ಬಾಯಿ ಮಾಡುತ್ತಾ ಓಡಿಸಿಕೊಂಡು ಹೋಗುವುದು ಮಾಡುತ್ತಾರೆ. ಸಮೂಹ ಸನ್ನಿಗೆ ಒಳಗಾಗುವ ಜನ ಭಂಡತನ ತೋರಿಸುತ್ತಾರೆ. ಅವರ ಹುಚ್ಚಾಟ ನಿಯಂತ್ರಿಸುವುದೇ ಅರಣ್ಯ ಇಲಾಖೆಗೆ ದೊಡ್ಡ ಸವಾಲು. ಒಮ್ಮೊಮ್ಮೆ ಕುಪಿತಗೊಂಡ ಕರಡಿಗಳು ಜನರತ್ತ ಏರಿ ಬಂದು, ಎದ್ದು ನಿಂತು ಎರಡೂ ಕೈಗಳಲ್ಲಿಯ ಉಗುರಿನಿಂದ ಪರಚಿದ, ಕಡಿದು ತೀವ್ರ ಗಾಯಗೊಳಿಸಿದ, ಸಾಯಿಸಿದ ಉದಾಹರಣೆಗಳಿವೆ. ಸಿಟ್ಟಿಗೆದ್ದ ಕರಡಿಯ ರೌದ್ರಾವತಾರ ಎಂತಹವರನ್ನೂ ಬೆಚ್ಚಿ ಬೀಳಿಸುತ್ತದೆ. ಅದರ ಆರ್ಭಟ, ಗರ್ಜನೆಗೆ ಎದೆ ಧಸಕ್ಕೆನ್ನುತ್ತದೆ. ಕರಡಿ ಹಿಡಿಯುವ ಕಾರ್ಯಾಚರಣೆ ಜನರಿಗೆ ವಿನೋದವೆನಿಸಿದರೆ, ಸೆರೆಹಿಡಿಯುವ ತಂಡದ ಜೀವ ಅಕ್ಷರಶಃ ಬಾಯಿಗೆ ಬಂದಿರುತ್ತದೆ.

ಕರಡಿ ಸೆರೆ ಹಿಡಿಯುವ ಕಾರ್ಯಾಚರಣೆ ವೇಳೆಯಲ್ಲಿ ಅಥವಾ ಜನರಿಂದ ಹಲ್ಲೆಗೆ ತುತ್ತಾಗಿದ್ದರೆ ಪಶು ವೈದ್ಯರಿಂದ ಸೂಕ್ತ ಪರೀಕ್ಷೆ ಮತ್ತು ಚಿಕಿತ್ಸೆ ಕೊಡಿಸಲಾಗುತ್ತದೆ. ಅದರ ಆರೋಗ್ಯವನ್ನು ಖಾತ್ರಿ ಮಾಡಿಕೊಂಡು ರಾತ್ರಿ ಹೊತ್ತಲ್ಲಿ ಕಾಡಿಗೆ ಬಿಡಲಾಗುತ್ತದೆ. ಒಂದು ವೇಳೆ ಚಿಕಿತ್ಸೆಯ ಅವಶ್ಯಕತೆ ಇದ್ದರೆ ತಮ್ಮ ಸುಪರ್ದಿನಲ್ಲಿಟ್ಟುಕೊಂಡು ಗುಣಮುಖ ಮಾಡುತ್ತಾರೆ. ಪುಂಡ ಕರಡಿಗಳನ್ನು ಮೃಗಾಲಯಕ್ಕೆ ಬಿಡಲಾಗುತ್ತದೆ. ಚಂದ್ರಶೇಖರಪುರದಲ್ಲಿ ಸೆರೆ ಸಿಕ್ಕ ಕರಡಿ ಈಗ ಗದಗ ಮೃಗಾಲಯದಲ್ಲಿ ಇದೆ. ❖

ಕಥೆ
ಪ್ರೇಮಕುಮಾರ್ ಹರಿಯಬ್ಬೆ ಅವರ **ಅವನು ಅಸ್ವಸ್ಥ ಇರಬೇಕು**
prajavani.net/short-story

ಕವನ
ಡಾ. ದಿಲೀಪ್ ಎನ್ಕೆ ಅವರ **ಸಾಸಿವೆ ಕಳುವಾಗಿದೆ**
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಗಣಿತದಲ್ಲಿ ಗರ್ದಿ ಗಮ್ಮತ್ತು

ಲೆಕ್ಕ ಒಂದು–ರೀತಿ ಮೂರು

ಇಲ್ಲಿ ಕೊಟ್ಟಿರುವ ಲೆಕ್ಕವನ್ನು ಹೀಗೂ ಮಾಡಬಹುದು. ಯಾವುದೇ ಒಂದು ಸಂಖ್ಯೆಗೆ 11ರಿಂದ ಬೇರೆ ಬೇರೆ ರೀತಿಯಲ್ಲಿ ಗುಣಿಸಬಹುದು.

ಉದಾ: 84X11 = 924 (ಇದು ಸಾಮಾನ್ಯ ರೀತಿ)

ಬೇರೆ ರೀತಿಗಳು

ರೀತಿ 1:
84x11
ಇಲ್ಲಿ 84ಕ್ಕೆ ಒಂದು ಸೊನ್ನೆ ಸೇರಿಸಿ. ಆಗ **840** ಆಗುತ್ತದೆ. ಇದಕ್ಕೆ ಮತ್ತೆ ಅದೇ 84ನ್ನು ಕೂಡಿಸಿ. ಆಗ **924** ಬರಲಿದೆ.

ರೀತಿ 2:
0840
ಇಲ್ಲಿ ಹಿಂದೊಂದು ಮುಂದೊಂದು ಸೊನ್ನೆ ಸೇರಿಸಿ ಬಲದಿಂದ ಎರಡೆರಡು ಅಂಕಿ ಕೂಡಿಸುತ್ತಾ ಹೋಗುವುದು. ಕೈಲೆ ಬಂದರೆ ಮುಂದಿನ ಸಂಖ್ಯೆಗಳಿಗೆ ಸೇರಿಸುವುದು.

ಇಲ್ಲಿ
04 = 4
48 = 2 (**1**ನ್ನು ಮುಂದಿನ ಸಂಖ್ಯೆಗೆ ಸೇರಿಸಿ)
80 = 8 + 1 = 9
ಕೆಳಗಿನಿಂದ ಮೇಲೆ ಅಂಕಿಗಳನ್ನು ಜೋಡಿಸಿ **= 924**

ರೀತಿ 3:
84x11
ಇಲ್ಲಿ **84**ನ್ನು ದಶಸ್ಥಾನದ **8**ಕ್ಕೆ ಸೇರಿಸಿ ಬಂದ ಉತ್ತರಕ್ಕೆ ಬಿಡಿ **4** ಜೋಡಿಸಿದರೆ **924.**
84 = 84 + 8 = 92
92ಕ್ಕೆ **4** ಜೋಡಿಸಿದರೆ **= 924**.

ಸರ್ಕಸ್ ನಾಯಿಯ ಪರದಾಟ!

ಸರ್ಕಸ್ ಒಂದರಲ್ಲಿ ಟಾಮಿ ಹೆಸರಿನ ನಾಯಿಯೊಂದಿತ್ತು. ಅದಕ್ಕೆ ಮೈ ತುಂಬಾ ರೋಮವಿತ್ತು. ಸರ್ಕಸ್‌ನಲ್ಲಿ ಬೆಂಕಿಯ ಚಕ್ರದೊಳಗೆ ಜಿಗಿದು ಪ್ರೇಕ್ಷಕರಿಗೆ ಮನರಂಜನೆ ನೀಡುತ್ತಿತ್ತು. ಒಂದು ದಿನ ಹೀಗೆ ಬೆಂಕಿಯ ಚಕ್ರದೊಳಗೆ ಹಾರುವಾಗ ಅದರ ರೋಮಕ್ಕೆ ಬೆಂಕಿ ಹತ್ತಿಕೊಂಡಿತು. ಆಚೆ ಕಡೆಯಿಂದ ಹೊರಬಂದಾಗ ಅದರ ರೋಮವೆಲ್ಲಾ ಸುಟ್ಟು ಬರಿ ಚರ್ಮವಷ್ಟೇ ಕಾಣುತ್ತಿತ್ತು. ಇದನ್ನು ಕಂಡ ಟಾಮಿಯ ಮುಖ ಪೆಚ್ಚಾಯಿತು.



ಜಾಣಪದ ಆಟ

ಇಲ್ಲಿ ಕೊಟ್ಟಿರುವ ಅಕ್ಷರಗಳಿಗೆ ಹಿಂದೊಂದು ಅಕ್ಷರ ಸೇರಿಸಿ ಅರ್ಥಬದ್ಧ ಪದ ಮಾಡಿ. ಅಕ್ಷರಗಳನ್ನು ಪಟ್ಟಿಯಿಂದ ಆರಿಸಿಕೊಳ್ಳಿ.

1		ಂಡು	1		ಂದು
2		ಂಡು	2		ಂದು
3		ಂಡು	3		ಂದು
4		ಂಡು	4		ಂದು
5		ಂಡು	5		ಂದು
6		ಂಡು	6		ಂದು
7		ಂಡು	7		ಂದು
8		ಂಡು	8		ಂದು
9		ಂಡು	9		ಂದು
10		ಂಡು	10		ಂದು

ಅಕ್ಷರ ಪಟ್ಟಿ

ಕೊ	ಎ	ಬೆ	ಬ	ಕ
ತ	ಚೆ	ಒ	ಕ	ಇ
ತು	ತಿ	ಬೆ	ದು	ಉ
ಸ	ಜೊ	ದ	ಗ	ಗು

ಕಾವ್ಯ ಚಮತ್ಕಾರ

ಇಲ್ಲಿರುವ ಕಾವ್ಯವನ್ನು ಓದಿ ನೋಡಿ.
ತುಟಿಗೆ ತುಟಿ ತಾಗುವುದೇ ಇಲ್ಲ!

ಸುರನರನಾಗಾಧೀಶ್ವರ ಕಿರಕಿರೀಟಾಗ್ರಿ
ಲಗ್ನ ಚರಣ ಸರೋಜಾ
ಧೀರೋದಾರ ಚರಿತ್ರೋತ್ಸಾರಿತ
ಕಲುಕ್ಷಾಘರಸಕ್ಷಿಳ್ಕರಿನನರ್ಹಾ

ಮೋGನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ 'IGHT' ಅಕ್ಷರಗಳಿಗೆ ಹಿಂದೆ ಒಂದು ಅಕ್ಷರ ಸೇರಿಸಿ ಅರ್ಥಬದ್ಧ ಪದ ರಚಿಸಿ.

1		I	G	H	T
2		I	G	H	T
3		I	G	H	T
4		I	G	H	T
5		I	G	H	T
6		I	G	H	T
7		I	G	H	T
8		I	G	H	T

ಶಬ್ದಾಟ

ಇಲ್ಲಿ ಕೊಟ್ಟಿರುವ ಒಂದು ಶಬ್ದ ಹಾಗೂ ಒಂದು ಅಕ್ಷರ ಬಳಸಿಕೊಂಡು ಬೇರೊಂದು ಶಬ್ದ ಮಾಡಿ.

ROSE + T
= ________________

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ

1	ಹದ	+	ಪರ	+	ಕೆ	=	
2	ಹಳೆ	+	ಬಿಸಿ	+	ರು	=	
3	ಅಂಕ	+	ಗವಿ	+	ಲ	=	
4	ಹಸಿ	+	ನರ	+	ಣ್ಣಿ	=	
5	ಗರ	+	ಮಳೆ	+	ಹಾ	=	

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ:
1.ಕಟ್ಟೆಟ್ಟಬುತ್ತಿ
2.ಕಾಲಾವಕಾಶ
3.ಜನಾನುರಾಗಿ
4.ಜೋಕಾಲಿಆಡು
5.ಜನಮನ್ನಣೆ

ಮೋಜಿನ ಇಂಗ್ಲಿಷ್:
1.WALK
2.WRITE
3.LODGE
4.HOUR
5.KNOW
6.HALF
7.SIGN
8.YEAR

ಜಾಣಪದ ಆಟ:
1.ಅನಂತರ
2.ಅಭ್ಯಂತರ
3.ನಿರಂತರ
4.ಪಕ್ಷಾಂತರ
5.ಲಕ್ಷಾಂತರ
6.ಗಂಡಾಂತರ
7.ಗುಹಾಂತರ
8.ಸಮಾಂತರ
9.ಹಸ್ತಾಂತರ
10.ಮಧ್ಯಂತರ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಶಾಶ್ವತಿ ಎಸ್.ಯು.
ತುಮಕೂರು

ಕುಶಲ ಎಚ್.
ದೊಡ್ಡಬಿದಿರಕಲ್ಲು

ನಿತೀಶ್
ಬೆಂಗಳೂರು

ಅಭಯ್ ಎಂ.ಪಿ.
ಶಿವಮೊಗ್ಗ

ಚೇತಶ್ರೀ ಎಸ್.
ಮಂಡ್ಯ

ಗಿರೀಶ್ ಎನ್.
ಬಾಗಲಕೋಟೆ

ಶೈಯೋಕ್ ಕಣಿವೆಯ ಚೆಲುವು

ಲಡಾಖ್‌ನಲ್ಲಿರುವ ಪರ್ವತಗಳ ತಪ್ಪಲಿನಲ್ಲಿ ಹರಿಯುವ ಶೈಯೋಕ್ ನದಿಯ ಸಂಗ ಕೆಲವೊಮ್ಮೆ ಏಕತಾನತೆ ಅನಿಸಿದರೆ, ಅದು ಮರೆಯಾದಾಗ ಕಸಿವಿಸಿ ಸೃಷ್ಟಿಯಾಗುತ್ತದೆ. ಲಡಾಖಿನಲ್ಲಿ ಹಲವು ನದಿಗಳು ಸೇರಿ ಒಂದುಗೂಡಿದರೆ ಇವೇ ನದಿ ದೇಶಗಳ ಗಡಿಯಾಗಿ ಬೇರ್ಪಡಿಸುವ ರೇಖೆಗಳಾಗುತ್ತವೆ. ಇಂಥ ನದಿಯ ದಡದಲ್ಲೇ ಸಾಗಿದಾಗ ಆದ ಸಂಭ್ರಮ, ಭ್ರಮೆ, ದುಗುಡ ಹೀಗೆ ನಾನಾನುಭವಗಳಿಗೆ ಅಕ್ಷರ ರೂಪ ನೀಡಿದ್ದಾರೆ ಲೇಖಕರು.

• ರಹಮತ್ ತರೀಕೆರೆ

ಶೈಯೋಕ್ ಕಣಿವೆಯ ವಿಹಂಗಮ ನೋಟ

ನದಿಯ ಹರಿವನ್ನು ಹೀಗೂ ವೀಕ್ಷಿಸಬಹುದು...

ಲಡಾಖಿನಲ್ಲಿ ನಮ್ಮ ವಾಹನವು ಲೆಹ್ ನಗರದಿಂದ ಮೇಲೇರುತ್ತ ಏರುತ್ತ ಜಗತ್ತಿನ ಅತಿ ಎತ್ತರದ ರಸ್ತೆಯಿರುವ ಕರ್ದುಂಗಲಾ ಪಾಸ್‌ಗೆ ಮುಟ್ಟುತ್ತದೆ. ಬಳಿಕ ಅಂಕುಡೊಂಕು ರಸ್ತೆಯಲ್ಲಿ ಗಿರಿಗಿರಿ ತಿರುಗುತ್ತ ಪರ್ವತ ಶ್ರೇಣಿಯೊಂದರ ತಳಕ್ಕಿಳಿಯುತ್ತದೆ. ಆಗ ತಟ್ಟನೆ ಒಂದು ಕೆಸರು ಬಣ್ಣದ ಹೊಳೆ ಕಾಣಿಸಿಕೊಳ್ಳುತ್ತದೆ. ಅದೇ ಶೈಯೋಕ್! ಮುಂದೆ ಇದು ನುಬ್ರಾ ಹೊಳೆಯನ್ನು ಸೇರಿಸಿಕೊಂಡು ಸಿಂಧುವಿನಲ್ಲಿ ಮಿಲನಗೊಳ್ಳುತ್ತದೆ. ಲಡಾಖಿನ ಬಹುತೇಕ ನದಿಗಳ ಹುಟ್ಟು ಟಿಬೆಟ್. ಹರಿವು ಭಾರತ. ಗಮ್ಯ ಪಾಕಿಸ್ತಾನ. ತಣ್ಣನೆಯ ಮರುಭೂಮಿಯಲ್ಲಿ ಹುಟ್ಟುವ ಇವು ಸೇರುವುದು ಆಫ್ರಿಕಾ ಅರಬಸ್ಥಾನ ಭಾರತಗಳ ನಡುವಣ ಕಡಲಿಗೆ. ಜಲದ ಖಂಡಾಂತರ ಪಯಣವೇ ಸೋಜಿಗ. ಸಹಸ್ರಮಾನಗಳಿಂದ ಹರಿಯುತ್ತ ಪಥ ಬದಲಿಸುತ್ತ ಅದು ಪರ್ವತಗಳನ್ನು ಕೊರೆದು ಹೊಸಪಥಗಳನ್ನು ರಚಿಸಿಕೊಂಡಿದೆ. ಹಿಂದೆ ಹರಿದಿರಬಹುದಾದ ಕುರುಹಾಗಿ ದೊಡ್ಡಮೊಟ್ಟೆಗಳನ್ನು ಜೋಡಿಸಿದಂತೆ ನುಣುಪಾದ ಮರಳುಗಲ್ಲುಗಳು ಪರ್ವತಗಳ ನೂರಾರು ಅಡಿಯ ಎತ್ತರದಲ್ಲಿವೆ.

ನಾವು ಶೈಯೋಕ್ ದಡದಲ್ಲಿ ಭಾರತದ ಕೊನೆಯ ಹಳ್ಳಿ ಥಾಂಗ್ ತನಕ 200 ಕಿಲೋಮೀಟರ್ ಹೋದೆವು. ಹೊಳೆಯ ಪಾತ್ರ ಕಿಲೋಮೀಟರ್‌ಗಟ್ಟಲೆ ಅಗಲವಾಗಿತ್ತು. ನೀರು ಬಗ್ಗಡವಾಗಿತ್ತು. ಹೊಸಮಳೆಗೆ ಹೊಳೆ ಮಲಿನವಾಗುವುದು ಸಹಜ. ಆದರೆ ಲಡಾಖಿನಲ್ಲಿ ಮಳೆ ಬೀಳುವುದು ಕಡಿಮೆ. ಗ್ಲೇಶಿಯರುಗಳು ಕರಗುತ್ತಿದ್ದರಿಂದ ಈ ಬಣ್ಣ ಬಂದಿತ್ತು. ಬಿಳಿಮಣ್ಣಿನ ಪರ್ವತಗಳು ನೆಗಡಿಯ ಮೂಗು ಸಿಂಬಳ ಸುರಿವಂತೆ ಮಣ್ಣನ್ನು ಅದಕ್ಕೆ ಸುರಿಯುತ್ತಿದ್ದವು. ಶೈಯೋಕ್, ಬಿಳಿಯ ಮರಳುಗಲ್ಲು ಮತ್ತು ಉಸುಕಿನ ಹಾಸಿನಲ್ಲಿ ಹರಿವುದರಿಂದ ನದಿಯೆಂದು ತಟ್ಟನೆ ಕೂನ ಸಿಗುತ್ತಿರಲಿಲ್ಲ. ಆದರೆ ಹುಚ್ಚುಕುದುರೆಗಳ ಹಿಂಡು ಮೈದಾನದಲ್ಲಿ ಕುಣಿಯುತ್ತ ಓಡುವಂತಿದ್ದ ಅಲೆಗಳು ಇದು ಹೊಳೆಯೆಂದು ದೃಢಪಡಿಸುತ್ತಿದ್ದವು. ಹೊಳೆ ಪರ್ವತಗಳ ಬುಡದಲ್ಲಿ ಜನಸದ್ದಿಗೆ ತಪ್ಪಿಸಿಕೊಂಡು ಹುಲ್ಲಿನಲ್ಲಿ ಮರೆಯಾಗುವ ಹಾವಿನಂತೆ, ಕೆಲವೆಡೆ ಮಣ್ಣಿನ ಚಾಪೆ ಹಾಸಿದಂತೆ ತೋರುತ್ತಿತ್ತು. ಅಲೆಗಳ ಮೇಲೆ ಬಿಸಿಲು ಬಿದ್ದು ಕೆಸರಿನ ಲಾವಾರಸದ ಭ್ರಮೆ ಹುಟ್ಟಿಸುತ್ತಿತ್ತು. ಆಳವಾದ ಕಣಿವೆಗಳಲ್ಲಿ ಗಂಭೀರವಾಗಿ; ಇಳಿಜಾರಿನಲ್ಲಿ ಸಿಕ್ಕಾಪಟ್ಟೆ ಗಲಭೆ ಎಬ್ಬಿಸುತ್ತ, ಆಳವಿರುವಲ್ಲಿ ಕಡಾಯಿಯಲ್ಲಿ ಮರಳುತ್ತಿರುವ ಕಬ್ಬಿನಹಾಲಿನಂತೆ, ಪರ್ವತಗಳ ಇರುಕುಗಳಲ್ಲಿ ಮೇಕೆದಾಟುವಿನಂತೆ ಕಿರಿಯ ಕಾಲುವೆಯಾಗಿ ಹರಿಯುತ್ತಿತ್ತು. ರಸ್ತೆ ಹೊಳೆದಡದಲ್ಲೇ ಇದ್ದುದರಿಂದ, ಅದರಿಂದ ನಮಗೆ ಬಿಡುಗಡೆ ಇರಲಿಲ್ಲ. ಇದರ ಸಂಗ ಸಾಕಪ್ಪ ಎನಿಸುವಷ್ಟು ಏಕತಾನತೆ ಬರಿಸುತ್ತಿತ್ತು. ಅದು ಪರ್ವತಗಳ ಸಂದಿನಲ್ಲಿ ಮರೆಯಾದಾಗ ನದಿಯಿಲ್ಲದ ಇದೆಂತಹ ಪಯಣವೆಂದು ಕಸಿವಿಸಿ ಆಗುತ್ತಿತ್ತು. ಅದು ಪರ್ವತವನ್ನು ಸುತ್ತುಹಾಕಿ ತಟ್ಟನೆ ಕಾಣಿಸಿಕೊಂಡಾಗ ಕಳೆದ ಸಂಗಾತಿ ಸಿಕ್ಕ ಉಲ್ಲಾಸವಾಗುತ್ತಿತ್ತು. ರಸ್ತೆಯ ತಿರುವುಗಳಲ್ಲಿ ಹಿಂತಿರುಗಿ ನೋಡಿದರೆ ಹತ್ತಾರು ಕಿಲೋಮೀಟರ್ ಉದ್ದಕ್ಕೆ ಅದರ ಸುಂದರ ಕಣಿವೆಯ ದರ್ಶನ. ಕೆಲವು ಜಾಗಗಳಲ್ಲಿ ಪಟ ತೆಗೆಯಲು ಭಾರತೀಯ ಸೇನೆ ವೇದಿಕೆಗಳನ್ನು ನಿರ್ಮಿಸಿದೆ.

ಕೆಸರಿನ ಲಾವಾರಸ ಹರಿದಂತೆ ಕಾಣುವ ಶೈಯೋಕ್ ನದಿ

ಪ್ರವಾಸ

ಶೈಯೋಕ್‌ನ ಬಗ್ಗಡತನವು ಅದಕ್ಕೆ ಬಂದು ಸೇರಿ ಮೂಲರೂಪ ಕಳೆದುಕೊಳ್ಳುತ್ತಿದ್ದ ನೀಲಬಿಳುಪಿನ ಹಳ್ಳಗಳಿಂದ ಮತ್ತಷ್ಟು ಎದ್ದು ಕಾಣುತ್ತಿತ್ತು. ಹೊಳೆಗೆ ಶುದ್ಧ ಅಶುದ್ಧ ಭೇದವೆಲ್ಲಿದೆ? ಚಳಿಗಾಲದಲ್ಲಿ ಹೆಪ್ಪುಗಟ್ಟುವ ಶೈಯೋಕ್, ಬೇಸಿಗೆಯಲ್ಲಿ ಹಸಿರುನೀಲಿಗೆ ತಿರುಗುತ್ತದೆಯಂತೆ. ಮರುಭೂಮಿಯ ಬಿಳಿಉಸುಕಿನೊಳಗೆ ಕಪ್ಪುಬಿಳಿ ಪರ್ವತಗಳ ಬುಡದಲ್ಲಿ ಹರಿವ ನೀಲಜಲ ಕಲ್ಪಿಸಿಕೊಂಡು ನವಿರೆದ್ದಿತು. ಆಗ ಸಾಧ್ಯವಾದರೆ ಸರ್ಫಿಂಗ್ ಮಾಡಬೇಕು. ನೀರ ಮೇಲಿಂದ ಪರ್ವತಗಳನ್ನು ನೋಡಬೇಕು. ಹಗಲು ನೀಲಾಂಬರವಾಗಿ ರಾತ್ರಿ ಕಪ್ಪುಛಾವಣಿಯಾಗುವ ಸ್ವಚ್ಛಾಗಸದಲ್ಲಿ, ನಕ್ಷತ್ರಗಳ ಚಾಪೆಯಂತಹ ಗೆಲಾಕ್ಸಿಯನ್ನು ನೋಡಬೇಕು. ಆದರೆ ರಕ್ಷಣಾ ದೃಷ್ಟಿಯಿಂದ ಸೂಕ್ಷ್ಮವಾಗಿರುವ ಈ ಪ್ರದೇಶದಲ್ಲಿ ಇದಕ್ಕೆಲ್ಲ ಅವಕಾಶವಿಲ್ಲ. ಗಿಡಮರಗಳ ಹೆಸರಿಲ್ಲದ ಲಡಾಖಿನ ನಗ್ನ ಪರ್ವತಗಳು ನೀಲಗಗನವನ್ನು ಕತ್ತರಿಸಿ ದಿಗಂತವನ್ನು ಸೃಷ್ಟಿಸುವ ಬಗೆಯೇ ಚಂದ. ಇಷ್ಟಕ್ಕೂ ಪರ್ವತ ಹೊಳೆ ಆಗಸಗಳ ನಡುವೆ ಭೇದ ಎಣಿಸುವುದೇ ತಪ್ಪು. ಹೊಳೆಯ ಚೆಲುವನ್ನು ಪರ್ವತಗಳೂ ಪರ್ವತಗಳ ಭವ್ಯತೆಯನ್ನು ಹೊಳೆಯೂ ಪರಸ್ಪರ ಕನ್ನಡಿಸುತ್ತವೆ.

ಶೈಯೋಕ್ ಮೀನಿಲ್ಲದ ನದಿ ಎಂದು ನಿರಾಶೆಯಾಗಿತ್ತು. ಆದರೆ ನುಬ್ರಾ ಕಣಿವೆ ಎಂದು ಹೆಸರಾಗಿರುವ ಶೈಯೋಕಿನ ನಿಜವಾದ ಚೆಲುವಿರುವುದು ದಡದ ತೋಟಪಟ್ಟಿಗಳಿಂದ. ಅದು ಪರ್ವತಗಳ ತಪ್ಪಲಿನಲ್ಲಿ ನಿರ್ಮಿಸಿದ ಮಣ್ಣದಿಬ್ಬಗಳಲ್ಲಿ ತೋಟ, ಊರು ಎದ್ದಿವೆ. ಅಗೋಚರ ಹಿಮಶಿಖರಗಳಿಂದ ಬರುವ ಹಾಲಿನ ಝುರಿಗಳನ್ನು ತಿರುಗಿಸಿಕೊಂಡು ರೈತರು ಮರುಭೂಮಿಯನ್ನು ನಂದನವನ ಮಾಡಿರುವರು. ಕುರ್ತುಕ್‌ನ ರೈತ ಹೇಳಿದ: 'ನಾವು ಗ್ಲೇಶಿಯರ್ ನೀರನ್ನು ಹೊಲಗಳಿಗೆ ಹರಿಸುವುದಿಲ್ಲ. ತಿಳಿಯಾದ ಪುಟ್ಟ ಹೊಳೆಗಳನ್ನಷ್ಟೆ ತಿರುಗಿಸಿಕೊಳ್ಳುತ್ತೇವೆ.' ಹೊಲಗಳಲ್ಲಿ ಆಪ್ರಿಕಾಟ್ ಸೇಬು ಬದಾಮಿ ಗಿಡ; ಆಲೂ ಗೋಧಿ ಬಾರ್ಲಿ ಬೆಳೆ; ಸೈನಿಕರು ಕವಾಯತಿಗೆ ನಿಂತಂತೆ, ನೆಟ್ಟ ಬಾವುಟಗಳಂತೆ ತಿಳಿಹಸಿರಿನ ಪೊಪ್ಲಾರ್ ಮರಗಳು. ಈ ಗದ್ದೆ ತೋಟಗಳು, ಶೈಯೋಕಿನ ಬಿಳಿಯ ಮರಳ ಪತ್ತಲಕ್ಕೆ ಹಸಿರು ನೂಲಿನಿಂದ ಹಾಕಿದ ಕಸೂತಿಗಳು.

ನಾವು ಹೋದಾಗ ಗದ್ದೆಗಳೆಲ್ಲ ಕಟಾವಿಗೆ ಬಂದಿದ್ದವು. ಗೋಧಿ ಸಿವುಡನ್ನು ಹೆಮ್ಮಕ್ಕಳು ಬೆನ್ನಮೇಲೆ ಹೊತ್ತು ಕಣಕ್ಕೆ ಅಡಕುತ್ತಿದ್ದರು. ಮನೆಗಳ ಛಾವಣಿ ಮೇಲೆಯೂ ಸಿವುಡನ್ನು ಒಟ್ಟಲಾಗಿತ್ತು. ಸೇಬು ಇನ್ನೂ ಎಳಸಾಗಿತ್ತು. ಬಾರ್ಲಿ ಮೊಳಕೆ ಒಡೆಯುತ್ತಿತ್ತು. ಆಲೂಗೆಡ್ಡೆ ಹೂಬಿಟ್ಟಿತ್ತು. ಬರ್ರಿ ಆಪ್ರಿಕಾಟು ಹಣ್ಣು ನೆಲಕ್ಕೆ ಸುರಿದಿದ್ದವು. ಇವಕ್ಕೆ ಲಡಾಖ್ ಸೀಮೆಯ ಹಕ್ಕಿಗಳೆಲ್ಲ ಪರಿಸೆ ಕೂಡಿ ಕಲರವ ಎಬ್ಬಿಸಿದ್ದವು. ಸುತ್ತ ಹಸಿರು. ಕೆಳಗೆ ಹೊಳೆ. ಮೇಲೆ ಪರ್ವತ. ಅದರಾಚೆ ಚೂಪಾಗಿ ಕಾಣುವ ಹಿಮಶಿಖರ. ಅದರಾಚೆ ನೀಲಾಕಾಶ. ಇಲ್ಲಿನ ಜನ ಅದೃಷ್ಟವಂತರು. ಆದರೆ ಈ ಚೆಲುವಿನ ಜತೆಗೆ ಅವರವೇ ನೂರಾರು ಬವಣೆಗಳಿವೆ.



ಗೋಧಿ ಸಿವುಡು ಹೊತ್ತ ಅಜ್ಜಿ

ಶೈಯೋಕ್ ದಡದಲ್ಲಿ ಬಿಳಿ ಮರುಭೂಮಿಯಿದೆ. ಅಲ್ಲಿ ಕುರುಚಲು ಸಸ್ಯಗಳು ಇರದಿದ್ದರೆ ಅದೊಂದು ತಲಕಾಡಿನ ಮರಳರಾಶಿ ಆಗಿರುತ್ತಿತ್ತು. ಮರಳ ದಿಬ್ಬಗಳ ನಡುವೆ ತೋಡು ಮಾಡಿಕೊಂಡು ಅದು ಹರಿಯುತ್ತ ಅಲ್ಲಲ್ಲಿ ಜೌಗು ನಿರ್ಮಿಸಿದೆ. ಈ ಜೌಗಿನಲ್ಲಿ ಪುಟ್ಟ ಸರೋವರಗಳು. ಅವುಗಳಲ್ಲಿ ಹಸಿರು ಕಂಬಳಿ ಹೊದಿಸಿದಂತೆ ಜಲಸಸ್ಯಗಳು. ಕ್ರೀಡಿಸುವ ಪಟ್ಟೆ ಬಾತು. ಭಾರತದಲ್ಲೇ ನುಬ್ರಾ ಕಣಿವೆ ಪರಿಸರದ ದೃಷ್ಟಿಯಿಂದ ಸೂಕ್ಷ್ಮ ಪ್ರದೇಶ. ಕಣಿವೆಯ ವಿಶಾಲ ನೋಟವನ್ನು ದಿಸ್ಕಿತ್‌ನಲ್ಲಿರುವ ಮೈತ್ರೇಯಿ ಬುದ್ಧನ ಬೃಹದಾಕಾರದ ಪ್ರತಿಮೆಯಿರುವ ಪರ್ವತ ಮೇಲಿಂದ ನೋಡಬೇಕು. ಎದೆ ಝಲ್ಲೆನ್ನುತ್ತದೆ. ವಿಹಾರದಲ್ಲಿರುವ ಭಿಕ್ಕುಗೆ ಕೇಳಿದೆ: 'ಇಲ್ಲಿ ಮಳೆ ಬರುತ್ತದೆಯೇ?' ಆತ ಹೇಳಿದ: 'ನೀರು ಚಿಮಿಕಿಸಿದಂತೆ ಬರುತ್ತದೆ. ಹಿಮಪಾತವೂ ಕಡಿಮೆ. ಹಿಮಶಿಖರಗಳಿಂದ ಬರುವ ನೀರು ಕಣಿವೆಯನ್ನು ಸಮೃದ್ಧಗೊಳಿಸುತ್ತದೆ'. ಕಠೋರ ಪರಿಸರವೇ ಮನುಷ್ಯ ಸಾಹಸಕ್ಕೆ ಆಹ್ವಾನ ಕೊಟ್ಟಿದೆ. ಹೊಳೆಪಾತ್ರದಲ್ಲಿ ವಿಹಾರ, ಹಳ್ಳಿ, ಹೊಲಗದ್ದೆ, ಪ್ರವಾಸಿ ಹೋಟೆಲುಗಳು, ಸೈನಿಕಠಾಣೆ, ವಿಮಾನ ನಿಲ್ದಾಣಗಳಿವೆ. ಪರ್ವತಗಳ ಮೈಕತ್ತರಿಸಿ ರಸ್ತೆ ಮಾಡಲಾಗುತ್ತಿದೆ. ಚೀನಾ ಜತೆ ಸಂಘರ್ಷವಾದ ಬಳಿಕ ಕಾಮಗಾರಿ ಹೆಚ್ಚಾಗಿದೆ. ಇವು ನುಬ್ರಾ ಕಣಿವೆಯ ಚಹರೆಯನ್ನು ಹೇಗೆ ಬದಲಿಸಬಲ್ಲವೊ ತಿಳಿಯದು.

ಶೈಯೋಕ್, ಥಾಂಗನ್ನು ದಾಟಿ ಪಾಕಿಸ್ತಾನ ವಶದಲ್ಲಿರುವ ಗಿಲ್ಗಿಟ್ ಪ್ರಾಂತ್ಯದೊಳಗೆ ಪ್ರವೇಶಿಸಿ ಕಣ್ಮರೆಯಾಗುತ್ತದೆ. ಪಯಣದುದ್ದಕ್ಕೂ ಮಾತುಕತೆ ಮಾಡಿಕೊಂಡು ಬಂದಿದ್ದ ಸಹಯಾತ್ರಿ ಅಗಚುವ ಹಾದಿಯಲ್ಲಿ ತಟ್ಟನೆ ಅಗಲಿದಂತೆ ದುಗುಡವಾಗುತ್ತದೆ. ಲಡಾಖಿನಲ್ಲಿ ಹಲವು ನದಿಗಳು ಸೇರಿ ಒಂದಾಗುತ್ತವೆ. ಒಂದಾಗುವ ನದಿಗಳನ್ನು ಗಡಿ ಮಾಡಿಕೊಂಡು ದೇಶಗಳು ಬೇರ್ಪಡುತ್ತವೆ. ಶೈಯೋಕ್ ಮಾತ್ರ ಈ ರಾಜಕೀಯ ಹಂಚಿಕೆ ನಿಮ್ಮದು ನನ್ನದಲ್ಲ ಎಂಬಂತೆ, ತನ್ನ ತೋಳಸೆಳವಿಗೆ ಸಿಕ್ಕ ಎಲ್ಲ ಪ್ರದೇಶಗಳನ್ನು ಸಮಾನವಾಗಿ ಸಮೃದ್ಧಗೊಳಿಸುತ್ತ ಹರಿಯುತ್ತದೆ. ❖

ADVERTORIAL

ಬಾಲಿಯ ಚೆಲುವಿಗೆ ಎಣೆಯುಂಟೆ?

ಸುನೀಲ ಪಾಟೀಲ್
Founder, CPO & CNO
Veena World
sunila@veenaworld.com

"ನಾನು ಇಲ್ಲಿಗೆ ಭೇಟಿ ನೀಡಲು ಏಕೆ ಇಷ್ಟು ತಡಮಾಡಿಬಿಟ್ಟೆ?"– ಬಾಲಿಯ ಆರ್ದ್ರ ವಾತಾವರಣದಿಂದ ಕೂಡಿದ ಕಡಲದಂಡೆಯ ಮೇಲೆ ಕಾಲಿಡುತ್ತಿದ್ದಂತೆ ನನ್ನೊಳಗೆ ಹುಟ್ಟಿದ ಮೊದಲ ಅನಿಸಿಕೆಯೇ ಇದಾಗಿತ್ತು. ನಾವು ಬಹಳಷ್ಟು ಸಲ 'ಸೂಕ್ತ ಸಮಯ ಬರಲಿ' ಎಂಬುದನ್ನು ನೆಪವಾಗಿಸಿಕೊಂಡು ಅತ್ಯದ್ಭುತ ಪ್ರೇಕ್ಷಣೀಯ ಸ್ಥಳಗಳ ಭೇಟಿಯನ್ನು ವಿಳಂಬಗೊಳಿಸಿಬಿಡುತ್ತೇವೆ. ಅಂತೂ, ಗಣೇಶ ಚತುರ್ಥಿಯೊಂದರ ಸಂದರ್ಭದಲ್ಲಿ ನಾವು ಅತಿಥಿಗಳಿಗೋಸ್ಕರ ಬಾಲಿ ಪ್ರವಾಸ ಯೋಜಿಸುವ ಅವಕಾಶ ಒದಗಿಬಂತು. "ಹ, ಈ ಸಲ ಹೊರಟೇಬಿಡೋಣ" ಎಂಬ ನಿರ್ಧಾರಕ್ಕೆ ಬಂದೆವು.

ಈ ಪ್ರವಾಸವು ಹೆಜ್ಜೆಹೆಜ್ಜೆಗೂ ನಮ್ಮನ್ನು ಚಕಿತಗೊಳಿಸಿತು. ಅಂದಂತೆ, ಬಾಲಿ ದ್ವೀಪವು ಪುರಾತನ ಸಂಪ್ರದಾಯಗಳು ಹಾಗೂ ಆಧುನಿಕ ಸಾಹಸಗಾಥೆಗಳ ಸಂಗಮ ತಾಣವಾಗಿದೆ. ಪ್ರತಿದಿನವೂ ಇಲ್ಲಿ ಸೂರ್ಯೋದಯ ಹಾಗೂ ಸೂರ್ಯಾಸ್ತದ ವೇಳೆಯ ನೋಟಗಳು ಚಿತ್ತಾಪಹಾರಿ. ಈ ದ್ವೀಪವು ಪ್ರಕೃತಿ ರಮ್ಯತೆಯ ಜೊತೆಗೆ ಗಡಿರೇಖೆಗಳನ್ನು ಮೀರಿ ಶತಮಾನಗಳ ಕಾಲದಿಂದ ಜನರನ್ನು ಬೆಸೆದಿರುವ ಗಹನವಾದ ಸಂಸ್ಕೃತಿಯ ದರ್ಶನವನ್ನೂ ಲಭ್ಯವಾಗಿಸುತ್ತದೆ.

ಬಾಲಿಯು ಏಕಕಾಲಕ್ಕೆ ಚಿರಪರಿಚಿತ ಸ್ಥಳದಂತೆಯೂ ಹಾಗೂ ವಿಶಿಷ್ಟ ತಾಣದಂತೆಯೂ ಭಾಸವಾಯಿತು. ಇದು ಮುಸ್ಲಿಂ ಬಹುಸಂಖ್ಯಾತರ ದೇಶವಾಗಿದ್ದರೂ ಶೇಕಡಾ 85ರಷ್ಟು ಜನರು ಇಲ್ಲಿ ಹಿಂದುತ್ವದ ಅನುಯಾಯಿಗಳಾಗಿದ್ದಾರೆ. ಬಾಲಿನೀಸ್ ಹಿಂದುತ್ವವು ಭಾರತೀಯ ಸಂಪ್ರದಾಯಗಳು, ಬೌದ್ಧ ಧರ್ಮ, ಹಾಗೂ ಪ್ರಕೃತಿಶಕ್ತಿಗಳನ್ನು ಆರಾಧಿಸುವ ಸ್ಥಳೀಯ ಆಚರಣೆಗಳ ಆಸಕ್ತಿದಾಯಕ ಸಂಯೋಜನೆಯಾಗಿದೆ. ಈ ಸಂಸ್ಕೃತಿಯು ಇಲ್ಲಿ ಆಳಕ್ಕೆ ಬೇರುಬಿಟ್ಟಿದ್ದು ವಿಶಿಷ್ಟತೆಗೂ ಕಾರಣವಾಗಿದೆ.

ಊಬೂಡ್ ತಲುಪುವ ಮುನ್ನವೇ ಬಾಲಿಯು ನನಗೆ ಮೊದಲ ಅಚ್ಚರಿ ನೀಡಿತು. ವಿಮಾನ ನಿಲ್ದಾಣದಿಂದ ತೆರಳುವ ಮಾರ್ಗಮಧ್ಯದಲ್ಲೇ ಮಹಾಭಾರತದ ಘಟೋತ್ಕಚನ ಬೃಹತ್ ಪ್ರತಿಮೆ ಕಣ್ಸೆಳೆಯಿತು. ಇದು 1993ರಲ್ಲಿ ನಿರ್ಮಾಣಗೊಂಡ ಪ್ರತಿಮೆ. ಸ್ಥಳೀಯ ಬೊಂಬೆಯಾಟದಲ್ಲಿ ಘಟೋತ್ಕಚನು ನಿಷ್ಠಾವಂತಿಕೆ ಹಾಗೂ ಪರಾಕ್ರಮದ ಪ್ರತೀಕ. ಇಲ್ಲಿ ಹಿಂದೂ ಮಹಾಕಾವ್ಯಗಳು ನೆನಪಿಸಿಕೊಳ್ಳಲು ಮಾತ್ರವೇ ಸೀಮಿತವಲ್ಲ; ಅವುಗಳನ್ನು ದೈನಂದಿನ ಬದುಕಿನಲ್ಲಿ ಸಂಭ್ರಮಿಸಲಾಗುತ್ತದೆ.

ಅಯೂಂಗ್ ನದಿಯಲ್ಲಿ ರ‍್ಯಾಫ್ಟಿಂಗ್ ಮಾಡುತ್ತಾ ಮತ್ತೊಂದು ಅವಿಸ್ಮರಣೀಯ ಘಟನೆ ಎದುರಾಯಿತು. ರ‍್ಯಾಪಿಡ್‌ಗಳ ರೋಮಾಂಚನ ಹಾಗೂ ಚಿಮ್ಮಿ ಸ್ಪರ್ಶಿಸುತ್ತಿದ್ದ ಶೀತಲ ಜಲದ ನಡುವೆ ಕಡಿದಾದ ಶೃಂಗಗಳ ಮೇಲಿನ ರಾಮಾಯಣದ ಕತೆಗಳನ್ನು ಚಿತ್ರಿಸುವ ಸೂಕ್ಷ್ಮ ಕೆತ್ತನೆಗಳು ಗಮನಸೆಳೆದವು. ಇಲ್ಲಿ ಪರಿಶುಭ್ರ ನದಿಗೆ ಪ್ರಾಚೀನ ಕಲೆ ಹಿನ್ನೆಲೆಯಾಗಿದ್ದು, ಚರಿತ್ರೆ ಕೂಡ ನಮ್ಮೊಂದಿಗೆ ತೇಲಿಬರುತ್ತಿದೆಯೇನೋ ಅನ್ನಿಸುತ್ತದೆ. ಹಾಗೆಯೇ, ಕತೆಗಳು ನಿರೀಕ್ಷಿಸಲೂ ಆಗದ ಸ್ಥಳಗಳಲ್ಲಿ ಕೂಡ ಜೀವಂತವಾಗಿರುತ್ತವೆ ಎಂಬುದನ್ನೂ ಇದು ನೆನಪಿಸುತ್ತದೆ.

ಊಬೂಡ್ ಮೊದಲ ನೋಟಕ್ಕೇ ನನ್ನ ಮನಸ್ಸನ್ನು ಸೂರೆಗೊಂಡಿತು. ಮೆಟ್ಟಿಲುಗಳಂತೆ ವಿವಿಧ ಸ್ತರಗಳಲ್ಲಿರುವ ಭತ್ತದ ಗದ್ದೆಗಳು, ಕುಲಕಸುಬಿನವರು ನೆಲೆಸಿರುವ ಗ್ರಾಮಗಳು ಹಾಗೂ ಪ್ರಶಾಂತ ಪರಿಸರದಲ್ಲಿ ಕೆಫೆಗಳಿರುವ ಅನನ್ಯ ಸೊಬಗಿನ ತಾಣ ಇದಾಗಿದೆ. ಇಲ್ಲಿ ಕರಕುಶಲ ಕೃತಿಗಳ ಮಾರುಕಟ್ಟೆಗಳಲ್ಲಿ ಅಡ್ಡಾಡಿ ಕೈನೇಯ್ಗೆಯ 'ಇಕಾತ್ ವಸ್ತ್ರ'ಗಳನ್ನು ಮೆಚ್ಚಿದೆ. ಹಸಿರು ಹೊಲಗದ್ದೆಗಳ ಮೇಲೆ ಮಳೆಯ ಸಿಂಚನವಾಗುತ್ತಿರುವಾಗ ಕೋಪಿ (ಕಾಫಿ) ಸವಿಯುತ್ತಾ ಗಂಟಲು ಒದ್ದೆಯಾಗಿಸಿಕೊಂಡೆ. ಸಂಸ್ಕೃತಿ ಹಾಗೂ ಸಾಹಸಗಾಥೆ ಇವೆರಡೂ ಹಾಸುಹೊಕ್ಕಾಗಿರುವುದರಲ್ಲಿ ಬಾಲಿಯ ಮೋಡಿ ಅಡಗಿದೆ. ಇಲ್ಲಿ ಬೆಳಿಗ್ಗೆ ನದಿಯಲ್ಲಿ ರ‍್ಯಾಫ್ಟಿಂಗ್ ಮಾಡಿ ರಾತ್ರಿ ಚಾರಣಕ್ಕೆ ತೆರಳಬಹುದು ಅಥವಾ ನಿಶ್ಶಬ್ದ ಪರಿಸರದಲ್ಲಿ ಕಲಾ ಕಾರ್ಯಾಗಾರಕ್ಕೆ ಭೇಟಿ ನೀಡಬಹುದು.

ರ‍್ಯಾಫ್ಟಿಂಗ್ ಮುಗಿಸಿಕೊಂಡು ಸೂರ್ಯಾಸ್ತ ವೀಕ್ಷಣೆಗೆ ಬಾಟುರ್ ಪರ್ವತ ತಲುಪಿದೆವು. ಸಾಧಾರಣ ಎತ್ತರದ ಈ ಪರ್ವತವು ದ್ವೀಪದ ನಿಬ್ಬೆರಗಾಗಿಸುವ ನೋಟವನ್ನು ದಕ್ಕಿಸುತ್ತದೆ. ನಂತರ, ಪ್ಲಾಂಟೇಷನ್‌ವೊಂದಕ್ಕೆ ತೆರಳಿ 'ಲುವಾಕ್ ಕಾಫಿ' ಗುಟುಕರಿಸುವ ಅವಕಾಶ ಒದಗಿಬಂತು. ಸಿವೆಟ್‌ಗಳು ತಿಂದು ವಿಸರ್ಜಿಸಿದ ಕಾಫಿ ಬೀಜಗಳನ್ನು ಹುರಿದು ಸಿದ್ಧಪಡಿಸುವ ಈ ಕಾಫಿಯು ಪ್ರಪಂಚದ ಅತ್ಯಂತ ದುಬಾರಿ ಕಾಫಿ ಸ್ವಾದಗಳಲ್ಲಿ ಒಂದಾಗಿದೆ. ಅದು ಹಿತಕರ ಪರಿಮಳ ಹಾಗೂ ಮಣ್ಣಿನ ಸೊಗಡಿನಿಂದ ಕೂಡಿದ ಮರೆಯಲಾಗದ ಸವಿ.

ಊಬೂಡ್‌ನಲ್ಲಿ ಮನೆಗಳ ಹೊರಗೆ ಹೂಗಳಿಂದ ತುಂಬಿದ ತಾಳೆಎಲೆಯ ಟ್ರೇಗಳು ಕಣ್ಣಿಗೆಬಿದ್ದವು. ಇಲ್ಲಿ ಹೂವು, ಅನ್ನ, ಧೂಪಗಳಿಂದ ಕೂಡಿದ 'ಕನೇಂಗ್ ಸಾರಿ' ಸಮರ್ಪಣೆಯು ದೇವತೆಗಳಿಗೆ ಧನ್ಯವಾದ ಸಲ್ಲಿಸುವ ದೈನಂದಿನ ಪದ್ಧತಿಯಾಗಿದೆ. ಬಾಲಿನೀಸ್ ಸಾಂಪ್ರದಾಯಿಕ ಆಚರಣೆಗಳು ನನ್ನನ್ನು ಬಹುವಾಗಿ ಸೆಳೆದವು. ಇಲ್ಲಿ ಹುಟ್ಟುವ ಶಿಶುಗಳಿಗೆ, ಅದು ಎಷ್ಟನೇ ಮಗು ಎಂಬ ಕ್ರಮದಲ್ಲಿ ವೇಯನ್, ಮಾಡೆ, ನಾಯೊಮನ್, ಕೆತಟ್ ಹೀಗೆ ಹೆಸರಿಡುವ ಪದ್ಧತಿ ಇದೆ. ನಕಾರಾತ್ಮಕ ಶಕ್ತಿಗಳ ನಿವಾರಣೆಯನ್ನು ಸಂಕೇತಿಸುವ 'ಕೋರೆಹಲ್ಲು ಮಸೆಯುವಿಕೆ'ಯು ಇಲ್ಲಿ ಮತ್ತೊಂದು ಗಮನಾರ್ಹ ಆಚರಣೆಯಾಗಿದೆ.

ಬಾಲಿಯ ಹೊಸ ವರ್ಷಾಚರಣೆಯಾದ 'ನೇಪಿ'ಯು ದ್ವೀಪದ ಅತ್ಯಂತ ವಿಶಿಷ್ಟ ಸಂಭ್ರಮಾಚರಣೆಗಳಲ್ಲಿ ಒಂದಾಗಿದೆ. ವರ್ಷಾಚರಣೆಯ ಮುನ್ನಾದಿನ ಸ್ಥಳೀಯ ಸಮುದಾಯದವರು ಬೃಹತ್ ಓಘೋ–ಓಘೋ ಪ್ರತಿಮೆಗಳ ಮೆರವಣಿಗೆ ನಡೆಸುತ್ತಾರೆ. ನಂತರ, ರಾಕ್ಷಸರನ್ನು ಪ್ರತಿನಿಧಿಸುವ ಈ ಪ್ರತಿಮೆಗಳನ್ನು ದಹಿಸುತ್ತಾರೆ. ಮರುದಿನ ಇಡೀ ದ್ವೀಪವು ಸ್ತಬ್ಧಗೊಳ್ಳುತ್ತದೆ. ಬೀದಿಗಳು ನಿರ್ಜನವಾಗುತ್ತವೆ. ವಿಮಾನ ನಿಲ್ದಾಣಗಳು ಕೂಡ ಮುಚ್ಚುತ್ತವೆ. ಆ ಸಂದರ್ಭದಲ್ಲಿ ಪ್ರವಾಸಿಗರು ಕೂಡ ಹೊರಗೆ ಬಾರದೆ ಒಳಗೆಯೇ ಉಳಿದುಕೊಳ್ಳುತ್ತಾರೆ. ಅಲ್ಲಿನವರ ಪಾಲಿಗೆ ಆ ದಿನವು ಹಿಂದಿನದನ್ನು ಅವಲೋಕಿಸುವ ಹಾಗೂ ನವಚೇತನದ ದಿನ. ವೇಗವೇ ಹೆಗ್ಗುರುತಾಗಿರುವ ಇಂದಿನ ನಾಗಾಲೋಟದ ಬದುಕಿನಲ್ಲಿ ಇಂತಹ ಒಂದು ವಿರಾಮವೇ ವಿಶೇಷ ಅನ್ನಿಸುತ್ತದೆ.

ಹಾಗೆಂದಮಾತ್ರಕ್ಕೆ, ಬಾಲಿ ಎಂದರೆ ಸ್ತಬ್ಧತೆಯಷ್ಟೇ ಅಲ್ಲ. ಬೆಳಗಾಗುವತನಕ ಮೋಜು, ಮಸ್ತಿಗೆ ಹೆಸರಾದ ಪೊಟ್ಯಾಟೊ ಹೆಡ್, ರಾಕ್ ಬಾರ್‌ನಂತಹ ಬೀಚ್ ಕ್ಲಬ್‌ಗಳೂ ಇಲ್ಲಿವೆ. ಇನ್ಸೆಂಟಿವ್ ಟೂರ್, ಐಷಾರಾಮಿ ರೆಸಾರ್ಟುಗಳು, ಖಾಸಗಿ ಪಾರ್ಟಿಗಳು ಹಾಗೂ ಕಾರ್ಪೊರೇಟ್ ಸಂಭ್ರಮಾಚರಣೆಗಳಿಗೆ ಇದು ಪ್ರಶಸ್ತ ತಾಣವಾಗಿದೆ. ಕುಟುಂಬ ಪ್ರವಾಸ, ತಂಡ ಪ್ರವಾಸಗಳಲ್ಲಿ ತೆರಳುವವರು ಹಾಗೂ ಜೀವನದ ಅಚ್ಚಳಿಯದ ಕ್ಷಣಗಳಿಗಾಗಿ ಹಂಬಲಿಸುವವರು ಯಾಟ್‌ಗಳಲ್ಲಿ (ಹಾಯಿದೋಣಿ) ತೆರಳಿ ಸೂರ್ಯಾಸ್ತದ ದೃಶ್ಯಗಳನ್ನು ಕಣ್ತುಂಬಿಕೊಳ್ಳಬಹುದು. ನಾವು ಯಾಟ್ ಒಂದನ್ನು ಬಾಡಿಗೆಗೆ ಪಡೆದು ಗಿಲಿ ದ್ವೀಪಕ್ಕೆ ತೆರಳಿದೆವು. ಬಿಳಿ ಮರಳಿನ ಸಮುದ್ರ ದಂಡೆಗಳಿರುವ ಈ ದ್ವೀಪವು ವಿಶ್ರಾಂತಿ ಬಯಸುವವರಿಗೆ ಹೇಳಿ ಮಾಡಿಸಿದಂತಿದೆ. ನಾವು ಇಲ್ಲಿ ಹೆಚ್ಚು ಸಮಯ ಕಳೆಯಲಾಗಲಿಲ್ಲ. ಆದರೆ, ಅಲ್ಲಿ ಕಳೆದದ್ದು ಒಂದೇ ಹಗಲಾದರೂ ಅದು ನಮ್ಮ ಪಾಲಿಗೆ ಮರೆಯಲಾಗದ ಮುದ್ರೆಯೊತ್ತಿತು. ವಾಪಸ್ಸು ಬರುವಾಗ ಹಾಯಿದೋಣಿಯ ಕ್ಯಾಪ್ಟನ್ ಸಾಗರ ಮಧ್ಯದಲ್ಲಿ ಯಾಟ್‌ಅನ್ನು ನಿಲ್ಲಿಸಿದಾಗ ನಾವು ಕಡುನೀಲಿ ಜಲರಾಶಿಯನ್ನು ಸ್ಪರ್ಶಿಸಿ ಖುಷಿಪಟ್ಟೆವು. ಮೇಲೆ ಆಗಸ, ಸುತ್ತಲೂ ನೀರು ಇವನ್ನು ಬಿಟ್ಟರೆ ಬೇರೇನೂ ಇಲ್ಲ. ಅದು ಯಾವ ಗೊಡವೆಯೂ ಇರದ ಅಪ್ಪಟ ಮುಕ್ತ ಗಳಿಗೆಯೇನೋ ಅನ್ನಿಸಿ ನನ್ನ ಮನಸ್ಸಿನಲ್ಲಿ ಅಚ್ಚಾಗಿಬಿಟ್ಟಿತು..

ಇದೇ ದ್ವೀಪದಲ್ಲಿ ನಾವು ಪ್ರಸಿದ್ಧ ಬಾಲಿ ಸ್ವಿಂಗ್ (ಉಯ್ಯಾಲೆ) ಆಡಿದೆವು. ದಟ್ಟವಾಗಿ ಬೆಳೆದ ಗಿಡಮರಗಳ ವನರಾಶಿಯ ಮೇಲೆ ಫ್ಲೋಯಿಂಗ್ ದಿರಿಸು ತೊಟ್ಟು ಕೂದಲು ಹಾರಿಸುತ್ತಾ ಬಾನಿನಲ್ಲಿ ತೇಲುತ್ತಿರುವಂತಹ ಅನುಭವವಾಯಿತು. ಮೃದು ಮರಳು, ನೀಲಿ ಜಲರಾಶಿ ಹಾಗೂ ಕುಟುಂಬದವರು ಹಾಗೂ ಮಕ್ಕಳು ಎಲ್ಲರಿಗೂ ಸೂಕ್ತವೆನ್ನಿಸುವ ವಿಧವಿಧದ ಜಲಕ್ರೀಡೆಗಳಿಗೆ ಇಲ್ಲಿನ ಸಮುದ್ರ ತೀರಗಳು ಹೆಸರುವಾಸಿ.

ಇನ್ನು, ಬಾಲಿಯ ದೇವಸ್ಥಾನಗಳು ಅಲ್ಲಿನ ಸಮುದ್ರ ತಟದಷ್ಟೇ ಮನಮೋಹಕ. ದ್ವೀಪದಾದ್ಯಂತ 20,000ಕ್ಕೂ ಹೆಚ್ಚು ದೇಗುಲಗಳಿವೆ. ಇಲ್ಲಿನ ಅಸದೃಶ ಭೂಪ್ರದೇಶಗಳಲ್ಲಿ ಜ್ವಾಲಾಮುಖಿ ಶಿಲೆಗಳ ಮೇಲಿನ ಕೆತ್ತನೆಯು ಕಾಲಾತೀತವೆಂಬಂತೆ ತೋರಿಬರುತ್ತದೆ. ಒಲುವಾಟು ದೇವಾಲಯವು ಸುತ್ತುವರಿದ ಸಾಗರ ಜಲರಾಶಿಯ ಮಧ್ಯೆ ಕಡಿದಾದ ತುದಿಯಲ್ಲಿದೆ. ತೀರ್ಥ ಆಂಪಲ್‌ನಲ್ಲಿ ಶುದ್ಧೀಕರಣ ಧಾರ್ಮಿಕ ವಿಧಿ ನಡೆಯುತ್ತದೆ ಹಾಗೂ ಸೂರ್ಯಾಸ್ತದ ವೇಳೆ ತಾನ್ಹಾ ಲಾಟ್ ದೇಗುಲವು ಮಂತ್ರಮುಗ್ಧಗೊಳಿಸುತ್ತದೆ. ಲೆಂಪುಯಂಗ್‌ನ ಗೇಟ್ಸ್ ಆಫ್ ಹೆವೆನ್‌ನಲ್ಲಿ ಹಿನ್ನೆಲೆಯಾಗಿ ನಿಂತ ಆಗುಂಗ್ ಪರ್ವತವು ಭೂಲೋಕ ಹಾಗೂ ದೇವಲೋಕಗಳ ನಡುವಿನ ಸೇತುವೆಯಂತೆ ವಿಸ್ಮಯ ಮೂಡಿಸುತ್ತದೆ.

ಆಗುಂಗ್ ಪರ್ವತವನ್ನು ಬಾಲಿಯ ಪುಣ್ಯಕ್ಷೇತ್ರವೆಂದು ಪರಿಗಣಿಸಲಾಗುತ್ತದೆ. ನಂಬಿಕೆಯು ಕೇವಲ ಆಧ್ಯಾತ್ಮಿಕತೆಯನ್ನು ಮಾತ್ರವಲ್ಲದೆ ದೈನಂದಿನ ಬದುಕನ್ನು ಹೇಗೆ ನಿರ್ದೇಶಿಸುತ್ತವೆ ಎಂಬುದಕ್ಕೆ ಇಲ್ಲಿನ ದೇವಸ್ಥಾನಗಳು, ಧಾರ್ಮಿಕ ಆಚರಣೆಗಳು ಹಾಗೂ ಮನೆಗಳಲ್ಲಿನ ಪದ್ಧತಿಗಳು ನಿದರ್ಶನವಾಗಿವೆ. ಬಾಲಿಯ ಸ್ಥಳೀಯ ಸಮುದಾಯಗಳ ಬದುಕಿನ ರೀತಿರಿವಾಜುಗಳು ಸಂಸ್ಕೃತಿಯೊಂದು ಸಾಂಪ್ರದಾಯಿಕ ಆಚರಣೆಗಳೊಂದಿಗೆ ಹಾಸುಹೊಕ್ಕಾಗಿ ಆಧುನಿಕ ಕಾಲದಲ್ಲಿಯೂ ಹೇಗೆ ಜೀವಂತಿಕೆ ಇರಬಹುದು ಎಂಬುದಕ್ಕೆ ಉದಾಹರಣೆಯಾಗಿದೆ

ಅಪಾರ ವೈವಿಧ್ಯದ ಆಗರವಾದ ಬಾಲಿಯು ಸಹಜವಾಗಿಯೇ ಪ್ರತಿಯೊಬ್ಬರಿಗೂ ಇಷ್ಟವಾಗುವಂಥದ್ದನ್ನು ಲಭ್ಯವಾಗಿಸುತ್ತದೆ. ಇಲ್ಲಿ ಕುಟುಂಬಗಳು ಯೋಜಿತ ತಂಡ ಪ್ರವಾಸಗಳನ್ನು ಆನಂದಿಸಬಹುದು; ಮಧುಚಂದ್ರಕ್ಕೆ ತೆರಳ ಬಯಸುವವರು ಖಾಸಗಿ ವಿಲ್ಲಾಗಳಲ್ಲಿ ವಾಸ್ತವ್ಯ ಹೂಡಬಹುದು; ಮಹಿಳೆಯರು ಸಾಂಸ್ಕೃತಿಕ ಆಚರಣೆಗಳಿಗೆ ಸಾಕ್ಷಿಯಾಗಬಹುದು ಹಾಗೂ ಹಿರಿ ವಯಸ್ಸಿನವರು ಪ್ರಶಾಂತ ಪರಿಸರದಲ್ಲಿ ವಿಶ್ರಾಂತಿ ಪಡೆಯಬಹುದು. ಐಷಾರಾಮ ಅಪೇಕ್ಷಿಸುವವರಿಗೆ ಪ್ರೈವೇಟ್ ಪೂಲ್ ವಿಲ್ಲಾಗಳು, ಸನ್‌ಸೆಟ್ ಡಿನ್ನರ್ ಇತ್ಯಾದಿಗಳಿವೆ. ಆಸಕ್ತರು 'ಕೆನಾಂಗ್ ಸಾರಿ' ಅಥವಾ ಶುದ್ಧೀಕರಣ ಧಾರ್ಮಿಕ ವಿಧಿಗಳಲ್ಲಿ ಭಾಗಿಯಾಗಬಹುದು. ಕಸ್ಟಮೈಸ್ಡ್ ಹಾಲಿಡೇಸ್ ಮೂಲಕ ಬಿದಿರಿನ ಕುಟೀರಗಳು, ಅರಮನೆಗಳು ಹಾಗೂ ಯಾಟ್‌ಗಳಲ್ಲೂ ತಂಗಬಹುದು.

ಬಾಲಿ ಬರೀ ತಾಣವಲ್ಲ. ಪುರಾಣ, ಧಾರ್ಮಿಕ ವಿಧಿಗಳು, ಕಡಲ ದಂಡೆಗಳು ಹಾಗೂ ಸಾಹಸಗಾಥೆಗಳು ಮೇಳೈಸಿರುವ ಅದೊಂದು ಅಪೂರ್ವ ಅನುಭವ. ಜ್ವಾಲಾಮುಖಿ ಪರ್ವತಗಳ ಮೇಲೆ ಚಾರಣವಿರಬಹುದು, ಸ್ವಾದದ ಕಾಫಿ ಗುಟುಕರಿಸುವುದು ಇರಬಹುದು, ಸಾಗರ ಜಲರಾಶಿಗೆ ಧುಮುಕುವುದಿರಬಹುದು ಅಥವಾ ದೇಗುಲದ ಅಂಗಳದಲ್ಲಿ ಶಾಂತಿ ಅರಸುವುದಿರಬಹುದು, ಬಾಲಿಯು ನೋಡುಗರ ಮನದಲ್ಲಿ ಎಂದೆಂದಿಗೂ ಅಚ್ಚಳಿಯದ ನೆನಪು ಮುದ್ರೆಯೊತ್ತುತ್ತದೆ.

ಇನ್ನೇಕೆ ತಡ? ಕಥೆಗಳನ್ನು ಉಲಿಯಲು, ನೆನಪುಗಳನ್ನು ಟಂಕಿಸಲು ಹಾಗೂ ಕನಸುಗಳನ್ನು ಅನಾವರಣಗೊಳಿಸಲು ಬಾಲಿ ನಿಮ್ಮನ್ನು ಕೈಬೀಸಿ ಕರೆಯುತ್ತಿದೆ.

Email: travel@veenaworld.com | ಪ್ರತಿವಾರವೂ ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾಗುವ ಸುನೀಲಾ ಪಾಟೀಲ್, ವೀಣಾ ಪಾಟೀಲ್ ಮತ್ತು ನೀಲ್ ಪಾಟೀಲ್ ಅವರ ಲೇಖನಗಳನ್ನು ವೀಣಾ ವರ್ಲ್ಡ್ ವೆಬ್ಸೈಟ್ www.veenaworld.com ನಲ್ಲೂ ಓದಬಹುದು.

ಭಾರತದಾಚೆಯ ಭಾರತವನ್ನು ಕಂಡಿದ್ದೀರಾ? ಬನ್ನಿ, ಕಣ್ತುಂಬಿಕೊಳ್ಳೋಣ!
'ವೀಣಾ ವರ್ಲ್ಡ್'ನೊಂದಿಗೆ

ಆಲ್ ಇನ್‌ಕ್ಲೂಸಿವ್ ಗ್ರೂಪ್ ಟೂರ್ಸ್		
ಸಿಂಗಪೂರ್ ಬಾಲಿ 8 Days - Dec 15, Feb 9 180000 - 190000	ಸಿಂಗಪೂರ್ ಮಲೇಷಿಯಾ ವಿಥ್ ಬಾಲಿ (10D) Nov 7, Dec 19, Jan 9 - 200000 - 210000	ವಿಯೆಟ್ನಾಂ ಬಾಲಿ 12 Days - Oct 22, Dec 24 200000- 214000
ಮಹಿಳಾ ವಿಶೇಷ ಸಿಂಗಪೂರ್ ಬಾಲಿ (8D) Nov 17 - 182000	ಹಿರಿಯ ನಾಗರಿಕರ ವಿಶೇಷ ಬಾಲಿ 7 Days - Nov 16 - 137000	ಹನಿಮೂನ್ ಸ್ಪೆಷಲ್ ಬಾಲಿ (7D) Dec 2, 20 - 137K - 142K
ಪ್ರೈವೇಟ್ ಕಸ್ಟಮೈಸ್ಡ್ ಹಾಲಿಡೆ		
ಬಾಲಿ ವಿಥ್ ಗಿಲಿ ಐಲೆಂಡ್ 7 Days - ₹40000	ಬಾಲಿ ವಿಥ್ ಪೂಲ್ ವಿಲ್ಲಾ ಸ್ಟೇ 6 Days - ₹42000	ಬಾಲಿ ಏರ್ ಇನ್‌ಕ್ಲೂಸಿವ್ 7 Days - ₹99000

*T&C Apply

Email: travel@veenaworld.com | veenaworld.com
Toll-Free: 1800 313 5555 | 1800 22 7979
Veena World Bengaluru: Jayanagar 887 997 2217 | Indiranagar 887 997 9500

ಬೆಸ್ಟ್ ಆಫ್ ಬಾಲಿ
7 Days - 24 Oct
136000
All inclusive
Mum to Mum

ದಿ ಐಲೆಂಡ್ ಆಫ್ ಗಾಡ್ಸ್
ಬಾಲಿ
ಚಲೋ, ಬ್ಯಾಗ್ ಭರೋ, ನಿಕಲ್ ಪಡೋ!

Book Online 365 days 24x7 Visit veenaworld.com

VEENA WORLD
Travel. Explore. Celebrate Life.

ರೋಹಿತ್ ಶರ್ಮಾಗಿಲ್ಲ ನಾಯಕತ್ವ; ಗಿಲ್‌ಗೆ ಪಟ್ಟ

ಅಹಮದಾಬಾದ್ (ಪಿಟಿಐ): ಭಾರತ ಏಕದಿನ ಕ್ರಿಕೆಟ್ ತಂಡಕ್ಕೆ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಮರಳಿದ್ದಾರೆ. ಆದರೆ ತಂಡದ ನಾಯಕತ್ವವನ್ನು ಶುಭಮನ್ ಗಿಲ್ ಅವರಿಗೆ ನೀಡಲಾಗಿದೆ. ಮುಂಬೈನ ಬ್ಯಾಟರ್ ಶ್ರೇಯಸ್ ಅಯ್ಯರ್ ಉಪನಾಯಕರಾಗಿದ್ದಾರೆ. ರವೀಂದ್ರ ಜಡೇಜ ಅವರಿಗೆ ಸ್ಥಾನ ಲಭಿಸಿಲ್ಲ.

ಭಾರತದ ಕ್ರಿಕೆಟ್ ಕ್ಷೇತ್ರವು ಪರಿವರ್ತನೆಯ ಘಟ್ಟದಲ್ಲಿದ್ದು ಹೊಸ ನಾಯಕತ್ವವನ್ನು ಬೆಳೆಸುವ ನಿಟ್ಟಿನಲ್ಲಿ ಅಜಿತ್ ಅಗರ್ಕರ್ ಮುಂದಾಳತ್ವದ ಆಯ್ಕೆ ಸಮಿತಿಯು ಈ ಹೆಜ್ಜೆ ಇಟ್ಟಿದೆ.

ಶನಿವಾರ ನಡೆದ ಸಭೆಯಲ್ಲಿ 15 ಆಟಗಾರರ ತಂಡವನ್ನು ಪ್ರಕಟಿಸಲಾಯಿತು. ಆಸ್ಟ್ರೇಲಿಯಾ ವಿರುದ್ಧದ ಮೂರು ಏಕದಿನ ಪಂದ್ಯಗಳ ಸರಣಿ ಮತ್ತು ಐದು ಟಿ20 ಪಂದ್ಯಗಳ ಸರಣಿಗಳಿಗೆ ತಂಡಗಳನ್ನು ಆಯ್ಕೆ ಮಾಡಲಾಯಿತು. ಯುವ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರು ಏಕದಿನ ಸರಣಿಗೆ ಮರಳಿದ್ದಾರೆ.


ವಿರಾಟ್ ಕೊಹ್ಲಿ

ಟಿ20 ತಂಡಕ್ಕೆ ಸೂರ್ಯಕುಮಾರ್ ಯಾದವ್ ಅವರೇ ನಾಯಕತ್ವ ವಹಿಸುವರು. ಈಚೆಗಷ್ಟೇ ಅವರ ನಾಯಕತ್ವದಲ್ಲಿ ತಂಡವು ಏಷ್ಯಾ ಕಪ್ ಜಯಿಸಿತ್ತು. ಗಿಲ್ ಉಪನಾಯಕರಾಗಿದ್ದಾರೆ. ವಿಕೆಟ್‌ಕೀಪರ್–ಬ್ಯಾಟರ್ ರಿಷಭ್ ಪಂತ್ ಅವರಿನ್ನೂ ಗಾಯದಿಂದ ಪೂರ್ಣ ಚೇತರಿಸಿಕೊಂಡಿಲ್ಲ. ಆದ್ದರಿಂದ ಧ್ರುವ ಜುರೇಲ್ ಅವಕಾಶ ಗಿಟ್ಟಿಸಿದ್ದಾರೆ. ಏಕದಿನ ತಂಡದಲ್ಲಿ ಕನ್ನಡಿಗ ಕೆ.ಎಲ್. ರಾಹುಲ್ ಅವರು ಪ್ರಥಮ ವಿಕೆಟ್‌ಕೀಪರ್ ಆಗಿದ್ದಾರೆ. ಕರ್ನಾಟಕದ ವೇಗಿ ಪ್ರಸಿದ್ಧ ಕೃಷ್ಣ ಕೂಡ ಸ್ಥಾನ ಪಡೆದಿದ್ದಾರೆ.

ರೋಹಿತ್ ಮತ್ತು ವಿರಾಟ್ ಅವರು ಈಚೆಗೆ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ಹೋದ ವರ್ಷ ಟಿ20 ಮಾದರಿಗೂ ನಿವೃತ್ತಿ ಘೋಷಿಸಿದ್ದರು.

ತಂಡಗಳು ಇಂತಿವೆ: ಏಕದಿನ ಕ್ರಿಕೆಟ್: ಶುಭಮನ್ ಗಿಲ್ (ನಾಯಕ), ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್ (ಉಪನಾಯಕ), ಯಶಸ್ವಿ ಜೈಸ್ವಾಲ್, ಅಕ್ಷರ್ ಪಟೇಲ್, ಕೆ.ಎಲ್. ರಾಹುಲ್ (ವಿಕೆಟ್‌ಕೀಪರ್), ನಿತೀಶ್ ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಹರ್ಷಿತ್ ರಾಣಾ, ಮೊಹಮ್ಮದ್ ಸಿರಾಜ್, ಅರ್ಷದೀಪ್ ಸಿಂಗ್, ಪ್ರಸಿದ್ಧಕೃಷ್ಣ, ಧ್ರುವ ಜುರೇಲ್ (ವಿಕೆಟ್‌ಕೀಪರ್).

ಟಿ20 ಕ್ರಿಕೆಟ್: ಸೂರ್ಯಕುಮಾರ್ ಯಾದವ್ (ನಾಯಕ), ಶುಭಮನ್ ಗಿಲ್ (ಉಪನಾಯಕ), ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ನಿತೀಶ್ ಕುಮಾರ್ ರೆಡ್ಡಿ, ಶಿವಂ ದುಬೆ, ಅಕ್ಷರ್ ಪಟೇಲ್, ಜೀತೇಶ್ ಶರ್ಮಾ (ವಿಕೆಟ್‌ಕೀಪರ್), ವರುಣ್ ಚಕ್ರವರ್ತಿ, ಜಸ್‌ಪ್ರೀತ್ ಬೂಮ್ರಾ, ಅರ್ಷದೀಪ್ ಸಿಂಗ್, ಕುಲದೀಪ್ ಯಾದವ್, ಹರ್ಷಿತ್ ರಾಣಾ, ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ರಿಂಕು ಸಿಂಗ್, ವಾಷಿಂಗ್ಟನ್ ಸುಂದರ್.

ವೇಳಾಪಟ್ಟಿ

ಏಕದಿನ ಪಂದ್ಯಗಳು: ಪರ್ತ್ (ಅ.19), ಅಡಿಲೇಡ್ (ಅ.23) ಮತ್ತು ಸಿಡ್ನಿ (ಅ.25)
ಟಿ20 ಪಂದ್ಯಗಳು: ಸಿಡ್ನಿ (ಅ.29), ಮೆಲ್ಬರ್ನ್ (ಅ.31), ಹೋಬರ್ಟ್ (ನ.2), ಗೋಲ್ಡ್ ಕೋಸ್ಟ್ (ನ.6) ಮತ್ತು ಬ್ರಿಸ್ಬೇನ್ (ನ.8)


ರೋಹಿತ್ ಶರ್ಮಾ ಮತ್ತು ಶುಭಮನ್ ಗಿಲ್

ಭಾರತಕ್ಕೆ ಸಾಟಿಯಾಗದ ವಿಂಡೀಸ್

ಜಡೇಜ, ಸಿರಾಜ್ ಅಮೋಘ ಬೌಲಿಂಗ್
• ಗಿಲ್ ಬಳಗಕ್ಕೆ ಇನಿಂಗ್ಸ್ ಜಯ

• ಸಿಡ್ನಿ ಕಿರಣ್

ಅಹಮದಾಬಾದ್: ಶನಿವಾರ ಬೆಳಿಗ್ಗೆ ಭಾರತ ತಂಡದ ಆಟಗಾರರು ನರೇಂದ್ರ ಮೋದಿ ಕ್ರೀಡಾಂಗಣವನ್ನು ಪ್ರವೇಶಿಸಿದಾಗ ಉಳಿದಿದ್ದ ಕುತೂಹಲ ಒಂದೇ ಒಂದು. ಆತಿಥೇಯ ತಂಡವು ಎಷ್ಟು ಗಂಟೆಗಳಲ್ಲಿ ಗೆಲುವು ಸಾಧಿಸಲಿದೆ ಎಂಬುದೇ ಆ ಕೌತುಕವಾಗಿತ್ತು!

ಅದಕ್ಕೆ ಉತ್ತರವೂ ಸುಲಭವಾಗಿ ದಕ್ಕಿತು. ಭೋಜನ ವಿರಾಮದ ನಂತರದ ಒಂದೂವರೆ ಗಂಟೆ ಕಳೆಯುವಷ್ಟರಲ್ಲಿ ಭಾರತ ತಂಡವು ಇನಿಂಗ್ಸ್ ಮತ್ತು 140 ರನ್‌ಗಳ ಜಯ ದಾಖಲಿಸಿತು. ಎರಡು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ವೆಸ್ಟ್ ಇಂಡೀಸ್ ಎದುರಿನ ಮೊದಲ ಟೆಸ್ಟ್ ಪಂದ್ಯದ ಎರಡನೇ ದಿನದಾಟದಲ್ಲಿ 286 ರನ್‌ಗಳ ಮುನ್ನಡೆಯನ್ನು ಗಳಿಸಿದ್ದ ಭಾರತ, ಮೂರನೇ ದಿನ ಬ್ಯಾಟಿಂಗ್ ಮಾಡುವ ಗೋಜಿಗೆ ಹೋಗಲಿಲ್ಲ. ಮೊದಲ ಇನಿಂಗ್ಸ್ (5ಕ್ಕೆ448) ಡಿಕ್ಲೇರ್ ಮಾಡಿಕೊಂಡಿತು. ಶುಕ್ರವಾರ ಬೆಳಿಗ್ಗೆ ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ (54ಕ್ಕೆ4), ವೇಗಿ ಮೊಹಮ್ಮದ್ ಸಿರಾಜ್ (31ಕ್ಕೆ3), ಸ್ಪಿನ್ನರ್ ಕುಲದೀಪ್ ಯಾದವ್ (23ಕ್ಕೆ2) ಮತ್ತು ಆಫ್‌ಸ್ಪಿನ್ನರ್ ವಾಷಿಂಗ್ಟನ್ ಸುಂದರ್ (18ಕ್ಕೆ1) ಆತಿಥೇಯ ತಂಡದ ಗೆಲುವನ್ನು ಸುಲಭಗೊಳಿಸಿದರು. ವಿಂಡೀಸ್ ತಂಡವು 45.1 ಓವರ್‌ಗಳಲ್ಲಿ 146 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ 162 ರನ್‌ಗಳಿಗೆ ವಿಂಡೀಸ್ ತಂಡವನ್ನು ಕಟ್ಟಿಹಾಕಿತ್ತು. ಅದರಿಂದಾಗಿ ತಂಡವು ಗಳಿಸಿರುವ ಮುನ್ನಡೆಯ ಮೊತ್ತವು ವಿಂಡೀಸ್ ಕಟ್ಟಿಹಾಕಲು ಸಾಕು ಎಂಬ ಭಾವ ಆತಿಥೇಯ ತಂಡಕ್ಕೆ ಮೂಡಿರಬಹುದು. ಗಿಲ್ ಮತ್ತು ಮುಖ್ಯ ಕೋಚ್ ಗೌತಮ್ ಗಂಭೀರ್ ಅವರ ಯೋಜನೆಯಂತೆ ಇನಿಂಗ್ಸ್ ಡಿಕ್ಲೇರ್ ಮಾಡಲಾಯಿತು.

ವಿಂಡೀಸ್ ಬ್ಯಾಟರ್‌ಗಳು ಭಾರತದ ಉತ್ತಮ ದರ್ಜೆಯ ಬೌಲಿಂಗ್ ಮುಂದೆ ಇನಿಂಗ್ಸ್ ಕಟ್ಟುವಲ್ಲಿ ಸಫಲರಾಗಲಿಲ್ಲ. ಆರಂಭಿಕ ಬ್ಯಾಟರ್‌ಗಳು ಮೊದಲ ಏಳು ಓವರ್ ತಾಳ್ಮೆಯಿಂದ ಆಡಿದರು. ಆದರೆ ಎಂಟನೇ ಓವರ್‌ನಲ್ಲಿ ಸಿರಾಜ್ ಎಸೆತದಲ್ಲಿ ತೇಜ್‌ನಾರಾಯಣ್ ಚಂದ್ರಪಾಲ್ ಅವರ ಕ್ಯಾಚ್ ಅನ್ನು ನಿತೀಶ್ ಕುಮಾರ್ ರೆಡ್ಡಿ ಡೈವ್ ಮಾಡಿ ಪಡೆದರು. ಅಲ್ಲಿಂದ ಬ್ಯಾಟರ್‌ಗಳ ಪರೇಡ್ ಆರಂಭವಾಯಿತು. ಸ್ಪಿನ್ನರ್‌ಗಳ ಕೈಚಳಕ ರಂಗೇರಿತು. ತಂಡವು 46 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತು.

ಆದರೆ ಅಲಿಕ್ ಅಥನೇಜ್ (38 ರನ್) ಮತ್ತು ಜಸ್ಟಿನ್ ಗ್ರೀವ್ಸ್ ಅವರು ಆರನೇ ವಿಕೆಟ್ ಜೊತೆಯಾಟದಲ್ಲಿ 46 ರನ್ ಸೇರಿಸುವ ಮೂಲಕ ತಮ್ಮ ತಂಡದ ಸೋಲಿನ ಅಂತರವನ್ನು ಕಡಿಮೆ ಮಾಡಿದರು. ಊಟದ ನಂತರದ ಎಂಟನೇ ಓವರ್‌ನಲ್ಲಿ ವಾಷಿಂಗ್ಟನ್ ತಮ್ಮದೇ ಎಸೆತದಲ್ಲಿ ಪಡೆದ ಕ್ಯಾಚ್‌ಗೆ ಅಲಿಕ್ ನಿರ್ಗಮಿಸಿದರು. ಜೊತೆಯಾಟ ಮುರಿಯಿತು. ಕೆಳಕ್ರಮಾಂಕದ ಬ್ಯಾಟರ್‌ಗಳು ಸುಖಾಸುಮ್ಮನೇ ಬ್ಯಾಟ್ ಬೀಸಿ ವಿಕೆಟ್ ಒಪ್ಪಿಸುವ ಶಾಸ್ತ್ರ ನಿಭಾಯಿಸಿದರು. ಮಧ್ಯಾಹ್ನ 1.40ಕ್ಕೆ ವಿಂಡೀಸ್ ಇನಿಂಗ್ಸ್‌ಗೆ ತೆರೆಬಿತ್ತು. ಶತಕ ಗಳಿಸಿ, ನಾಲ್ಕು ವಿಕೆಟ್ ಪಡೆದ ರವೀಂದ್ರ ಜಡೇಜ ಪಂದ್ಯಶ್ರೇಷ್ಠ ಗೌರವಕ್ಕೆ ಪಾತ್ರರಾದರು.

ಸರಣಿಯ ಎರಡನೇ ಮತ್ತು ಕೊನೆಯ ಪಂದ್ಯವು ನವದೆಹಲಿಯಲ್ಲಿ (ಅ.10ರಿಂದ) ನಡೆಯಲಿದೆ. ಸರಣಿಯಲ್ಲಿ ಕ್ಲೀನ್ ಸ್ವೀಪ್ ಜಯ ಸಾಧಿಸುವ ಅವಕಾಶ ಭಾರತಕ್ಕೆ ಇದೆ. 1994–95ರ ನಂತರ ಭಾರತದ ನೆಲದಲ್ಲಿ ವಿಂಡೀಸ್ ಟೆಸ್ಟ್ ಸರಣಿ ಜಯಿಸಿಲ್ಲ.

ಮುಖ್ಯಾಂಶಗಳು

- ಎರಡೂವರೆ ದಿನದಲ್ಲಿ ಮುಗಿದ ಟೆಸ್ಟ್ ಪಂದ್ಯ
- ಮೊಹಮ್ಮದ್ ಸಿರಾಜ್‌ಗೆ ಮತ್ತೆ ಮೂರು ವಿಕೆಟ್
- ಶುಭಮನ್ ಗಿಲ್ ನಾಯಕತ್ವದಲ್ಲಿ ಭಾರತ ತಂಡವು ತವರಿನಲ್ಲಿ ಆಡಿದ ಮೊದಲ ಟೆಸ್ಟ್

ಅಹಮದಾಬಾದಿನಲ್ಲಿ ಶನಿವಾರ ವೆಸ್ಟ್ ಇಂಡೀಸ್ ತಂಡದ ಎದುರಿನ ಟೆಸ್ಟ್ ಪಂದ್ಯದಲ್ಲಿ ಜಯಗಳಿಸಿದ ಭಾರತ ತಂಡದ ಆಟಗಾರರ ಸಂಭ್ರಮ ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ವೆಸ್ಟ್ ಇಂಡೀಸ್ 162 (44.1 ಓವರುಗಳಲ್ಲಿ)
ಭಾರತ 5 ವಿಕೆಟ್‌ಗೆ 448 ಡಿಕ್ಲೇರ್ಡ್ (128 ಓವರುಗಳಲ್ಲಿ)
ಎರಡನೇ ಇನಿಂಗ್ಸ್:
ವೆಸ್ಟ್ ಇಂಡೀಸ್ 146 (45.1 ಓವರುಗಳಲ್ಲಿ)

ಕ್ಯಾಂಪ್‌ಬೆಲ್ ಸಿ ಸುದರ್ಶನ್ ಬಿ ಜಡೇಜ 14 (32ಎ, 4x1)
ತೇಜನಾರಾಯನ್ ಸಿ ನೀತೀಶ್ ರೆಡ್ಡಿ ಬಿ ಸಿರಾಜ್ 8 (23ಎ, 4x1)
ಅಥನೇಜ್ ಸಿ ಮತ್ತು ಬಿ ಸುಂದರ್ 38 (74ಎ, 4x3)
ಕಿಂಗ್ ಸಿ ರಾಹುಲ್ ಬಿ ಜಡೇಜ 5 (18ಎ, 4x1)
ಚೇಸ್ ಬಿ ಕುಲದೀಪ್ 1 (4ಎ)
ಹೋಪ್ ಸಿ ಜೈಸ್ವಾಲ್ ಬಿ ಜಡೇಜ 1 (14ಎ)
ಗ್ರೀವ್ಸ್ ಎಲ್‌ಬಿಡಬ್ಲ್ಯು ಬಿ ಸಿರಾಜ್ 25 (52ಎ, 4x4)
ಪಿಯರ್ ಔಟಾಗದೇ 13 (28ಎ, 4x2)
ವಾರಿಕನ್ ಸಿ ಗಿಲ್ ಬಿ ಸಿರಾಜ್ 0 (2ಎ)
ಲೇಯ್ನ್ ಸಿ ಸಿರಾಜ್ ಬಿ ಜಡೇಜ 14 (13ಎ, 4x3)
ಸೀಲ್ಸ್ ಸಿ ಮತ್ತು ಬಿ ಕುಲದೀಪ್ 22 (12ಎ, 4x1, 6x2)
ಇತರೆ: 5 (ಬೈ 4, ನೋಬಾಲ್ 1)
ವಿಕೆಟ್ ಪತನ: 1–12 (ತೇಜನಾರಾಯಣ ಚಂದ್ರಪಾಲ್, 7.2), 2–24 (ಜಾನ್ ಕ್ಯಾಂಪ್‌ಬೆಲ್, 10.1), 3–34 (ಬ್ರಾಂಡನ್ ಕಿಂಗ್, 16.2), 4–35 (ರೋಸ್ಟನ್ ಚೇಸ್, 17.3), 5–46 (ಶಾಯ್ ಹೋಪ್, 20.60, 6–92 (ಅಲಿಕ್ ಅಥನೇಜ್, 35.3), 7–98 (ಜಸ್ಟಿನ್ ಗ್ರೀವ್ಸ್, 36.4), 8–98 (ಜೋಮೆಲ್ ವಾರಿಕನ್, 36.6), 9–122 (ಜೊಹಾನ್ ಲೇಯ್ನ್, 42.1), 10–146 (ಜೇಡನ್ ಸೀಲ್ಸ್, 45.1).
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 6–1–16–0; ಮೊಹಮ್ಮದ್ ಸಿರಾಜ್ 11–2–31–3; ರವೀಂದ್ರ ಜಡೇಜ 13–3–54–4; ಕುಲದೀಪ್ ಯಾದವ್ 8.1–3–23–2; ವಾಷಿಂಗ್ಟನ್ ಸುಂದರ್ 7–1–18–1
ಪಂದ್ಯದ ಆಟಗಾರ: ರವೀಂದ್ರ ಜಡೇಜ

ಫಲಿತಾಂಶ: ಭಾರತಕ್ಕೆ ಇನಿಂಗ್ಸ್ ಮತ್ತು 140 ರನ್ ಜಯ, ಸರಣಿಯಲ್ಲಿ 1–0 ಮುನ್ನಡೆ

ಲಯಕ್ಕೆ ಮರಳುವ ಛಲದಲ್ಲಿ ಸ್ಮೃತಿ, ಹರ್ಮನ್‌ಪ್ರೀತ್
ಭಾರತ–ಪಾಕ್ ವನಿತೆಯರ ಹಣಾಹಣಿ

ಕೊಲಂಬೊ (ಪಿಟಿಐ): ಬದ್ಧ ಪ್ರತಿಸ್ಪರ್ಧಿಗಳಾದ ಭಾರತ ಮತ್ತು ಪಾಕಿಸ್ತಾನ ಕ್ರಿಕೆಟ್ ತಂಡಗಳು ಭಾನುವಾರ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಕಳೆದ ಮೂರು ಭಾನುವಾರಗಳಲ್ಲಿಯೂ ಪುರುಷರ ತಂಡಗಳು ಏಷ್ಯಾ ಕಪ್ ಟೂರ್ನಿಯಲ್ಲಿ ಮುಖಾಮುಖಿ ಆಗಿದ್ದವು. ಇದೀಗ ಮಹಿಳೆಯರ ಸರದಿ. ಒಟ್ಟಾರೆ ಸತತ ನಾಲ್ಕನೇ ಭಾನುವಾರವೂ ಉಭಯ ದೇಶಗಳ ಕ್ರಿಕೆಟ್ ಪೈಪೋಟಿ ನಡೆಯಲಿದೆ. ಮಹಿಳಾ ತಂಡಗಳು ತಟಸ್ಥ ಸ್ಥಳದಲ್ಲಿ ಮುಖಾಮುಖಿಯಾಗುತ್ತಿವೆ.

ಅಂತರರಾಷ್ಟ್ರೀಯ ವೇದಿಕೆಯಲ್ಲಿ ಉಭಯ ತಂಡಗಳು ಒಟ್ಟು 27 ಪಂದ್ಯಗಳಲ್ಲಿ ಹಣಾಹಣಿ ನಡೆಸಿವೆ. ಅದರಲ್ಲಿ ಭಾರತ 24–3ರಿಂದ ಮುನ್ನಡೆಯಲ್ಲಿದೆ. ಟಿ20 ಮಾದರಿಯಲ್ಲಿ ಪಾಕ್ 3 ಪಂದ್ಯಗಳನ್ನು ಗೆದ್ದಿದೆ. ಆದರೆ ಏಕದಿನ ಪಂದ್ಯಗಳಲ್ಲಿ ಭಾರತದ್ದೇ ಪಾರಮ್ಯ. ಪಾಕ್ ಇದುವರೆಗೆ ಗೆಲುವಿನ ಖಾತೆ ತೆರೆದಿಲ್ಲ. ಮುಖಾಮುಖಿಯಾಗಿರುವ ಎಲ್ಲ ಹನ್ನೊಂದು ಪಂದ್ಯಗಳಲ್ಲಿಯೂ ಭಾರತ ಜಯಿಸಿದೆ.

ಭಾರತ ತಂಡ ಸದ್ಯ ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಆದ್ದರಿಂದ ಹರ್ಮನ್‌ಪ್ರೀತ್ ಕೌರ್ ಬಳಗವು ಗೆಲುವಿನ ಜೊತೆಗೆ ನೆಟ್ ರನ್ ರೇಟ್ ಹೆಚ್ಚಿಸಿಕೊಳ್ಳುವತ್ತಲೂ ಚಿತ್ತ ನೆಟ್ಟಿದೆ.

ಲಂಕಾ ಎದುರಿನ ಪಂದ್ಯದಲ್ಲಿ ಭಾರತದ ಸ್ಮೃತಿ ಮಂದಾನ ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಿರಲಿಲ್ಲ. ಅದರಿಂದಾಗಿ ಉತ್ತಮ ಆರಂಭ ಒದಗಿರಲಿಲ್ಲ. ಅಲ್ಲದೇ 124 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡಿತ್ತು.

ಆ ಹಂತದಲ್ಲಿ ದೀಪ್ತಿ ಶರ್ಮಾ ಮತ್ತು ಅಮನ್ಜೋತ್ ಕೌರ್ ಅವರ ಅರ್ಧಶತಕಗಳು ತಂಡಕ್ಕೆ ಜೀವ ತುಂಬಿದ್ದವು. ಹರ್ಲೀನ್ ಡಿಯೊಲ್ ಹಾಗೂ ಸ್ನೇಹ ರಾಣಾ ಅವರ ಉಪಯುಕ್ತ ಕಾಣಿಕೆಗಳಿಂದಾಗಿ ತಂಡವು ಹೋರಾಟದ ಮೊತ್ತ ಗಳಿಸಿತ್ತು. ದೀಪ್ತಿ ಮತ್ತು ಸ್ನೇಹ ಬೌಲಿಂಗ್‌ನಲ್ಲಿಯೂ ಮಿಂಚಿದ್ದರು. ಕ್ರಮವಾಗಿ ಮೂರು ಮತ್ತು ಎರಡು ವಿಕೆಟ್ ಗಳಿಸಿದ್ದರು. ಶ್ರೀಚರಣಿ ಕೂಡ ಉತ್ತಮ ಜೊತೆ ನೀಡಿದ್ದರು.

ಪಾಕ್ ತಂಡವು ಬಾಂಗ್ಲಾದೇಶಕ್ಕೆ ಸುಲಭದ ತುತ್ತಾಗಿತ್ತು. ಕೇವಲ 129 ರನ್‌ಗಳ ಗುರಿಯೊಡ್ಡಿ ಸೋತಿತ್ತು.

ಮೇಲ್ನೋಟಕ್ಕೆ ಭಾರತ ತಂಡವೇ ಪಾಕ್ ಬಳಗಕ್ಕಿಂತ ಹೆಚ್ಚು ಬಲಶಾಲಿಯಾಗಿದೆ. ಆದ್ದರಿಂದ ಗೆಲ್ಲುವ ನೆಚ್ಚಿನ ತಂಡವೂ ಆಗಿದೆ.

ಪಂದ್ಯ ಆರಂಭ: ಮಧ್ಯಾಹ್ನ 3
ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೊಹಾಟ್‌ಸ್ಟಾರ್

ಭಾರತ ತಂಡದ ಸ್ಮೃತಿ ಮಂದಾನ ಮತ್ತು ಸಹ ಆಟಗಾರ್ತಿಯರು ಅಭ್ಯಾಸ ಮಾಡಿದರು ಪಿಟಿಐ ಚಿತ್ರ

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ಫಾತಿಮಾ ಸನಾ

ಆಸ್ಟ್ರೇಲಿಯಾ–ಶ್ರೀಲಂಕಾ ನಡುವಣ ಪಂದ್ಯ ಮಳೆಯ ಪಾಲು

ಕೊಲಂಬೊ (ಪಿಟಿಐ): ಶ್ರೀಲಂಕಾ ಮತ್ತು ಆಸ್ಟ್ರೇಲಿಯಾ ನಡುವಣ ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಪಂದ್ಯ ಶನಿವಾರ ಎಡೆಬಿಡದ ಸುರಿದ ಮಳೆಗೆ ಕೊಚ್ಚಿಹೋಯಿತು. ಮಳೆರಾಯನ ಆರ್ಭಟದಿಂದ ಟಾಸ್ ಕೂಡ ಸಾಧ್ಯವಾಗಲಿಲ್ಲ.

ಎರಡೂ ತಂಡಗಳು ತಲಾ ಒಂದು ಪಾಯಿಂಟ್ ಪಡೆದವು. ಕೊಲಂಬೊದಾದ್ಯಂತ ಮಳೆಯಾಗಿದೆ.

ಆಸ್ಟ್ರೇಲಿಯಾ ವಿಶ್ವಕಪ್‌ನಲ್ಲಿ ಎರಡು ಪಂದ್ಯಗಳಿಂದ ಮೂರು ಪಾಯಿಂಟ್, ಲಂಕಾ ಎರಡು ಪಂದ್ಯಗಳಿಂದ ಒಂದು ಪಾಯಿಂಟ್ ಪಡೆದಿವೆ.

ಆಸ್ಟ್ರೇಲಿಯಾ ಅಕ್ಟೋಬರ್ 8ರಂದು ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು ಎದುರಿಸಲಿದೆ.

ಶ್ರೀಲಂಕಾ ತಂಡವು ಅಕ್ಟೋಬರ್ 11ರಂದು ಇದೇ ಕ್ರೀಡಾಂಗಣದಲ್ಲಿ ಇಂಗ್ಲೆಂಡ್ ತಂಡವನ್ನು ಎದುರಿಲಿದೆ.

ಜಿಸಿಟಿ: ನಾಲ್ಕನೇ ಸ್ಥಾನ ಪಡೆದ ಪ್ರಜ್ಞಾನಂದ

ಸಾವೊ ಪೌಲೊ (ಬ್ರೆಜಿಲ್): ಅಮೆರಿಕದ ಫ್ಯಾಬಿಯಾನೊ ಕರುವಾನ ಅವರು ಶನಿವಾರ ನಡೆದ ವೇಗದ ಆಟಗಳ ಟೈಬ್ರೇಕರ್‌ನಲ್ಲಿ ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಅವರನ್ನು ಸೋಲಿಸಿ ಗ್ರ್ಯಾಂಡ್ ಚೆಸ್ ಟೂರ್ ಫೈನಲ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಒಟ್ಟು 15–13ರಲ್ಲಿ ಗೆದ್ದ ಕರುವಾನ ಟ್ರೋಫಿ ಜೊತೆ ₹1.33 ಕೋಟಿ ನಗದು ಮೊತ್ತವನ್ನು ಬಹುಮಾನವಾಗಿ ಪಡೆದರು. ಲಗ್ರಾವ್ ₹88 ಲಕ್ಷ ನಗದು ಮೊತ್ತ ಗಳಿಸಿದರು.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯವೂ ಟೈಬ್ರೇಕ್ ಆಟಗಳ ಮೂಲಕ ಇತ್ಯರ್ಥಗೊಂಡು ಅಮೆರಿಕದ ಲೆವೋನ್ ಅರೋನಿಯನ್ 20–8 ರಿಂದ ಆರ್. ಪ್ರಜ್ಞಾನಂದ ಅವರನ್ನು ಮಣಿಸಿದರು. ಅರೋನಿಯನ್ ಸುಮಾರು ₹53 ಲಕ್ಷ ಜೇಬಿಗಿಳಿಸಿದರೆ, ಪ್ರಜ್ಞಾನಂದ ಅವರು ₹35.5 ಲಕ್ಷ ಬಹುಮಾನ ಪಡೆದರು.

ರೇಸಿಂಗ್: ಗಮನ ಸೆಳೆದ ಕೈಲ್, ಇಟ್ಸುಕೀ

ಕೊಯಮತ್ತೂರು: ಕೈಲ್ ಕುಮಾರನ್, ಇಟ್ಸುಕೀ ಸ್ಯಾಟೋ ಹಾಗೂ ಮೆಹುಲ್ ಅಗರವಾಲ್ ಅವರು ಶನಿವಾರ ಆರಂಭಗೊಂಡ ಮೂರನೇ ಸುತ್ತಿನ ಇಂಡಿಯನ್ ರೇಸಿಂಗ್ ಫೆಸ್ಟಿವಲ್ ಸ್ಪರ್ಧೆಯಲ್ಲಿ ಗಮನ ಸೆಳೆದರು.

ಕಿಚ್ಚಾ ಕಿಂಗ್ಸ್ ಬೆಂಗಳೂರು ತಂಡದ ಕೈಲ್ ಕುಮಾರನ್ (26 ನಿ. 34.556 ಸೆ.) ಅವರು 'ಐಆರ್‌ಎಲ್ ಡ್ರೈವರ್ ಎ' ರೇಸ್‌ನಲ್ಲಿ ಮೊದಲಿಗರಾದರು. ಇದೇ ತಂಡದ ನೀಲ್ ಜಾನಿ (26ನಿ. 36.934 ಸೆ.) ಮೂರನೇ ಸ್ಥಾನ ಪಡೆದರೆ, ಹೈದರಾಬಾದ್ ಬ್ಲ್ಯಾಕ್ ಬರ್ಡ್ಸ್ ತಂಡದ ಅಖಿಲ್ ರವೀಂದ್ರ (26ನಿ. 36.855 ಸೆ.) ಎರಡನೇ ಸ್ಥಾನ ತಮ್ಮದಾಗಿಸಿಕೊಂಡರು.

ಫಾರ್ಮುಲಾ 4 ಇಂಡಿಯಾ ಚಾಂಪಿಯನ್‌ಷಿಪ್‌ನಲ್ಲಿ ಅಹಮದಾಬಾದ್ ಅಪೆಕ್ಸ್ ತಂಡದ ಇಟ್ಸುಕೀ ಸ್ಯಾಟೋ (27ನಿ. 10.989 ಸೆ.) ಮೊದಲನೆಯವರಾಗಿ ಗುರಿ ಮುಟ್ಟಿದರು. ಕೋಲ್ಕತ್ತ ರಾಯಲ್ ಟೈಗರ್ಸ್ ತಂಡದ ಗಾಭ್ರಿ ಮೊಟ್ಲೆಕರ್ (27ನಿ. 31.350 ಸೆ.) ಎರಡನೆಯವರಾಗಿ ಗುರಿ ತಲುಪಿದರು.

ಎಫ್‌ಎಂಎಸ್‌ಸಿಐ ರಾಷ್ಟ್ರೀಯ ರೇಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಡಾರ್ಕ್ ಡಾನ್ ರೇಸಿಂಗ್ ತಂಡದ ಮೆಹುಲ್ ಅಗರವಾಲ್ ಅವರು (20 ನಿ. 13.369 ಸೆ.) ಅಗ್ರಸ್ಥಾನ ಪಡೆದರು.

ಪಿವಿಎಲ್: ಡಿಫೆಂಡರ್ಸ್‌ಗೆ ರೋಚಕ ಜಯ

ಹೈದರಾಬಾದ್ (ಪಿಟಿಐ): ಆರಂಭಿಕ ಹಿನ್ನಡೆಯಿಂದ ಪುಟಿದೆದ್ದ ಅಹಮದಾಬಾದ್ ಡಿಫೆಂಡರ್ಸ್ ತಂಡವು ಪ್ರೈಮ್ ವಾಲಿಬಾಲ್ ಲೀಗ್ (ಪಿವಿಎಲ್) ಪಂದ್ಯದಲ್ಲಿ ಶನಿವಾರ 13–15, 13–15, 15–13, 15–8, 18–16ರಿಂದ ದೆಹಲಿ ತೂಫಾನ್ಸ್ ತಂಡದ ಎದುರು ರೋಚಕ ಜಯ ಸಾಧಿಸಿತು.

ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಅಹಮದಾಬಾದ್ ತಂಡವು ಆರಂಭಿಕ ಎರಡು ಸೆಟ್‌ಗಳಲ್ಲಿ ಹಿನ್ನಡೆ ಸಾಧಿಸಿತ್ತು. ಬಳಿಕ ಲಯ ಕಂಡುಕೊಂಡ ಡಿಫೆಂಡರ್ಸ್ ಆಟಗಾರರು ಗೆಲುವು ಕಸಿದುಕೊಂಡು ದೆಹಲಿ ತಂಡಕ್ಕೆ ಆಘಾತ ನೀಡಿದರು.

ಸೈಕ್ಲಿಂಗ್: ವಿಜಯಪುರ, ಬಾಗಲಕೋಟೆ ಪಾರಮ್ಯ

ಪ್ರಜಾವಾಣಿ ವಾರ್ತೆ

ಬೆಳಗಾವಿ: ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಸೈಕ್ಲಿಸ್ಟ್‌ಗಳು ಶನಿವಾರ ಆರಂಭವಾದ 16ನೇ ರಾಜ್ಯ ರಸ್ತೆ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನ ಟೈಮ್ ಟ್ರಯಲ್ಸ್‌ನಲ್ಲಿ ಪಾರಮ್ಯ ಮೆರೆದರು.

ಫಲಿತಾಂಶಗಳು: ಪುರುಷರು: ಮುಕ್ತ ವಿಭಾಗ; 30 ಕಿ.ಮೀ: ಸೌರಭ್ ಸಿಂಗ್ (ಬೆಂಗಳೂರು; 40.21 ನಿ.)–1, ಸುಜಲ್ ಜಾಧವ (ವಿಜಯಪುರ; 41.35 ನಿ.)–2, ಉದಯ ಗುಳೇದ (ಧಾರವಾಡ; 42.54 ನಿ.)–3.

23 ವರ್ಷದೊಳಗಿನವರಿಗೆ 30 ಕಿ.ಮೀ: ಮಲ್ಲಿಕಾರ್ಜುನ ಶಿರೋಳ (ಬಾಗಲಕೋಟೆ; 43.21 ನಿ.)–1, ಮಲ್ಲಿಕಾರ್ಜುನ ಯಾದವಾಡ (ಬಾಗಲಕೋಟೆ; 43.27 ನಿ.)–2, ಹಾರ್ದಿಕ್ ರಾಯ್ (ಉಡುಪಿ; 43.47 ನಿ.)–3.

ಬಾಲಕರು: 18 ವರ್ಷದೊಳಗಿನವರು. 20 ಕಿ.ಮೀ: ಶ್ರೀನಿವಾಸ ರಜಪೂತ (ವಿಜಯಪುರ; 29.04 ನಿ.)–1, ನಿತೀಶ ಪೂಜಾರಿ (ವಿಜಯಪುರ; 29.07 ನಿ.)–2, ಹನುಮಂತ ಹಲ್ಲಿಕೇರಿ (ಯಾದಗಿರಿ; 29.41 ನಿ.)–3.

16 ವರ್ಷದೊಳಗಿನವರು: 15 ಕಿ.ಮೀ: ಧನುಷ್ ಪ್ರಶಾಂತ (ಬೆಂಗಳೂರು; 21.01 ನಿ.)–1, ಹೊನ್ನಪ್ಪ ಧರ್ಮಟ್ಟಿ (ಚಂದರಗಿ, ಬೆಳಗಾವಿ; 21.12 ನಿ.)–2, ಪುನೀತ ಬಿರಾದಾರ (ವಿಜಯಪುರ; 21.40 ನಿ.)–3.

14 ವರ್ಷದೊಳಗಿನವರು– 10 ಕಿ.ಮೀ: ಸಿದ್ದಲಿಂಗ ಜಕ್ಕಣ್ಣವರ (ಬಾಗಲಕೋಟೆ; 16.29 ನಿ.)–1, ಅಭಿಷೇಕ ದಿಡ್ಡಿಬಾಗಿಲ (ವಿಜಯಪುರ; 16.34 ನಿ.)–2, ಬಸವರಾಜ ಯಳಮೇಲಿ (ವಿಜಯಪುರ; 16.36 ನಿ.)–3.

ಮಹಿಳೆಯರು: 20 ಕಿ.ಮೀ: ಗಂಗಾ ದಂಡಿನ (ಯಾದಗಿರಿ; 33.26 ನಿ.)–1, ಟಿಂ.ಟಿಂ. ಶರ್ಮಾ (ಬೆಂಗಳೂರು; 33.57 ನಿ.)–2, ಪಾಯಲ್ ಚವ್ಹಾಣ (ವಿಜಯಪುರ; 34.07 ನಿ.)–3.

ಬಾಲಕಿಯರು: 18 ವರ್ಷದೊಳಗಿನವರು– 15 ಕಿ.ಮೀ: ಛಾಯಾ ನಾಗಶೆಟ್ಟಿ (ವಿಜಯಪುರ; 24.02 ನಿ.)–1, ಆಯೇಷಾ ಮೋಮಿನ್ (ಬಾಗಲಕೋಟೆ; 25.32 ನಿ.)–2, ಜ್ಯೋತಿ ರಾಠೋಡ (ಬಾಗಲ ಕೋಟೆ; 25.37 ನಿ.)–3.

16 ವರ್ಷದೊಳಗಿನವರು– 10 ಕಿ.ಮೀ: ದೀಪಿಕಾ ಫಡತಾರೆ (ವಿಜಯಪುರ; 16.41 ನಿ.)–1, ಪೂರ್ವಿ ಸಿದ್ದವ್ವಗೋಳ (ಯಾದಗಿರಿ; 17.08 ನಿ.)–2, ನಂದಿನಿ ಲಮಾಣಿ (ಬಾಗಲಕೋಟೆ; 17.31 ನಿ.)–3.

14 ವರ್ಷದೊಳಗಿನವರು– 7 ಕಿ.ಮೀ: ಪ್ರಿಯಾಂಕಾ ಲಮಾಣಿ (ಗದಗ; 11.55 ನಿ.)–1, ವಿದ್ಯಾ ಲಮಾಣಿ (ಬಾಗಲಕೋಟೆ; 12.15 ನಿ.)–2, ವರ್ಷಾ ಚವ್ಹಾಣ (ವಿಜಯಪುರ; 12.29 ನಿ.)–3.

ಇರಾನಿ ಕಪ್: ವಿದರ್ಭ ಹಿಡಿತ

ನಾಗ್ಪುರ (ಪಿಟಿಐ): ರಣಜಿ ಟ್ರೋಫಿ ವಿಜೇತ ವಿದರ್ಭ ತಂಡವು ಇರಾನಿ ಕಪ್ ಅನ್ನೂ ಜಯಿಸುವ ತವಕದಲ್ಲಿದೆ. ಗೆಲುವಿಗೆ 361 ರನ್‌ಗಳ ಬೃಹತ್ ಗುರಿ ಬೆನ್ನಟ್ಟಿರುವ ರೆಸ್ಟ್ ಆಫ್ ಇಂಡಿಯಾ 2 ವಿಕೆಟ್ ನಷ್ಟಕ್ಕೆ 30 ರನ್ ಗಳಿಸಿದೆ.

ರಜತ್

ನಾಲ್ಕನೇ ದಿನವಾದ ಶನಿವಾರ 2 ವಿಕೆಟ್‌ಗೆ 96 ರನ್‌ಗಳೊಡನೆ ಆಟ ಮುಂದುವರಿಸಿದ ಆತಿಥೇಯ ತಂಡವು 94.1 ಓವರ್‌ಗಳಲ್ಲಿ 232 ರನ್‌ಗಳಿಗೆ ಆಲೌಟ್ ಆಯಿತು. ಆದರೂ, ಮೊದಲ ಇನಿಂಗ್ಸ್‌ನಲ್ಲಿ ಸಾಧಿಸಿದ್ದ 128 ರನ್ ಮುನ್ನಡೆಯಿಂದಾಗಿ ಒತ್ತಡ ಹೇರುವಷ್ಟು ಗುರಿ ನಿಗದಿಪಡಿಸಿತು.

ಪ್ರಶಸ್ತಿ ಗೆಲ್ಲಲು ರಜತ್ ಪಾಟೀದಾರ್ ಪಡೆ ಇನ್ನೂ 331 ರನ್ ಗಳಿಸಬೇಕಿದೆ. ಅಂತಿಮ ದಿನವಾದ ಭಾನುವಾರ ಎದುರಾಳಿ ತಂಡದ 8 ವಿಕೆಟ್‌ಗಳನ್ನು ಬೇಗ ಪಡೆದು ಮೂರನೇ ಬಾರಿ ಪ್ರಶಸ್ತಿ ಗೆಲ್ಲುವ ಗುರಿ ವಿದರ್ಭ ಬೌಲರ್‌ಗಳ ಮುಂದಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ವಿದರ್ಭ: 101.4 ಓವರ್‌ಗಳಲ್ಲಿ 342. ರೆಸ್ಟ್ ಆಫ್ ಇಂಡಿಯಾ: 69.5 ಓವರ್‌ಗಳಲ್ಲಿ 214. ಎರಡನೇ ಇನಿಂಗ್ಸ್: ವಿದರ್ಭ: 94.1 ಓವರ್‌ಗಳಲ್ಲಿ 232 (ಅಮಾನ್ ಮೋಖಡೆ 37, ಅಕ್ಷಯ್ ವಾಡ್ಕರ್ 36, ದರ್ಶನ್ ನಲ್ಕಂಡೆ 35; ಅನ್ಷುಲ್ ಕಂಬೋಜ್ 34ಕ್ಕೆ4, ಗುರುಪ್ರೀತ್ ಬ್ರಾರ್ 41ಕ್ಕೆ2, ಸಾರಾಂಶ್ ಜೈನ್ 52ಕ್ಕೆ2, ಮಾನವ್ ಸುತಾರ್ 82ಕ್ಕೆ2); ರೆಸ್ಟ್ ಆಫ್ ಇಂಡಿಯಾ: 12 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 30 (ಅಭಿಮನ್ಯು ಈಶ್ವರನ್ 14, ಇಶಾನ್ ಕಿಶನ್ ಔಟಾಗದೇ 5, ರಜತ್ ಪಾಟೀದಾರ್ ಔಟಾಗದೇ 2, ಆದಿತ್ಯ ಠಾಕ್ರೆ 8ಕ್ಕೆ1, ಹರ್ಷ್ ದುಬೆ 20ಕ್ಕೆ1)

ವಿಶ್ವ ಪ್ಯಾರಾ ಅಥ್ಲೆಟಿಕ್ ಚಾಂಪಿಯನ್‌ಷಿಪ್: ಷಾಟ್‌ಪಟ್‌ನಲ್ಲಿ ಸೋಮನ್‌ಗೆ ಕಂಚು
ಏಕ್ತಾಗೆ ಬೆಳ್ಳಿ, ಪ್ರವೀಣ್‌ಗೆ ಕಂಚಿನ ಪದಕ

ನವದೆಹಲಿ (ಪಿಟಿಐ): ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಚಾಂಪಿಯನ್ ಪ್ರವೀಣ್ ಕುಮಾರ್ ಅವರು ಶನಿವಾರ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಟಿ64 ಹೈಜಂಪ್‌ನಲ್ಲಿ ಚಿನ್ನ ಗೆಲ್ಲಲಾಗದಿದ್ದರೂ ಕಂಚಿನ ಪದಕ ತಮ್ಮದಾಗಿಸಿಕೊಂಡರು. ಕ್ಲಬ್ ಥ್ರೋನಲ್ಲಿ ಏಕತಾ ಭ್ಯಾನ್ ಬೆಳ್ಳಿ ಗೆದ್ದರು.

ಭಾರತದ ಅಥ್ಲೀಟುಗಳು ಒಂಬತ್ತನೇ ದಿನವಾದ ಶನಿವಾರ ಒಟ್ಟು ಮೂರು ಪದಕಗಳನ್ನು ಪಡೆದರು. ಆದರೆ ಬಂಗಾರ ಒಲಿಯಲಿಲ್ಲ.

ಭಾನುವಾರ ಈ ಕೂಟದ ಕೊನೆಯ ದಿನವಾಗಿದ್ದು, ಆತಿಥೇಯ ತಂಡ ಈಗಾಗಲೇ 18 ಪದಕಗಳನ್ನು ಗೆದ್ದುಕೊಂಡು ಪದಕಪಟ್ಟಿಯಲ್ಲಿ ಇದುವರೆಗಿನ ಅತ್ಯುತ್ತಮ ಸಾಧನೆ ದಾಖಲಿಸಿದೆ. ಇದರಲ್ಲಿ ಆರು ಚಿನ್ನ, ಏಳು ಬೆಳ್ಳಿ, ಐದು ಕಂಚಿನ ಪದಕಗಳು ಒಳಗೊಂಡಿವೆ. ಬ್ರೆಜಿಲ್ 37 ಪದಕಗಳೊಡನೆ (12–18–7) ಅಗ್ರಸ್ಥಾನದಲ್ಲಿದೆ. ಭಾರತದ ಈ ಹಿಂದಿನ ಶ್ರೇಷ್ಠ ಸಾಧನೆ ಜಪಾನ್‌ನ ಕೋಬೆ (2024) ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ದಾಖಲಾಗಿತ್ತು. ಅಲ್ಲಿ 17 ಪದಕಗಳನ್ನು (6–5–6) ಗೆದ್ದುಕೊಂಡಿತ್ತು.

ಭಾರತಕ್ಕೆ ದಿನದ ಮೂರನೇ ಪದಕವನ್ನು ಪುರುಷರ ಷಾಟ್‌ಪಟ್ ಎಫ್57 ವಿಭಾಗದಲ್ಲಿ ಸೋಮನ್ ರಾಣಾ ತಂದುಕೊಟ್ಟರು. ಸೇನೆಯಲ್ಲಿರುವ 42 ವರ್ಷದ ಸೋಮನ್ 14.69 ಮೀ. ದೂರ ಎಸೆದರು. ಹಾಂಗ್‌ಝೌ ಏಷ್ಯನ್ ಕ್ರೀಡೆಗಳಲ್ಲಿ ಬೆಳ್ಳಿ ಗೆದ್ದಿದ್ದ ಅವರು ನಾಲ್ಕನೆ ಥ್ರೋನಲ್ಲಿ ಈ ದೂರ ದಾಖಲಿಸಿದರು. ಈ ವಿಭಾಗದಡಿ ಸ್ಪರ್ಧಿಗಳು ಕಾಲಿನ ಊನದಿಂದಾಗಿ ಕುಳಿತ ಸ್ಥಿತಿಯಲ್ಲೇ ಸ್ಪರ್ಧಿಸಬೇಕಾಗುತ್ತದೆ.

ಪ್ರವೀಣ್ ಕುಮಾರ್ ಪಿಟಿಐ ಚಿತ್ರ

ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿದ್ದ ಪ್ರವೀಣ್ ಇಲ್ಲೂ ಫೇವರಿಟ್ ಆಗಿದ್ದರು. ಆದರೆ ಅವರು 2.00 ಮೀ. ಎತ್ತರ ಜಿಗಿಯಲು ಮಾತ್ರ ಸಾಧ್ಯವಾಯಿತು. ಉಜ್ಬೇಕಿಸ್ತಾನದ ತೆಮುರ್ಬೆಕ್ ಗಿಯಾಝೊವ್ (2.03 ಮೀ.) ಚಿನ್ನ ಗೆದ್ದರು. ಬ್ರಿಟನ್‌ನ ಜೊನಾಥನ್ ಬ್ರೂಮ್–ಎಡ್ವರ್ಡ್ಸ್ ಸಹ 2.00 ಮೀ. ಜಿಗಿದರೂ ಬೆಳ್ಳಿ ಪಡೆದರು. 37 ವರ್ಷ ವಯಸ್ಸಿನ ಎಡ್ವರ್ಡ್ಸ್ ಮೊದಲ ಯತ್ನದಲ್ಲೇ 2.00 ಮೀ. ಜಿಗಿದರೆ, ಪ್ರವೀಣ್ ಎರಡನೇ ಯತ್ನದಲ್ಲಿ ಈ ಎತ್ತರ ದಾಖಲಿಸಿದ್ದರು.

'10–12 ದಿನಗಳಿಂದ ಪೃಷ್ಠದ ನೋವು ಕಾಡುತ್ತಿದೆ. ಹೀಗಾಗಿ ರನ್‌ಅಪ್ ಕೂಡ ಮೊಟಕುಗೊಳಿಸಿದ್ದೆ' ಎಂದು 22 ವರ್ಷ ವಯಸ್ಸಿನ ಪ್ರವೀಣ್ ಹೇಳಿದರು. ಈ ವಿಭಾಗದಲ್ಲಿ ಸ್ಪರ್ಧಿಸುವವರ ಒಂದು ಕಾಲು ಮಾತ್ರ ಸುಸ್ಥಿತಿಯಲ್ಲಿರುತ್ತದೆ.

ಭ್ಯಾನ್‌ಗೆ ಬೆಳ್ಳಿ: ಮಹಿಳೆಯರ ಎಫ್ 51 ಕ್ಲಬ್ ಥ್ರೋನಲ್ಲಿ ಏಕತಾ ಆರನೇ ಹಾಗೂ ಅಂತಿಮ ಯತ್ನದಲ್ಲಿ 19.80 ಮೀ. ದೂರ ದಾಖಲಿಸಿದರು. ಉಕ್ರೇನಿನ ಝೊಯಾ ಒವಿಸಿ (24.03 ಮೀ.) ಚಿನ್ನ ಗೆದ್ದರೆ, ತಟಸ್ಥ ದೇಶಗಳ ತಂಡದ ಏಕತೆರಿನಾ ಪೊಟಪೊವಾ (18.60 ಮೀ.) ಕಂಚು ಗೆದ್ದರು. ಕೈ ಅಥವಾ ಕಾಲುಗಳಲ್ಲಿ ಹೆಚ್ಚಿನ ಊನ ಇದ್ದವರು ಈ ವಿಭಾಗದಡಿ ಸ್ಪರ್ಧಿಸುತ್ತಾರೆ.

ಪ್ರೊ ಕಬಡ್ಡಿ: ಪುಣೇರಿಗೆ ಜಯ

ಚೆನ್ನೈ: ಆದಿತ್ಯ ಶಿಂದೆ ಮತ್ತು ನಾಯಕ ಪಂಕಜ್ ಮೋಹಿತೆ ಅವರ ಚುರುಕಿನ ದಾಳಿಯ ಬಲದಿಂದ ಪುಣೇರಿ ಪಲ್ಟನ್ ತಂಡವು ಪ್ರೊ ಕಬಡ್ಡಿ ಟೂರ್ನಿಯಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಜಯಿಸಿತು.

ಉತ್ತಮ ದಾಳಿ ನಡೆಸಿ 13 ಅಂಕ ಗಳಿಸಿದ ಆದಿತ್ಯ ಹಾಗೂ ಪಂಕಜ್ (8 ಅಂಕ) ಅವರ ಆಟದ ಬಲದಿಂದ ಪುಣೇರಿ ತಂಡವು 41–36ರಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ವಿರುದ್ಧ ಗೆದ್ದಿತು.

ಜೈಪುರ ತಂಡದ ರೇಡರ್ ಅಲಿ ಚೌಬಾತೊರಷ್ ಅವರು 22 ಅಂಕಗಳನ್ನು ಕಲೆಹಾಕಿದರು. ಆದರೂ ತಂಡವು ಗೆಲುವಿನ ದಡ ಸೇರುವಲ್ಲಿ ವಿಫಲವಾಯಿತು.

ಇನ್ನೊಂದು ಪಂದ್ಯದಲ್ಲಿ, ಗುಜರಾತ್ ಜೈಂಟ್ಸ್ ತಂಡವು 47–40ರಿಂದ ಬೆಂಗಾಲ್ ವಾರಿಯರ್ಸ್ ವಿರುದ್ಧ ಗೆಲುವು ಸಾಧಿಸಿತು.

ಗುಜರಾತ್ ತಂಡದ ನಾಯಕ ರಾಕೇಶ್ 18 ಅಂಕ ಗಳಿಸಿದರು. ಬೆಂಗಾಲ್ ತಂಡದ ನಾಯಕ ದೇವಾಂಕ್ ಅವರೂ ಅಮೋಘವಾಗಿ ಆಡಿ 25 ಅಂಕ ಸೂರೆ ಮಾಡಿದರು.